# ಕರ್ನಾಟಕ ವಿಧಾನಮಂಡಲ

**ಕರ್ನಾಟಕ ಶಾಸಕಾಂಗ ಪತ್ರಿಕೆ**
**(ತ್ರೈಮಾಸಿಕ ಪತ್ರಿಕೆ)**
**ಜುಲೈ, ಆಗಸ್ಟ್ ಮತ್ತು ಸೆಪ್ಟೆಂಬರ್ –2023**
**ಸಂಪುಟ–V, ಸಂಖ್ಯೆ – 3**

**ಪ್ರಕಟಣೆ:**
**ಸಂಶೋಧನಾ ಮತ್ತು ಉಲ್ಲೇಖನಾ ಶಾಖೆ,**
**ಕರ್ನಾಟಕ ವಿಧಾನ ಸಭೆ ಸಚಿವಾಲಯ,**
**ಕೊಠಡಿ ಸಂಖ್ಯೆ: 28, ನೆಲಮಹಡಿ, ವಿಧಾನಸೌಧ,**
**ಬೆಂಗಳೂರು – 560 233.**

## ವಿಶೇಷ ಸೂಚನೆ

ಕರ್ನಾಟಕ ಶಾಸಕಾಂಗ ಪತ್ರಿಕೆಯು ಕರ್ನಾಟಕ ವಿಧಾನ ಸಭೆ/ವಿಧಾನ ಪರಿಷತ್ತಿನ ಸದಸ್ಯರುಗಳ ಪರಾಮರ್ಶೆಗಾಗಿ ಪ್ರಕಟಿಸಲಾಗುತ್ತಿದ್ದು, ಇದು ಆಂತರಿಕ ಪ್ರಕಟಣೆಗೆ ಮಾತ್ರ ಸೀಮಿತವಾಗಿರುತ್ತದೆ.

ಈ ಪತ್ರಿಕೆಯಲ್ಲಿ ಅಳವಡಿಸಲಾಗಿರುವ ಮಾಹಿತಿಗಳು ವಿವಿಧ ದಿನ ಪತ್ರಿಕೆಗಳಲ್ಲಿ ಪ್ರಕಟವಾಗಿರುವ ಸುದ್ದಿಗಳ ಆಧಾರಿತವಾಗಿದ್ದು, ಇದರಲ್ಲಿ ನ್ಯೂನತೆ, ವ್ಯತ್ಯಾಸಗಳಿಂದ ಅಥವಾ ನಿಖರತೆಯ ಕೊರತೆಯಿಂದ ಯಾವುದೇ ವ್ಯಕ್ತಿಗೆ ಉಂಟಾಗಬಹುದಾದ ನಷ್ಟ/ಹಾನಿಗೆ ವಿಧಾನ ಸಭಾ ಸಚಿವಾಲಯವು ಯಾವುದೇ ರೀತಿ ಜವಾಬ್ದಾರರಾಗುವುದಿಲ್ಲ.

**ಸೂಚನೆ:–** ಪತ್ರಿಕೆಯು ವಿಧಾನ ಮಂಡಲದ ಅಂತರ್ಜಾಲ **http://kla.kar.nic.in** ನಲ್ಲೂ ಲಭ್ಯವಿದೆ

## ಮುನ್ನುಡಿ

ಕರ್ನಾಟಕ ವಿಧಾನಮಂಡಲದ ಸಂಶೋಧನಾ ಮತ್ತು ಉಲ್ಲೇಖನಾ ಶಾಖೆಯು ಉಭಯ ಸದನಗಳ ಮಾನ್ಯ ಸದಸ್ಯರುಗಳ ಉಪಯೋಗಕ್ಕಾಗಿ ಕರ್ನಾಟಕ ಶಾಸಕಾಂಗ ತ್ರೈಮಾಸಿಕ ಪತ್ರಿಕೆಯ ಸಂಪುಟ–V ರ ಮೂರನೇ ಸಂಚಿಕೆಯನ್ನು ಪ್ರಕಟಪಡಿಸುತ್ತಿದೆ.

ತ್ರೈಮಾಸಿಕ ಶಾಸಕಾಂಗ ಪತ್ರಿಕೆಯು ಮುಖ್ಯವಾಗಿ ಕರ್ನಾಟಕ ವಿಧಾನಮಂಡಲದ ಎರಡೂ ಸದನಗಳ ಶಾಸಕಾಂಗದ ಸುದ್ದಿಗಳು, ಲೋಕಸಭೆ, ರಾಜ್ಯಸಭೆಗಳ, ಸಂಸದೀಯ ವ್ಯವಹಾರಗಳಿಗೆ ಸಂಬಂಧಿಸಿದ ಪ್ರಮುಖ ಸುದ್ದಿಗಳು, ರಾಜ್ಯಗಳ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಹಾಗೂ ಇತರೆ ವಿಷಯಗಳನ್ನೊಳಗೊಂಡಿರುತ್ತದೆ.

ಈ ಸಂಚಿಕೆಯಲ್ಲಿ 2023ನೇ ಸಾಲಿನ ಜುಲೈ, ಆಗಸ್ಟ್ ಮತ್ತು ಸೆಪ್ಟಂಬರ್ ತಿಂಗಳ ಅವಧಿಯಲ್ಲಿನ ಪ್ರಮುಖ ಸುದ್ದಿ, ಮಾಧ್ಯಮಗಳಲ್ಲಿ ಪ್ರಕಟವಾದ ದೈನಂದಿನ ಸುದ್ದಿಗಳನ್ನು ಸಂಗ್ರಹಿಸಿ ಪ್ರಕಟಿಸಲಾಗಿದೆ.

ಸಂಶೋಧನಾ ಮತ್ತು ಉಲ್ಲೇಖನಾ ವಿಭಾಗವು ಸಿದ್ಧಪಡಿಸಿ ಹೊರತರುತ್ತಿರುವ ಈ ಪತ್ರಿಕೆಯ ಗುಣಮಟ್ಟವನ್ನು ಉನ್ನತೀಕರಿಸಲು ಹಾಗೂ ಹೆಚ್ಚು ವಿಷಯಾಸಕ್ತವಾಗಿಸಲು ಇದರ ಬೆಳವಣಿಗೆಯ ಸುಧಾರಣೆಗೆ ಮಾನ್ಯ ಸದಸ್ಯರುಗಳಿಂದ ಅಮೂಲ್ಯ ಸಲಹೆ ಮತ್ತು ಸೂಚನೆಗಳನ್ನು ಬರಹ ರೂಪದಲ್ಲಿ ಸ್ವೀಕರಿಸಲು ಸದಾ ಸ್ವಾಗತವಿರುತ್ತದೆ.

ಮಾನ್ಯ ಸದಸ್ಯರುಗಳು ಸಂಸದೀಯ ವ್ಯವಹಾರಗಳಿಗೆ ಸಂಬಂಧಿಸಿದ ತಮ್ಮ ಲೇಖನಗಳನ್ನು ನೀಡಿದಲ್ಲಿ, ಈ ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.

**ಎಂ.ಕೆ.ವಿಶಾಲಾಕ್ಷಿ**
ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ.

ಬೆಂಗಳೂರು
ದಿನಾಂಕ: 22.05.2024

## ಕರ್ನಾಟಕ ಶಾಸಕಾಂಗ ತ್ರೈಮಾಸಿಕ ಪತ್ರಿಕೆಯ ಸಂಪಾದಕ ವರ್ಗ

### ಕರ್ನಾಟಕ ವಿಧಾನ ಸಭೆ ಸಚಿವಾಲಯ

1. ಶ್ರೀಮತಿ ಎಂ.ಕೆ. ವಿಶಾಲಾಕ್ಷಿ : ಕಾರ್ಯದರ್ಶಿ
2. ಶ್ರೀ ಬಿ.ಎಸ್. ಮಹಾಲಿಂಗೇಶ್ : ನಿರ್ದೇಶಕರು
3. ಶ್ರೀ ಬಿ.ಎಂ.ಶಂಭು : ಜಂಟಿ ನಿರ್ದೇಶಕರು
4. ಶ್ರೀಮತಿ ವಿ.ಭಾಗ್ಯ : ಉಪ ನಿರ್ದೇಶಕರು
5. ಶ್ರೀಮತಿ ಜಿ. ಮಮತ : ಸಹಾಯಕ ನಿರ್ದೇಶಕರು
6. ಶ್ರೀ ಬಿ.ಎ.ಸತೀಶ್ : ಸಹಾಯಕ ನಿರ್ದೇಶಕರು

### ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯ

1. ಶ್ರೀಮತಿ ಕೆ. ಆರ್. ಮಹಾಲಕ್ಷ್ಮಿ : ಕಾರ್ಯದರ್ಶಿ
2. ಶ್ರೀಮತಿ ಎಸ್. ನಿರ್ಮಲ : ಅಪರ ಕಾರ್ಯದರ್ಶಿ

# ಕರ್ನಾಟಕ ಶಾಸಕಾಂಗ ಪತ್ರಿಕೆ
## (ತ್ರೈಮಾಸಿಕ ಪತ್ರಿಕೆ)

## ಜುಲೈ, ಆಗಸ್ಟ್ ಮತ್ತು ಸೆಪ್ಟೆಂಬರ್ – 2023
### ಸಂಪುಟ–V ಸಂಖ್ಯೆ– 3

## ಪರಿವಿಡಿ
## ಭಾಗ–1
## ಕರ್ನಾಟಕ ವಿಧಾನಮಂಡಲದ ಸುದ್ದಿಗಳು


| ಕ್ರಮ ಸಂಖ್ಯೆ | ವಿಷಯ | ಪುಟ ಸಂಖ್ಯೆ |
|---|---|---|
| 1. | ಜಂಟಿ ಅಧಿವೇಶನ | 1 |
| 2. | ನೂತನ ಸದಸ್ಯರ ಪ್ರಮಾಣ ವಚನ | 1 |
| 3. | ನೂತನ ಸದಸ್ಯರಿಗೆ ಅಭಿನಂದನೆ | 2 |
| 4. | ಘನತೆವೆತ್ತ ರಾಜ್ಯಪಾಲರಿಗೆ ಸ್ವಾಗತ | 2 |
| 5. | ಗ್ಯಾರಂಟಿ ಸರ್ಕಾರಕ್ಕೆ ದಶ ದಿಶೆ | 3–4 |
| 6. | ನೂತನ ಸಚಿವ, ಶಾಸಕರಿಗೆ ಸ್ಪೀಕರ್ ಖಾದರ್ ಪಾಠ | 4 |
| 7. | ಭೋಸರಾಜು ಸಭಾನಾಯಕ, ಪಟ್ಟಣ್, ಸಲೀಂ ಚೀಫ್ ವಿಪ್ | 5 |
| 8. | ಮೇಲ್ಮನೆಯ ಮೇರುಕೀರ್ತಿ ಹೊರಟ್ಟಿ | 5–6 |
| 9. | Come on time, get certificate, Speaker tells legislators | 6–7 |
| 10. | ಡಾ.ಬಾಬು ಜಗಜೀವನರಾಮ್ 37ನೇ ಪುಣ್ಯ ಸ್ಮರಣೆ | 7 |
| 11. | Rudrappa Lamani elected unopposed Deputy Speaker | 7–8 |
| 12. | ಉನ್ನತ ಶಿಕ್ಷಣ ಸಚಿವರು – ಮಾನ್ಯ ಸಭಾಪತಿಗಳ ಕಛೇರಿಗೆ ಭೇಟಿ | 8 |
| 13. | ವಿಧಾನಸೌಧ, ಶಾಸಕರ ಭವನಕ್ಕೆ ಹೈಟೆಕ್ ಭದ್ರತೆ–ಸ್ಪೀಕರ್ | 8–9 |
| 14. | ಅನುದಾನಿತ ಶಾಲೆಗಳ ಬಗ್ಗೆ ಚರ್ಚೆ | 9 |
| 15. | ನೂತನ ಸದಸ್ಯರಿಗೆ ವಿಶ್ವಾಸ ತುಂಬಿದ ಖಾದರ್ | 10 |
| 16. | ಮಾನ್ಯ ಸಭಾಪತಿಗಳ ಕಛೇರಿಗೆ ಮಾನ್ಯ ಮುಖ್ಯಮಂತ್ರಿಗಳ ಭೇಟಿ | 10–11 |
| 17. | ವಿಧಾನ ಪರಿಷತ್ತಿನ ಕಲಾಪ | 11 |
| 18. | ಟರ್ಫ್ ಕ್ಲಬ್ ಸ್ಥಳಾಂತರಕ್ಕೆ ಶಿಫಾರಸ್ಸು | 11–12 |
| 19. | Assembly passes GST Bill to bring e-commerce players under scrutiny | 12–13 |

| ಕ್ರಮ ಸಂಖ್ಯೆ | ವಿಷಯ | ಪುಟ ಸಂಖ್ಯೆ |
|---|---|---|
| 20. | ವಿಧಾನಮಂಡಲ ವಿಧೇಯಕ–2023ಕ್ಕೆ ಅನುಮೋದನೆ | 13–14 |
| 21. | ಸ್ಪೀಕರ್ ಖಾದರ್‌ಗೆ 'ದಿ ಗ್ರೇಟ್ ಸನ್ ಆಫ್ ಇಂಡಿಯಾ' ಪ್ರಶಸ್ತಿ | 14–15 |
| 22. | ಅತ್ಯುತ್ತಮ ಶಾಸಕರ ಪ್ರಶಸ್ತಿ | 15–16 |
| 23. | ಸಮಯಕ್ಕೆ ಸರಿಯಾಗಿ ಸದನಕ್ಕೆ ಬರಬೇಕು | 16–17 |
| 24. | ಮೇಲ್ಮನೆಯಲ್ಲಿ ಮೂರು ಮಸೂದೆಗಳಿಗೆ ಅಸ್ತು | 17 |
| 25. | ಮಾನ್ಯ ಸಭಾಧ್ಯಕ್ಷರ ನಿವಾಸಕ್ಕೆ ಶ್ರೀ ಪ್ರಣವಾನಂದಸ್ವಾಮೀಜಿವರ ಭೇಟಿ | 18 |
| 26. | ಪರಿಷತ್‌ನಲ್ಲಿ ಮೊಬೈಲ್ ನಿಷೇಧಿಸಿದ  ಹೊರಟ್ಟಿ | 18 |
| 27. | ಬಿಜೆಪಿಯ ಹತ್ತು ಶಾಸಕರನ್ನು ಅಮಾನತ್ತುಗೊಳಿಸಿದ ಸ್ಪೀಕರ್ | 19 |
| 28. | ಗಲಾಟೆ ನಡುವೆ 5 ವಿಧೇಯಕಕ್ಕೆ ಅಂಗೀಕಾರ | 19–20 |
| 29. | ಬಜೆಟ್ ಮೇಲಿನ ಚರ್ಚೆಗೆ ಮಾನ್ಯ ಮುಖ್ಯಮಂತ್ರಿಗಳ ಉತ್ತರ | 20 |
| 30. | ರಾಜ್ಯಪಾಲರ ಭೇಟಿಯಾದ ಸ್ಪೀಕರ್; ಡೆಪ್ಯೂಟಿ ಸ್ಪೀಕರ್ | 20–21 |
| 31. | ಗ್ಯಾರಂಟಿ ಯೋಜನೆ; ಕರ್ನಾಟಕ ಅಭಿವೃದ್ಧಿ ಮಾದರಿ | 22–22 |
| 32. | ಶ್ರದ್ಧಾಂಜಲಿ ಕಳಶ ಕಾರ್ಯಕ್ರಮ | 22–23 |
| 33. | ಬಾಲಬ್ರೂಯಿ ಕಟ್ಟಡಕ್ಕೆ ಮಾನ್ಯ ಸಭಾಧ್ಯಕ್ಷರ ಭೇಟಿ | 23–24 |
| 34. | ಬಜೆಟ್ ಅಧಿವೇಶನದಲ್ಲಿ 14 ಮಸೂದೆಗಳು ಪಾಸ್: ಸ್ಪೀಕರ್ | 24 |
| 35. | ವಿಶ್ವವಾಣಿ ಪುಸ್ತಕದ ಆರು ಕೃತಿಗಳ ಲೋಕಾರ್ಪಣೆ | 25 |
| 36. | 70 ಗಂಟೆ ಕಾಲ ಪರಿಷತ್ ಕಲಾಪ | 25 |
| 37. | ಕರ್ನಾಟಕ ಪವರ್ ಲಿಫ್ಟಿಂಗ್ ಅಸೋಸಿಯೇಷನ್‌ನ ಪದಾಧಿಕಾರಿಗಳು–ಸ್ಪೀಕರ್ ಭೇಟಿ | 26 |
| 38. | ಮಾಧ್ಯಮದೊಂದಿಗೆ ಸ್ಪೀಕರ್ | 26 |
| 39. | ಸಾರ್ವಜನಿಕರ ಭೇಟಿ–ಸ್ಪೀಕರ್ | 26 |
| 40. | ಡಾ.ಎ.ಪಿ.ಜೆ. ಅಬ್ದುಲ್ ಕಲಾಂ ಅವಾರ್ಡ್– ಸಮಾರಂಭ | 27 |
| 41. | ಸ್ಪೀಕರ್–ಸತ್ಯಸಾಯಿ ಗ್ರಾಮಕ್ಕೆ ಭೇಟಿ | 27 |
| 42. | ಮಾನ್ಯ ಸಭಾಪತಿಯ ನೇತೃತ್ವದಲ್ಲಿ ಕಿರುಚಿತ್ರ ತಯಾರಿಕೆಗೆ ಸಂಬಂಧಪಟ್ಟಂತೆ ನಡೆದ ಸಭೆ | 27–28 |
| 43. | ಹೊರನಾಡು ಕನ್ನಡ ಸಂಸ್ಕೃತಿ ಸಂಭ್ರಮ 2023 | 28–29 |
| 44. | ವ್ಯಸನಮುಕ್ತ ಸಾಧಕರ ಸಮಾವೇಶ | 29 |
| 45. | ಮಸೂದೆಗೆ ಗೌರ್ವನರ್ ಅಂಕಿತ | 29–30 |
| 46. | ಕಾಗದರಹಿತ ಅಸೆಂಬ್ಲಿ ಶೀಘ್ರ ಜಾರಿ: ಯು.ಟಿ.ಖಾದರ್ | 30–31 |
| 47. | ಕಡಲ್ಕೊರೆತ ಪ್ರದೇಶಗಳಿಗೆ ಭೇಟಿ–ಸ್ಪೀಕರ್ | 31 |

| ಕ್ರಮ ಸಂಖ್ಯೆ | ವಿಷಯ | ಪುಟ ಸಂಖ್ಯೆ |
|---|---|---|
| 48. | ಪಂಜಾಬ್ ವಿಧಾನ ಸಭೆಯ ಸಭಾಧ್ಯಕ್ಷರಾದ ಸರ್ದಾರ್ ಕುಲ್ತಾರ್ ಸಿಂಗ್ ಸಂಧ್ವಾನ್‌ರವರ ನಿಯೋಗ ವಿಧಾನಸೌಧಕ್ಕೆ ಭೇಟಿ | 31–32 |
| 49. | ಸ್ಪೀಕರ್ ತಮಿಳುನಾಡಿಗೆ ಭೇಟಿ | 32 |
| 50. | ಹೊರಟ್ಟಿ ಐತಿಹಾಸಿಕ ದಾಖಲೆಯ ಗೆಲುವು ಪ್ರಮಾಣ ಪತ್ರ ಬಿಡುಗಡೆ | 32 |
| 51. | ಸಂವಿಧಾನವೇ ನನ್ನ ಧರ್ಮ | 33 |
| 52. | ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರೊಂದಿಗೆ ಸಭೆ | 34 |
| 53. | ಸಂವಿಧಾನದ ವಿರುದ್ಧ ವರ್ತಿಸಿದರೆ ಕ್ರಮ ಸಹಜ | 34–35 |
| 54. | ನಾನು ಪ್ರತಿಪಕ್ಷಗಳ ಮಿತ್ರ: ಚರ್ಚೆಗೆ ಹೆಚ್ಚು ಅವಕಾಶ ನೀಡುತ್ತೇನೆ | 35–36 |
| 55. | ಪ್ರದರ್ಶನ ಕಲೆ ಮತ್ತು ಶಾಸ್ತ್ರೀಯ ನೃತ್ಯೋತ್ಸವ ಹಾಗೂ ರಾಷ್ಟ್ರೀಯ ಸಮ್ಮೇಳನ | 36 |
| 56. | ವಿಲೇಜ್ ಕ್ಲಿನಿಕ್ಕಿಗೆ ಸುವರ್ಣ ಮಹೋತ್ಸವ | 37 |
| 57. | ಸುತ್ತೂರು ಮಠಕ್ಕೆ ಭೇಟಿ | 37–38 |
| 58. | ಸ್ಪೀಕರ್–ಕಾನ್ಫರೆನ್ಸ್ | 38 |
| 59 | ರಾಜ್ಯ ಶಾಸಕಾಂಗಗಳ ರಾಷ್ಟ್ರೀಯ ಸಮ್ಮೇಳನ ಶೃಂಗಸಭೆ | 38–39 |
| 60. | 77ನೇ ಸ್ವಾತಂತ್ರೋತ್ಸವ | 39 |
| 61. | ರಾಷ್ಟ್ರೀಯ ಸಭಾಪತಿಗಳ ಸಮ್ಮೇಳನ | 39–41 |
| 62. | ರಾಜ್ಯ ಶಾಸಕಾಂಗಗಳ ರಾಷ್ಟ್ರೀಯ ಸಮ್ಮೇಳನದ (NCSL) ಕಾರ್ಯಾಗಾರ | 41 |
| 63. | ವಿದ್ಯಾರ್ಥಿಗಳ ಪದವಿ ಪ್ರಧಾನ ಸಮಾರಂಭ | 41 |
| 64. | ಮೇಲ್ಮನೆ ಪ್ರವೇಶಕ್ಕೆ ಅಂಕಿತ | 42 |
| 65. | ಕರ್ನಾಟಕದಲ್ಲಿ ಕಾಮನ್‌ವೆಲ್ತ್ ಸಂಸದೀಯ ಅಸೋಸಿಯೇಶನ್ ಸಮ್ಮೇಳನಕ್ಕೆ ಮನವಿ | 42–43 |
| 66. | ಜನಪ್ರತಿನಿಧಿಗಳಿಗೆ ಅಭಿವೃದ್ಧಿಪರ ಚಿಂತನೆ ಅವಶ್ಯ | 43 |
| 67. | ಮಾನ್ಯ ಶ್ರೀ ಎಂ.ಆರ್.ಸೀತಾರಾಮ್ ಸಭಾಪತಿಗಳ ಭೇಟಿ | 43 |
| 68. | ಇಸ್ರೋ ಕಂಟ್ರೋಲರೂಮಿಗೆ ಭೇಟಿ | 44 |
| 69. | ದೈಹಿಕ ಶಿಕ್ಷಣ ಭೀಷ್ಮ ಪ್ರಶಸ್ತಿ | 44 |
| 70. | ತ್ರಿಚಕ್ರ ವಾಹನ ವಿತರಣೆ | 45 |
| 71. | ಸಚಿವಾಲಯದಲ್ಲಿ ಜಂಟಿ ಕಾರ್ಯದರ್ಶಿಯವರಿಗೆ – ಶುಭ ಹಾರೈಕೆ | 45 |
| 72. | ಮಾನ್ಯ ಸಭಾಧ್ಯಕ್ಷರಿಗೆ ಸನ್ಮಾನ | 46 |
| 73. | ಸಂಘದ ಸದಸ್ಯರುಗಳು–ಸ್ಪೀಕರ್ ಭೇಟಿ | 46 |
| 74. | ದಕ್ಷಿಣ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವರೊಂದಿಗೆ ಚರ್ಚೆ | 47 |
| 75. | ಪರಿಷತ್ ಸದಸ್ಯರಾಗಿ ಪ್ರಮಾಣ ವಚನ | 47 |

| ಕ್ರಮ ಸಂಖ್ಯೆ | ವಿಷಯ | ಪುಟ ಸಂಖ್ಯೆ |
|---|---|---|
| 76. | ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಕ್ರೀಡಾಕೂಟ | 47–48 |
| 77. | ರಾಜ್ಯಪಾಲರ ಭೇಟಿ | 48 |
| 78. | ಮಂಗಳೂರು ಫಿಸಿಯೋಕಾನ್ ಅಂತರರಾಷ್ಟ್ರೀಯ ಸಮ್ಮೇಳನ | 48 |
| 79. | ಎಸ್.ಎಸ್.ಎಫ್.ಗೋಲ್ಡನ್ ಫಿಫ್ಟಿ ಕಾನ್ಫರೆನ್ಸ್ | 49 |
| 80. | ಯಕ್ಷಗಾನ ಮಂಡಳಿಯ ಬೆಳ್ಳಿ ಹಬ್ಬ | 49 |
| 81. | ಮಾಧ್ಯಮ ಅತ್ಯಂತ ಆದರಣೀಯ ಕ್ಷೇತ್ರ | 50 |
| 82. | 66ನೇ ಸಿಪಿಎ ಸಮ್ಮೇಳನದ ಪೂರ್ವಭಾವಿ ಸಭೆ | 50 |
| 83. | ಪಂಜಾಬ್ ವಿಧಾನ ಸಭೆಯ ಉಪಸಭಾಧ್ಯಕ್ಷರ ನಿಯೋಗ ವಿಧಾನಸೌಧಕ್ಕೆ ಭೇಟಿ | 51 |
| 84. | ಉನ್ನತ ಶಿಕ್ಷಣ ಸಚಿವರು–ಸ್ಪೀಕರ್ ಭೇಟಿ | 51 |
| 85. | ಶ್ರೀ ಧನುಷ್ ಮಂಜುನಾಥ್‌ರವರಿಗೆ ಅಭಿನಂದನೆ | 52 |
| 86. | ಭಾರತದ ಸಂವಿಧಾನ ಪೀಠಿಕೆಯ ವಾಚನ | 52–53 |
| 87. | ಸ್ವರ್ಣ ಜನ್ಮಜಯಂತಿ ಮಹೋತ್ಸವ | 53–54 |
| 88. | ಜ್ಞಾನಾರ್ಜನೆಗೆ ತರಬೇತಿ ಕೇಂದ್ರಗಳು ಅತ್ಯವಶ್ಯಕ | 54 |
| 89. | ಪ್ರಗತಿಪರ ರೈತನ ತೋಟಕ್ಕೆ ಯು.ಟಿ.ಖಾದರ್ ಭೇಟಿ | 55 |
| 90. | ವಿಧಾನಸೌಧದ ದ್ವಾರಕ್ಕೆ ಸಂವಿಧಾನ ಪೀಠಿಕೆ ಹಾಗೂ ನಾಡಗೀತೆ ಅಳವಡಿಕೆ | 55 |
| 91. | ವಿಧಾನಸೌಧದ ಗೇಟ್‌ಗಳಿಗೆ ಸಂವಿಧಾನ ಪೀಠಿಕೆ ಅಳವಡಿಕೆ | 56 |
| 92. | ವಿಧಾನಸೌಧ ವೀಕ್ಷಣೆಗೆ ಆಗಮಿಸಿದ ಕೇರಳಿಗರಿಗೆ ಸ್ಪೀಕರ್ ಯು.ಟಿ.ಖಾದರ್ ಸ್ವಾಗತ | 56 |
| 93. | ವಿಶೇಷ ಶಾಲೆ ರಜೆ ಸಮಸ್ಯೆ ಇತ್ಯರ್ಥಕ್ಕೆ ಕ್ರಮ: ಖಾದರ್ | 57 |
| 94. | ಪ್ರಶಸ್ತಿ ಪ್ರದಾನ ಮತ್ತು ಗ್ರಂಥ ಲೋಕಾರ್ಪಣೆ ಕಾರ್ಯಕ್ರಮ | 57 |
| | **ಭಾಗ–2**<br>**ಕರ್ನಾಟಕ ವಿಧಾನಮಂಡಲದ ಕಾರ್ಯಚಟುವಟಿಕೆಗಳು** | |
| 1. | ವಿಧಾನ ಪರಿಷತ್ತಿನ ಅಧಿವೇಶನದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ | 61–63 |
| 2. | ವಿಧಾನಸಭೆಯ 11ನೇ ಅಧಿವೇಶನದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ | 64–65 |
| 3. | ವಿಧಾನ ಮಂಡಲದ ಜಂಟಿ ಸಮಿತಿಗಳಿಗೆ ಹಾಗೂ ವಿಧಾನ ಪರಿಷತ್ತಿನ ವಿವಿಧ ಸಮಿತಿಗಳಿಗೆ ಸದಸ್ಯರುಗಳ ನಾಮನಿರ್ದೇಶನದ ಲಘು ಪ್ರಕಟಣೆ | 66–72 |
| 4. | ವಿಧಾನಮಂಡಲದ ವಿವಿಧ ಸ್ಥಾಯಿ ಸಮಿತಿಗಳಿಗೆ ಸದಸ್ಯರುಗಳ ನಾಮನಿರ್ದೇಶನದ ಲಘು ಪ್ರಕಟಣೆ | 73–83 |
| 5. | ಹಕ್ಕು ಭಾಧ್ಯತೆಗಳ ಸಮಿತಿಯ ಅಧ್ಯಕ್ಷರ ನಾಮನಿರ್ದೇಶನದ ಲಘು ಪ್ರಕಟಣೆ | 84 |

| ಕ್ರಮ ಸಂಖ್ಯೆ | ವಿಷಯ | ಪುಟ ಸಂಖ್ಯೆ |
|---|---|---|
| 6. | ಸರ್ಕಾರಿ ಭರವಸೆಗಳ ಸಮಿತಿಯ ಅಧ್ಯಕ್ಷರ ನಾಮನಿರ್ದೇಶನದ ಲಘು ಪ್ರಕಟಣೆ | 85 |
| 7. | ಸರ್ಕಾರಿ ಭರವಸೆಗಳ ಸಮಿತಿಯ ಅಧ್ಯಕ್ಷರ ನಾಮನಿರ್ದೇಶನದ ಲಘು ಪ್ರಕಟಣೆ | 86 |
| | **ಭಾಗ–3**<br>**ಸಂಸತ್ ಸುದ್ದಿಗಳು** | |
| 1. | ಸಂಸತ್‌ನಲ್ಲಿನ್ನು ಕನ್ನಡದಲ್ಲೇ ಚರ್ಚೆ ಆಲಿಸುವ ಅವಕಾಶ | 89 |
| 2. | 4 ಮಸೂದೆಗಳಿಗೆ ರಾಷ್ಟ್ರಪತಿ ಸಹಿ | 89–90 |
| 3. | Objections overruled, Forest Bill goes to House unchanged | 90–92 |
| 4. | Lok Sabha passes Bill on birth registration | 92 |
| 5. | Rajya Sabha passes the Multi-State Cooperative Societies Bill | 92–93 |
| 6. | Three Bills passed in the Rajya Sabha in Opposition’s absence | 93–94 |
| 7. | LS clears Delhi Services Bill amid Oppn walkout | 94 |
| 8. | Rajya Sabha clears Delhi services Bill, backed by 131 MPs | 95–96 |
| 9. | Suspension of Congress Member revoked | 96 |
| 10. | Rajya Sabha fails to hold debate on Manipur, AAP’s Raghav Chadha suspended | 96 |
| 11. | Public should be holding law makers accountable for conduct in House OM Birla | 96–98 |
| 12. | Lok Sabha Speaker revokes Adhir’s suspension after Privilege panel’s resolution | 98 |
| 13. | ಏಕ ಚುನಾವಣೆ ಸರ್ಕಾರಕ್ಕೆ 5 ಸಂವಿಧಾನ ತಿದ್ದುಪಡಿ ಅಗತ್ಯ | 99–100 |
| 14. | ಹಳೆ ಸಂಸತ್ ಭವನ ಇನ್ಮುಂದೆ ಸಂವಿಧಾನ ಸದನ | 100–101 |
| 15. | ಸಂಸದೀಯ ಚರಿತ್ರೆಯಲ್ಲಿ ಹೊಸ ಶಕೆ | 102–103 |
| 16. | ನಾರಿ ಶಕ್ತಿ ಇತಿಹಾಸ ರಾಜ್ಯ ಸಭೆಯಲ್ಲೂ ಸರ್ವಾನುಮತದ ಪಾಸ್ | 103–104 |
| | **ಭಾಗ–4**<br>**ಕೇಂದ್ರ ಸರ್ಕಾರದ ಸುದ್ದಿಗಳು** | |
| 1. | ಚಂದ್ರನಲ್ಲಿ ಶಿವಶಕ್ತಿ ತಿರಂಗಾ | 107–109 |
| 2. | ಏಕ ಚುನಾವಣೆ ಸಮಿತಿಯಲ್ಲಿ ಅಮಿತ್ ಷಾ, ಅಜಾದ್, ಸಾಳ್ವೆ | 109–110 |
| 3. | ‘India’ and ‘Bharat’ interchangeable, can be used in official invite, say legal experts | 110–111 |
| 4. | ನವದೆಹಲಿ ಘೋಷಣೆಗೆ ಜಿ–20 ಒಮ್ಮತದ ಮುದ್ರೆ | 111–113 |
| 5. | ಆನ್‌ಲೈನ್ ಗೇಮಿಂಗ್‌ಗೆ ಶೇ 28. ಜಿಎಸ್‌ಟಿ ಅನ್ವಯ | 113–114 |
| 6. | ದೆಹಲಿ ಆಡಳಿತ ಮೇಲೆ ಕೇಂದ್ರದ ಹಿಡಿತ | 114–116 |

| ಕ್ರಮ ಸಂಖ್ಯೆ | ವಿಷಯ | ಪುಟ ಸಂಖ್ಯೆ |
|---|---|---|
| 7. | ಸ್ವಾತಂತ್ರ್ಯ ದಿನಕ್ಕೆ ದೇಶದ 1800 ವಿಶೇಷ ಅತಿಥಿಗಳು | 116–117 |
| 8. | President launches Ayushman Bhav health campaign | 117–118 |
| 9. | ರಾಜ್ಯಕ್ಕೆ 3ನೇ ವಂದೇಭಾರತ್: 24ಕ್ಕೆ ಮೋದಿ ಚಾಲನೆ | 118 |
| | **ಭಾಗ–5 ರಾಜ್ಯ ಸರ್ಕಾರದ ಸುದ್ದಿಗಳು** | |
| 1. | 3ನೇ ಗ್ಯಾರಂಟಿ ಜಾರಿ | 121 |
| 2. | ಅಬ್ಬರದ ಮಳೆ, ಉಕ್ಕಿದ ನದಿಗಳು | 122–124 |
| 3. | ಕಾವೇರಿಗೆ ಮಿಡಿದ ಕರ್ನಾಟಕ | 124–125 |
| 4. | ಹುಲಿ ಗಣತಿಯಲ್ಲಿ 2ನೇ ಸ್ಥಾನಕ್ಕೆ ತೃಪ್ತಿ | 125–126 |
| 5. | ಸೈಬರ್ ನೀತಿಗೆ ಅಸ್ತು | 127–128 |
| 6. | ಇಸ್ರೋ ವಿಜ್ಞಾನಿಗಳಿಗೆ ಸರ್ಕಾರದಿಂದ ಸನ್ಮಾನ | 128–129 |
| 7. | ಗೃಹಲಕ್ಷ್ಮಿ ಯೋಜನೆಗೆ ಅದ್ದೂರಿ ಚಾಲನೆ | 129–130 |
| 8. | ಶಕ್ತಿ ತುಂಬಲು ಹೊಸ ಬಸ್ | 131 |
| 9. | ಇ–ಎಫ್ಐಆರ್, ಇ–ಚಲನ್ ವ್ಯವಸ್ಥೆಗೆ ಚಾಲನೆ | 131–133 |
| 10. | ರಾಜ್ಯದ ಮೊದಲ ಹೆಲ್ತ್ ಎಟಿಎಂಗೆ ಚಾಲನೆ | 133–134 |
| 11. | ರಾಜ್ಯಾದ್ಯಂತ ಹುಕ್ಕಾ ಬಾರ್ ನಿಷೇಧ | 134 |
| 12. | ಮೇಕೆದಾಟು ಡ್ಯಾಂಗೆ ಕೇಂದ್ರದ ಅನುಮತಿ ಕೇಳಲು ನಿರ್ಧಾರ | 134–135 |
| 13. | ಗೃಹಲಕ್ಷ್ಮಿ: ಆರ್ಥಿಕ ಭದ್ರತೆ | 135 |
| 14. | ಪಠ್ಯಗಳ ಪುನರ್ ಪರಿಶೀಲನೆಗೆ 37 ತಜ್ಞರ ಸಮಿತಿ | 135–136 |
| 15. | ರಾಜ್ಯವ್ಯಾಪಿ ಈ ವರ್ಷ 5 ಕೋಟಿ ಸಸಿ ನಡೆಲು ಸಂಕಲ್ಪ | 136–137 |
| | **ಭಾಗ–6 ನ್ಯಾಯಾಲಯ ಸುದ್ದಿಗಳು** | |
| 1. | Post-1957, President retains power to scrap Article 370: SC | 141–142 |
| 2. | In Sc, Uddhav camp says Speaker delaying disqualification process | 142–143 |
| 3. | ಪ್ರಜ್ವಲ್ ರೇವಣ್ಣ ಅಸಿಂಧು ಆದೇಶಕ್ಕೆ ಸುಪ್ರೀಂ ತಡೆಯಾಜ್ಞೆ | 143 |
| 4. | ಆರೋಪಪಟ್ಟಿ ಕೋರ್ಟ್ ಭಾಷೆಯಲ್ಲಿ ಇರಬೇಕಿಲ್ಲ ಸುಪ್ರೀಂ ಪ್ರತಿಪಾದನೆ | 144 |
| 5. | 2014 order removing immunity to officers is retrospective:SC | 145 |
| | **ಭಾಗ–7 ಹೊರ ರಾಜ್ಯಗಳ ಸುದ್ದಿಗಳು** | |
| 1. | Telangana Assembly passes 4 Bills returned by Governor | 149 |
| 2. | ತ್ರಿಪುರಾ ವಿಧಾನಸಭೆ: ಕಲಾಪದಿಂದ ಐವರು ಶಾಸಕರ ಅಮಾನತ್ತು | 149–150 |

| ಕ್ರಮ ಸಂಖ್ಯೆ | ವಿಷಯ | ಪುಟ ಸಂಖ್ಯೆ |
|---|---|---|
| 3. | Maharashtra Speaker issues notices to MLAs of two Shiv Sena factions | 150–151 |
| 4. | ಉತ್ತರ ಪ್ರದೇಶದ ಶಾಸಕರಿಗೆ 'ಮೂಗುದಾರ' | 151 |
| 5. | Congress brings in Bill promising minimum income in Rajasthan | 152 |
| 6. | No Governor's assent; Manipur Assembly session a non-starter | 152–153 |
| 7. | 450ಕ್ಕೆ ಎಲ್‌ಪಿಜಿ, ಮಹಿಳೆಯರ ಮೀಸಲಾತಿ 30% ರಿಂದ 35ಕ್ಕೆ ಏರಿಕೆ | 153–154 |
| | **ಭಾಗ–8**<br>**ಶ್ರದ್ಧಾಂಜಲಿ** | |
| 1. | ಸಿ.ಎಂ.ನಿಂಬಣ್ಣನವರ್, ಮಾಜಿ ವಿಧಾನಸಭಾ ಸದಸ್ಯರು | 156 |
| 2. | ಶ್ರೀರಂಗದೇವರಾಯಲು, ಮಾಜಿ ವಿಧಾನಸಭಾ ಸದಸ್ಯರು | 157 |
| 3. | ವಿಲಾಸ ಬಾಬು ಆಲಮೇಲಕರ್, ಮಾಜಿ ವಿಧಾನಸಭಾ ಸದಸ್ಯರು | 157 |
| 4. | ಬಿ.ಎಸ್‌ವಿಶ್ವನಾಥ, ಮಾಜಿ ವಿಧಾನ ಪರಿಷತ್ ಸದಸ್ಯರು | 157 |
| | **ಭಾಗ – 09**<br>**ಪ್ರಮುಖ ಲೇಖನಗಳು** | |
| 1. | ವ್ಯರ್ಥವಾಗದಿರಲಿ ಕ್ಷೇಮವನದ ಪಾಠ | 161–163 |
| 2. | ಶಿಕ್ಷಕರು ಅರ್ಜಿ ಹಾಕಿ ಪ್ರಶಸ್ತಿ ಪಡೆಯಬೇಕೆ | 163–165 |
| 3. | Taking G20 To Last Mile, Leaving None Behind | 165–168 |
| 4. | Jairam, Joshi lock horns over special Parliament sessions | 168–171 |
| 5. | ಶಾಸನಸಭೆಯ ಮಹತ್ವ ಮರೆಯಾಗುವ ಆತಂಕ | 171–173 |
| 6. | ನಿರ್ದೇಶಕ ತತ್ವಗಳಲ್ಲಿ ಉಳಿದ ಯುಸಿಸಿ | 173–176 |
| 7. | ಸಣ್ಣವರ ಸಾಮ್ರಾಜ್ಯ | 176–179 |


ಸೂಚನೆ: – ಇಲ್ಲಿ ಆಯ್ಕೆ ಮಾಡಿರುವ ಲೇಖನಗಳು ಪ್ರಮುಖ ದಿನಪತ್ರಿಕೆಗಳಿಂದ ಆಯ್ದು ಪ್ರಕಟಿಸಲಾಗಿದೆ. ಇಲ್ಲಿನ ಅಭಿಪ್ರಾಯಗಳು ಸಂಪೂರ್ಣ ಲೇಖಕರದ್ದಾಗಿರುತ್ತದೆ.

# ಭಾಗ–1

# ಕರ್ನಾಟಕ ವಿಧಾನ ಮಂಡಲದ ಸುದ್ದಿಗಳು

## 1. ಜಂಟಿ ಅಧಿವೇಶನ




ದಿನಾಂಕ: 03.07.2023 ರಂದು ಕರ್ನಾಟಕ ವಿಧಾನಮಂಡಲದ ಜಂಟಿ ಅಧಿವೇಶನ ಉದ್ದೇಶಿಸಿ ಮಾತನಾಡಲು ಆಗಮಿಸಿದ ಗೌರವಾನ್ವಿತ ರಾಜ್ಯಪಾಲರಾದ ಶ್ರೀ ಥಾವರ್ ಚಂದ್ ಗೆಹ್ಲೋಟ್ ಅವರನ್ನು ವಿಧಾನಸೌಧದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯರವರ ಉಪಸ್ಥಿತಿಯಲ್ಲಿ ಸ್ವಾಗತಿಸಲಾಯಿತು.

## 2. ನೂತನ ಸದಸ್ಯರ ಪ್ರಮಾಣ ವಚನ





ದಿನಾಂಕ: 03–07–2023ರಂದು ವಿಧಾನಪರಿಷತ್ತಿಗೆ ನೂತನವಾಗಿ ಆಯ್ಕೆಯಾದ ಶ್ರೀ ಜಗದೀಶ್‌ಶೆಟ್ಟರ್, ಶ್ರೀ ಎನ್.ಎಸ್.ಭೋಸರಾಜ್, ಶ್ರೀ ತಿಪ್ಪಣ್ಣ ಕಮಕನೂರು ಅವರು ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಪ್ರಮಾಣ ವಚನ ಸ್ವೀಕರಿಸಿದರು.

## 3. ನೂತನ ಸದಸ್ಯರಿಗೆ ಅಭಿನಂದನೆ



ಪ್ರಮಾಣ ವಚನ ಸ್ವೀಕರಿಸಿದ ನಂತರ ನೂತನ ಶಾಸಕರುಗಳಿಗೆ ಮಾನ್ಯ ಸಭಾಪತಿ ಶ್ರೀ ಬಸವರಾಜ ಹೊರಟ್ಟಿ ಅವರು ಹಾಗೂ ಮಾನ್ಯ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪುಷ್ಪಗುಚ್ಛ ನೀಡಿ ಅಭಿನಂದಿಸಿದರು. ಆ ಸಂದರ್ಭದಲ್ಲಿ ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರಾದ ಶ್ರೀ ಎಚ್.ಕೆ.ಪಾಟೀಲ್, ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್, ಐಟಿಬಿಟಿ ಮತ್ತು ತಂತ್ರಜ್ಞಾನ ಸಚಿವರಾದ ಶ್ರೀ ಪ್ರಿಯಾಂಕ ಖರ್ಗೆ, ಮಾನ್ಯ ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಸಚಿವರಾದ ಡಾ.ಶರಣ ಪ್ರಕಾಶ ಪಾಟೀಲ್, ಶಾಸಕರುಗಳು ಮತ್ತು ವಿಧಾನಪರಿಷತ್ ಕಾರ್ಯದರ್ಶಿ ಶ್ರೀಮತಿ ಕೆ.ಆರ್.ಮಹಾಲಕ್ಷ್ಮಿ ಇದ್ದರು.

## 4. ಘನತೆವೆತ್ತ ರಾಜ್ಯಪಾಲರಿಗೆ ಸ್ವಾಗತ



ದಿನಾಂಕ: 03.07.2023ರಂದು ಹದಿನಾರನೇ ವಿಧಾನಸಭೆಯ ಜಂಟಿ ಅಧಿವೇಶನದ ಮೊದಲ ದಿನ ಅಶ್ವಾರೂಢ ಬೆಂಗಾವಲು, ವಾದ್ಯವೃಂದ ಪೊಲೀಸ್ ಪಡೆ, ಸಿಬ್ಬಂದಿ ಮಧ್ಯೆ ಆಗಮಿಸಿದ ಘನತೆವೆತ್ತ ರಾಜ್ಯಪಾಲ ಶ್ರೀ ಥಾವರಚಂದ್ ಗೆಹ್ಲೋಟ್ ಅವರನ್ನು ವಿಧಾನಸೌಧದ ಮೆಟ್ಟಿಲು ಬಳಿ ವಿಧಾನಸಭಾಧ್ಯಕ್ಷರಾದ ಶ್ರೀ ಯು.ಟಿ.ಖಾದರ್, ವಿಧಾನ ಪರಿಷತ್ ಸಭಾಪತಿ ಶ್ರೀ ಬಸವರಾಜ ಎಸ್. ಹೊರಟ್ಟಿ, ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯ ಅವರು ಹೂ ಗುಚ್ಛ ನೀಡಿ ಸರ್ಕಾರಿ ಗೌರವದೊಂದಿಗೆ ಸ್ವಾಗತಿಸಿದರು.

## 5. ಗ್ಯಾರಂಟಿ ಸರ್ಕಾರಕ್ಕೆ ದಶ ದಿಶೆ

ವಿಧಾನಮಂಡಲದ ಜಂಟಿ ಅಧಿವೇಶನದಲ್ಲಿ ಹೊಸ ಸರ್ಕಾರದ ಆಶೋತ್ತರಗಳನ್ನು ರಾಜ್ಯಪಾಲರ ಭಾಷಣದಲ್ಲಿ ಪ್ರತಿಬಿಂಬಿಸುವ ಜೊತೆಗೆ ರಾಜ್ಯವನ್ನು ಅಭಿವೃದ್ಧಿ ದಿಕ್ಕಿನಲ್ಲಿ ಕೊಂಡೊಯ್ಯಲು ಹತ್ತು ದಿಕ್ಸೂಚಿ ಕಾರ್ಯಕ್ರಮಗಳನ್ನು ಆದ್ಯತೆ ಮೇರೆಗೆ ಅನುಷ್ಠಾನಕ್ಕೆ ತರುವ ಭರವಸೆಯನ್ನು ಸರ್ಕಾರ ನೀಡಿದೆ. ಜೊತೆಗೆ, ರಾಜ್ಯದ ಆರ್ಥಿಕ ಸ್ಥಿತಿಗತಿ ಮತ್ತು ಭ್ರಷ್ಟಾಚಾರದ ಕುರಿತಂತೆಯೂ ಗಂಭೀರ ಕಳವಳ ವ್ಯಕ್ತವಾಗಿದೆ.

ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ವಿಧಾನ ಮಂಡಲದ ಜಂಟಿ ಅಧಿವೇಶನ ಉದ್ದೇಶಿಸಿ ಭಾಷಣ ಮಾಡಿದರು. ಇಂದು ರಾಜ್ಯಗಳ ವಿತ್ತೀಯ, ಆಡಳಿತಾತ್ಮಕ ಮತ್ತು ಶಾಸನಾತ್ಮಕ ಸ್ವಾಯತ್ತೆಯನ್ನು ಸಮರ್ಥವಾಗಿ ಬಲಪಡಿಸಬೇಕಾಗಿದೆ. ಇವೆಲ್ಲದರ ಪರಿಣಾಮವಾಗಿ ಒಮ್ಮೆ ಇಡೀ ದೇಶದಲ್ಲಿ ತಲೆಯೆತ್ತಿ ನಿಂತಿದ್ದ, ದೇಶದ ಬೊಕ್ಕಸಕ್ಕೆ ಅಪಾರ ಕೊಡುಗೆ ನೀಡುತ್ತಿರುವ ಕರ್ನಾಟಕವು ಒಂದು ರೀತಿಯ ಸಂಕಟದ ಸ್ಥಿತಿಯಲ್ಲಿ ನಿಂತುಬಿಟ್ಟಿದೆ ಎಂದು ಕಳವಳ ವ್ಯಕ್ತಪಡಿಸಿದರು. ಜೊತೆಗೆ ಈ ಆರ್ಥಿಕ ಸ್ಥಿತಿಯಿಂದ ಕರ್ನಾಟಕವನ್ನು ಮೇಲೆತ್ತುವುದು ಸರ್ಕಾರದ ಆದ್ಯತೆಯಾಗಲಿದೆ. ರಾಜ್ಯದ ಜನ ಕಲ್ಯಾಣ ಮತ್ತು ಆರ್ಥಿಕ ಸ್ಥಿತಿ ಎರಡನ್ನೂ ಸಮತೂಕದಲ್ಲಿ ನಿಭಾಯಿಸಿ ಕರ್ನಾಟಕದ್ದೇ ಆದ ಹೊಸ ಆಡಳಿತ ಮಾದರಿಯನ್ನು ಸರ್ಕಾರ ದೇಶಕ್ಕೆ ಪರಿಚಯಿಸಲಿದೆ ಎಂದು ಆಶಾ ಭಾವನೆ ವ್ಯಕ್ತಪಡಿಸಿದರು. ಇನ್ನೊಂದು ಪ್ರಮುಖ ಸಂಗತಿ ಎಂದರೆ, ಹಿಂದಿನ ಸರ್ಕಾರದ ಅವಧಿಯಲ್ಲಿ ಕೇಳಿಬಂದ ಭ್ರಷ್ಟಚಾರ ಆರೋಪಗಳಿಗೆ ಸಂಬಂಧಿಸಿದಂತೆ ತನಿಖಾ ಸಮಿತಿ ರಚನೆ ಬಗ್ಗೆ ಬಿಸಿಬಿಸಿ ಚರ್ಚೆ ನಡೆಯುತ್ತಿರುವಾಗಲೇ, ರಾಜ್ಯಪಾಲರೂ ಸಹ ತಮ್ಮ ಭಾಷಣದಲ್ಲಿ ವಸ್ತು ಸ್ಥಿತಿಯ ಕುರಿತು ಕಳವಳ ಹೊರಹಾಕಿದ್ದಾರೆ.

ಹಲವು ಕಾರಣಗಳಿಂದ ನಮ್ಮ ವ್ಯವಸ್ಥೆಯೊಳಗೆ ಭ್ರಷ್ಟಾಚಾರವು ಸಾಂದ್ರೀಕರಣಗೊಳ್ಳುವ ಮಟ್ಟಕ್ಕೆ ಬೇರು ಬಿಟ್ಟಿದೆ. ಇದನ್ನು ತೊಡೆದು ಹಾಕುವುದು ದೊಡ್ಡ ಸವಾಲು. ಈ ಸವಾಲನ್ನು ಎದುರಿಸಿ, ಭ್ರಷ್ಟಚಾರದ ನಿರ್ಮೂಲನೆ ಮಾಡಲು ಎಲ್ಲರ ಸಹಕಾರ ಅಗತ್ಯ. ಈ ನಿಟ್ಟಿನಲ್ಲಿ ಆಡಳಿತಾತ್ಮಕ, ಶಾಸನಾತ್ಮಕ ಕ್ರಮಗಳನ್ನು ಸರ್ಕಾರವು ತೆಗೆದುಕೊಳ್ಳುತ್ತದೆ ಎಂದು ಹೇಳಿದರು. ಸಂವಿಧಾನವು ತೋರಿಸಿರುವ ದಾರಿಯಲ್ಲಿ ನಡೆದು ಸಮಾಜದ ಎಲ್ಲ ವರ್ಗಗಳ ಜನರನ್ನು ಅಭಿವೃದ್ಧಿ ಮತ್ತು ನೆಮ್ಮದಿಯ ಕಡೆಗೆ ಮುನ್ನಡೆಸಲು ನನ್ನ ಸರ್ಕಾರವು ಬದ್ಧವಾಗಿದೆ. ದ್ವೇಷರಹಿತ, ಪ್ರೀತಿಯುಕ್ತ ಸಮಾಜವನ್ನು ನಿರ್ಮಾಣ ಮಾಡಲು ಈ ಸರ್ಕಾರವು ಹಲವು ಬಗೆಯ ಕ್ರಮಗಳನ್ನು ಕೈಗೊಳ್ಳಲಿದೆ ಎಂದು ತಿಳಿಸಿದರು.

ನಾವು ಶಾಂತಿಯುತವಾದ, ಸಮೃದ್ಧವಾದ, ಸೌಹಾರ್ದಯುತವಾದ ಸರ್ವಜನಾಂಗದ ಶಾಂತಿಯ ತೋಟ ನಿರ್ಮಿಸಲು ಬದ್ಧರಾಗಿದ್ದೇವೆ. ಎಲ್ಲರನ್ನೂ ಒಳಗೊಂಡು 'ಇವ ನಮ್ಮವ' ಎಂದು ಕೂಡಿ ಬಾಳುವ ನಮ್ಮ ಹಿರಿಯರ ಕನಸನ್ನು ನನಸು ಮಾಡಲು ನನ್ನ ಸರ್ಕಾರ ಬದ್ಧ ಎಂದು ರಾಜ್ಯಪಾಲರು ಹೇಳಿದರು.

**ಭವಿಷ್ಯದ 10 ತೀರ್ಮಾನಗಳು**

1. **ನೀರಾವರಿ ಗುರಿ:** ನೀರಾವರಿ ಯೋಜನೆಗಳಿಗೆ ತಾರ್ಕಿಕ ಅಂತ್ಯದ ಗುರಿ. ರೈತರ ಸಹಭಾಗಿತ್ವದಲ್ಲಿ ಕೆರೆ, ಕಟ್ಟೆ, ಪಾರಂಪರಿಕ ವ್ಯವಸ್ಥೆ ಅಭಿವೃದ್ಧಿ.
2. **ಕೃಷಿ ಭಾಗ್ಯ ಜಾರಿ:** ಕೃಷಿ ಭಾಗ್ಯ ಯೋಜನೆಯನ್ನು ಬಲಪಡಿಸಿ ಇನ್ನಷ್ಟು ವಿಸ್ತರಣೆ. ಪಶುಭಾಗ್ಯವನ್ನೂ ಸಶಕ್ತೀಕರಣಗೊಳಿಸಲಾಗುತ್ತದೆ.
3. **ಎಪಿಎಂಸಿ ಮರುಸ್ಥಾಪನೆ:** ಕೃಷಿ ಉತ್ಪನ್ನಗಳ ಮಾರಾಟಕ್ಕೆ ಮಾರುಕಟ್ಟೆಗಳ ಮರು ನಿರ್ಮಾಣದ ಜೊತೆಗೆ ರೈತರ ಸ್ನೇಹಿ ಎಪಿಎಂಸಿ ಸ್ಥಾಪನೆ.

4. **ಉದ್ಯೋಗ ಸೃಷ್ಟಿ**: ಪರಿಸರ ಸ್ನೇಹಿ ಪ್ರವಾಸೋದ್ಯಮಕ್ಕೆ ಉತ್ತೇಜನ. ಕನಿಷ್ಠ ಐದು ಲಕ್ಷ ಉದ್ಯೋಗಾವಕಾಶ ಸೃಷ್ಟಿ ಗುರಿ.
5. **ಎಐಗೆ ನಿಯಂತ್ರಣ**: ಕೃತಕ ಬುದ್ಧಿಮತ್ತೆ ಅವಕಾಶ ಸೃಷ್ಟಿಸುವ ಜೊತೆಗೆ ಭಯದ ವಾತಾವರಣ ಸೃಷ್ಟಿಸುತ್ತದೆ. ತಂತ್ರಜ್ಞಾನದ ಸಕಾರಾತ್ಮಕ ಬಳಕೆಗೆ ಕ್ರಮ.
6. **ಮತ್ತೆ ಅನುಗ್ರಹ**: ಆಕಸ್ಮಿಕ, ಇನ್ನಿತರೆ ಕಾರಣಗಳಿಂದ ಕುರಿ, ಮೇಕೆ, ಹಸು, ಎಮ್ಮೆ ಮುಂತಾದವುಗಳ ಸಾವಿಗೆ ಪರಿಹಾರ ನೀಡುವ ಅನುಗ್ರಹ ಜಾರಿ.
7. **ಕುಶಲಕರ್ಮಿ ಬಳಕೆ**: ಸ್ಥಳೀಯ ಜ್ಞಾನದ ಪರ್ವತಗಳಾಗಿರುವ ರೈತರು, ಕುಶಲಕರ್ಮಿಗಳು, ತಜ್ಞರು ಪಾಲ್ಗೊಳ್ಳುವಿಕೆಗೆ ಆಡಳಿತಾತ್ಮಕ ಚೌಕಟ್ಟು.
8. **ಪಿಟಿಸಿಎಲ್ ತಿದ್ದುಪಡಿ**: ಪರಿಶಿಷ್ಟ ಜಾತಿ, ಪಂಗಡದವರ ಭೂಮಿ ರಕ್ಷಣೆಗೆ ಸಂಬಂಧಿಸಿದಂತೆ ಪಿಟಿಸಿಎಲ್ ಕಾಯ್ದೆಗೆ ಅಗತ್ಯ ಇರುವ ತಿದ್ದುಪಡಿ.
9. **ಸಮಗ್ರ ಶಿಕ್ಷಣ**: ಕೈಕಾಲುಗಳ ಮೂಲಕ ಕೌಶಲವನ್ನು ಮಿದುಳು, ಹೃದಯದ ಮೂಲಕ ಬುದ್ಧಿಕರುಣೆ ಸೇರಿದ ಸಮಗ್ರ ಶಿಕ್ಷಣ ವ್ಯವಸ್ಥೆ.
10. **ಮನೆ ನಿರ್ಮಾಣ**: ರಾಜ್ಯದಲ್ಲಿ ವಸತಿ ರಹಿತರಿಗೆ ಪಕ್ಕಾ ಮನೆ ನಿರ್ಮಿಸಿಕೊಳ್ಳಲು ಎಲ್ಲ ರೀತಿಯ ನೆರವು ನೀಡಲು ಸರ್ಕಾರ ಬದ್ಧ.

**ಆಧಾರ:** ವಿಜಯವಾಣಿ, ದಿನಾಂಕ: 04.07.2023.

## 6. ನೂತನ ಸಚಿವ, ಶಾಸಕರಿಗೆ ಸ್ಪೀಕರ್ ಖಾದರ್ ಪಾಠ

ಕಲಾಪಕ್ಕೆ ಗೈರಾಗದೆ, ಸರಿಯಾದ ಸಮಯಕ್ಕೆ ಹಾಜರಾಗಬೇಕು. ಜನರ ಹಿತ ಮುಖ್ಯವಾಗಬೇಕು. 16ನೇ ವಿಧಾನಸಭೆ ದೇಶಕ್ಕೆ ಮಾದರಿಯಾಗಬೇಕು ಎಂದು ವಿಧಾನಸಭೆ ಸದಸ್ಯರಿಗೆ ಸ್ಪೀಕರ್ ಯು.ಟಿ.ಖಾದರ್ ಹಿತವಚನ ಹೇಳಿದರು.

ಈಗಾಗಲೇ ಹೊಸ ಶಾಸಕರಿಗೆ ತರಬೇತಿ ನೀಡಲಾಗಿದೆ. ಮುಂದಿನ ದಿನಗಳಲ್ಲಿ ಆಯ್ದ ಶಾಸಕರನ್ನು ಅಂತಾರಾಷ್ಟ್ರೀಯ ನಾಯಕತ್ವ ತರಬೇತಿಗೆ ಕಳಿಸುವುದಾಗಿಯೂ ತಿಳಿಸಿದರು.

ಕೋರಂಗೆ ಕೊರತೆಯಾಗಬಾರದು, ಕಲಾಪ ಆರಂಭಕ್ಕೆ 15 ನಿಮಿಷ ಮುಂಚೆಯೇ ಬೆಲ್ ಹಾಕಲಾಗುತ್ತದೆ, ನಿಗದಿತ ಸಮಯಕ್ಕೆ ಕಲಾಪ ಪ್ರಾರಂಭವಾದರೆ ಸಂಜೆ ಸರಿಯಾಗಿ ಕಲಾಪ ಮುಗಿಸಲು ಸಾಧ್ಯ ಎಂದರು.

ಮಸೂದೆಗಳ ಬಗ್ಗೆ ಅನೇಕ ಸಂಗತಿ ಹೊಸ ಶಾಸಕರಿಗೆ ಗೊತ್ತಾಗುವುದಿಲ್ಲ. ಹೀಗಾಗಿ ವಿಧೇಯಕ ಮಂಡನೆಯಾದ ದಿನ ನಮ್ಮ ಕಚೇರಿಯಲ್ಲಿ ಅಧಿಕಾರಿಗಳು ಹಾಜರಿದ್ದು, ಹೊಸ ಶಾಸಕರಿಗೆ ಮಾಹಿತಿ ಅಗತ್ಯವಿದ್ದರೆ ತಿಳಿದುಕೊಳ್ಳಬಹುದು ಎಂದು ಹೇಳಿದರು.

ಇನ್ನು ಸಚಿವರಿಗೂ ಸೂಚನೆ ನೀಡಿ, ಯಾವ ಸಚಿವರು ಕಲಾಪದಲ್ಲಿ ಹಾಜರಿರಬೇಕೆಂದು ನಿರ್ಧಾರವಾಗಿರುತ್ತದೋ ಆ ಸಚಿವರು ಪೂರ್ವ ತಯಾರಿಯೊಂದಿಗೆ ಹಾಜರಿರಬೇಕಾಗುತ್ತದೆ. ಅಧಿಕಾರಿಗಳು ಮತ್ತು ಸಚಿವರು ಜವಾಬ್ದಾರಿ ಬಗ್ಗೆ ಅರಿತಿರಬೇಕಾಗುತ್ತದೆ ಎಂದರು.

**ಆಧಾರ:** ವಿಜಯವಾಣಿ, ದಿನಾಂಕ: 04.07.2023.

## 7. ಭೋಸರಾಜು ಸಭಾನಾಯಕ, ಪಟ್ಟಣ್, ಸಲೀಂ ಚೀಫ್ ವಿಪ್

ವಿಧಾನಪರಿಷತ್ ಸಭಾನಾಯಕರಾಗಿ ಸಚಿವ ಎನ್.ಎಸ್.ಭೋಸರಾಜು, ವಿಧಾನಸಭೆಯ ಆಡಳಿತ ಪಕ್ಷದ ಮುಖ್ಯ ಸಚೇತಕರನ್ನಾಗಿ ರಾಮದುರ್ಗ ಕ್ಷೇತ್ರದ ಶಾಸಕ ಅಶೋಕ್ ಪಟ್ಟಣ್ ಹಾಗೂ ವಿಧಾನ ಪರಿಷತ್ ಮುಖ್ಯ ಸಚೇತಕರನ್ನಾಗಿ ಸಲೀಂ ಅಹಮದ್ ಅವರನ್ನು ನೇಮಕ ಮಾಡಲಾಗಿದೆ. ವಿಧಾನ ಪರಿಷತ್ ಸದಸ್ಯರಾಗಿರುವವರು ಮಾತ್ರ ಸಭಾನಾಯಕರಾಗಿ ಕಾರ್ಯನಿರ್ವಹಿಸಬಹುದು, ಹೀಗಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸಂಪುಟದಲ್ಲಿನ ಪರಿಷತ್ತಿನ ಸದಸ್ಯರಾಗಿರುವ ಬೋಸರಾಜು ಅವರನ್ನು ಸಹಜವಾಗಿ ಸಭಾನಾಯಕರನ್ನಾಗಿ ನೇಮಕ ಮಾಡಲಾಗಿದೆ.

ವಿಧಾನ ಪರಿಷತ್ ಮುಖ್ಯ ಸಚೇತಕರಾಗಿರುವ ಸಲೀಂ ಅಹಮದ್ ಅವರು 2ನೇ ಬಾರಿ ಸರ್ಕಾರದ ಮುಖ್ಯ ಸಚೇತಕರಾಗಿ ಕಾರ್ಯನಿರ್ವಹಿಸಲಿದ್ದಾರೆ. ಕಾಂಗ್ರೆಸ್ ಪಕ್ಷದ ಕಾರ್ಯಕರ್ತರಾಗಿ ರಾಜಕೀಯ ಪ್ರವೇಶಿಸಿದ ಅವರು, ಕಾಲೇಜು ವಿದ್ಯಾರ್ಥಿ ಸಂಘಟನೆಯ ನಾಯಕರಾಗಿ, ಬೆಂಗಳೂರು ನಗರ ಎನ್‌ಎಸ್‌ಯುಐ ಉಪಾಧ್ಯಕ್ಷರಾಗಿ ನಂತರ ಅಧ್ಯಕ್ಷರಾಗಿಯು ಕಾರ್ಯನಿರ್ವಹಿಸಿದ್ದಾರೆ. ತಮ್ಮ ಕಾರ್ಯಕ್ಷಮತೆ, ಪಕ್ಷ ಸಂಘಟನೆ ಮೂಲಕ ಎನ್‌ಎಸ್‌ಯುಐ ರಾಜ್ಯಾಧ್ಯಕ್ಷರಾಗಿದ್ದರು. ಕ್ರಮೇಣ ಅಖಿಲ ಭಾರತ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದಾರೆ. 1997ರಲ್ಲಿ ವಿಧಾನಪರಿಷತ್ ಸದಸ್ಯರಾಗಿ ಆಯ್ಕೆಯಾದ ಸಲೀಂ, 2000ರಲ್ಲಿ ಸರ್ಕಾರದ ಮುಖ್ಯ ಸಚೇತಕರಾಗಿದ್ದರು. 2002ರಲ್ಲಿ ಪುನಃ ಮೇಲ್ಮನೆ ಸದಸ್ಯರಾಗಿದ್ದ ವೇಳೆಯೇ ಎಐಸಿಸಿ ಸದಸ್ಯರಾಗಿ ನೇಮಕಗೊಂಡಿದ್ದರು. ಸದ್ಯ ಕೆಪಿಸಿಸಿ ಕಾರ್ಯಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

**ಆಧಾರ**: ಕನ್ನಡಪ್ರಭ, ದಿನಾಂಕ: 04.07.2023.

## 8. ಮೇಲ್ಮನೆಯ ಮೇರುಕೀರ್ತಿ ಹೊರಟ್ಟಿ

ಸಭಾಪತಿ ಬಸವರಾಜು ಹೊರಟ್ಟಿ ಈಗ ದೇಶದ ಶಾಸನ ಸಭೆಯೊಂದರ ಅತಿ ಹಿರಿಯ ಪ್ರತಿನಿಧಿ. ವಿಧಾನಪರಿಷತ್ತಿನ ಸದಸ್ಯರಾಗಿ ಅವರ ನಿರಂತರ ಸೇವೆಗೆ ಈಗ 43 ವಸಂತಗಳ ಸಂಭ್ರಮ. ಈ ಶಿಕ್ಷಕ ಪ್ರತಿನಿಧಿ ಮೇಲ್ಮನೆಗೆ ಪ್ರವೇಶಿಸಿ ಜೂನ್ 30ಕ್ಕೆ ನಾಲ್ಕು ದಶಕಗಳ, ಮೇಲೆ ಮೂರು ವರ್ಷಗಳು ಪೂರ್ಣಗೊಂಡವು.

ಹೊರಟ್ಟಿಯವರ ಈ ದಾಖಲೆಯ ನಡೆಗೆ ಮುನ್ನುಡಿ ಬರೆದ ಪಶ್ಚಿಮ ಶಿಕ್ಷಕರ ಕ್ಷೇತ್ರದ ಅನೇಕರಿಗೆ ಈ ನಾಯಕರ ವಿಧಾನಪರಿಷತ್ ಪ್ರವೇಶ ಆಕಸ್ಮಿಕ ಎಂಬುದು ಗೊತ್ತಿಲ್ಲ.

'ಶಿಕ್ಷಕರ ಸಮಸ್ಯೆಗಳು ಹೆಚ್ಚುತ್ತಿದ್ದು ಕಾಲಘಟ್ಟದಾಗಿತ್ತು. ವಿಧಾನ ಪರಿಷತ್ತಿನ ಚುನಾವಣೆ ಸಮೀಪಿಸುತ್ತಿತ್ತು. ಚುನಾವಣೆಯಲ್ಲಿ ಸ್ಪರ್ಧಿಸುವ ಅಭ್ಯರ್ಥಿಯನ್ನು ಅಂತಿಮಗೊಳಿಸಲು ಹುಬ್ಬಳ್ಳಿ ದುರ್ಗದ ಬಯಲಿನ ಅಟ್ಟದ ಮೇಲಿನ ಕೋಣೆಯೊಂದರಲ್ಲಿ ಸಭೆ ನಡೆಯುತ್ತಿತ್ತು. ನಾವೆಲ್ಲ ಮೊದಲ ಯೋಚಿಸಿದ್ದ ಶಿಕ್ಷಕ ತಾವು ನಿಲ್ಲಲಾರೆ ಎಂದು ಬಿಟ್ಟರು. ಆಗ ಉಳಿದ ಶಿಕ್ಷಕರೆಲ್ಲ ಸೇರಿ ನೀವೇ ನಿಲ್ಲಬೇಕು ಎಂದು ಪಟ್ಟು ಹಿಡಿದು ನನ್ನನ್ನು ಒಪ್ಪಿಸಿಬಿಟ್ಟರು. ನನ್ನ ತಾಯಿಗೆ ನಾನು ರಾಜಕಾರಣಿಯಾಗುವುದು ಇಷ್ಟವಿರಲಿಲ್ಲ. ಹೀಗಾಗಿ ಈ ವಿಷಯವನ್ನು ಅವರಿಂದ ಮುಚ್ಚಿಟ್ಟು ಪಶ್ಚಿಮ ಶಿಕ್ಷಕರ ಕ್ಷೇತ್ರದ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿದೆ. ಶಿಕ್ಷಕರು ಬೆಂಬಲಿಸಿದರು. ಆಮೇಲಿನದ್ದು ಇತಿಹಾಸ ಎಂಬುದಾಗಿ ಇಲ್ಲಿನ ಲ್ಯಾಮಿಂಗ್ಟನ್ ಶಾಲೆಯಲ್ಲಿ ಶಿಕ್ಷಕರಾಗಿದ್ದ ಬಸವರಾಜ ಹೊರಟ್ಟಿ ತಮ್ಮ ನೆನಪಿನ ಬುತ್ತಿ ಬಿಚ್ಚುತ್ತಾರೆ.

ಪ್ರಥಮ ಚುನಾವಣೆಯಲ್ಲಿ ಹೊರಟ್ಟಿ ಗೆಲುವನ್ನು ಬಾಗಲಕೋಟೆ ಜಿಲ್ಲೆ ಮುಧೋಳ ತಾಲ್ಲೂಕಿನ ಯಡಹಳ್ಳಿಯಲ್ಲಿದ್ದ ತಾಯಿ ಗುರವ್ವ ಶಿವಲಿಂಗಪ್ಪ ಹೊರಟ್ಟಿ, 'ಸಂಯುಕ್ತ ಕರ್ನಾಟಕ"ದಿಂದ

ತಿಳಿದುಕೊಂಡಿದ್ದರು. ಜಯಿಸಿ ಊರಿಗೆ ಹೋದ ಬಸವರಾಜ ಹೊರಟ್ಟಿ ರಾಜಕಾರಣಕ್ಕೆ ಬರಬೇಕಾದ ಅನಿವಾರ್ಯತೆಯನ್ನು ತಾಯಿಯವರಿಗೆ ಮನದಟ್ಟು ಮಾಡಿಕೊಡಲು ಹರಸಾಹಸ ಪಡಬೇಕಾಯಿತಂತೆ.

ಮೊದಲ ಚುನಾವಣೆಯಲ್ಲಿ ತಮ್ಮ ಬಳಿ ಹಣವೂ ಇರಲಿಲ್ಲ. ಕ್ಷೇತ್ರ ಸಂಚಾರಕ್ಕೆ ವಾಹನವು ಇರಲಿಲ್ಲ. ಹನ್ನೆರಡು ಸಾವಿರ ರೂಪಾಯಿ ಹಣ ಹಾಗೂ ಕಾರು ಒದಗಿಸಿದವರು ಆಪ್ತರು ಎಂದು ಹೊರಟ್ಟಿ ಆಗಾಗ ಹೇಳುತ್ತಿರುತ್ತಾರೆ.

ಹೊರಟ್ಟಿಯವರಲ್ಲಿ ಹೋರಾಟದ ಕಿಚ್ಚು ಇದೆ ಎಂಬುದನ್ನು ಅಧಿಕಾರಕ್ಕೆ ಬರುತ್ತಿದ್ದಂತೆ (1983) ಗುರುತಿಸಿದ ಅಂದಿನ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ಇವರನ್ನು ಜನತಾ ಪಕ್ಷಕ್ಕೆ ಸೇರ್ಪಡೆ ಮಾಡಿಕೊಂಡರು.

ಜನತಾ ಪಕ್ಷದಲ್ಲಿ ಸಕ್ರಿಯವಾದ ಹೊರಟ್ಟಿ 1980ರ ನಂತರದ 1986, 1992, 1998, 2004, 2010, 2016 ಹಾಗೂ 2022ರ ಚುನಾವಣೆಗಳಲ್ಲಿ ಕೂಡ ಇದೇ ಕ್ಷೇತ್ರದಿಂದ ಸತತವಾಗಿ ಗೆಲ್ಲುವ ಮೂಲಕ ಈಗ ದಾಖಲೆಯ ಎಂಟನೇ ಬಾರಿ ಮೇಲ್ಮನೆಯಲ್ಲಿರುವ ಶಿಕ್ಷಕರ ಪ್ರತಿನಿಧಿಯಾಗಿದ್ದಾರೆ.

ಹೆಗಡೆ ನಂತರ ದೇವೇಗೌಡರ ಶಿಷ್ಯರಾಗಿ 2022ರ ಮೇ ತಿಂಗಳವರೆಗೂ ಜೆಡಿಎಸ್‌ನಲ್ಲಿ ರಾಜಕೀಯವಾಗಿ ಗುರುತಿಸಿಕೊಂಡಿದ್ದ ಇವರು, ಬದಲಾದ ಸನ್ನಿವೇಶದಲ್ಲಿ ಬಿಜೆಪಿ ಸೇರಿದ್ದಾರೆ.

ಶಿಕ್ಷಣ ಹಾಗೂ ವಿವಿಧ ಖಾತೆಗಳ ಸಚಿವರು 48,313 ಶಿಕ್ಷಕ, ಉಪನ್ಯಾಸಕರ ನೇಮಕ, 10 ಸರ್ಕಾರಿ ಪ್ರೌಢಶಾಲೆ ಆರಂಭಿಸಿ ಹಳ್ಳಿಹಳ್ಳಿಯಲ್ಲಿಯು ಶಿಕ್ಷಣ ಸಿಗುವಂತೆ ಮಾಡಿದ್ದು, 492 ಪದವಿಪೂರ್ವ ಕಾಲೇಜು ಸ್ಥಾಪನೆ, 1987 ರಿಂದ 1993–94 ರವರೆಗೆ ಅನುದಾನ ರಹಿತ ಶಾಲಾ ಕಾಲೇಜುಗಳಿಗೆ ಅನುದಾನ ಒಳಪಡಿಸಿ 33 ಸಾವಿರ ಶಿಕ್ಷಕ ಕುಟುಂಬಗಳಿಗೆ ಅನ್ನದಾತರಾಗಿಸಿದ್ದು, ದೇಶದಲ್ಲಿಯೇ ಮೊದಲ ವಿಜಾಪುರದಲ್ಲಿ ಮತ್ತು ತಂತ್ರಜ್ಞಾನ ಅಕಾಡಮಿ ಸ್ಥಾಪನೆ ಮಾಡಿದ್ದು, ಇವರು ಶಿಕ್ಷಣ ಕ್ಷೇತ್ರದ ಬಗ್ಗೆ ಇರಿಸಿಕೊಂಡಿರುವ ಬದ್ಧವಾದ ನಿದರ್ಶನವಾಗಿದೆ.

ಇದಲ್ಲದೇ ಒಂದಂಕಿ ಲಾಟರಿ ನಿಷೇಧ, ಕಾನೂನು ವಿಶ್ವವಿದ್ಯಾಲಯ ಸ್ಥಾಪನೆ, ಪಂಚಾಯಿತಿಗೊಂದು ಗ್ರಂಥಾಲಯ, ಧಾರವಾಡ, ಕಲಬುರ್ಗಿ ಹೈಕೋರ್ಟ್ ಪೀಠಗಳಿಗೆ ಭೂಮಿ ಒದಗಿಸಲು ಯತ್ನಿಸಿದ ಹುಟ್ಟೂರಾದ ಯಡಹಳ್ಳಿಯಲ್ಲಿ ದೇಶದಲ್ಲಿಯೇ ಮಾದರಿಯಾದ ಹೈಟೆಕ್ ಶಾಲೆ ನಿರ್ಮಿಸಿರುವುದೇ ಇನ್ನಿತರ ಮುಖ್ಯ ಸಾಧನೆಗಳು.

'ನನ್ನ ಬಳಿ ಸಹಾಯ ಕೇಳಿ ಬಂದವರಿಗೆ ಇಂದೇ ಸಹಾಯ ಮಾಡುವೆ. ನಾಳೆ ಎನ್ನುವುದಿಲ್ಲ ಏಕೆಂದರೆ ನಾಳೆ ಸಹಾಯ ಮಾಡಲು ಆಗುವುದೋ ಇಲ್ಲವೋ ಗೊತ್ತಿಲ್ಲ ಎಂಬ ತಮ್ಮ ಜೀವನ ಸಿದ್ಧಾಂತವನ್ನು ಹೊರಟ್ಟಿ ಗೃಹ ಕಚೇರಿಯಲ್ಲಿ ಲಿಖಿತವಾಗಿಯೇ ಘೋಷಿಸಿದ್ದಾರೆ. ಇದೇ ಈ ಶಿಕ್ಷಣ ಚಿಂತಕನನ್ನು ಬೋಧಕರ ಅವಿಭಾಜ್ಯ ಅಂಗವಾಗುವಂತೆ ಮಾಡಿದೆ ಎಂದರೆ ತಪ್ಪಾಗದು.

**ಆಧಾರ**: ವಿಶ್ವವಾಣಿ, ದಿನಾಂಕ: 04.07.2023.

## 9. Come on time, get certificate, Speaker tells legislators

To encourage discipline and teach legislators time management skills, Speaker UT Khader announced that those who come to the House on time will get certificates.

When the proceedings began at 11 am Wednesday, BJP members stormed the well seeking an adjournment motion on the guarantee scheme. Khader assured them that they will be given time. “I want you to attend the session. Whoever comes early,

will get a prize," he said, A member objected, saying that a certificate will be more suitable instead of a prize to which Khader agreed.

Khader read out the names of legislators who came on time Tuesday, which included Darshan Puttaniah from Melkote and Suresh Kumar from Rajajinagar among others. Those who came on time Wednesday, their names will be read out Thursday, he said.

During a heated debate between the treasury and the opposition benches, Congress members began shouting. "For ruling party members, patience is important, I can understand if the opposition members do this, but not the ruling party members," Khader said.

**Courtsey:** Indian Express, date: 06.07.2023.

## 10. ಡಾ.ಬಾಬು ಜಗಜೀವನರಾಮ್ 37ನೇ ಪುಣ್ಯ ಸ್ಮರಣೆ



ದಿನಾಂಕ: 06.07.2023 ರಂದು ಹಸಿರು ಕ್ರಾಂತಿಯ ಹರಿಕಾರ ರಾಷ್ಟ್ರ ನಾಯಕ ಭಾರತದ ಮಾಜಿ ಉಪ ಪ್ರಧಾನಮಂತ್ರಿಗಳಾದ ಡಾ.ಬಾಬು ಜಗಜೀವನರಾಮ್ ರವರ 37ನೇ ಪುಣ್ಯ ಸ್ಮರಣೆ ಅಂಗವಾಗಿ ವಿಧಾನಸೌಧ ಪಶ್ಚಿಮ ದ್ವಾರದ ಬಳಿ ಇರುವ ಡಾ.ಬಾಬು ಜಗಜೀವನ್ ರಾಮ್‌ರವರ ಪ್ರತಿಮೆಗೆ ಮಾನ್ಯ ಸಭಾಪತಿ ಶ್ರೀ ಬಸವರಾಜ ಎಸ್ ಹೊರಟ್ಟಿ ಅವರು ಮಾಲಾರ್ಪಣೆ ಸಲ್ಲಿಸಿದರು. ನಂತರ ಡಾ.ಬಾಬು ಜಗಜೀವನ್ ರಾಮ್‌ರವರ ಕೆಲ ಚಿಂತನೆಗಳನ್ನು ಮೆಲಕು ಹಾಕಿದ ಅವರು ದೇಶದ ಪ್ರಗತಿಯಲ್ಲಿ ನಮ್ಮ ಪ್ರಗತಿಯಿದೆ. ಅದರ ಉದ್ಧಾರದಲ್ಲೇ ನಮ್ಮ ಉದ್ಧಾರವಿದೆ. ಅದರ ವಿಮೋಚನೆಯಲ್ಲೇ ನಮ್ಮ ವಿಮೋಚನೆ ಇದೆ" ಎಂಬ ಅವರ ಚಿಂತನೆಗಳನ್ನು ನಾವೆಲ್ಲ ಪಾಲಿಸುವುದು ಅವಶ್ಯವಿದೆ ಎಂದು ಹೇಳಿದರು.

## 11. Rudrappa Lamani elected unopposed Deputy Speaker

Rudrappa Lamani, 64, three-time Congress MLA, was elected unopposed as Deputy Speaker of the Karnataka Legislative Assembly.

He belongs to the Banjara community and served as Minister in the previous Congress government.

Earlier, the congress had picked Chamarajanagar MLA C.Puttarangashetty for the post, but he declined to take it up. Mr.Lamani, Haveri MLA, became the 25th Deputy speaker of the House on Thursday.

"Though I have a desire to become a Minister, the party asked me to become the Deputy Speaker and I accepted the post happily," he said. Deputy Chief Minister D.K. Shivakumar said Mr.Lamani had bowed to the party's decision". Speaker U.T.Khader, the former Chief Minister Basavaraj Bommai, and other senior members congratulated Mr.Lamani

Courtsey: The Hindu, date: 07.07.2023

.

## 12. ಉನ್ನತ ಶಿಕ್ಷಣ ಸಚಿವರು ಮಾನ್ಯ ಸಭಾಪತಿಗಳ ಕಛೇರಿಗೆ ಭೇಟಿ



ದಿನಾಂಕ: 10.07.2023 ರಂದು ಗೌರವಾನ್ವಿತ ಸಭಾಪತಿಗಳಾದ ಶ್ರೀ ಬಸವರಾಜ ಎಸ್ ಹೊರಟ್ಟಿ ಅವರೊಂದಿಗೆ ಮಾನ್ಯ ಉನ್ನತ ಶಿಕ್ಷಣ ಸಚಿವರಾದ ಡಾ.ಎಂ.ಸಿ.ಸುಧಾಕರ್ ಅವರು ಇಂದು ಸಭಾಪತಿಗಳ ಕಛೇರಿಗೆ ಆಗಮಿಸಿ ಪ್ರಸ್ತುತ ಉನ್ನತ ಶಿಕ್ಷಣ ಇಲಾಖೆಯಲ್ಲಿರುವ ಸಮಸ್ಯೆಗಳ ಕುರಿತು ಹೊರಟ್ಟಿ ಅವರೊಂದಿಗೆ ಸುದೀರ್ಘವಾಗಿ ಚರ್ಚಿಸಿದರು. ಕಾಲೇಜು ಹಾಗೂ ವಿಶ್ವವಿದ್ಯಾಲಯಗಳ ಉಪನ್ಯಾಸಕರ ಹಾಗೂ ಅತಿಥಿ ಉಪನ್ಯಾಸಕರ ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಹಾಗೂ ವಿಶ್ವವಿದ್ಯಾಲಯಗಳಲ್ಲಿ ಇರುವ ಬೋಧಕ, ಬೋಧಕೇತರ ಸಿಬ್ಬಂದಿಗಳ ಕೊರತೆ ಕುರಿತು ಚರ್ಚಿಸಿದರು. ಈ ಸಂದರ್ಭದಲ್ಲಿ ಮಾನ್ಯ ಸಭಾಪತಿಯವರ ವಿಶೇಷ ಕರ್ತವ್ಯಾಧಿಕಾರಿಗಳಾದ ಡಾ. ಮಹೇಶ ವಾಳ್ವೇಕರ್ ಸೇರಿದಂತೆ ಪರಿಷತ್ತಿನ ಉನ್ನತ ಅಧಿಕಾರಿಗಳು ಉಪಸ್ಥಿತರಿದ್ದರು.

## 13. ವಿಧಾನಸೌಧ, ಶಾಸಕರ ಭವನಕ್ಕೆ ಹೈಟೆಕ್ ಭದ್ರತೆ–ಸ್ಪೀಕರ್

ಇತ್ತೀಚೆಗೆ ಅಪರಿಚಿತ ವ್ಯಕ್ತಿಯೊಬ್ಬ ಭದ್ರತಾ ಸಿಬ್ಬಂದಿಯನ್ನು ಯಾಮಾರಿಸಿ ವಿಧಾನಸಭೆ ಸಭಾಂಗಣ ಪ್ರವೇಶಿಸಿದ್ದರಿಂದ ಆದ ಭದ್ರತಾ ಲೋಪದ ಹಿನ್ನೆಲೆಯಲ್ಲಿ ವಿಧಾನಸೌಧ, ಶಾಸಕರ ಭವನ,

ಹೈಕೋರ್ಟ್ ಸೇರಿದಂತೆ ಶಕ್ತಿ ಕೇಂದ್ರದ ವ್ಯಾಪ್ತಿಯ ಎಲ್ಲ ಪ್ರದೇಶಗಳಲ್ಲಿ ಅತ್ಯಾಧುನಿಕ ತಂತ್ರಜ್ಞಾನದ ಭದ್ರತಾ ವ್ಯವಸ್ಥೆ ಮಾಡಲಾಗುವುದು ಎಂದು ಸ್ಪೀಕರ್ ಯು.ಟಿ.ಖಾದರ್ ತಿಳಿಸಿದ್ದಾರೆ.

ಸದನದಲ್ಲಿ ಈ ವಿಷಯ ಕುರಿತು ಸ್ವಯಂ ಪ್ರೇರಿತವಾಗಿ ಹೇಳಿಕೆ ನೀಡಿದ ಸ್ಪೀಕರ್, ಅಪರಿಚಿತ ವ್ಯಕ್ತಿಯ ಸದನ ಪ್ರವೇಶದಿಂದ ಭದ್ರತೆ ವಿಚಾರದಲ್ಲಿ ಲೋಪವಾಗಿರಬಹುದು. ಆದರೆ, ದೇವರೇ ಆ ವ್ಯಕ್ತಿಯ ಮೂಲಕ ನಮ್ಮ ಕಣ್ಣು ತೆರೆಸಿದ್ದಾನೆ ಎಂದು ಭಾವಿಸುತ್ತೇನೆ. ಸದನದ ಪ್ರತಿಯೊಬ್ಬ ಸದಸ್ಯರೂ ಎಚ್ಚರವಹಿಸಬೇಕು ಈ ಸದನಕ್ಕೆ ಸಾಕಷ್ಟು ಹೊಸ ಸದಸ್ಯರು ಈ ಬಾರಿ ಆಯ್ಕೆಯಾಗಿ ಬಂದಿದ್ದಾರೆ. ವಿಧಾನಸೌಧ ಪ್ರವೇಶಿಸುವಾಗ ಶಾಸಕರಾಗಲಿ, ಪತ್ರಕರ್ತರು, ಅಧಿಕಾರಿಗಳು, ಸಿಬ್ಬಂದಿ ವರ್ಗ ಯಾರೇ ಆಗಲಿ, ಭದ್ರತಾ ಸಿಬ್ಬಂದಿ ತಮ್ಮ ಗುರುತಿನ ಚೀಟಿ ಕೇಳಿದಾಗ ಸ್ವಾಭಿಮಾನಕ್ಕೆ ಧಕ್ಕೆ ಆಯಿತು ಎಂದು ಭಾವಿಸಬಾರದು. ಮುಂದೆ ಇಂತಹ ಲೋಪಗಳಾಗದಂತೆ ಎಚ್ಚರ ವಹಿಸಲಾಗುವುದು. ಈ ನಿಟ್ಟಿನಲ್ಲಿ ಹೈಕೋರ್ಟ್, ವಿಧಾನಸೌಧ, ರಾಜಭವನ ಸೇರಿದಂತೆ ಶಕ್ತಿಕೇಂದ್ರದ ವ್ಯಾಪ್ತಿಯ ಪ್ರದೇಶಗಳಲ್ಲಿ ಆಧುನಿಕ ತಂತ್ರಜ್ಞಾನ ಆಧಾರಿತ ಭದ್ರತಾ ವ್ಯವಸ್ಥೆ ಮಾಡಲು ಕ್ರಮ ವಹಿಸಲಾಗುವುದು ಎಂದು ಸ್ಪೀಕರ್ ಹೇಳಿದರು.

ಈ ವೇಳೆ ಮಧ್ಯ ಪ್ರವೇಶಿಸಿದ ಕಾಂಗ್ರೆಸ್ ಸದಸ್ಯ ಬಸವರಾಜ ರಾಯರೆಡ್ಡಿ ಅವರು, ಸಂಸತ್ ಭವನ ಪ್ರವೇಶಿಸುವಾಗ ಎಲ್ಲ ಸಂಸದರು, ರಾಜ್ಯಸಭೆ ಸದಸ್ಯರ ಗುರುತು ಪತ್ತೆಗೆ ಫೇಸ್‌ರೀಡರ್ ತಂತ್ರಜ್ಞಾನ ಅಳವಡಿಸಲಾಗಿದೆ. ಅಂತಹ ವ್ಯವಸ್ಥೆಯನ್ನು ಇಲ್ಲೂ ತರುವಂತೆ ಸಲಹೆ ನೀಡಿದರು. ದಿನಾಂಕ: 10.07.2023 ಸದನ ಆರಂಭಕ್ಕೂ ಮುನ್ನ ಸ್ಪೀಕರ್ ಯು.ಟಿ.ಖಾದರ್ ವಿಧಾನಸೌಧ ಪ್ರದಕ್ಷಿಣೆ ಮೂಲಕ ಭದ್ರತೆಯನ್ನು ಪರಿಶೀಲನೆ ನಡೆಸಿದರು.

**ಆಧಾರ**: ಕನ್ನಡಪ್ರಭ, ದಿನಾಂಕ: 11.07.2023

## 14. ಅನುದಾನಿತ ಶಾಲೆಗಳ ಬಗ್ಗೆ ಚರ್ಚೆ



ದಿನಾಂಕ: 12.07.2023ರಂದು ಮಾನ್ಯ ಸಭಾಪತಿ ಶ್ರೀ ಬಸವರಾಜ ಎಸ್.ಹೊರಟ್ಟಿ ರವರ ಅಧ್ಯಕ್ಷತೆಯಲ್ಲಿ 1987 ರಿಂದ 1995ರ ಒಳಗೆ ಆರಂಭವಾದ ಅನುದಾನಿತ ಶಾಲೆಗಳನ್ನು ವೇತನಾನುದಾನಕ್ಕೆ ಒಳಪಡಿಸುವ ಬಗ್ಗೆ ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರಾದ ಶ್ರೀ ಮಧು ಬಂಗಾರಪ್ಪ ರವರೊಡನೆ ಮಾನ್ಯ ಸಭಾಪತಿಯವರ ಕಛೇರಿಯಲ್ಲಿ ನಡೆದ ಸಭೆ. ಈ ಸಂದರ್ಭದಲ್ಲಿ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಪ್ರಧಾನ ಕಾರ್ಯದರ್ಶಿ ಹಿತೇಶಕುಮಾರ ಸಿಂಗ್, ಆರ್ಥಿಕ ಇಲಾಖೆಯ ಸರ್ಕಾರದ ಕಾರ್ಯದರ್ಶಿ ಡಾ.ಪಿ.ಸಿ ಜಾಫರ್ ಹಾಗೂ ಸಭಾಪತಿಯವರ ವಿಶೇಷ ಕರ್ತವ್ಯಾಧಿಕಾರಿ ಡಾ.ಮಹೇಶ ವಾಳ್ವೇಕರ್ ಉಪಸ್ಥಿತರಿದ್ದರು.

## 15. ನೂತನ ಸದಸ್ಯರಿಗೆ ವಿಶ್ವಾಸ ತುಂಬಿದ ಖಾದರ್

ನೂತನ ಸದಸ್ಯರು ಟ್ರೋಲ್ ಮಾಡುತ್ತಾರೆಂಬ ಅಂಜಿಕೆ ಬಿಡಿ. ಯಾವುದೇ ಅಳುಕಿಲ್ಲದೇ, ಮುಕ್ತವಾಗಿ ಮಾತನಾಡಿ. ಇಲ್ಲೇನೂ ಪರೀಕ್ಷೆ ನಡೆಯುವುದಿಲ್ಲ ಎಂದು ಸ್ಪೀಕರ್ ಯು.ಟಿ.ಖಾದರ್ ವಿಶ್ವಾಸ ತುಂಬಿದರು. ವಿಧಾನಸಭೆಯಲ್ಲಿ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಮೇಲೆ ಮಾತನಾಡುವ ಸದಸ್ಯರಿಗೆ ಈ ಸಲಹೆ ನೀಡಿದರು. ಸಾಮಾಜಿಕ ಜಾಲತಾಣಗಳಲ್ಲಿ ಟ್ರೋಲ್ ಮಾಡುತ್ತಾರೆಂಬ ಹಿಂಜರಿಕೆ ಬೇಡ. ನನ್ನನ್ನೂ ಟ್ರೋಲ್ ಮಾಡಿದ್ದಕ್ಕೇ ನಾನಿಲ್ಲಿ ಬಂದು ಕುಳಿತಿರುವುದು ಎಂದು ಹೇಳಿದರು. ಮಾತನಾಡುವಾಗ ತಪ್ಪುಗಳಾಗುತ್ತವೆ ಎಂಬ ಅಳುಕು ಬೇಡ. ಒಂದು ವೇಳೆ ತಪ್ಪಾದರೆ ಸರಿಪಡಿಸೋಣ, ನೀವು ಮುಕ್ತವಾಗಿ ಸಂವಿಧಾನಕ್ಕೆ ಅನುಸಾರವಾಗಿ ಮಾತನಾಡಿ ಎಂದು ತಿಳಿಸಿದರು.

**ಆಧಾರ**: ವಿಜಯವಾಣಿ, ದಿನಾಂಕ: 13.07.2023

## 16. ಮಾನ್ಯ ಸಭಾಪತಿಗಳ ಕಛೇರಿಗೆ ಮಾನ್ಯ ಮುಖ್ಯಮಂತ್ರಿಗಳ ಭೇಟಿ.





ದಿನಾಂಕ: 14.07.2023ರಂದು ನಡೆದ ವಿಧಾನ ಪರಿಷತ್ತಿನ ಅಧಿವೇಶನದಲ್ಲಿ ಮಾನ್ಯ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಸಿದ್ದರಾಮಯ್ಯನವರು ಭಾಗವಹಿಸಿ ತೆರಳುತ್ತಿರುವ ಸಂದರ್ಭದಲ್ಲಿ ಮಾನ್ಯ ಸಭಾಪತಿಯವರ ಕಛೇರಿಗೆ ಸೌಜನ್ಯದ ಭೇಟಿ ನೀಡಿ ಕುಶಲೋಪರಿ ವಿಚಾರಿಸಿದರು. ಬಸವಣ್ಣನವರ ಆಶಯಗಳನ್ನು ಮಾನ್ಯ ಸಭಾಪತಿ ಶ್ರೀ ಬಸವರಾಜ ಎಸ್.ಹೊರಟ್ಟಿ ಅವರು ಶಾಸನಸಭೆಯಲ್ಲಿ ಆಚರಣೆ ತರುತ್ತಿರುವುದನ್ನು ಪ್ರಶಂಸಿಸಿ, ಈ ಜಗತ್ತಿನ ಮೊದಲ ಸಂಸತ್ತಿನ ಭಾವಚಿತ್ರ

ಅನುಭವ ಮಂಟಪದ ಚಿತ್ರ ನನ್ನನ್ನು ಭಾವುಕನನ್ನಾಗಿಸಿದೆ. ಅಲ್ಲಮಪ್ರಭುಗಳ ಅಧ್ಯಕ್ಷತೆಯಲ್ಲಿ ಮಹಾ ಮಾನವತಾವಾದಿ ಬಸವಣ್ಣನವರು ಮತ್ತು ವಚನಗಾರ್ತಿ ಅಕ್ಕಮಹಾದೇವಿಯವರೊಂದಿಗೆ ಚರ್ಚಿಸುತ್ತಿರುವ ಈ ಚಿತ್ರ ತುಂಬಾ ಮನಮೋಹಕವಾಗಿದೆ. ಇಂತಹ ಸುಂದರ ಚಿತ್ರವನ್ನು ನಿಮ್ಮ ಕಛೇರಿಯಲ್ಲಿ ಅಳವಡಿಸಿದ್ದಕ್ಕೆ ನಿಮ್ಮನ್ನು ನಾನು ವೈಯಕ್ತಿಕವಾಗಿ ಅಭಿನಂದಿಸುತ್ತೇನೆ ಎಂದು ಮಾನ್ಯ ಮುಖ್ಯಮಂತ್ರಿಗಳು ಸಭಾಪತಿಯವರಿಗೆ ತಿಳಿಸಿದರು. ಈ ಸಂದರ್ಭದಲ್ಲಿ ಸಭಾಪತಿಯವರ ವಿಶೇಷ ಕರ್ತವ್ಯಾಧಿಕಾರಿ ಡಾ.ಮಹೇಶ ವಾಳ್ವೇಕರ್ ಹಾಗೂ ವಿಶೇಷಾಧಿಕಾರಿ ಶ್ರೀಮತಿ ಶೈಲಾ ಕೆ.ಡಿ ಉಪಸ್ಥಿತರಿದ್ದರು.

## 17. ವಿಧಾನ ಪರಿಷತ್ತಿನ ಕಲಾಪ




ದಿನಾಂಕ: 14.07.2023ರಂದು ವಿಧಾನ ಪರಿಷತ್ತಿನ ಕಾರ್ಯಕಲಾಪಗಳು ಸುಗಮವಾಗಿ ಸಾಗದೆ ನಿಯಂತ್ರಣಕ್ಕೆ ಬಾರದೆ ಇರುವ ಸಂದರ್ಭದಲ್ಲಿ ವಿಧಾನ ಪರಿಷತ್ತು ಸದಸ್ಯರಿಗೆ ಮಾನ್ಯ ಸಭಾಪತಿ ಶ್ರೀ ಬಸವರಾಜ ಎಸ್ ಹೊರಟ್ಟಿ ಅವರು ಎದ್ದು ನಿಂತು ಸದಸ್ಯರಿಗೆ ತಾಳ್ಮೆಯಿಂದ ಇರುವಂತೆ ಕಾರ್ಯಕಲಾಪಗಳು ಸುಗಮವಾಗಿ ಸಾಗಲು ನೋಡಿಕೊಳ್ಳಬೇಕೆಂದು ಹೇಳುತ್ತಿರುವ ಸಂದರ್ಭ.

## 18. ಟರ್ಫ್ ಕ್ಲಬ್ ಸ್ಥಳಾಂತರಕ್ಕೆ ಶಿಫಾರಸು

ರಾಜ್ಯದಲ್ಲಿರುವ ಕ್ಲಬ್‌ಗಳ ಕಾರ್ಯವೈಖರಿ ಮತ್ತು ಚಟುವಟಿಕೆಗಳನ್ನು ಪರಿಶೀಲಿಸಲು ರಚಿಸಲಾಗಿರುವ ವಿಧಾನಪರಿಷತ್ತಿನ ವಿಶೇಷ ಸದನ ಸಮಿತಿಯು 'ಬೆಂಗಳೂರು ಟರ್ಫ್ ಕ್ಲಬ್' ಅನ್ನು ಶಾಶ್ವತವಾಗಿ ಸ್ಥಳಾಂತರಿಸುವಂತೆ ಶಿಫಾರಸ್ಸು ಮಾಡಲು ಮುಂದಾಗಿದೆ.

ಬಿಜೆಪಿಯ ಎನ್.ರವಿಕುಮಾರ್ ನೇತೃತ್ವದ ಸಮಿತಿಯು ಮುಂದಿನ ವಿಧಾನಮಂಡಲ ಅಧಿವೇಶನಕ್ಕೂ ಮೊದಲು ವರದಿ ಸಿದ್ಧಪಡಿಸಲು ತೀರ್ಮಾನಿಸಿದೆ. ಈ ಸಮಿತಿಯು ನಗರದ ಹೃದಯಭಾಗದಲ್ಲಿರುವ ಟರ್ಫ್ ಕ್ಲಬ್ ಅನ್ನು ನಗರದ ಹೊರವಲಯದಲ್ಲಿ ಚಿಕ್ಕಜಾಲ ಬಳಿ ಒದಗಿಸಿದ ಜಮೀನಿಗೆ ಸ್ಥಳಾಂತರಿಸುವಂತೆ ಶಿಫಾರಸ್ಸು ಮಾಡಲು ನಿರ್ಧರಿಸಿದೆ.

ವಿಧಾನ ಪರಿಷತ್ತಿನಲ್ಲಿ ಹಲವು ಸದಸ್ಯರು ಪ್ರಸ್ತಾಪಿಸಿದ ವಿಷಯಕ್ಕೆ ಪ್ರತಿಕ್ರಿಯಿಸಿದ ರವಿಕುಮಾರ್, 'ವರದಿ ಅಂತಿಮಗೊಳಿಸಲು ಇನ್ನೂ ಎರಡು ಸಭೆಗಳನ್ನು ನಡೆಸಬೇಕಿದೆ. ಮುಂದಿನ ಅಧಿವೇಶನದ ವೇಳೆಗೆ ವರದಿಯನ್ನು ಸದನಕ್ಕೆ ಸಲ್ಲಿಸಲಾಗುವುದು' ಎಂದರು.

ವಸ್ತ್ರಸಂಹಿತೆ ಮತ್ತು ಇತರ ನಿರ್ಬಂಧಗಳನ್ನು ವಿಧಿಸಿರುವ ಕ್ಲಬ್‌ಗಳ ವಿರುದ್ಧ ಕ್ರಮ ತೆಗೆದುಕೊಳ್ಳಲು ಮತ್ತು ಅಂತಹ ನಿರ್ಬಂಧಗಳನ್ನು ತೆಗೆದು ಹಾಕುವ ಬಗ್ಗೆಯೂ ಸಮಿತಿ ಚರ್ಚೆ ನಡೆಸಿದೆ.

ಇದೇ ವೇಳೆ ಕಾಂಗ್ರೆಸ್‌ನ ಯು.ಬಿ.ವೆಂಕಟೇಶ್ ಅವರ ಪ್ರಶ್ನೆಗೆ ಉತ್ತರಿಸಿದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಬೆಂಗಳೂರಿನ ಎಲ್ಲ ಕ್ಲಬ್‌ಗಳ ಕಾರ್ಯವೈಖರಿ ಬಗ್ಗೆ ವರದಿ ಪಡೆಯುತ್ತೇನೆ ಎಂದರು

ಬಸವನಗುಡಿ ವಿಧಾನಸಭಾ ಕ್ಷೇತ್ರದ ಬಿಬಿಎಂಪಿ ಬ್ಯಾಡ್ಮಿಂಟನ್ ಒಳಾಂಗಣ ಕ್ರೀಡಾಂಗಣ ನಿರ್ಮಾಣಕ್ಕೆ ಒಪ್ಪಂದ ಮಾಡಿಕೊಂಡಿರುವ ಎನ್‌ಆರ್ ಕಾಲೋನಿ ಸ್ಪೋರ್ಟ್ಸ್ ಕ್ಲಬ್, ಈ ಕ್ರೀಡಾಂಗಣ ಬಳಕೆಗೆ ಶುಲ್ಕ ನಿಗದಿ ಮಾಡಿರುವುದಕ್ಕೆ ಯು.ಬಿ.ವೆಂಕಟೇಶ್ ಆಕ್ಷೇಪಿಸಿದರು.

ಅದಕ್ಕೆ ಪ್ರತಿಕ್ರಿಯಿಸಿದ ಶಿವಕುಮಾರ್, ಇದು ನನ್ನ ಗಮನಕ್ಕೂ ಬಂದಿದೆ. ವಿದ್ಯುತ್ ಮತ್ತು ನೀರಿನ ಬಿಲ್ ಪಾವತಿಸಲು ಶುಲ್ಕ ನಿಗದಿಪಡಿಸಿರುವುದಾಗಿ ಹೇಳುತ್ತಿದ್ದಾರೆ. ಬಿಬಿಎಂಪಿ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲ ಕ್ಲಬ್‌ಗಳ ವರದಿ ಪಡೆದು ಕ್ರಮ ತೆಗೆದುಕೊಳ್ಳಲಾಗುವುದು ಎಂದರು.

**ಆಧಾರ: ಪ್ರಜಾವಾಣಿ**, ದಿನಾಂಕ: 14.07.2023.

## 19. Assembly passes GST Bill to bring e-commerce players under scrutiny

Three Bills, including one on the Goods and Services Tax (GST), were passed in the Assembly. Piloting the Karnataka GST (Amendment) Bill, Law & Parlimentary Affairs Minister H K Patil said the government would increase audit and inspection of e-commerce players.

The Bill aims to overcome difficulties in the levy and collection of tax on intra –state supply of goods or services or both by the state government.

The Bill also intends to include penal provisions applicable to e-commerce players in case of contravention of provisions relating to supply of goods and services made through them by unregistered persons or composition of tax payers. Further, the Bill aims to decriminalise offenses by increasing the monetary threshold from Rs 1 crore to Rs 2 crore except for offenses related to issuance of invoices without supply of goods or services of both.

Patil said that tax payers in the state during Value Added Tax (VAT) regime were 5,80,000, and now in the GST period it has crossed 10 lakh. “With about 14.2 lakh taxpayers coming under the tax net the state has displayed an increasing trend in GST collection from Rs 44, 816 crore in 2017-18 to Rs 81,848 crore in 2022-23. GST has immensely contributed towards an increase in our budget size and revenues,” he claimed.

BJP’s Basavaraj Bommai, Congress K M Shivalinge Gowda and H D Revanna of the JD(S) highlighted instances of tax evasion.

Patil assured them that the state government will take all necessary measures to plug GST leakages. “Rs 1,320 crore was collected in the form of tax penalty after the department detected and investigated about 11,733 cases last year (2022-23). Though this is not a small number, more measures will be taken to curb tax evasion,” he said.

Pointing out that a drive had been conducted in the state against ‘bogus dealers’, Patil claimed that nearly 1,600 cases were detected and about Rs 90 crore ITC (input tax credit) was blocked.

**Other Bills:** The Assembly passed the Karnataka Transparency in Public Procurements (Amendment) Bill. 2023 to enhance the amount of construction works undertaken by SC/ST persons from Rs 50 lakh to Rs 1 crore.

Also, the Karnataka Legislature (Prevention of Disqualification) (Amendment) bill, 2023 was passed to exempt the CM’s Legal Advisor (A S Ponnanna) and Special Representative of Karnataka State at New Delhi (T B Jayachandra) from incurring disqualification for hodling an office of profit.

**Courtesy:** Deccan Herald, Dated: 15.07.2023

## 20. ವಿಧಾನಮಂಡಲ ವಿಧೇಯಕ–2023ಕ್ಕೆ ಅನುಮೋದನೆ

ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಹಾಗೂ ದೆಹಲಿ ವಿಶೇಷ ಪ್ರತಿನಿಧಿಗಳಿಗೆ ಲಾಭದಾಯಕ ಹುದ್ದೆಯಿಂದ ವಿನಾಯ್ತಿ ನೀಡುವ ಸಲುವಾಗಿ ಕರ್ನಾಟಕ ವಿಧಾನಮಂಡಲ (ಅನರ್ಹತಾ ನಿವಾರಣಾ) (ತಿದ್ದುಪಡಿ) ವಿಧೇಯಕ–2023ಕ್ಕೆ ವಿಧಾನಸಭೆ ಅನುಮೋದನೆ ನೀಡಿತು.

ಸಿಎಂ ಕಾನೂನು ಸಲಹೆಗಾರ ಪೊನ್ನಣ್ಣ ಹಾಗೂ ದಿಲ್ಲಿ ವಿಶೇಷ ಪ್ರತಿನಿಧಿ ಟಿ.ಬಿ.ಜಯಚಂದ್ರ ಅವರ ಹುದ್ದೆಗಳನ್ನು ಲಾಭದಾಯಕವಲ್ಲ ಎಂಬುದನ್ನು ನಿರೂಪಿಸಿ, ಕಾನೂನು ರಕ್ಷಣೆ ನೀಡುವ ಸಲುವಾಗಿ ಈ ವಿಧೇಯಕವನ್ನು ಮಂಡಿಸಲಾಗಿತ್ತು. ಮೇ ತಿಂಗಳಿಂದ ಜಾರಿಗೆ ಬರುವಂತೆ ವಿಧೇಯಕದಲ್ಲಿ ಅಡಕ ಮಾಡಿದ್ದು, ಮುಂದಿನ ಹಂತದಲ್ಲಿ ವಿಧಾನಪರಿಷತ್ತಿನ ಮುಂದೆ ವಿಧೇಯಕ ಮಂಡನೆಯಾಗಲಿದೆ.

ವಿಧೇಯಕದ ಮೇಲಿನ ಚರ್ಚೆ ವೇಳೆ ಮಾಜಿ ಸಿಎಂ ಬಸವರಾಜ ಬೊಮ್ಮಾಯಿ ಮಾತನಾಡಿ, ಈಗಾಗಲೇ ಎರಡೂ ಹುದ್ದೆಗಳಿಗೆ ನೇಮಕ ಆಗಿದೆ. ಈ ಹಂತದಲ್ಲಿ ವಿಧೇಯಕ ಮಂಡಿಸಿರುವುದು ಎಷ್ಟು ಸರಿ? ನೇಮಕ ಆಗುವ ಮೊದಲೇ ಈ ಪ್ರಕ್ರಿಯೆ ನಡೆಸಬೇಕಿತ್ತು. ಸರ್ಕಾರಕ್ಕೆ ಅಷ್ಟೂ ವಿವೇಕ ಇಲ್ಲವೇ ಎಂದು ಪ್ರಶ್ನಿಸಿದರು. ಇದಕ್ಕೆ ಉತ್ತರಿಸಿದ ಕಾನೂನು ಮಂತ್ರಿ ಎಚ್.ಕೆ.ಪಾಟೀಲ್, ಮೇ ತಿಂಗಳಿಂದಲೇ ಅನ್ವಯಿಸುವಂತೆ ವಿಧೇಯಕದಲ್ಲಿ ಉಲ್ಲೇಖಿಸಿದೆ. ನೇಮಕಾತಿ ಇತ್ತೀಚೆಗೆ ಆಗಿರುವುದು. ಹೀಗಾಗಿ ಸಮಸ್ಯೆ ಇಲ್ಲ ಎಂದು ಸ್ಪಷ್ಟನೆ ನೀಡಿದರು. ಬಳಿಕ ಧ್ವನಿಮತದ ಮೂಲಕ ವಿಧೇಯಕಕ್ಕೆ ಅಂಗೀಕಾರ ದೊರೆಯಿತು.

ವಿಧೇಯಕದ ಬಗ್ಗೆ ಬೆಳಕು ಚೆಲ್ಲುತ್ತಿದ್ದ ಬಸವರಾಜ ಬೊಮ್ಮಾಯಿ, ಜಯಚಂದ್ರ ಅವರು ಈ ಸದನದ ಹಿರಿಯ ಶಾಸಕರು. 1978ರಲ್ಲೇ ಶಾಸಕರಾದವರು. ಅವರನ್ನು ಮಂತ್ರಿ ಮಾಡುತ್ತೀರಿ ಎಂದುಕೊಂಡರೆ ದೆಹಲಿ ವಿಶೇಷ ಪ್ರತಿನಿಧಿ ಮಾಡಿದ್ದೀರಿ. ಅವರು ಸ್ಪೀಕರ್ ಸ್ಥಾನವನ್ನೇ ಒಪ್ಪಿರಲಿಲ್ಲ. ಇದನ್ನು ಒಪ್ಪಿದರೆ? ಅಲ್ಲಿ ವಿಪರೀತ ಚಳಿ, ವಿಪರೀತ ಬಿಸಿಲು. ಈ ವಯಸ್ಸಲ್ಲಿ ಅವರನ್ನು ಅಲ್ಲಿಗೆ ಕಳುಹಿಸುವುದೇ? ಅವರಿಗೇಕೆ ಈ ಶಿಕ್ಷೆ? ಅಲ್ಲೇನು ಮಾಡುತ್ತಾರೆ? ಕರ್ನಾಟಕ ಭವನದಲ್ಲಿ ಒಂದು ಕೊಠಡಿಯಲ್ಲಿ ಇರಬೇಕಷ್ಟೇ ಎಂದು ಕಳಕಳಿ ತೋರಿದರು. ಇದನ್ನು ಆರಗ ಜ್ಞಾನೇಂದ್ರ ಸಹ ಧ್ವನಿಗೂಡಿಸಿದರು. ಮಧ್ಯಪ್ರವೇಶಿಸಿದ ಅಪ್ಪಾಜಿ ನಾಡಗೌಡ, ನಾನೂ ವಿಶೇಷ ಪ್ರತಿನಿಧಿಯಾಗಿದ್ದೆ. ಇಲ್ಲಿನ ಸಚಿವರು ಎಲ್ಲಕ್ಕೂ ದಿಲ್ಲಿಗೆ ಓಡಾಡಬಾರದು ಎಂದು ನೇಮಿಸುವುದು ಎನ್ನುತ್ತಿದ್ದಂತೆ, ಹಾಗಿದ್ದರೆ ಅವರು ಮಂತ್ರಿಗಳ ಪ್ರತಿನಿಧಿಯೇ ಎಂದರು. ಇದೆಲ್ಲವನ್ನೂ ಕೇಳಿಸಿಕೊಂಡು ಕುಳಿತಿದ್ದ ಜಯಚಂದ್ರ ನಕ್ಕು ಸುಮ್ಮನಾದರು.

**1 ಕೋಟಿ ಕಾಮಗಾರಿಗೆ ಟೆಂಡರ್ ವಿನಾಯ್ತಿ:** ಪರಿಶಿಷ್ಟ ಜಾತಿ ಮತ್ತು ಸಮುದಾಯದ ಗುತ್ತಿಗೆದಾರರಿಗೆ ರೂ.1 ಕೋಟಿ ಮೊತ್ತದವರೆಗಿನ ಕಾಮಗಾರಿಗಳಿಗೆ ಟೆಂಡರ್ ವಿನಾಯ್ತಿ ನೀಡಲು ಅನುಕೂಲ ಆಗುವಂತೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ (ತಿದ್ದುಪಡಿ) ವಿಧೇಯಕಕ್ಕೆ ವಿಧಾನಸಭೆಯಲ್ಲಿ ಅನುಮೋದನೆ ದೊರತಿದೆ.

ವಿಧಾನಪರಿಷತ್ತಿನಲ್ಲಿ ಈ ವಿಧೇಯಕಕ್ಕೆ ಅನುಮೋದನೆ ದೊರೆತು ರಾಜ್ಯಪಾಲರ ಸಹಿ ಆದ ನಂತರ ಇದು ಕಾನೂನು ಆಗಿ ಜಾರಿಗೊಳ್ಳಲಿದ್ದು, ಇನ್ನು ಮುಂದೆ ರೂ.1 ಕೋಟಿ ವರೆಗಿನ ಕಾಮಗಾರಿಗಳಲ್ಲಿ ಶೇ.17.15 ರಷ್ಟು ಪರಿಶಿಷ್ಟ ಜಾತಿ ಮತ್ತು ಪಂಗಡದ ಗುತ್ತಿಗೆದಾರರಿಗೆ ಮೀಸಲಾತಿ ಸಿಗಲಿದೆ.

2023ರ ಮಾ.29ರಿಂದಲೇ ಈ ಕಾನೂನು ಜಾರಿಗೆ ತರುವ ಉದ್ದೇಶವಿತ್ತು. ಅಧಿವೇಶನ ಚಾಲ್ತಿಯಲ್ಲಿ ಇಲ್ಲದೇ ಇದ್ದುದರಿಂದ ಪ್ರಸ್ತುತ ಅಧಿವೇಶನದಲ್ಲಿ ಅನುಮೋದನೆ ಪಡೆದುಕೊಳ್ಳಲಾಗುತ್ತಿದೆ ಎಂದ ಕಾನೂನು ಸಚಿವ ಎಚ್.ಕೆ.ಪಾಟೀಲ್, ಈ ಹಿಂದೆ ರೂ. 50 ಲಕ್ಷದವರೆಗಿನ ಮೀಸಲಾತಿಯನ್ನು ಮೀಸಲಿಟ್ಟಾಗ ಮೊದಲ ಬಾರಿಗೆ ಶೇ.62 ರಷ್ಟು ಪರಿಶಿಷ್ಟ ಗುತ್ತಿಗೆದಾರರು ಟೆಂಡರ್‌ನಲ್ಲಿ ಭಾಗಿಯಾಗಿದ್ದರೆ, ಎರಡನೇ ಕರೆಯಲ್ಲಿ ಶೇ.80 ರಷ್ಟು ಪರಿಶಿಷ್ಟ ಗುತ್ತಿಗೆದಾರರು ಪಾಲ್ಗೊಂಡಿದ್ದರು. ಮುಂದಿನ ದಿನಗಳಲ್ಲಿ ಇನ್ನಷ್ಟು ಕಾಮಗಾರಿಗಳಿಗೆ ಈ ಸಮುದಾಯಕ್ಕೆ ಸಿಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

**ಬೊಮ್ಮಾಯಿ ಸ್ವಾಗತ**: ಎಸ್ಸಿ, ಎಸ್ಟಿ ಸಮುದಾಯದ ಗುತ್ತಿಗೆದಾರರಿಗೆ ಟೆಂಡರ್ ಪ್ರಕ್ರಿಯೆಯಿಂದ ವಿನಾಯಿತಿ ನೀಡುವ ಕರ್ನಾಟಕ ಸಾರ್ವಜನಿಕ ಸಂಗ್ರಹಗಳಲ್ಲಿನ ಪಾರದರ್ಶಕತೆ ಕಾಯ್ದೆ ತಿದ್ದುಪಡಿ ಮಾಡಿ 50 ಲಕ್ಷದಿಂದ 1 ಕೋಟಿಗೆ ಹೆಚ್ಚಳ ಮಾಡಿರುವುದು ಸ್ವಾಗತಾರ್ಹ ಎಂದು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ವಿಧೇಯಕದ ಪರ್ಯಾಲೋಚನೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಎಸ್ಸಿ, ಎಸ್ಟಿ ಸಮುದಾಯದ ಗುತ್ತಿಗೆದಾರರಿಗೆ ಟೆಂಡರ್ ವಿನಾಯಿತಿಯಲ್ಲಿ 50 ಲಕ್ಷದಿಂದ ಒಂದು ಕೋಟಿ ರೂ.ಗೆ ಹೆಚ್ಚಳ ಮಾಡುವ ತಿದ್ದುಪಡಿ ಮಾಡಿರುವುದು ಸ್ವಾಗತಾರ್ಹ ಎಂದರು.

**ಆಧಾರ**: ಉದಯವಾಣಿ, ದಿನಾಂಕ: 15.07.2023

## 21. ಸ್ಪೀಕರ್ ಖಾದರ್‌ಗೆ 'ದಿಗ್ರೇಟ್ ಸನ್ ಆಫ್‌ಇಂಡಿಯಾ' ಪ್ರಶಸ್ತಿ








ದೆಹಲಿಯ ಇಂಡಿಯಾ ಇಂಟರ್ ನ್ಯಾಷನಲ್ ಸೆಂಟರ್‌ನಲ್ಲಿ ನಡೆದ ಸಮಾರಂಭದಲ್ಲಿ ಕರ್ನಾಟಕ ವಿಧಾನಸಭೆ ಸ್ಪೀಕರ್ ಯು.ಟಿ.ಖಾದರ್ ಅವರಿಗೆ ಭಾರತೀಯ ಬುದ್ಧಿಜೀವಿಗಳ ಸಮ್ಮೇಳನದಿಂದ 'ದಿ ಗ್ರೇಟ್ ಸನ್ ಆಫ್ ಇಂಡಿಯಾ' ಪ್ರಶಸ್ತಿ ಪ್ರದಾನ ಮಾಡಲಾಯಿತು. ಈ ಸಂದರ್ಭದಲ್ಲಿ ಛತ್ತೀಸ್‌ಗಢ ರಾಜ್ಯಪಾಲ ಬಿಸ್ವ ಭೂಷಣ ಹರಿಚರಣ್, ನಿವೃತ್ತ ಸುಪ್ರೀಂಕೋರ್ಟ್ ನ್ಯಾಯಾಧೀಶ ವಿ.ಗೋಪಾಲ್ ಗೌಡರವರು ಉಪಸ್ಥಿತರಿದ್ದರು.

**ಆಧಾರ:** ಕನ್ನಡ ಪ್ರಭ, ದಿನಾಂಕ: 17.07.2023.

## 22. ಅತ್ಯುತ್ತಮ ಶಾಸಕರ ಪ್ರಶಸ್ತಿ





ಅತ್ಯುತ್ತಮ ಶಾಸಕರ ಪ್ರಶಸ್ತಿ ದಿನಾಂಕ: 18.07.2023ರಂದು ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಕರ್ನಾಟಕ ವಿಧಾನ ಪರಿಷತ್ತಿನ ವತಿಯಿಂದ ಮಾನ್ಯ ಸಭಾಪತಿ ಶ್ರೀ ಬಸವರಾಜ ಎಸ್. ಹೊರಟ್ಟಿರವರ ಅಧ್ಯಕ್ಷತೆಯಲ್ಲಿ ಹಾಗೂ ಮಾನ್ಯ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಮತ್ತು ಮಾನ್ಯ ಉಪಸಭಾಪತಿ ಶ್ರೀ ಎಂ.ಕೆ ಪ್ರಾಣೇಶ್ ರವರ ಘನ ಉಪಸ್ಥಿತಿಯಲ್ಲಿ 2021 ಮತ್ತು 2022ನೇ ಸಾಲಿನ "ಅತ್ಯುತ್ತಮ ಶಾಸಕ" ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ ಶ್ರೀ ಕೆ.ಟಿ.ಶ್ರೀಕಂಠೇಗೌಡ ಮತ್ತು ಶ್ರೀ ಎಸ್.ಆರ್.ಪಾಟೀಲ್ ಅವರಿಗೆ ನೀಡಿ ಸನ್ಮಾನಿಸಲಾಯಿತು. ಈ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಮಾನ್ಯ ಕಾನೂನು, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರಾದ ಶ್ರೀ ಹೆಚ್.ಕೆ ಪಾಟೀಲ್, ಮಾನ್ಯ ಸಭಾನಾಯಕರು

ಹಾಗೂ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಶ್ರೀ ಎನ್.ಎಸ್ ಬೋಸರಾಜು, ಮಾನ್ಯ ಸರ್ಕಾರಿ ಮುಖ್ಯ ಸಚೇತಕರಾದ ಶ್ರೀ ಸಲೀಂ ಅಹಮದ್, ಮಾನ್ಯ ಶಾಸಕರು ಹಾಗೂ ಮಾಜಿ ಸಭಾ ನಾಯಕರಾದ ಶ್ರೀ ಕೋಟ ಶ್ರೀನಿವಾಸ ಪೂಜಾರಿ, ಮಾನ್ಯ ಶಾಸಕರು ಹಾಗೂ ಮಾಜಿ ಸರ್ಕಾರಿ ಮುಖ್ಯ ಸಚೇತಕರಾದ ಡಾ.ವೈ.ಎ. ನಾರಾಯಣಸ್ವಾಮಿ, ಮಾನ್ಯ ಶಾಸಕರಾದ ಶ್ರೀ ಎಸ್.ಎಲ್ ಭೋಜೇಗೌಡರು ಭಾಗವಹಿಸಿದ್ದರು ಹಾಗೂ ಈ ಸಂದರ್ಭದಲ್ಲಿ ವಿಧಾನ ಪರಿಷತ್ತು ಸದಸ್ಯರು ಹಾಗೂ ವಿಧಾನ ಪರಿಷತ್ತಿನ ಅಧಿಕಾರಿ ವೃಂದದವರು ಉಪಸ್ಥಿತರಿದ್ದರು.

## 23. ಸಮಯಕ್ಕೆ ಸರಿಯಾಗಿ ಸದನಕ್ಕೆ ಬರಬೇಕು

ಕಲಾಪ ನಡೆಯುವ ಸಮಯದಲ್ಲಿ ನಿಗದಿತ ಸಚಿವರು ಸರಿಯಾದ ಸಮಯಕ್ಕೆ ಹಾಜರಿರಬೇಕು ಎಂದು ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಸೂಚನೆ ನೀಡಿದ್ದಾರೆ. ಬೆಳಗ್ಗೆ ಕಲಾಪ ಆರಂಭಗೊಂಡಾಗ ಸಭೆಯಲ್ಲಿರಬೇಕಾದ ಹಲವು ಸಚಿವರು ಹಾಜರಿರಲಿಲ್ಲ. ಈ ಬಗ್ಗೆ ಬಿಜೆಪಿ ಸದಸ್ಯರು ಆಕ್ಷೇಪ ವ್ಯಕ್ತಪಡಿಸಿದಾಗ ಮಧ್ಯೆಪ್ರವೇಶಿಸಿದ ಸ್ಪೀಕರ್, ನಿತ್ಯ ಸಚಿವರು ತಡವಾಗಿ ಸದನಕ್ಕೆ ಬರುವುದು ಸರಿಯಲ್ಲ. ಯಾರ್ಯಾರು ಇರಬೇಕು ಎನ್ನುವ ಸಚಿವರ ಪಟ್ಟಿ ಇರುತ್ತದೆ. ಆ ಸಚಿವರು ಸರಿಯಾದ ಸಮಯಕ್ಕೆ ಬರಬೇಕು. ಈ ಬಗ್ಗೆ ಎಚ್ಚರವಹಿಸುವಂತೆ ಸರಕಾರದ ಮುಖ್ಯ ಸಚೇತಕ ಅಶೋಕ್ ಪಟ್ಟಣ್‌ಗೆ ಸೂಚನೆ ನೀಡಿದರು.

ಕಲಾಪದಲ್ಲಿ ಭಾಗವಹಿಸಲು ಬಹುತೇಕ ನೂತನ ಶಾಸಕರು 11 ಗಂಟೆಗೆ ಬಂದಿದ್ದರು. ಆದರೆ, ಸಕಾಲಕ್ಕೆ ಸಚಿವರು ಬಾರದ ಹಿನ್ನೆಲೆಯಲ್ಲಿ ಕಲಾಪ ಆರಂಭ ವಿಳಂಬವಾಯಿತು. ಮಂತ್ರಿಗಳು ಸಮಯ ಪಾಲನೆ ಮಾಡಬೇಕು. ಸಮಯ ಸದ್ಬಳಕೆ ಆಗಬೇಕು. ಸಚಿವರಿಲ್ಲ ಎಂದು ಎದ್ದು ಹೋಗುವುದು ಪರಿಹಾರವಲ್ಲ ಎಂದರು.

ಇದಕ್ಕೂ ಮೊದಲು ಮಾತನಾಡಿದ ಮಾಜಿ ಸಚಿವ ಆರ್.ಅಶೋಕ್, ಇಂಧನ ಸಚಿವ ಕೆ.ಜೆ.ಜಾರ್ಜ್ ಅವರನ್ನು ಹೊರತುಪಡಿಸಿದರೆ, ಬೇರೆ ಯಾವ ಸಚಿವರು ಇಲ್ಲ ಎಂದರು. ಇದಕ್ಕೆ ದನಿಗೂಡಿಸಿದ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಚಿವರು ಇಲ್ಲದಿದ್ದರೆ ಕಲಾಪ ನಡೆಯುವುದಾದರೂ ಹೇಗೆ ಸರ್ಕಾರಕ್ಕೆ ಸಡಿಲ ಕೊಡಬೇಡಿ, ಸರ್ಕಾರ ವಿಧಾನಸಭೆಯನ್ನು ಗಂಭೀರರಾಗಿ ಪರಿಗಣಿಸಿಲ್ಲ. ಇದು ವಿಧಾನಸಭೆಯ ಘನತೆಗೆ ತಕ್ಕದಲ್ಲ. ಈ ರೀತಿಯಾದರೆ ಸದನ ಘನತೆ, ಗೌರವ ಏನಾಗುತ್ತದೆ? ಸರಕಾರದ ಕಿವಿ ಹಿಂಡಿ, ಸಚಿವರು ಬರುವವರೆಗೆ ಕಲಾಪ ಮುಂದೂಡಿ ಎಂದು ಆಗ್ರಹಿಸಿದರು.

ಈ ವೇಳೆಗೆ ಕೃಷಿ ಸಚಿವ ಚೆಲುವರಾಯಸ್ವಾಮಿ ಸೇರಿದಂತೆ ಕೆಲವು ಸಚಿವರು ಸದನಕ್ಕೆ ಆಗಮಿಸಿದರು. ಆಗ ಸಭಾಧ್ಯಕ್ಷರು ಸದನದಲ್ಲಿ ಆರು ಸಚಿವರಿದ್ದಾರೆ. ಎಷ್ಟು ಸಚಿವರು ಬಂದಿದ್ದಾರೆ ಎಂಬುದು ಮುಖ್ಯವಲ್ಲ. ತಡವಾಗಿ ಬರಬಾರದು ಎಂದು ಹೇಳಿ ಸಕಾಲಕ್ಕೆ ಸದನಕ್ಕೆ ಆಗಮಿಸಿದ ಶಾಸಕರ ಹೆಸರನ್ನು ಸದನದ ಮುಂದಿಟ್ಟರು.

**ಚಿನ್ನದ ನಾಣ್ಯ ಬಹುಮಾನ**: ಸಚಿವರ ಗೈರು ಕುರಿತ ಚರ್ಚೆ ವೇಳೆ ಆಡಳಿತ ಪಕ್ಷದ ಲಕ್ಷ್ಮಣ ಸವದಿ ಅವರು, ಸದನಕ್ಕೆ ಸಕಾಲಕ್ಕೆ ಬಂದವರಿಗೆ ಬಹುಮಾನ ಕೊಡುತ್ತೀರಾ? ರೋಲೆಕ್ಸ್ ವಾಚ್ ಕೊಡುತ್ತೀರಾ? ಎಂದು ಪ್ರಶ್ನಿಸಿದರು. ಇದಕ್ಕೆ ಆಡಳಿತ ಪಕ್ಷದ ಶಾಸಕ ಷಡಕ್ಷರಿ ಅವರು ಮೊದಲ ಬಹುಮಾನ ಚಿನ್ನದ ನಾಣ್ಯ, ಎರಡನೇ ಬಹುಮಾನ ಬೆಳ್ಳಿ ಹಾಗೂ ಮೂರನೇ ಬಹುಮಾನ ಕಬ್ಬಿಣ ಎಂದರು. ಆಗ

ಸಭಾಧ್ಯಕ್ಷರು ಇದನ್ನು ನಾವು ಕೊಡುವುದಿಲ್ಲ. ಷಡಕ್ಷರಿ ಕೊಡುತ್ತಾರೆ ಎಂದು ಹೇಳಿ ಮುಂದಿನ ಕಲಾಪಕ್ಕೆ ಅನುವು ಮಾಡಿಕೊಟ್ಟರು.

ಕಲಾಪಕ್ಕೆ ಸರಿಯಾದ ಸಮಯಕ್ಕೆ ಬಾರದ ಸಚಿವರ ಚಳಿ ಬಿಡಿಸಿ, ನೀವು ಹೇಗೆ ಚಳಿ ಬಿಡಿಸಬೇಕೆಂದರೆ, ಇವರು ಮನೆಗೆ ಹೋದ ಮೇಲೆ ನಿಜವಾಗಿ ಜ್ವರ ಬಂದು ಮಾತ್ರೆ ತೆಗೆದುಕೊಳ್ಳುವಂತಾಗಬೇಕು. ರಮೇಶ್ ಕುಮಾರ ಸಭಾಧ್ಯಕ್ಷರಾಗಿದ್ದಾಗ ಸರಕಾರದ ಇಂತಹ ಅಸಡ್ಡೆಗೆ ಶಾಸ್ತಿ ಮಾಡುತ್ತಿದ್ದರು. ಒಂದು ದಿನ ಸಭಾಧ್ಯಕ್ಷರು ಹೊರ ನಡೆದಿದ್ದರು. ಅವರ ಮನವೊಲಿಸಲು ಆಗ ಎರಡು ಗಂಟೆ ಬೇಕಾಯಿತು ಎಂದು ಆರ್.ಅಶೋಕ್, ಶಾಸಕರು ತಿಳಿಸಿದ್ದಾರೆ.

ಆಧಾರ: ವಿಶ್ವವಾಣಿ, ದಿನಾಂಕ: 18.07.2023.

## 24. ಮೇಲ್ಮನೆಯಲ್ಲಿ ಮೂರು ಮಸೂದೆಗಳಿಗೆ ಅಸ್ತು

ಪರಿಶಿಷ್ಟ ಜಾತಿ ಮತ್ತು ಪರಶಿಷ್ಟ ಪಂಗಡಗಳ ಗುತ್ತಿಗೆದಾರರಿಗೆ ಕಾಮಗಾರಿಗಳ ಗುತ್ತಿಗೆಯನ್ನು ರೂ.50 ಲಕ್ಷಗಳಿಂದ ರೂ.1 ಕೋಟಿ ವರೆಗೆ ಹೆಚ್ಚಳ ಮಾಡುವ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ತಿದ್ದುಪಡಿ ವಿಧೇಯಕ, ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ತಿದ್ದುಪಡಿ ವಿಧೇಯಕ ಹಾಗೂ ಕರ್ನಾಟಕ ವಿಧಾನಮಂಡಲ ಅನರ್ಹತಾ ನಿವಾರಣಾ ತಿದ್ದುಪಡಿ ವಿಧೇಯಕಗಳಿಗೆ ಮೇಲ್ಮನೆ ಅಂಗೀಕಾರ ದೊರೆಯಿತು.

ಮೊದಲಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ತಿದ್ದುಪಡಿ ವಿಧೇಯಕ ಮಂಡನೆ ಮಾಡಿದ ಸಂದರ್ಭದಲ್ಲಿ ಪರಿಶಿಷ್ಟ ವರ್ಗದವರಿಗೆ ಗುತ್ತಿಗೆ ಮೊತ್ತವನ್ನು 50 ಲಕ್ಷದಿಂದ ರೂ.1 ಕೋಟಿ ಹೆಚ್ಚಳ ಮಾಡಿರುವುದು ಸ್ವಾಗತಾರ್ಹ ಬೆಳವಣಿಗೆ. ಆದರೆ ಅರ್ಹರು ಗುತ್ತಿಗೆಯನ್ನು ಪಡೆದುಕೊಳ್ಳುವಂತಾಗಬೇಕು. ಕೆಲವು ಭಾಗಗಳಲ್ಲಿ ಪರಿಶಿಷ್ಟರು ಗುತ್ತಿಗೆ ಪಡೆಯಲು ಅವಕಾಶ ನೀಡುವುದಿಲ್ಲ. ಇದಕ್ಕೆ ಕಡಿವಾಣ ಹಾಕಿ ಪರಿಶಿಷ್ಟರಿಗೆ ಗುತ್ತಿಗೆ ಸಿಗುವಂತೆ ಮಾಡಬೇಕು. ಅದರಲ್ಲೂ ಲೋಕೋಪಯೋಗಿ ಇಲಾಖೆ, ನೀರಾವರಿ ಇಲಾಖೆಗಳಲ್ಲಿ ಗುತ್ತಿಗೆ ಸಿಗುವಂತೆ ಮಾಡುವುದಲ್ಲದೆ, ಕಾಮಗಾರಿ ಮುಗಿದ ತಕ್ಷಣ ಅವರಿಗೆ ಬಿಲ್ ಪಾವತಿ ಮಾಡಿಸಬೇಕು. ಸಾಧ್ಯವಾದಲ್ಲಿ ಇಂತಹ ಗುತ್ತಿಗೆದಾರರಿಗೆ ಬ್ಯಾಂಕ್‌ಗಳ ಮೂಲಕ ಸಾಲದ ನೆರವು ಒದಗಿಸಿಕೊಡಬೇಕು ಎಂದು ಸಲಹೆ ನೀಡಿದರು. ಈ ವಿಧೇಯಕದ ಮೇಲೆ 17 ಮಂದಿ ಸದಸ್ಯರು ಮಾತನಾಡಿ ಸಲಹೆಗಳನ್ನು ನೀಡಿದರು.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ತಿದ್ದುಪಡಿ ವಿಧೇಯಕ ಮಂಡನೆ ಮಾಡಿದ ಕಾನೂನು ಸಚಿವ ಎಚ್.ಕೆ.ಪಾಟೀಲ್ ಅವರು, ಈ ತಿದ್ದುಪಡಿ ಮಾಡಿರುವುದು ವ್ಯಾಪಾರಿಗಳಿಗೆ ಅನುಕೂಲವಾಗಲು ಹಾಗೂ ಸಮರ್ಪಕ ತೆರಿಗೆ ಸಂಗ್ರಹ ಮಾಡುವುದಕ್ಕಾಗಿ ಎಂದರು. ಈ ವಿಧೇಯಕದ ಮೇಲೆ 8ಕ್ಕೂ ಹೆಚ್ಚು ಸದಸ್ಯರು ಮಾತನಾಡಿ, ತೆರಿಗೆ ಸಂಗ್ರಹಕ್ಕಾಗಿ ಅಧಿಕಾರಿಗಳು ಕಚೇರಿಯಿಂದ ಹೊರಗೆ ಬರಬೇಕಾಗಿಲ್ಲ. ಅವರು ಕುಳಿತಿದ್ದರೂ ತೆರಿಗೆ ಸಂಗ್ರಹವಾಗುತ್ತದೆ. ಆದರೆ, ಕೆಲವು ವಸ್ತುಗಳ ವಿಷಯದಲ್ಲಿ ಸಮರ್ಪಕ ತೆರಿಗೆ ಸಂಗ್ರಹವಾಗುತ್ತಿಲ್ಲ. ಮೂಲದಲ್ಲಿ ಬಿಟ್ಟು ಚಿಲ್ಲರೆ ವ್ಯಾಪಾರಿಗಳ ಬಳಿ ತೆರಿಗೆ ಸಂಗ್ರಹ ಮಾಡಲಾಗುತ್ತಿದೆ. ಇನ್ನು ಅಡಕೆಯನ್ನು ಒಂದು ಲಾರಿ ಎಂದು ತೋರಿಸಿ ಎಂಟು ಲಾರಿಗಳಲ್ಲಿ ಸಾಗಾಟ ಮಾಡಲಾಗುತ್ತದೆ. ಇದರಿಂದ ಎಷ್ಟು ತೆರಿಗೆ ನಷ್ಟವಾಗಲಿದೆ. ಈ ಬಗ್ಗೆ ಅಧಿಕಾರಿಗಳು ಗಮನ ನೀಡಬೇಕು. ಎಷ್ಟೋ ಮಂದಿ ಪ್ರಾಮಾಣಿಕವಾಗಿ ತೆರಿಗೆ ಕಟ್ಟುತ್ತಾರೆ. ಅವರಿಗೇ ಹೆಚ್ಚು ಕಿರುಕುಳ ನೀಡಲಾಗುತ್ತದೆ. ಇದು ತಪ್ಪಬೇಕು ಎಂದರು.

ಕೊನೆಯಲ್ಲಿ ಮಂಡನೆಯಾದ ಕರ್ನಾಟಕ ವಿಧಾನಮಂಡಲ (ಅನರ್ಹತಾ ನಿವಾರಣಾ ತಿದ್ದುಪಡಿ) ವಿಧೇಯಕ ಯಾವುದೇ ಚರ್ಚೆ ಇಲ್ಲದೆ ಅಂಗೀಕಾರವಾಯಿತು.

**ಆಧಾರ:** ಸಂಯುಕ್ತ ಕರ್ನಾಟಕ, ದಿನಾಂಕ: 19.07.2023.

## 25. ಮಾನ್ಯ ಸಭಾಧ್ಯಕ್ಷರ ನಿವಾಸಕ್ಕೆ ಶ್ರೀ ಪ್ರಣವಾನಂದ ಸ್ವಾಮೀಜಿಯವರ ಭೇಟಿ







ದಿನಾಂಕ: 20.07.2023 ರಂದು ಬೆಂಗಳೂರಿನ ಸನ್ಮಾನ್ಯ ಸಭಾಧ್ಯಕ್ಷರ ನಿವಾಸಕ್ಕೆ ಪೂಜ್ಯ ಈಡಿಗ ಶ್ರೀ ಪ್ರಣವಾನಂದಸ್ವಾಮೀಜಿಯವರು ಭೇಟಿ ಮಾಡಿ ಶುಭ ಹಾರೈಸಿ ಮಾತುಕತೆ ನಡೆಸಿದ ಸಂದರ್ಭ.

## 26. ಪರಿಷತ್‌ನಲ್ಲಿ ಮೊಬೈಲ್ ನಿಷೇಧಿಸಿದ ಹೊರಟ್ಟಿ

ಕಲಾಪ ನಡೆಯುವ ವೇಳೆ ಶಾಸಕರು ಹಾಗೂ ಸರ್ಕಾರಿ ಅಧಿಕಾರಿಗಳು ಮೊಬೈಲ್ ಫೋನ್‌ಗಳನ್ನು ಸದನದೊಳಕ್ಕೆ ಕಡ್ಡಾಯವಾಗಿ ತರಬಾರದು. ಹಾಜರಾಗುವಾಗ ತಮ್ಮ ಮೊಬೈಲ್ ಫೋನ್‌ಗಳನ್ನು ನಿಗದಿತ ಕಪಾಟಿನಲ್ಲಿ ಇರಿಸಿ ಬಳಿಕ ಸದನಕ್ಕೆ ಬರಬೇಕು. ಕಲಾಪ ನಡೆಯುವಾಗ ಮೊಬೈಲ್ ನೋಡುತ್ತಾ ಕೂರುವುದು ಸರಿಯಲ್ಲ ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಸೂಚಿಸಿದ್ದಾರೆ.

**ಆಧಾರ:** ಕನ್ನಡಪ್ರಭ, ದಿನಾಂಕ: 20.07.2023

## 27. ಬಿಜೆಪಿಯ ಹತ್ತು ಶಾಸಕರನ್ನು ಅಮಾನತ್ತುಗೊಳಿಸಿದ ಸ್ಪೀಕರ್

ಸದನದಲ್ಲಿ ಅನುಚಿತ ವರ್ತನೆ ತೋರಿದ ಕಾರಣಕ್ಕೆ ಬಿಜೆಪಿಯ 10 ಶಾಸಕರನ್ನು ಸ್ಪೀಕರ್ ಈ ಅಧಿವೇಶನದ ಅವಧಿಗೆ ಅಮಾನತ್ತುಗೊಳಿಸಿ ಸದನದಿಂದ ಹೊರ ಹಾಕಿಸಿದ್ದಾರೆ.

ಯುಪಿಎ ಮಿತ್ರಪಕ್ಷಗಳ ಸಭೆಗೆ ಬೆಂಗಳೂರಿಗೆ ಆಗಮಿಸಿದ್ದ ಅನ್ಯ ರಾಜ್ಯಗಳ ರಾಜಕೀಯ ನಾಯಕರ ಆತಿಥ್ಯಕ್ಕೆ ಐಎಎಸ್ ಅಧಿಕಾರಿಗಳನ್ನು ನೇಮಿಸಿದ ವಿವಾದ ವಿಧಾನಸಭೆಯಲ್ಲಿ ಗದ್ದಲ, ಧರಣಿಗೆ ಕಾರಣವಾಯಿತಲ್ಲದೆ, ಧರಣಿ ನಿರತ ಬಿಜೆಪಿ ಸದಸ್ಯರು, ವಿಧೇಯಕದ ಪ್ರತಿಗಳನ್ನು ಹರಿದು ವಿಧಾನಸಭೆಯ ಸ್ಪೀಕರ್ ಪೀಠದಲ್ಲಿದ್ದ ಉಪಸಭಾಧ್ಯಕ್ಷರ ಮೇಲೆಸೆದರು.

ಈ ಹಿನ್ನೆಲೆಯಲ್ಲಿ ಸದಸ್ಯರನ್ನು ಅಮಾನತ್ತುಗೊಳಿಸಲಾಗಿದ್ದು, ಆ ಮೂಲಕ 16ನೇ ವಿಧಾನಸಭೆಯ ಮೊದಲ ಅಧಿವೇಶನದಲ್ಲಿಯೇ 'ಬೇಡ'ದ ದಾಖಲೆಯೊಂದು ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಹೆಸರಿಗೆ ಸೇರಿಕೊಂಡಂತಾಯಿತು. ಅಷ್ಟೇ ಅಲ್ಲ, ಮೊದಲನೇ ಅಧಿವೇಶನದಲ್ಲೇ ಸ್ಪೀಕರ್ ವಿರುದ್ಧ ಪ್ರತಿಪಕ್ಷಗಳಿಂದ ಅವಿಶ್ವಾಸ ನಿರ್ಣಯದ ನೋಟಿಸ್ ದಾಖಲಾಯಿತು.

**ಅಮಾನತ್ತಾದ ಶಾಸಕರು**

- ಅರಗ ಜ್ಞಾನೇಂದ್ರ (ತೀರ್ಥಹಳ್ಳಿ)
- ಡಾ.ಸಿ.ಎನ್. ಅಶ್ವತ್ಥನಾರಾಯಣ (ಮಲ್ಲೇಶ್ವರ)
- ಆರ್. ಅಶೋಕ್ (ಪದ್ಮನಾಭನಗರ)
- ವಿ.ಸುನೀಲ್ ಕುಮಾರ್ (ಕಾರ್ಕಳ)
- ಅರವಿಂದ ಬೆಲ್ಲದ್ (ಹುಬ್ಬಳ್ಳಿ-ಧಾರವಾಡ ಪಶ್ಚಿಮ)
- ಧೀರಜ್ ಮುನಿರಾಜು (ದೊಡ್ಡಬಳ್ಳಾಪುರ)
- ಡಾ. ಭರತ್ ಶೆಟ್ಟಿ (ಮಂಗಳೂರು ಉತ್ತರ)
- ಯಶಪಾಲ್ ಸುವರ್ಣ (ಉಡುಪಿ)
- ಉಮಾನಾಥ್ ಕೋಟ್ಯನ್ (ಮೂಡಬಿದ್ರಿ)
- ವೇದವ್ಯಾಸ್ ಕಾಮತ್ (ಮಂಗಳೂರು ದಕ್ಷಿಣ)

ಆಧಾರ: ವಿಶ್ವವಾಣಿ, ದಿನಾಂಕ: 20.07.2023

## 28. ಗಲಾಟೆ ನಡುವೆ 5 ವಿಧೇಯಕಕ್ಕೆ ಅಂಗೀಕಾರ

ಬಿಜೆಪಿಯ ಗದ್ದಲ, ಗಲಾಟೆ ನಡುವೆ ಕರ್ನಾಟಕ ಸರ್ಕಾರಿ ವ್ಯಾಜ್ಯ ನಿರ್ವಹಣೆ ವಿಧೇಯಕ ಸೇರಿ 5 ವಿಧೇಯಕಗಳಿಗೆ ವಿಧಾನಸಭೆಯಲ್ಲಿ ಅಂಗೀಕಾರ ನೀಡಲಾಯಿತು. 2023ನೇ ಸಾಲಿನ ಸಿವಿಲ್ ಪ್ರಕ್ರಿಯಾ ಸಂಹಿತೆ (ಕರ್ನಾಟಕ ತಿದ್ದುಪಡಿ) ವಿಧೇಯಕ ಹಾಗೂ 2023ನೇ ಸಾಲಿನ ಕರ್ನಾಟಕ ಸರ್ಕಾರಿ ವ್ಯಾಜ್ಯ ನಿರ್ವಹಣಾ ವಿಧೇಯಕಗಳನ್ನು ಕಾನೂನು ಸಚಿವ ಎಚ್.ಕೆ.ಪಾಟೀಲ ಮಂಡಿಸಿದರು. ಕರ್ನಾಟಕ ಭೂ

ಕಂದಾಯ (ತಿದ್ದುಪಡಿ) ವಿಧೇಯಕ ಮತ್ತು 2023ನೇ ಸಾಲಿನ ನೋಂದಣಿ (ಕರ್ನಾಟಕ ತಿದ್ದುಪಡಿ) ವಿಧೇಯಕಗಳನ್ನು ಸಚಿವ ಕೃಷ್ಣ ಬೈರೇಗೌಡ ಮಂಡಿಸಿದರು.

ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕವನ್ನು ಸಚಿವ ರಾಜಣ್ಣ ಮಂಡಿಸಿದರು.

**ಆಧಾರ:** ವಿಜಯವಾಣಿ, ದಿನಾಂಕ: 20.07.2023

## 29. ಬಜೆಟ್ ಮೇಲಿನ ಚರ್ಚೆಗೆ ಮಾನ್ಯ ಮುಖ್ಯಮಂತ್ರಿಗಳ ಉತ್ತರ



ದಿನಾಂಕ: 21–07–2023ರಂದು ನಡೆದ 16ನೇ ವಿಧಾನಸಭೆಯ ಅಧಿವೇಶನದ ಕೊನೆಯ ದಿನದ ವಿಧಾನ ಪರಿಷತ್ತಿನ ಕಾರ್ಯಕಲಾಪಗಳನ್ನು ನಡೆಸುತ್ತಿರುವ ಮಾನ್ಯ ಸಭಾಪತಿಗಳಾದ ಶ್ರೀ ಬಸವರಾಜ ಎಸ್.ಹೊರಟ್ಟಿ ಅವರ ಕಲಾಪದಲ್ಲಿ ಮಾನ್ಯ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯನವರು ಬಜೆಟ್ ಮೇಲಿನ ಚರ್ಚೆಗೆ ಉತ್ತರಿಸುತ್ತಿರುವುದು.

## 30. ರಾಜ್ಯಪಾಲರ ಭೇಟಿಯಾದ ಸ್ಪೀಕರ್; ಡೆಪ್ಯೂಟಿ ಸ್ಪೀಕರ್

ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಥ್ ಅವರನ್ನು ಭೇಟಿಯಾದ ವಿಧಾನಸಭಾಧ್ಯಕ್ಷ ಯು.ಟಿ.ಖಾದರ್, ವಿಧಾನಸಭೆಯಲ್ಲಿ ಬಿಜೆಪಿಯ 10 ಶಾಸಕರನ್ನು ಅಮಾನತ್ತು ಮಾಡಿರುವ ವಿಷಯಕ್ಕೆ ಸಂಬಂಧಿಸಿದಂತೆ ವಿವರಣೆ ನೀಡಿದ್ದಾರೆ.

ಉಪಸಭಾಧ್ಯಕ್ಷ ರುದ್ರಪ್ಪ ಲಮಾಣಿ ಮತ್ತು ವಿಧಾನಸಭೆ ಕಾರ್ಯದರ್ಶಿ ವಿಶಾಲಾಕ್ಷಿ ಅವರೊಂದಿಗೆ ರಾಜಭವನಕ್ಕೆ ತೆರಳಿ ರಾಜ್ಯಪಾಲರನ್ನು ಭೇಟಿಯಾದ ಸ್ಪೀಕರ್ ಯು.ಟಿ.ಖಾದರ್, ಶಾಸಕರ ಅಮಾನತು ಮತ್ತು ಅದಕ್ಕೆ ಮುನ್ನ ನಡೆದ ಬೆಳವಣಿಗೆಗಳ ಕುರಿತಾಗಿ ಲಿಖಿತವಾಗಿ ಮಾಹಿತಿ ನೀಡಿದರು.

ಸದನದಲ್ಲಿ ಧರಣಿ ನಡೆಸುತ್ತಿದ್ದ ಬಿಜೆಪಿ ಶಾಸಕರು ಸಭಾಧ್ಯಕ್ಷರ ಪೀಠಕ್ಕೆ ಅಗೌರವ ತೋರಿದರು. ಉಪಸಭಾಧ್ಯಕ್ಷರ ಮುಖ, ಮೈಮೇಲೆ ಕಾಗದಗಳನ್ನು ಹರಿದೆಸೆದರು. ಸದನದ ಕಲಾಪ ಸುಗಮವಾಗಿ ನಡೆಸಲು ಅವಕಾಶ ಮಾಡಿಕೊಡುವಂತೆ ಪರಿಪರಿಯಾಗಿ ಕೇಳಿದ್ರೂ ಸ್ಪಂದಿಸಲಿಲ್ಲ. ಹೀಗಾಗಿ ಸಭಾಧ್ಯಕ್ಷರ ಪೀಠದ ಗೌರವ ಕಾಪಾಡುವ ಉದ್ದೇಶದಿಂದ ಪೀಠಕ್ಕೆ ಅಗೌರವ ತೋರಿದ 10 ಶಾಸಕರನ್ನು ಮಾತ್ರ ಅಮಾನತ್ತು ಮಾಡಲಾಗಿದೆ. ಧರಣಿ ನಡೆಸಿದ ಶಾಸಕರ ವಿರುದ್ಧ ಕ್ರಮ ಕೈಗೊಂಡಿಲ್ಲ ಎಂದು ವಿವರಣೆ ನೀಡಿದರು ಎಂದು ತಿಳಿದುಬಂದಿದೆ.

**ಬಿಜೆಪಿ ದೂರು ನೀಡುವುದಕ್ಕಿಂತ ಮೊದಲೇ ವಿವರಣೆ:** ಶಾಸಕರ ಅಮಾನತ್ತು ಖಂಡಿಸಿ ಧರಣಿ ನಡೆಸುತ್ತಿರುವ ಬಿಜೆಪಿ ಶಾಸಕರು ರಾಜ್ಯಪಾಲರನ್ನು ಭೇಟಿಯಾಗಿ ದೂರು ನೀಡುವುದಾಗಿ ಹೇಳಿದ್ದರು. ಈ ಹಿನ್ನೆಲೆಯಲ್ಲ ಬಿಜೆಪಿ ಶಾಸಕರು ದೂರು ನೀಡುವ ಮುನ್ನವೇ ಸ್ಪೀಕರ್ ಅವರು ಸದನದಲ್ಲಿ ನಡೆದ ಘಟನಾವಳಿಗಳನ್ನು ಲಿಖಿತ ರೂಪದಲ್ಲಿ ರಾಜ್ಯಪಾಲರಿಗೆ ನೀಡಿದ್ದಾರೆ. ಇದಕ್ಕೆ ಸಾಕ್ಷಿಯಾಗಿ ಘಟನೆ ನಡೆದಾಗ ಸಭಾಧ್ಯಕ್ಷರ ಪೀಠದಲ್ಲಿದ್ದ ಉಪಸಭಾಧ್ಯಕ್ಷರು ಮತ್ತು ವಿಧಾನಸಭೆಯ ಕಾರ್ಯದರ್ಶಿಯವರನ್ನು ಕರೆದೊಯ್ದಿದ್ದಾರೆ ಎನ್ನಲಾಗಿದೆ.

**ಆಧಾರ:** ವಿಶ್ವವಾಣಿ, ದಿನಾಂಕ: 21.07.2023.

## 31. ಗ್ಯಾರಂಟಿ ಯೋಜನೆ: ಕರ್ನಾಟಕ ಅಭಿವೃದ್ಧಿ ಮಾದರಿ

ಆರ್ಥಿಕತೆಯ ಚಲನಶೀಲತೆಯನ್ನು ಉತ್ತೇಜಿಸುವ ನಿಟ್ಟಿನಲ್ಲಿ ಐದು ಗ್ಯಾರಂಟಿ ಯೋಜನೆಗಳ ಮೂಲಕ ಸಾರ್ವತ್ರಿಕ ಮೂಲ ಆದಾಯದ ಪರಿಕಲ್ಪನೆಯನ್ನು ಪರಿಚಯಿಸುತ್ತಿರುವ ಮೊದಲ ರಾಜ್ಯ ಕರ್ನಾಟಕವಾಗಿದೆ. ಇದು ಕರ್ನಾಟಕ ಮಾದರಿ ಅಭಿವೃದ್ಧಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಪಾದಿಸಿದ್ದಾರೆ.

ಬಜೆಟ್ ಮೇಲಿನ ಚರ್ಚೆಗೆ ಉತ್ತರಿಸಿದ ಅವರು, ಗ್ಯಾರಂಟಿ ಕಾರ್ಯಕ್ರಮಗಳ ಮೂಲಕ ದೇಶದಲ್ಲಿಯೇ ದೊಡ್ಡ ಮೊತ್ತ ನೀಡುತ್ತಿರುವ ಮೊದಲ ರಾಜ್ಯ ಕರ್ನಾಟಕ. ಪ್ರತಿಪಕ್ಷಗಳು ಗ್ಯಾರಂಟಿ ಯೋಜನೆಗಳ ಜಾರಿ ಸಾಧ್ಯವಿಲ್ಲ ಎಂದರು. ಆದರೆ ಈಗಾಗಲೇ ಮೂರು ಯೋಜನೆಗಳು ಜಾರಿಯಾಗಿವೆ. ಗೃಹ ಲಕ್ಷ್ಮಿ ಯೋಜನೆಗೆ ನೋಂದಣಿ ಪ್ರಾರಂಭವಾಗಿದೆ. ಯುವನಿಧಿ ಯೋಜನೆ ಬಹುತೇಕ ಡಿಸೆಂಬರ್ ತಿಂಗಳಿನಿಂದ ಪ್ರಾರಂಭವಾಗುವ ನಿರೀಕ್ಷೆಯಿದೆ ಎಂದು ತಿಳಿಸಿದರು.

ಈ ಎಲ್ಲ ಯೋಜನೆಗಳಿಗೆ ಬಜೆಟ್‌ನಲ್ಲಿ ಅನುದಾನ ಹಂಚಿಕೆ ಮಾಡಲಾಗಿದೆ. ಅನುದಾನ ಕ್ರೋಢೀಕರಣವನ್ನು ಬಜೆಟ್‌ನಲ್ಲಿ ವಿವರಿಸಲಾಗಿದೆ. ಈ ಕಾರ್ಯಕ್ರಮಗಳಿಗೆ ವಾರ್ಷಿಕ ಒಟ್ಟು ರೂ.52,068 ಕೋಟಿ ಅಗತ್ಯವಿದೆ. 1.30 ಕೋಟಿ ಕುಟುಂಬಗಳಿಗೆ ಈ ಗ್ಯಾರಂಟಿ ಯೋಜನೆಗಳ ಸೌಲಭ್ಯ ದೊರೆಯಲಿದೆ. ಪ್ರತಿ ಕುಟುಂಬಕ್ಕೆ ತಿಂಗಳಿಗೆ ರೂ. 4–5 ಸಾವಿರ ಅಂದರೆ ವಾರ್ಷಿಕ ರೂ.48,000–60000 ದೊರಕುತ್ತಿದೆ. ದೇಶದ ಇತಿಹಾಸದಲ್ಲಿ ಇಷ್ಟೊಂದು ದೊಡ್ಡ ಗಾತ್ರದ ಮೊತ್ತವನ್ನು ಜಾತಿ ಧರ್ಮ ನೋಡದೇ ಮಾಡಿರುವ ಮೊದಲ ರಾಜ್ಯ ಕರ್ನಾಟಕ ಎಂದರು. ಈ ವರ್ಷ 35,410 ಕೋಟಿಗಳನ್ನು 5 ಗ್ಯಾರಂಟಿಗಳಿಗೆ ಮೀಸಲಿರಿಸಿದ್ದೇವೆ ಎಂದು ವಿವರಿಸಿದರು.

**ಅಂಬೇಡ್ಕರ್ ತತ್ವದಲ್ಲಿ ನಂಬಿಕೆ:** ಬಿ.ಆರ್ ಅಂಬೇಡ್ಕರ್ ಹೇಳಿದಂತೆ ಸಾಮಾಜಿಕ ಪ್ರಭುತ್ವಕ್ಕೆ ಹೆಚ್ಚು ಮಹತ್ವ ನೀಡಬೇಕು ಎಂಬ ಮಾತಿನಲ್ಲಿ ನಮಗೆ ನಂಬಿಕೆ ಇದೆ. ಹಾಗೂ ಇದಕ್ಕೆ ಬದ್ಧವಾಗಿದ್ದೇವೆ. ಬಜೆಟ್ ಸಿದ್ದ ಮಾಡುವಾಗ ನಮ್ಮ ಕಣ್ಣಿಗೆ ಅಂಬೇಡ್ಕರ್, ಗಾಂಧಿ, ಬುದ್ಧ, ಕುವೆಂಪು, ನಾರಾಯಣ ಗುರು ಅವರ ಆಶಯಗಳು ಕಾಣುತ್ತವೆ. ಕಟ್ಟಕಡೆಯ ವ್ಯಕ್ತಿ ಸಂತುಷ್ಟವಾಗಬೇಕು. ಪ್ರಜಾಪಭುತ್ವದಲ್ಲಿ ಎಲ್ಲರೂ ಭಾಗೀದಾರರಾಗಬೇಕು. ಅದರ ಫಲವನ್ನು ಎಲ್ಲರೂ ಸಮಾನರಾಗಿ ಹಂಚಿಕೊಳ್ಳಬೇಕು. ಇದನ್ನೇ ಕುವೆಂಪು ಸಮಬಾಳು, ಸಮಪಾಲು ಎಂದಿದ್ದು ಎಂದು ತಿಳಿಸಿದರು.

**ಕರ್ನಾಟಕ ಮಾದರಿ:** ನಾವು ಹಿಂದೆಯೂ ನುಡಿದಂತೆ ನಡೆದಿದ್ದೇವೆ. 165 ಭರವಸೆಗಳಲ್ಲಿ 158 ಭರವಸೆಗಳನ್ನು ಈಡೇರಿಸಿದ್ದೇವೆ. ಕರ್ನಾಟಕ ರಾಜ್ಯ ನನ್ನ ಕಾಲದಲ್ಲಿ ರೂ. 1 ಲಕ್ಷದ 16 ಸಾವಿರ ಕೋಟಿಗಳ ಸಾಲವಾಗಿದೆ. 2018 ಮಾರ್ಚ್ ಅಂತ್ಯಕ್ಕೆ 2,45,000 ಕೋಟಿ ಸಾಲ ಇತ್ತು. 2023ಕ್ಕೆ ಇದು ರೂ.5,20,000 ಕೋಟಿ ಸಾಲವಿದೆ. ನಾವು ಬಡವರ ಪರವಾಗಿದ್ದೇವೆ. ಬೆಲೆ ಏರಿಕೆ ಹಾಗೂ ನಿರುದ್ಯೋಗದಿಂದ ತತ್ತರಿಸಿರುವ ಜನರ ಜೇಬಿಗೆ ಹಣ ತುಂಬುವ ಕೆಲಸ ಮಾಡಿದ್ದೇವೆ. ಸಾರ್ವತ್ರಿಕ

ಮೂಲ ಆದಾಯವನ್ನು ಎಲ್ಲಾ ಅಭಿವೃದ್ಧಿಯಾಗಿರುವ ರಾಜ್ಯಗಳು ಮಾಡುತ್ತಿವೆ. ಇದು ಕರ್ನಾಟಕ ಮಾದರಿ ಉದ್ಯೋಗ ಸೃಷ್ಟಿಯಾಗಲು ಆರ್ಥಿಕ ಚಟುವಟಿಕೆಗಳು ಅಗತ್ಯ. ಇಲ್ಲದಿದ್ದರೆ ಹೂಡಿಕೆಗಳು ಆಗುವುದಿಲ್ಲ ಎಂದರು.

ಗೃಹಲಕ್ಷ್ಮಿ ಯೋಜನೆಗೆ ನೋಂದಣಿ ಪ್ರಕ್ರಿಯೆ ಪ್ರಾರಂಭವಾಗಿದೆ. ರೂ.32 ಸಾವಿರ ಕೋಟಿಗಳು ಒಂದು ವರ್ಷಕ್ಕೆ ಖರ್ಚಾಗುತ್ತದೆ. ಒಂದು ಯೋಜನೆಗೆ ದೊಡ್ಡ ಮೊತ್ತವನ್ನು ವೆಚ್ಚ ಮಾಡುತ್ತಿರುವ ಮೊದಲ ರಾಜ್ಯ ಕರ್ನಾಟಕ. ಇದಕ್ಕಾಗಿ 17500 ಕೋಟಿ ಈ ವರ್ಷ ಮೀಸಲಿಟ್ಟಿದ್ದೇವೆ. ಅನ್ನಭಾಗ್ಯಕ್ಕೆ ರೂ.10125 ಕೋಟಿ ಗೃಹ ಜ್ಯೋತಿಗೆ 13 ಸಾವಿರ ಕೋಟಿ, ಶಕ್ತಿಗೆ ರೂ.2800 ಕೋಟಿಗಳನ್ನು ಮೀಸಲಿರಿಸಲಾಗಿದೆ ಎಂದರು.

**ಬಡವರ ಪರ ಸರ್ಕಾರ:** ಎಸ್‌ಸಿಪಿ/ಟಿಎಸ್‌ಪಿ ಕಾನೂನು ಬಂದ ನಂತರ, ನಮ್ಮ ಸರ್ಕಾರ ಐದು ವರ್ಷದಲ್ಲಿ 88530 ಕೋಟಿ ಖರ್ಚು ಮಾಡಲಾಗಿದೆ. ನಮ್ಮದು ಬಡವರ ಪರವಾದ ಸರ್ಕಾರ. ನಮ್ಮ ಬಜೆಟ್ ಗಾತ್ರ 2018–19ರಲ್ಲಿ 202297 ಕೋಟಿ ಇತ್ತು. ಆಗ 21691.5 ಎಸ್ಸಿಎಸ್ಟಿಗಳಿಗೆ ಮೀಸಲಿಟ್ಟಿದ್ದೆವು. ಶಿಕ್ಷಣ, ಸಮಾಜಕಲ್ಯಾಣ, ಕೃಷಿ, ವಿದ್ಯುತ್, ಬೆಂಗಳೂರು ಅಭಿವೃದ್ಧಿಗೆ ಹೆಚ್ಚಿನ ಅನುದಾನ ನೀಡಲಾಗಿದೆ. ಸಾಮಾಜಿಕ, ಆರ್ಥಿಕ ವಲಯಕ್ಕೆ ಕಡಿಮೆ ಮಾಡಿಲ್ಲ. ನೀರಾವರಿ, ವಸತಿ, ಕಲ್ಯಾಣ ಕರ್ನಾಟಕ ಅಭಿವೃದ್ಧಿಗೆ ಒತ್ತು ನೀಡಲಾಗಿದೆ. ನಮ್ಮ ಸರ್ಕಾರ ಎಲ್ಲರನ್ನು ಒಳಗೊಂಡ ಅಭಿವೃದ್ಧಿಯ ಧ್ಯೇಯವನ್ನು ನಂಬಿದೆ ಎಂದರು. 2023–24ನೇ ಸಾಲಿನಲ್ಲಿ ನಮ್ಮ ಪಕ್ಷ ಅಧಿಕಾರಕ್ಕೆ ಬಂದ ಮೇಲೆ ಈ ಆರ್ಥಿಕ ವರ್ಷಕ್ಕೆ ಸರ್ಕಾರದ ಮುಂಗಡ ಪತ್ರವನ್ನು ಮಂಡಿಸಿದ್ದು, ಹೊಸ ಸರ್ಕಾರ ಬಂದ ಮೇಲೆ ಜನರ ಆಶೋತ್ತರಗಳಿಗೆ ಸ್ಪಂದಿಸಲು ಸರ್ಕಾರದ ನೀತಿ ನಿಲುವುಗಳು, ಪ್ರಣಾಳಿಕೆಯ ಭರವಸೆಗಳನ್ನು ಒಳಗೊಂಡಿರುವ ಆಯವ್ಯಯ ಮಂಡಿಸುವುದು ನಮ್ಮ ಕರ್ತವ್ಯ ಎಂದರು.

**ಸರ್ವರನ್ನೂ ಒಳಗೊಂಡ ಬಜೆಟ್:** 2022–23 ಬಜೆಟ್‌ನಲ್ಲಿ ಗಾತ್ರ ರೂ. 2,65,720 ಕೋಟಿಗಳಿತ್ತು. ನಮ್ಮ ಸರ್ಕಾರದ ಬಜೆಟ್ ರೂ. 3,27,747 ಕೋಟಿ 62,027 ಸಾವಿರ ಕೋಟಿ ಜಾಸ್ತಿಯಿದೆ. ಬೆಳವಣಿಗೆಯ ಪ್ರಮಾಣ ಶೇ.22 ಇದೆ. ರೈತರಿಗೆ 3 ಲಕ್ಷದವರೆಗೆ ಬಡ್ಡಿ ರಹಿತ ಸಾಲ ಮುಂಚೆ ನೀಡುತ್ತಿದ್ದೆವು. ಈಗ 5 ಲಕ್ಷದವರೆಗೆ ಮೊತ್ತವನ್ನು ಹೆಚ್ಚಿಸಲಾಗಿದೆ. 10 ಲಕ್ಷದವರೆಗೆ ಶೇ.3 ರಷ್ಟು ಬಡ್ಡಿ ಇರುವುದನ್ನು ಇದೀಗ 15 ಲಕ್ಷಕ್ಕೆ ಏರಿಸಲಾಗಿದೆ. ಶಾಲಾ ವಿದ್ಯಾರ್ಥಿಗಳಿಗೆ 9, 10ನೇ ತರಗತಿ ವಿದ್ಯಾರ್ಥಿಗಳಿಗೂ ಸೇರಿ ವಾರದಲ್ಲಿ 2 ದಿನ ಮೊಟ್ಟೆ ನೀಡಲಾಗುತ್ತಿದೆ ಎಂದು ಸಿದ್ದರಾಮಯ್ಯ ವಿವರಿಸಿದರು.

ಆಧಾರ: ವಿಶ್ವವಾಣಿ, ದಿನಾಂಕ: 21.07.2023.

## 32. ಶ್ರದ್ಧಾಂಜಲಿ ಕಳಶ ಕಾರ್ಯಕ್ರಮ






ದಿನಾಂಕ: 21.07.2023ರಂದು ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಸಿಟಿಜನ್ ಸೊಸೈಟಿ ಆಫ್ ಇಂಡಿಯಾದವರು ಏರ್ಪಡಿಸಿದ 24ನೇ ಕಾರ್ಗಿಲ್ ವಿಜಯ ದಿವಸ "ಶ್ರದ್ಧಾಂಜಲಿ ಕಳಶ" ಕಾರ್ಯಕ್ರಮದಲ್ಲಿ ಮಾನ್ಯ ಸಭಾಪತಿ ಶ್ರೀ ಬಸವರಾಜ ಎಸ್.ಹೊರಟ್ಟಿ ಅವರು ಹುತಾತ್ಮ ಯೋಧರಿಗೆ ಪುಷ್ಪನಮನ ಸಲ್ಲಿಸಿ ದೇಶಕ್ಕಾಗಿ ಪ್ರಾಣತೆತ್ತ ವೀರಯೋಧರಿಗೆ ಎಷ್ಟು ನಮನ ಗೌರವ ಸಲ್ಲಿಸಿದರೂ ಕಡಿಮೆಯೇ ಅವರ ಜೀವಕ್ಕೆ ಬೆಲೆಕಟ್ಟಲು ಅಸಾಧ್ಯ. ಜಗತ್ತಿಗೆ ಭಾರತದ ಪರಾಕ್ರಮವನ್ನು ತೋರಿದ ವೀರಯೋಧರನ್ನು ಮತ್ತೆ ಮತ್ತೆ ಸ್ಮರಿಸಿ ಗೌರವಿಸೋಣ ಎಂದು ಹೇಳಿದರು. ಈ ಸಂದರ್ಭದಲ್ಲಿ ಸಿಟಿಜನ್ ಸೊಸೈಟಿ ಆಫ್ ಇಂಡಿಯಾ ಪರಿವಾರದ ಸದಸ್ಯರು, ವೀರ ಯೋಧರು, ಭಾರತೀಯ ಸೇನೆಯ ಪ್ರಮುಖ ಆಡಳಿತ ವರ್ಗ ಹಾಗೂ ಸಭಾಪತಿಯವರ ವಿಶೇಷಾಧಿಕಾರಿ ಶ್ರೀಮತಿ ಶೈಲಾ ಕೆ.ಡಿ ಭಾಗವಹಿಸಿದ್ದರು.

## 33. ಬಾಲಬ್ರೂಯಿ ಕಟ್ಟಡಕ್ಕೆ ಮಾನ್ಯ ಸಭಾಧ್ಯಕ್ಷರ ಭೇಟಿ








ದಿನಾಂಕ: 22.07.2023 ರಂದು ಸನ್ಮಾನ್ಯ ಸಭಾಧ್ಯಕ್ಷರು ಕರ್ನಾಟಕ ವಿಧಾನಮಂಡಲ ಸಂಸ್ಥೆಯ ವಸತಿ ಕಟ್ಟಡ ಬಾಲಬ್ರೂಯಿಗೆ ಭೇಟಿ ನೀಡಿ ಮೂಲಭೂತ ಸೌಕರ್ಯಗಳ ಕುರಿತಾಗಿ ಸಂಬಂಧಪಟ್ಟ ಅಧಿಕಾರಿಗಳ ಜೊತೆ ನಡೆಸಿದ ಸಂದರ್ಭ.

## 34. ಬಜೆಟ್ ಅಧಿವೇಶನದಲ್ಲಿ 14 ಮಸೂದೆಗಳು ಪಾಸ್: ಸ್ಪೀಕರ್

ಅಧಿವೇಶನದ ಮುಂದುವರೆದ ಕಾರ್ಯಕಲಾಪಗಳು ಮುಕ್ತಾಯಗೊಂಡಿದ್ದು, ರಾಜ್ಯಪಾಲರ ಭಾಷಣ, ಬಜೆಟ್ ಮಂಡನೆ, ಇವುಗಳ ಮೇಳೆ ಚರ್ಚೆ ಉತ್ತರ ನೀಡಿಕೆ ನಡುವೆ 14 ವಿಧೇಯಕಗಳನ್ನು ಮಂಡಿಸಿ ಅಂಗೀಕರಿಸಲಾಗಿದೆ ಎಂದು ಸ್ಪೀಕರ್ ಯು.ಟಿ.ಖಾದರ್ ಮಾಹಿತಿ ನೀಡಿದರು.

ವಿಧಾನಸಭೆ ಕಲಾಪವನ್ನು ಅನಿರ್ದಿಷ್ಟಾವಧಿಗೆ ಮುಂದೂಡಿದ ಬಳಿಕ ತಮ್ಮ ಕಛೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು, ಜುಲೈ 3 ರಿಂದ 21 ರವರೆಗೆ ಒಟ್ಟು 15 ದಿನ ಗಳ ಕಾಲ 78 ಗಂಟೆ 25 ನಿಮಿಷಗಳ ಕಾಲ ಈ ಬಾರಿಯ ಕಾರ್ಯಕಲಾಪ ನಡೆಸಲಾಗಿದೆ. ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದಲ್ಲಿ 34 ಸದಸ್ಯರು ಒಟ್ಟು 12 ಗಂಟೆ 30 ನಿಮಿಷಗಳ ಕಾಲ ಚರ್ಚೆಯಲ್ಲಿ ಭಾಗವಹಿಸಿದ್ದರು. ಬಜೆಟ್ ಚರ್ಚೆಯಲ್ಲಿ 62 ಸದಸ್ಯರು ಒಟ್ಟು 12 ಗಂಟೆ 52 ನಿಮಿಷಗಳ ಕಾಲ ಭಾಗಿಯಾಗಿದ್ದರು. ಒಟ್ಟು 20 ಅಧಿಸೂಚನೆಗಳು, 2 ಅಧ್ಯಾದೇಶಗಳು ಮತ್ತು 70 ವಾರ್ಷಿಕ ವರದಿಗಳು, 99 ಲೆಕ್ಕ ಪರಿಶೋಧನಾ ವರದಿ, 4 ಅನುಪಾಲನಾ ವರದಿಗಳನ್ನು ಸದನದಲ್ಲಿ ಮಂಡಿಸಲಾಗಿದೆ ಎಂದು ತಿಳಿಸಿದರು. ಧನವಿಧೇಯಕ ಸೇರಿದಂತೆ 14 ವಿಧೇಯಕಗಳು ಅಂಗೀಕಾರಗೊಂಡಿವೆ. 120 ಪ್ರಶ್ನೆಗಳಿಗೆ ಸದನದಲ್ಲಿ ಉತ್ತರ 966 ಪ್ರಶ್ನೆಗಳಿಗೆ ಲಿಖಿತ ಉತ್ತರ, ನೀಡಲಾಗಿದೆ. ಒಟ್ಟಾರೆ ಸದನದಲ್ಲಿ ಶೇ.90 ಸದಸ್ಯರ ಹಾಜರಾತಿ ಇತ್ತು ಎಂದು ವಿವರಿಸಿದರು.

ಸ್ಪೀಪರ್ ಹುದ್ದೆಯ ಲಕ್ಷ್ಮಣರೇಖೆ ದಾಟಿಲ್ಲ: ಸಭಾಧ್ಯಕ್ಷರ ಪೀಠಕ್ಕೆ ಅಗೌರವ ತೋರಿಸಿ ವ್ಯವಸ್ಥೆಗೆ ಕಪ್ಪು ಚುಕ್ಕೆ ಬರುವಂತೆ ನಡೆದುಕೊಂಡಿದ್ದರಿಂದ ಪ್ರತಿಪಕ್ಷಗಳ 10 ಶಾಸಕರ ವಿರುದ್ಧ ಅಮಾನತ್ತು ಕ್ರಮ ಕೈಗೊಳ್ಳಬೇಕಾಯಿತು. ಸದನದ ಗೌರವ ಉಳಿಸಲು ನನ್ನ ಕರ್ತವ್ಯ ನಾನು ಮಾಡಿದ್ದೇನೆಯೇ ಹೊರತು ಸಭಾಧ್ಯಕ್ಷ ಹುದ್ದೆಯ ಲಕ್ಷ್ಮಣ ರೇಖೆಯನ್ನು ದಾಟಿಲ್ಲ ಎಂದು ಸ್ಪೀಕರ್ ಯು.ಟಿ.ಖಾದರ್ ಇದೇ ವೇಳೆ ಬಿಜೆಪಿ ಶಾಸಕರ ಅಮಾನತ್ತು ಪ್ರಕರಣಕ್ಕೆ ಸಂಬಂಧಿಸಿದಂತೆ ತಮ್ಮ ಕ್ರಮವನ್ನು ಸಮರ್ಥಿಸಿಕೊಂಡರು.

**ಆಧಾರ**: ಕನ್ನಡಪ್ರಭ, ದಿನಾಂಕ: 22.07.2023.

## 35. ವಿಶ್ವವಾಣಿ ಪುಸ್ತಕದ ಆರು ಕೃತಿಗಳ ಲೋಕಾರ್ಪಣೆ




ದಿನಾಂಕ: 22–07–23 ರಂದು ನಾಡಿನ ಖ್ಯಾತ ಪತ್ರಕರ್ತರು, ವಿಮರ್ಶಕರು, ಹಿರಿಯ ಲೇಖಕರು ಹಾಗೂ ವಿಶ್ವವಾಣಿ ಪತ್ರಿಕೆಯ ಸಂಪಾದಕರಾದ ಶ್ರೀ ವಿಶ್ವೇಶ್ವರ ಭಟ್ ಅವರ ನೇತೃತ್ವದ ವಿಶ್ವವಾಣಿ ಪುಸ್ತಕದ ಆರು ಕೃತಿಗಳು ಲೋಕಾರ್ಪಣೆಗೊಂಡವು. ಆರು ಕೃತಿಗಳ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಮಾನ್ಯ ಸಭಾಪತಿ ಶ್ರೀ ಬಸವರಾಜ ಎಸ್ ಹೊರಟ್ಟಿ ಅವರನ್ನು ವಿಶ್ವವಾಣಿ ಸಂಪಾದಕರಾದ ಶ್ರೀ ವಿಶ್ವೇಶ್ವರ ಭಟ್ ಅವರು ತಮ್ಮ ಹಾಗೂ ಹೊರಟ್ಟಿ ಅವರೊಂದಿಗಿನ ಸುಧೀರ್ಘ ಆತ್ಮೀಯ ಒಡನಾಟದ ಕುರಿತು ಮಾತನಾಡಿ ಅತ್ಯಂತ ಗೌರವದಿಂದ ಪ್ರೀತಿಯಿಂದ ಮಾತನಾಡಿಸುವ ಅವರ ಗುಣ ವಿಶೇಷದ್ದು ಅವರ ನಾಲ್ಕು ದಶಕಗಳ ಹೋರಾಟ, ಅವರ ಹೆಜ್ಜೆ ಗುರುತುಗಳು ಅವರ ಮಾಡಿದ ಸಾಧನೆ ಕುರಿತು ಮಾತನಾಡುತ್ತವೆ. ಯಾವೊಂದು ಕಳಂಕವನ್ನು ಮೈಗೆ ಅಂಟಿಕೊಳ್ಳದೆ ಇರುವ ನಾಡಿನ ಏಕೈಕ ಜನಪ್ರತಿನಿಧಿ, ರಾಜಕಾರಣಿಗಳಲ್ಲಿ ಇವರೊಬ್ಬ ಅಪರೂಪದ ವ್ಯಕ್ತಿ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ್ ಬೊಮ್ಮಾಯಿ, ಶಾಸಕ ಪ್ರದೀಪ್ ಈಶ್ವರ್ ಸೇರಿದಂತೆ ಹಲವಾರು ಗಣ್ಯರು ಖ್ಯಾತ ಪತ್ರಕರ್ತರು, ವಿಮರ್ಶಕರು ಹಾಗೂ ಲೇಖಕರು ಉಪಸ್ಥಿತರಿದ್ದರು.

## 36. ಎಪ್ಪತ್ತು (70) ಗಂಟೆ ಕಾಲ ಪರಿಷತ್ ಕಲಾಪ

ವಿಧಾನ ಪರಿಷತ್ ಕಲಾಪವು ಈ ಬಾರಿ 15 ದಿನದ ಅವಧಿಯಲ್ಲಿ 70.30 ಗಂಟೆಗಳ ಕಾಲ ನಡೆದಿದೆ ಎಂದು ಸಭಾಪತಿ ಬಸವರಾಜ ಹೊರಟ್ಟಿ ತಿಳಿಸಿದರು. ವಿಧಾನಸಭೆಯಲ್ಲಿ ಅಂಗೀಕೃತಗೊಂಡ 13 ವಿಧೇಯಕಗಳನ್ನೂ ಪರಿಷತ್‌ನಲ್ಲೂ ಪಾಸು ಮಾಡಲಾಗಿದೆ. ಎಪಿಎಂಸಿ ಕಾಯಿದೆಯನ್ನು ಪರಿಶೀಲನಾ ಸಮಿತಿಗೆ ಶಿಫಾರಸು ಮಾಡಲಾಯಿತು ಎಂದು ಹೇಳಿದರು.

**ಆಧಾರ**: ವಿಜಯ ಕರ್ನಾಟಕ, ದಿನಾಂಕ: 23.07.2023.

## 37. ಕರ್ನಾಟಕ ಪವರ್ ಲಿಫ್ಟಿಂಗ್ ಅಸೋಸಿಯೇಷನ್‌ನ ಪದಾಧಿಕಾರಿಗಳು–ಸ್ಪೀಕರ್ ಭೇಟಿ



ದಿನಾಂಕ: 26.07.2023 ರಂದು ಕರ್ನಾಟಕ ಪವರ್ ಲಿಫ್ಟಿಂಗ್ ಅಸೋಸಿಯೇಷನ್‌ನ ಪದಾಧಿಕಾರಿಗಳು ಸನ್ಮಾನ್ಯ ಸಭಾಧ್ಯಕ್ಷರನ್ನು ಭೇಟಿ ಮಾಡಿ ಚರ್ಚಿಸುತ್ತಿರುವ ಸಂದರ್ಭ.

## 38. ಮಾಧ್ಯಮದೊಂದಿಗೆ ಸ್ಪೀಕರ್



ದಿನಾಂಕ: 26.07.2023 ರಂದು ಸನ್ಮಾನ್ಯ ಸಭಾಧ್ಯಕ್ಷರು ರಾಜ್ಯದ ಪವರ್ ಟಿವಿ ಕನ್ನಡ ನ್ಯೂಸ್ ವಾಹಿನಿಗೆ ಸಂದರ್ಶನ ನೀಡಿದ ಸಂದರ್ಭ.

## 39. ಸಾರ್ವಜನಿಕರ ಭೇಟಿ –ಸ್ಪೀಕರ್



ದಿನಾಂಕ: 27.07.2023ರಂದು ಸನ್ಮಾನ್ಯ ಸಭಾಧ್ಯಕ್ಷರು ವಿಧಾನ ಸೌಧದ ಕಚೇರಿಯಲ್ಲಿ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿದ ಸಂದರ್ಭ.

## 40. ಡಾ.ಎ.ಪಿ.ಜೆ. ಅಬ್ದುಲ್ ಕಲಾಂ ಅವಾರ್ಡ್–ಸಮಾರಂಭ




ದಿನಾಂಕ: 27.07.2023ರಂದು ಸನ್ಮಾನ್ಯ ಸಭಾಧ್ಯಕ್ಷರು ಬೆಂಗಳೂರಿನಲ್ಲಿ ನಡೆದ ಡಾ.ಎ.ಪಿ.ಜೆ. ಅಬ್ದುಲ್ ಕಲಾಂ ಅವಾರ್ಡ್ ವಿತರಣಾ ಸಮಾರಂಭದಲ್ಲಿ ಭಾಗವಹಿಸಿದ ಸಂದರ್ಭ.

## 41. ಸ್ಪೀಕರ್– ಸತ್ಯಸಾಯಿ ಗ್ರಾಮಕ್ಕೆ ಭೇಟಿ



ದಿನಾಂಕ: 27.07.2023 ರಂದು ಸನ್ಮಾನ್ಯ ಸಭಾಧ್ಯಕ್ಷರು ಚಿಕ್ಕಬಳ್ಳಾಪುರ ಜಿಲ್ಲೆಯ ಮುದ್ದೇನಹಳ್ಳಿಯಲ್ಲಿರುವ ಸತ್ಯಸಾಯಿ ಗ್ರಾಮಕ್ಕೆ ಭೇಟಿ ನೀಡಿ ಸದ್ಗುರು ಶ್ರೀ ಮಧುಸೂಧನ್ ಸಾಯಿ ಅವರನ್ನು ಭೇಟಿ ಮಾಡಿದ ಸಂದರ್ಭ.

## 42. ಮಾನ್ಯ ಸಭಾಪತಿಯವರ ನೇತೃತ್ವದಲ್ಲಿ ಕಿರುಚಿತ್ರ ತಯಾರಿಕೆಗೆ ಸಂಬಂಧಪಟ್ಟಂತೆ ನಡೆದ ಸಭೆ



ದಿನಾಂಕ: 27.7.2023ರಂದು ವಿಧಾನಸೌಧದಲ್ಲಿ ಶತಮಾನೋತ್ಸವ ಕಂಡ ಕರ್ನಾಟಕ ವಿಧಾನ ಪರಿಷತ್ತಿನ ಕುರಿತು ಸಮಗ್ರ ಮಾಹಿತಿ ಉಳ್ಳ ಕಿರುಚಿತ್ರ ಮಾಡುವ ಕುರಿತು ಮಾನ್ಯ ಸಭಾಪತಿ

ಶ್ರೀ ಬಸವರಾಜ್ ಎಸ್. ಹೊರಟ್ಟಿ ಅವರ ನೇತೃತ್ವದಲ್ಲಿ ಸಭೆ ನಡೆಸಲಾಯಿತು. ಈ ಸಭೆಯಲ್ಲಿ ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು, ಮಾಜಿ ಸದಸ್ಯರು, ಹಲವಾರು ಗಣ್ಯರು ಸಲಹೆ, ಸೂಚನೆಯನ್ನು ನೀಡಿದರು.

## 43. ಹೊರನಾಡು ಕನ್ನಡ ಸಂಸ್ಕೃತಿ ಸಂಭ್ರಮ 2023









ದಿನಾಂಕ: 28.07.2023ರಂದು ಮುಂಬೈನಲ್ಲಿ ಜರುಗಿದ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಕರ್ನಾಟಕ ಸರ್ಕಾರ ಮುಂಬಯಿಯ ವಿವಿಧ ಕನ್ನಡಪರ ಸಂಘಟನೆಗಳ ಸಹಯೋಗ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯವರ ಸಹಕಾರದಲ್ಲಿ "ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವದ ಸವಿನೆನಪು" ಅಂಗವಾಗಿ "ಹೊರನಾಡ ಕನ್ನಡ ಸಂಸ್ಕೃತಿ ಸಂಭ್ರಮ 2023" ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಮಾನ್ಯ ಸಭಾಪತಿ ಶ್ರೀ ಬಸವರಾಜ ಎಸ್. ಹೊರಟ್ಟಿ ಅವರು ಭಾಗಿಯಾಗಿ ಕನ್ನಡದ ಕಾಳಜಿಯನ್ನು ಪ್ರೇಮವನ್ನು ವ್ಯಕ್ತಪಡಿಸುತ್ತಿರುವ ಮುಂಬೈನ ಕನ್ನಡಿಗರನ್ನ ನಾನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ ಎಂದು ಹೇಳಿದರು. ಈ ಸಂದರ್ಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾದ ಶ್ರೀ ತಂಗಡಗಿ ಶಿವರಾಜ ಸಂಗಪ್ಪ, ಗ್ರಂಥಾಲಯ ಇಲಾಖೆಯ ನಿರ್ದೇಶಕರಾದ ಶ್ರೀ ಸತೀಶ ಹೊಸಮನಿ ಸೇರಿದಂತೆ ವಿವಿಧ ಕನ್ನಡ ಪರ ಸಂಘಟನೆಗಳ ಪದಾಧಿಕಾರಿಗಳು ಉಪಸ್ಥಿತರಿದ್ದರು.


ಮಾತೋಶ್ರೀ ಜೊತೆ ಶ್ರೀ ಬಸವರಾಜ ಹೊರಟ್ಟಿ



ಮುಂಬೈನಲ್ಲಿ ಜರುಗಿದ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಕರ್ನಾಟಕ ಸರ್ಕಾರ ಮುಂಬಯಿಯ ವಿವಿಧ ಕನ್ನಡಪರ ಸಂಘಟನೆಗಳ ಸಹಯೋಗ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯವರ ಸಹಕಾರದಲ್ಲಿ "ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವದ ಸವಿನೆನಪು" ಅಂಗವಾಗಿ

**"ಹೊರನಾಡ ಕನ್ನಡ ಸಂಸ್ಕೃತಿ ಸಂಭ್ರಮ 2023"** ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿದ ಮಾನ್ಯ ಸಭಾಪತಿ ಶ್ರೀ ಬಸವರಾಜ ಎಸ್. ಹೊರಟ್ಟಿ ಅವರು ಇಲ್ಲಿನ ಕನ್ನಡಪರ ಸಂಘಟನೆಗಳ ಸೇವಾ ಕೈಂಕರ್ಯವನ್ನು ನಮ್ಮ ಅವ್ವ ಸೇವಾ ಟ್ರಸ್ಟ್ ಕೂಡಾ ಕೈಜೋಡಿಸುತ್ತಿದೆ ಎಂದು ಹೇಳಿದರು. ಅದಕ್ಕಾಗಿ ಅವ್ವ ಸೇವಾ ಟ್ರಸ್ಟ್‌ನ ಸ್ಫೂರ್ತಿ ಚೇತನವಾದ ಮಾತೋಶ್ರೀ ಗುರವ್ವ ಶಿವಲಿಂಗಪ್ಪ ಹೊರಟ್ಟಿ ಸ್ಮರಣಾರ್ಥ 5 ಲಕ್ಷ ರೂಪಾಯಿಗಳ ದತ್ತಿನಿಧಿಯನ್ನು ನೀಡುವುದಾಗಿ ಹಾಗೂ ಈ ಹಣ ಪ್ರತಿಭಾವಂತ ಬಡ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಸಹಕಾರಿ ಆಗಲಿ ಎಂದು ತಿಳಿಸಿದರು.

## 44. ವ್ಯಸನಮುಕ್ತ ಸಾಧಕರ ಸಮಾವೇಶ







ದಿನಾಂಕ: 29.07.2023ರಂದು ಸನ್ಮಾನ್ಯ ಸಭಾಧ್ಯಕ್ಷರು ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಹಾಗೂ ರಾಜ್ಯಸಭಾ ಸದಸ್ಯರಾದ ಡಾ॥ ವೀರೇಂದ್ರ ಹೆಗ್ಗಡೆಯವರ ಉಪಸ್ಥಿತಿಯಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳದ ಗ್ರಾಮಾಭಿವೃದ್ಧಿ ಯೋಜನೆ (ರಿ) ಹಾಗೂ ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆ ಟ್ರಸ್ಟ್ ವತಿಯಿಂದ ಹಮ್ಮಿಕೊಂಡ ವ್ಯಸನಮುಕ್ತ ಸಾಧಕರ ಸಮಾವೇಶದಲ್ಲಿ ಭಾಗವಹಿಸಿದ ಸಂದರ್ಭ.

## 45. ಮಸೂದೆಗೆ ಗೌರ್ವನರ್ ಅಂಕಿತ

ಶಾಸನ ಸಭೆಯಿಂದ ಒಪ್ಪಿತ ರೂಪದಲ್ಲಿದ್ದ ಒಂಭತ್ತು ವಿಧೇಯಕಗಳಿಗೆ ರಾಜ್ಯಪಾಲರು ಸಹಿ ಹಾಕಿ ಒಪ್ಪಿಗೆ ಸೂಚಿಸಿದ್ದಾರೆ. ಈ ಮೂಲಕ ಕರ್ನಾಟಕ ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಬುಡಕಟ್ಟುಗಳ (ಕೆಲವು ಭೂಮಿಗಳ ವರ್ಗಾವಣೆಯ ನಿಷೇಧ) (ತಿದ್ದುಪಡಿ) ಅಧಿನಿಯಮ, 2023, ಕರ್ನಾಟಕ ಭೂಕಂದಾಯ (ತಿದ್ದುಪಡಿ) ಅಧಿನಿಯಮ, 2023ಗಳು ರಾಜ್ಯದಲ್ಲಿ ಲಾಗು ಆಗಲಿದ್ದು, ಸರ್ಕಾರ ರಾಜ್ಯಪತ್ರ ಪ್ರಕಟಿಸಿದೆ.

ಈ ಸಂಬಂಧ ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿರುವ ಕಾನೂನು ಸಚಿವ ಎಚ್.ಕೆ.ಪಾಟೀಲ್, ಈ ಕಾನೂನುಗಳ ಮಹತ್ವ ವಿವರಿಸಿದ್ದಾರೆ.

ಅನುಸೂಚಿತ ಜಾತಿಗಳು ಮತ್ತು ಬುಡಕಟ್ಟುಗಳಿಗೆ ಸೇರಿದ ವ್ಯಕ್ತಿಗಳಿಗೆ ಸರ್ಕಾರವು ಮಂಜೂರು ಮಾಡಿರುವ ಭೂಮಿಗಳನ್ನು ಅವರ ಅಜ್ಞಾನ ಮತ್ತು ಬಡತನವನ್ನು, ಪ್ರಭಾವಿ ಮತ್ತು ಬಲಿಷ್ಠ ವರ್ಗಗಳು ದುರುಪಯೋಗಪಡಿಸಿಕೊಂಡು ಮಾರಾಟ ಅಥವಾ ಅಡಮಾನ ಮಾಡಿಸಿಕೊಳ್ಳುವ ಉದಾಹರಣೆ ಇದೆ. ಈ ಎಲ್ಲದರಿಂದಾಗಿ ಈ ವರ್ಗದವರು ಬಲಿಪಶುಗಳಾಗುತ್ತಿದ್ದರು. ಸರ್ಕಾರದ ಮಂಜೂರಾತಿಯ ಉದ್ದೇಶ ಈಡೇರಿಸುವ ಸಲುವಾಗಿ, ಅಂತಹ ಭೂಮಿಯು ಸರ್ಕಾರದಿಂದ ಪೂರ್ವಾನುಮತಿ ಪಡೆಯದೇ ಪರಭಾರೆಯಾಗಿದ್ದಾಗ್ಯೂ ಸಹ, ಅದನ್ನು ಮೂಲ ಮಂಜೂರಾತಿದಾರನಿಗಾಗಲೀ ಅಥವಾ ಆತನ ಉತ್ತರಾಧಿಕಾರಿಗಳಿಗಾಗಲಿ ಹಿಂದಿರುಗಿಸಬೇಕೆಂಬ ಉದ್ದೇಶದಿಂದ ಕರ್ನಾಟಕ ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಬುಡಕಟ್ಟುಗಳ (ಕೆಲವು ಭೂಮಿಗಳ ವರ್ಗಾವಣೆಯ ನಿಷೇಧ) ಅಧಿನಿಯಮ ತರಲಾಗುತ್ತದೆ ಎಂದಿದ್ದಾರೆ.

ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ವ್ಯಕ್ತಿಗಳು ಕೈಗೊಳ್ಳಲಾದ ನಿರ್ಮಾಣ ಕಾಮಗಾರಿಗಳ ಮೊತ್ತವನ್ನು ಒಂದು ಕೋಟಿ ರೂ. ಗಳಿಗೆ ಹೆಚ್ಚಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ವಿಧೇಯಕ ಜಾರಿಗೆ ತರಲಾಗಿದೆ ಎಂದು ವಿವರಿಸಿದ್ದಾರೆ. ಅದೇ ರೀತಿ, ಕರ್ನಾಟಕ ಅಗ್ನಿಶಾಮಕ ದಳ (ತಿದ್ದುಪಡಿ) ಅಧಿನಿಯಮ, 2023, ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ಅಧಿನಿಯಮ, 2023, ಕರ್ನಾಟಕ ವಿಧಾನಮಂಡಲ (ಅರ್ನಹತಾ ನಿವಾರಣಾ) (ತಿದ್ದುಪಡಿ) ಅಧಿನಿಯಮ, 2023, ಕರ್ನಾಟಕ ಸಹಕಾರಿ ಸಂಘಗಳ (ತಿದ್ದುಪಡಿ) ಅಧಿನಿಯಮ, 2023, ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ (ತಿದ್ದುಪಡಿ) ಅಧಿನಿಯಮ, 2023ಕ್ಕೂ ರಾಜ್ಯಪಾಲರು ಅನುಮೋದನೆ ದೊರೆತಿದ್ದು, ರಾಜ್ಯಪತ್ರ ಪ್ರಕಟಗೊಂಡಿದೆ ಎಂದು ತಿಳಿಸಿದ್ದಾರೆ.

**ಆಧಾರ**: ವಿಜಯವಾಣಿ, ದಿನಾಂಕ: 29.07.2023.

## 46. ಕಾಗದರಹಿತ ಅಸೆಂಬ್ಲಿ ಶೀಘ್ರ ಜಾರಿ: ಯು.ಟಿ.ಖಾದರ್

ವಿಧಾನಸಭೆ ಅಧಿವೇಶನವನ್ನು ಪೇಪರ್‌ಲೆಸ್ ಆಗಿ ಮಾರ್ಪಡಿಸುವ ಬಗ್ಗೆ ತೀರ್ಮಾನ ಕೈಗೊಳ್ಳಲಾಗಿದ್ದು, ಶೀಘ್ರ ಅನುಷ್ಠಾನಗೊಳಿಸಲಾಗುವುದು ಎಂದು ಸ್ಪೀಕರ್ ಯು.ಟಿ.ಖಾದರ್ ಹೇಳಿದ್ದಾರೆ.

ದಕ್ಷಿಣ ಕನ್ನಡ ಕಾರ್ಯನಿರತ ಪತ್ರಕರ್ತರ ಸಂಘ ಆಯೋಜಿಸಿದ್ದ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿ ಈಗಾಗಲೇ ಹಿಮಾಚಲ ಪ್ರದೇಶ, ಕೇರಳ ಸೇರಿ ಕೆಲ ರಾಜ್ಯಗಳಲ್ಲಿ ಪೇಪರ್‌ಲೆಸ್ ಅಸೆಂಬ್ಲಿ ವ್ಯವಸ್ಥೆ ಇದೆ. ಕರ್ನಾಟಕದಲ್ಲೂ ಡಿಜಿಟಲೀಕರಣದ ಅಗತ್ಯವಿದೆ. ಕಲಾಪ ನಡೆಯುವಾಗ ಶಾಸಕರ ಎದುರಿನ ಟೇಬಲ್‌ನಲ್ಲಿ ಲ್ಯಾಪ್ ಟಾಪ್ ಮತ್ತಿತರ ಪೂರಕ ಪರಿಕರಗಳು ಇರುತ್ತವೆ. ಕಾರ್ಯಸೂಚಿ ಮಸೂದೆಗೆ ಸಂಬಂಧಿಸಿದ ಎಲ್ಲ ಮಾಹಿತಿಗಳು ಲ್ಯಾಪ್ ಟ್ಯಾಪ್‌ನಲ್ಲೇ ಲಭ್ಯವಾಗಲಿದೆ. ಈ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ಚರ್ಚೆ ನಡೆಸಿರುವುದಾಗಿ ತಿಳಿಸಿದರು.

ಆರಂಭದಲ್ಲಿ ಲ್ಯಾಪ್ ಟ್ಯಾಪ್ ಮತ್ತು ಪೇಪರ್ ಎರಡೂ ಇರಲಿದೆ. ಯಾರಿಗೆ ಲ್ಯಾಪ್ಟಾಪ್ ವ್ಯವಸ್ಥೆ ಕಷ್ಟವಾಗುತ್ತದೊ ಅವರಿಗೆ ಈಗಿನಂತೆ ಪೇಪರ್ ಮೂಲಕ ಮಾಹಿತಿ ಒದಗಿಸುವ ಕೆಲಸ ಆಗಲಿದೆ.

ಕ್ರಮೇಣ ಪೇಪರ್ ಲೆಸ್ ವ್ಯವಸ್ಥೆ ಅಭ್ಯಾಸವಾಗಿ ಶಾಸಕರು ಅದಕ್ಕೆ ಒಗ್ಗಿಕೊಳ್ಳುವ ವಿಶ್ವಾಸವಿದೆ. ಇದರಿಂದ ಪ್ರಿಂಟಿಂಗ್ ವೆಚ್ಚ ಸಾಕಷ್ಟು ಉಳಿತಾಯವಾಗಲಿದೆ ಎಂದರು.

**ಆಧಾರ:** ಕನ್ನಡಪ್ರಭ, ದಿನಾಂಕ: 01.08.2023.

## 47. ಕಡಲ್ಕೊರೆತ ಪ್ರದೇಶಗಳಿಗೆ ಭೇಟಿ–ಸ್ಪೀಕರ್




ದಿನಾಂಕ: 01.08.2023ರಂದು ಸನ್ಮಾನ್ಯ ಸಭಾಧ್ಯಕ್ಷರು, ಸನ್ಮಾನ್ಯ ಮುಖ್ಯಮಂತ್ರಿಗಳು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರೊಂದಿಗೆ ತಮ್ಮ ಮತಕ್ಷೇತ್ರದ ವ್ಯಾಪ್ತಿಯಲ್ಲಿ ತೀವ್ರ ಕಡಲ್ಕೊರೆತಕ್ಕೆ ಒಳಗಾದ ಪ್ರದೇಶಗಳನ್ನು ವೀಕ್ಷಿಸುತ್ತಿರುವ ಸಂದರ್ಭ.

## 48. ಪಂಜಾಬ್ ವಿಧಾನ ಸಭೆಯ ಸಭಾಧ್ಯಕ್ಷರಾದ ಸರ್ದಾರ್ ಕುಲ್ತಾರ್ ಸಿಂಗ್ ಸಂಧ್ವಾನ್ ರವರ ನಿಯೋಗ ವಿಧಾನಸೌಧಕ್ಕೆ ಭೇಟಿ






ದಿನಾಂಕ: 02.08.2023ರಂದು ಪಂಜಾಬ್ ವಿಧಾನ ಸಭೆಯ ಸಭಾಧ್ಯಕ್ಷರಾದ ಸರ್ದಾರ್ ಕುಲ್ತಾರ್ ಸಿಂಗ್ ಸಂಧ್ವಾನ್ ರವರ ನಿಯೋಗ ವಿಧಾನಸೌಧಕ್ಕೆ ಭೇಟಿ ನೀಡಿ ಸನ್ಮಾನ್ಯ ಸಭಾಧ್ಯಕ್ಷರೊಂದಿಗೆ ಮಾತುಕತೆ ನಡೆಸಿದ ಸಂದರ್ಭ.

## 49. ಸ್ಪೀಕರ್ ತಮಿಳುನಾಡಿಗೆ ಭೇಟಿ



ದಿನಾಂಕ: 03.08.2023ರಂದು ಸನ್ಮಾನ್ಯ ಸಭಾಧ್ಯಕ್ಷರು ಕಾರ್ಯಕ್ರಮದ ನಿಮಿತ್ತ ತಮಿಳುನಾಡಿಗೆ ಭೇಟಿ ನೀಡಿದ ಸಂದರ್ಭ ತಮಿಳುನಾಡು ವಲಚೇರಿ ವಿಧಾನಸಭೆಯ ಶಾಸಕರಾದ ಜೆ.ಎಂ.ಎಚ್.ಹಸ್ಸನ್ ಮೌಲಾನಾ ರವರು ಚೆನ್ನೈ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಸನ್ಮಾನ್ಯ ಸಭಾಧ್ಯಕ್ಷರನ್ನು ಆತ್ಮೀಯವಾಗಿ ಸ್ವಾಗತಿಸಿದ ಸಂದರ್ಭ.

## 50. ಹೊರಟ್ಟಿ ಐತಿಹಾಸಿಕ ದಾಖಲೆಯ ಗೆಲುವು ಪ್ರಮಾಣ ಪತ್ರ ಬಿಡುಗಡೆ

1980 ರಿಂದ ಸತತ 8 ಬಾರಿ ಕರ್ನಾಟಕ ವಿಧಾನ ಪರಿಷತ್ತಿಗೆ ಸಭಾಪತಿ ಬಸವರಾಜ ಹೊರಟ್ಟಿಯವರು ಆಯ್ಕೆಯಾಗುವ ಮೂಲಕ ವಿನೂತನ ದಾಖಲೆ ನಿರ್ಮಿಸಿದ್ದು ಇತಿಹಾಸ. ಸಾಂಖ್ಯಿಕ ಇಲಾಖೆಯ ಪ್ರಧಾನ ಕಾರ್ಯದರ್ಶಿ ಡಾ.ಶಾಲಿನಿ ರಜನೀಶ ಅವರು ದಾಖಲೀಕರಿಸಿದ ಪ್ರಮಾಣ ಪತ್ರವನ್ನು ಬಿಡುಗಡೆ ಮಾಡಲಾಗಿದೆ.

ಶಿಕ್ಷಕರ ಪ್ರತಿನಿಧಿಯಾಗಿ 43 ವರ್ಷಗಳಿಂದ ಸತತ ಸೇವೆ ಸಲ್ಲಿಸುತ್ತಿರುವುದು ಕೂಡ ಐತಿಹಾಸಿಕ ದಾಖಲೆ. ಇಷ್ಟೊಂದು ಸುದೀರ್ಘ ಸೇವೆ ಸಲ್ಲಿಸಿದ ಶಿಕ್ಷಕರ ಪ್ರತಿನಿಧಿ ದೇಶದಲ್ಲಿಯೇ ಇಲ್ಲ. ಅಲ್ಲದೇ 3 ಬಾರಿ ಸಭಾಪತಿಯಾಗಿ ಆಯ್ಕೆಯಾಗಿ ಕಾರ್ಯನಿರ್ವಹಿಸುತ್ತಿರುವುದು ಸಹ ದಾಖಲೆಯೇ ಸರಿ. 8 ಬಾರಿ ಆಯ್ಕೆಯಾದ ಕುರಿತು ಹಾಗೂ ಮೂರು ಬಾರಿ ಸಭಾಪತಿಯಾಗಿ ಸೇವೆ ಸಲ್ಲಿಸಿದ ಕುರಿತು ಸಾಂಖ್ಯಿಕ ಇಲಾಖೆ ದಾಖಲೆ ಸಮೇತ ಪ್ರಕಟಿಸಿದೆ.

ಪ್ರಜ್ಞಾವಂತ ಶಿಕ್ಷಕರ ಕ್ಷೇತ್ರದಿಂದ ಸತತ 8 ಬಾರಿ ಆಯ್ಕೆಯಾಗುವುದು ಸಾಮಾನ್ಯದ ಮಾತಲ್ಲ. ಬಸವರಾಜ ಹೊರಟ್ಟಿಯವರು ಶಿಕ್ಷಕರೊಂದಿಗಿನ ನಂಟು, ವಿಶ್ವಾಸ, ಪ್ರೀತಿಯೇ ಇದಕ್ಕೆ ಕಾರಣ. ಇಂತಹ ದಾಖಲೆಯನ್ನು ಹಿಂದೆಯೂ ಯಾರೂ ಮಾಡಿಲ್ಲ ಎಂದು ಡಾ.ಬಸವರಾಜ ಧಾರವಾಡ ಪ್ರಕಟಣೆ ಮೂಲಕ ತಿಳಿಸಿದ್ದಾರೆ.

**ಆಧಾರ:** ಸಂಯುಕ್ತ ಕರ್ನಾಟಕ, ದಿನಾಂಕ: 07.08.2023.

## 51. ಸಂವಿಧಾನವೇ ನನ್ನ ಧರ್ಮ

ನಾನು ಎಡಪಂಥೀಯವೂ ಅಲ್ಲ, ಬಲಪಂಥೀಯವೂ ಅಲ್ಲ, ನಾನು ಕಷ್ಟದಲ್ಲಿರುವ ಜನರ ಪರ. ನನಗೆ ಸಂವಿಧಾನ ಮುಖ್ಯ, ಸಂವಿಧಾನವೇ ನನ್ನ ಧರ್ಮ, ಸಂವಿಧಾನವೇ ನನ್ನ ಪಕ್ಷ. ನಾನು ಪ್ರತಿ ಪಕ್ಷದ ಮಿತ್ರ ಇವು ವಿಧಾನಸಭೆ ಸಭಾಧ್ಯಕ್ಷ ಯು.ಟಿ.ಖಾದರ್ ಸ್ಪಷ್ಟ ಮಾತುಗಳು.

ಪ್ರಸ್ ಕ್ಲಬ್ ಬೆಂಗಳೂರು ಆಯೋಜಿಸಿದ್ದ ಸಂವಾದದಲ್ಲಿ ಅವರು ಮಾತನಾಡಿದರು. ವಿಧಾನಸಭೆಯಲ್ಲಿ ನಾವು ಯಾವುದೇ ವಿಧೇಯಕಗಳನ್ನು ಚರ್ಚೆ ಇಲ್ಲದೆ ಅಂಗೀರಿಸಿಲ್ಲ. ಪ್ರತಿಪಕ್ಷಗಳು ಗೈರಾಗಿದ್ದಾಗ ಆಡಳಿತ ಪಕ್ಷದವರೇ ಸಾಕಷ್ಟು ಚರ್ಚೆ ಮಾಡಿದ್ದಾರೆ ಎಂದು ಹೇಳಿದರು.

ಸ್ಪೀಕರ್ ಸ್ಥಾನ ಅಲಂಕರಿಸಿರುವುದಕ್ಕೆ ನನಗೆ ಹೆಮ್ಮೆಯಿದೆ. ಯಾವುದೇ ರೀತಿಯ ಬೇಸರವಿಲ್ಲ. ಪ್ರಜಾಪ್ರಭುತ್ವ ವ್ಯವಸ್ಥೆ ಬಲಿಷ್ಠಗೊಳ್ಳಬೇಕಾದರೆ ವಿಧಾನಸಭಾ ಕಲಾಪಗಳು ಪರಿಣಾಮಕಾರಿ ಆಗಬೇಕು. ಆಗ ಉತ್ತಮ ಶಾಸನಗಳು ಜಾರಿಯಾಗಬಹುದು. ಸರ್ಕಾರ ಸಮರ್ಪಕವಾಗಿ ಕಾರ್ಯನಿರ್ವಹಿಸಲು ವಿಪಕ್ಷಗಳು ಕಲಾಪದಲ್ಲಿ ಸಮರ್ಪಕವಾಗಿ ಕಾರ್ಯನಿರ್ವಹಿಸುವುದು ಮುಖ್ಯವಾಗುತ್ತದೆ. ಈ ನಿಟ್ಟಿನಲ್ಲಿ ಸ್ಪೀಕರ್ ಪಾತ್ರವೂ ಮಹತ್ವದ್ದಾಗಿದೆ. ವಿಧಾನಸಭಾ ಕಲಾಪ ವ್ಯರ್ಥವಾಗದಂತೆ ನಿಭಾಯಿಸುವ ಹೊಣೆಗಾರಿಕೆ ಇದೆ ಎಂದು ಹೇಳಿದರು.

ಶಾಸಕರ ಅಮಾನತ್ತು ವಿಚಾರದಲ್ಲಿ ನಾನು ಸರ್ಕಾರದ ಒತ್ತಡಕ್ಕೆ ಮಣಿದಿಲ್ಲ. ಯಾವುದೇ ಪಕ್ಷ, ವ್ಯಕ್ತಿಗಿಂತ ಸಂಸದೀಯ ನಿಯಮ ಪಾಲನೆ ಮಾಡಿದ್ದೇನೆ. ಸಂವಿಧಾನದ ಗೌರವ ಉಳಿಸುವ ಕೆಲಸ ಮಾಡಿದ್ದೇನೆ. ಕೆಲವರು ಒಪ್ಪಬಹುದು, ಒಪ್ಪದೇ ಇರಬಹುದು, ಎಲ್ಲರನ್ನೂ ನಾನು ಸಮಾನತೆಯಿಂದ ನೋಡುವವನು. ಶಾಸಕರ ಗಲಾಟೆ ಸದನ ಮುಗಿಯುವ ತನಕ ಮಾತ್ರ. ಅದು ಈಗ ಮುಗಿದ ವಿಚಾರ ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು. ಪ್ರೆಸ್ ಕ್ಲಬ್ ಆಫ್ ಬೆಂಗಳೂರು ಅಧ್ಯಕ್ಷ ಶ್ರೀಧರ, ಪ್ರಧಾನ ಕಾರ್ಯದರ್ಶಿ ಬಿ.ಪಿ.ಮಲ್ಲಪ್ಪ ಮತ್ತಿತರರು ಉಪಸ್ಥಿತರಿದ್ದರು.

**ವಿಧಾನಸಭೆ ಕ್ಯಾಂಪಸ್‌ಗೆ ತಂತ್ರಜ್ಞಾನ:** ವಿಧಾನಸಭೆ ಕ್ಯಾಂಪಸ್‌ಗೆ ಆಧುನಿಕ ತಂತ್ರಜ್ಞಾನ ಅಳವಡಿಸುತ್ತೇವೆ. ಜನರೂ ಸುಲಭವಾಗಿ ಬಂದು ಹೋಗಬೇಕು. ಜನರ ಹಾಗೂ ಅಧಿಕಾರಿಗಳ ಶ್ರಮ ವ್ಯರ್ಥವಾಗಬಾರದು. ಈ ರೀತಿ ವ್ಯವಸ್ಥೆ ಮಾಡಬೇಕಿದೆ. ಆನ್‌ಲೈನ್ ಮೂಲಕ ಅರ್ಜಿ ಹಾಕಿ ಬರಲು ಹಾಗೂ ಪ್ರವೇಶ ದ್ವಾರದಲ್ಲೇ ಲಾಕರ್ ಮಾಡಿ ಬ್ಯಾಗ್ ಇಟ್ಟು ಬರಿ ಪೆನ್ನು-ಪೇಪರ್ ಒಳಗೆ ತರಲು ಅವಕಾಶ ಕಲ್ಪಿಸಬೇಕಿದೆ. ಈ ನಿಟ್ಟಿನಲ್ಲಿ ಚರ್ಚೆ ನಡೆದಿದೆ ಎಂದು ಖಾದರ್ ಹೇಳಿದರು.

**ಕನ್ನಡ ನಮ್ಮ ಪ್ರೀತಿಯ ಭಾಷೆ:-** ತಾವಡುವ ಕನ್ನಡದ ಬಗ್ಗೆ ಕೆಲವರು ಜಾಲತಾಣಗಳಲ್ಲಿ ಟ್ರೋಲ್ ಮಾಡಿದ್ದ ಕುರಿತು ಪ್ರತಿಕ್ರಿಯಿಸಿದ ಖಾದರ್, ನಮ್ಮ ಕನ್ನಡ ಪ್ರೀತಿಯ ಭಾಷೆ. ದೊಡ್ಡ ಸ್ಥಾನಕ್ಕೆ ನಾವು ಹೋಗಬೇಕಾದರೆ ಟ್ರೋಲ್ ಮಾಡುವವರ ಪಾತ್ರ ಇರುತ್ತದೆ ಅದಕ್ಕೆಲ್ಲ ತಲೆ ಕೆಡಿಸಿಕೊಳ್ಳುವುದಿಲ್ಲ. ಅಲ್ಲದೇ, ನಮಗೆ ಕನ್ನಡ ಪುಸ್ತಕಕ್ಕೇ ಮಾತ್ರ ಸೀಮಿತ. ಹೊರಗಡೆ ತುಳು ಭಾಷೆಯಲ್ಲಿಯೇ ಮಾತನಾಡುತ್ತೇವೆ. ಟ್ರೋಲ್ ಮೂಲಕವಾದರೂ ನನ್ನ ಕನ್ನಡ ಭಾಷೆ ಪರಿಪೂರ್ಣವಾಗಲಿದೆ ಎಂದು ಹೇಳಿದರು. ದೇಶದಲ್ಲಿ ಅತಿ ಹೆಚ್ಚು ಶ್ರೀಮಂತ ಶಾಸಕರು ಕರ್ನಾಟಕದಲ್ಲಿದ್ದಾರೆ ಎಂಬ ಪ್ರಶ್ನೆಗೆ, ಶಾಸಕರು ಉದ್ಯಮ ನಡೆಸುವುದು ತಪ್ಪಲ್ಲ. ಕಾನೂನು ಬದ್ಧವಾಗಿ ನಡೆಸಬೇಕು ಎಂದರು. ವಿಧಾನಸಭೆ ಕಲಾಪ ಸಂದರ್ಭದಲ್ಲಿ ಶಾಸಕರ ಪಾತ್ರವೇನು? ಹೇಗೆ ಪ್ರಶ್ನೆ ಕೇಳಬೇಕು? ಶಾಸಕನಾಗಿ ಅಸೆಂಬ್ಲಿ ಒಳಗೆ ಹೇಗಿರಬೇಕು ಎಂಬ ಮಾಹಿತಿ ಕೊಟ್ಟಿದ್ದೇವೆ. ಪುಸ್ತಕ ಕೊಟ್ಟಿದ್ದೇವೆ. ಇದರಿಂದ ನೂತನ ಶಾಸಕರಿಗೆ ಸಾಕಷ್ಟು ಅನುಕೂಲವಾಗಿದೆ ಎಂದು ತಿಳಿಸಿದರು.

**ಆಧಾರ:** ವಿಜಯವಾಣಿ, ದಿನಾಂಕ: 09.08.2023.

## 52. ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರೊಂದಿಗೆ ಸಭೆ



ದಿನಾಂಕ: 09.08.2023ರಂದು ಸನ್ಮಾನ್ಯ ಸಭಾಧ್ಯಕ್ಷರು ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಯ ಸಮಿತಿಯ ನಿಯೋಗವು ಖಾಸಗಿ ಅನುದಾನ ರಹಿತ ಶಿಕ್ಷಣ ಸಂಸ್ಥೆಗಳ ತ್ವರಿತ ಪರಿಹಾರ ಹಾಗೂ ಅಭಿವೃದ್ಧಿಯ ಕುರಿತಾಗಿ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರಾದ ಮಧು ಬಂಗಾರಪ್ಪ ರವರೊಂದಿಗೆ ಚರ್ಚಿಸುತ್ತಿರುವ ಸಂದರ್ಭ.

## 53. ಸಂವಿಧಾನದ ವಿರುದ್ಧ ವರ್ತಿಸಿದರೆ ಕ್ರಮ ಸಹಜ

ಚುನಾಯಿತ ಪ್ರತಿನಿಧಿಗಳು ಸಂವಿಧಾನಕ್ಕೆ ವಿರುದ್ಧವಾಗಿ ವರ್ತಿಸಿದಾಗ ಸ್ಪೀಕರ್ ಆಗಿ ನಾನು ಕೆಲವು ಕಠಿಣ ನಿರ್ಧಾರ ತೆಗೆದುಕೊಳ್ಳಬೇಕಾಗುತ್ತದೆ. ಇದು ಪಕ್ಷಪಾತಿ ಕ್ರಮವಲ್ಲ ಎಂದು ವಿಧಾನಸಭೆ ಸ್ಪೀಕರ್ ಯು.ಟಿ.ಖಾದರ್ ಹೇಳಿದರು.

ಬೆಂಗಳೂರು ಪ್ರೆಸ್ ಕ್ಲಬ್ ಏರ್ಪಡಿಸಿದ್ದ ಮಾಧ್ಯಮ ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ರಾಜ್ಯದಲ್ಲಿ ಒಂದು ಸರ್ಕಾರ ಅಧಿಕಾರಕ್ಕೆ ಬಂದ ಕೂಡಲೇ ವಿಧಾನಸಭಾ ಸ್ಪೀಕರ್ ಮೇಲೆ ವಿರೋಧ ಪಕ್ಷಗಳಿಂದ ಅನುಮಾನ ಬರುವುದು ಸಹಜವಾಗಿರುತ್ತದೆ. ಅದೇ ರೀತಿ ವಿಧಾನಸಭಾ ಕಲಾಪದ ವೇಳೆ ಅನುಮಾನಗಳು ಬರುವುದು ಸಹಜ. ಹೀಗಿದ್ದರೂ ಸದನ ನಡೆಸಿಕೊಂಡು ಹೋಗುವುದು ಸ್ಪೀಕರ್ ಜವಾಬ್ದಾರಿ ಅದನ್ನು ಸಮರ್ಥವಾಗಿ ನಿಭಾಯಿಸಿದ್ದೇನೆ ಎಂದರು.

'ಶಾಸಕರ (ಬಿಜೆಪಿ ಶಾಸಕರ) ಅಮಾನತ್ತು ವಿಚಾರ ಈಗಾಗಲೇ ಮುಗಿದು ಹೋಗಿರುವ ವಿಷಯವಾಗಿದೆ. ಶಾಸಕರನ್ನು ಅಮಾನತ್ತು ಮಾಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಯಾವುದೇ ಸೂಚನೆ ಅಥವಾ ಸನ್ನೆಯನ್ನೂ ನೀಡಿಲ್ಲ. ಇದನ್ನು ನಾನೇ ತೀರ್ಮಾನ ಮಾಡಿದ್ದು. ಎಲ್ಲ ಸಂದರ್ಭದಲ್ಲಿಯೂ ನನಗೆ ಸಂವಿಧಾನವೇ ಮುಖ್ಯವಾಗುತ್ತದೆ. ನಮ್ಮ ಮತ್ತು ಶಾಸಕರ ಜಗಳ ಅಧಿವೇಶನ ಮುಗಿಯುವ ತನಕ ಮಾತ್ರ ಆಗಿರುತ್ತದೆ. ಈಗ ಪರಿಸ್ಥಿತಿ ತಿಳಿಯಾಗಿದೆಯೋ ಇಲ್ಲವೋ ಮುಂದಿನ ಅಧಿವೇಶನ ಸಂದರ್ಭದಲ್ಲಿ ಗೊತ್ತಾಗಲಿದೆ' ಎಂದರು.

ಈ ಹಿಂದೆ ವಿಧಾನಸಭಾ ಸ್ಪೀಕರ್ ಅವರಿಗೆ ಶಾಸಕರಿಂದ ಕಾಗದ ಪತ್ರ ಸಲ್ಲಿಕೆ ಆಗುತ್ತಿತ್ತು. ಈಗ ಪೆನ್‌ಡ್ರೈವ್, ಸಿ.ಡಿ.ಗಳು ಸಾಕ್ಷ್ಯಾಧಾರವಾಗಿ ಸಲ್ಲಿಕೆಯಾಗುತ್ತಿವೆ. ಆದರೆ, ನಾವು ಯಾವುದೇ ಆರೋಪ ಕುರಿತು ತಕ್ಷಣವೇ ರೂಲಿಂಗ್ ಕೊಡಲಿಲ್ಲ. ಎಲ್ಲವನ್ನೂ ವಿವಿಧ ಆಯಾಮಗಳಿಂದ ಪರಿಶೀಲನೆ ಮಾಡುತ್ತೇವೆ ಎಂದರು.

**ಟ್ರೋಲ್‌ನಿಂದ ನನ್ನ ಕನ್ನಡ ಪರಿಪಕ್ವ:** ಕನ್ನಡ ಭಾಷೆಯ ಬಗ್ಗೆ ಕೆಲವರು ಟ್ರೋಲ್ ಮಾಡಿದ್ದ ಕುರಿತು ಪ್ರತಿಕ್ರಿಯಿಸಿದ ಅವರು, ದೊಡ್ಡ ಸ್ಥಾನಕ್ಕೆ ನಾವು ಹೋಗಬೇಕಾದರೆ ಟ್ರೋಲ್ ಮಾಡುವವರ ಪಾತ್ರ ಇರುತ್ತದೆ. ಅದಕ್ಕೆಲ್ಲಾ ತಲೆ ಕೆಡಿಸಿಕೊಳ್ಳುವುದಿಲ್ಲ. ನಾವು ಶಾಲೆಯಲ್ಲಿ ಕನ್ನಡ, ಮನೆಯಲ್ಲಿ ಬ್ಯಾರೆ ಭಾಷೆ, ಸ್ನೇಹಿತರೊಂದಿಗೆ ತುಳು, ಕ್ರಿಶ್ಚಿಯನ್ನರೊಂದಿಗೆ ಕೊಂಕಣಿ ಮಾತನಾಡುತ್ತೇವೆ. ಉಚ್ಚರಣೆಯಲ್ಲಿ ಕೆಲವು ಸಮಸ್ಯೆಗಳು ಇರಬಹುದು. ಟ್ರೋಲ್‌ಗಳಿಂದ ನನ್ನ ಕನ್ನಡ ಇನ್ನಷ್ಟು ಪರಿಪಕ್ವವಾಗುತ್ತದೆ. ಎಂದು ಹೇಳಿದರು. ಪ್ರಸ್ ಕ್ಲಬ್ ಆಫ್ ಬೆಂಗಳೂರು ಅಧ್ಯಕ್ಷ ಶ್ರೀಧರ್, ಉಪಾಧ್ಯಕ್ಷ ಆನಂದ ಬೈದನಮನೆ, ಪ್ರಧಾನ ಕಾರ್ಯದರ್ಶಿ ಬಿ.ಇ. ಮಲ್ಲಪ್ಪ ಇದ್ದರು.

**ಆಧಾರ:** ಕನ್ನಡಪ್ರಭ, ದಿನಾಂಕ: 09.08.2023.

## 54. ನಾನು ಪ್ರತಿಪಕ್ಷಗಳ ಮಿತ್ರ: ಚರ್ಚೆಗೆ ಹೆಚ್ಚು ಅವಕಾಶ ನೀಡುತ್ತೇನೆ

ನಾನು ಪ್ರತಿಪಕ್ಷಗಳ ಮಿತ್ರ. ಹಾಗಿದ್ದರೂ ನನ್ನ ಮೇಲೆ ಪ್ರತಿಪಕ್ಷಗಳಿಗೆ ಅನುಮಾನ ಹೆಚ್ಚಿರುತ್ತದೆ. ನಾನು ಪ್ರತಿಪಕ್ಷಗಳು ಚರ್ಚೆಯಲ್ಲಿ ಪಾಲ್ಗೊಳ್ಳಲು ಹೆಚ್ಚಿನ ಅವಕಾಶ ನೀಡುತ್ತೇನೆ. ಆದರೆ, ಮಸೂದೆ ಮಂಡನೆ ಪ್ರಕ್ರಿಯೆ ಸಂದರ್ಭದಲ್ಲಿ ಸರ್ಕಾರದ ಪರ ಇರುವುದು ಅನಿವಾರ್ಯ ಎಂದು ವಿಧಾನ ಸಭೆಯ ಸ್ಪೀಕರ್ ಯು.ಟಿ.ಖಾದರ್ ಹೇಳಿದರು.

ಬೆಂಗಳೂರು ಪ್ರೆಸ್ ಕ್ಲಬ್ ಏರ್ಪಡಿಸಿದ್ದ ಮಾಧ್ಯಮ ಸಂವಾದದಲ್ಲಿ ಮಾತನಾಡಿ, 'ನನಗೆ ಸಂವಿಧಾನ ಮತ್ತು ಸದನ ನಡೆಸುವ ನೀತಿ ನಿಯಮಗಳು ಮುಖ್ಯ. ನಾನು ಅದರಂತೆ ಕಾರ್ಯನಿರ್ವಹಿಸುತ್ತೇನೆ. ಆದರೆ, ಕೆಲವು ಸಂದರ್ಭದಲ್ಲಿ ನೀತಿ ಮತ್ತು ಸಂಪ್ರದಾಯಗಳ ಮಧ್ಯೆ ತಾಕಲಾಟ ನಡೆಯುತ್ತದೆ. ಕಲಾಪದ ಸಂದರ್ಭದಲ್ಲಿ ಪ್ಲೇ ಕಾರ್ಡ್ ಪ್ರದರ್ಶಿಸುವ ಹಾಗಿಲ್ಲ. ಆದರೂ, ಹಿಂದಿನಿಂದಲೂ ಪ್ಲೇ ಕಾರ್ಡ್‌ಗಳನ್ನು ತೆಗೆದುಕೊಂಡು ಧರಣಿ ನಡೆಸುವ ಸಂಪ್ರದಾಯವಿದೆ' ಎಂದು ಹೇಳಿದರು.

**ಅಮಾನತ್ತು ತೀರ್ಮಾನ ನನ್ನದೆ:** ಚುನಾಯಿತ ಪ್ರತಿನಿಧಿಗಳು ಸಂವಿಧಾನಕ್ಕೆ ವಿರುದ್ಧವಾಗಿ ವರ್ತಿಸಿದಾಗ ಸ್ಪೀಕರ್ ಆಗಿ ನಾನು ಕೆಲವು ಕಠಿಣ ನಿರ್ಧಾರ ತೆಗೆದುಕೊಳ್ಳಬೇಕಾಗುತ್ತದೆ. ಇದು ಪಕ್ಷಪಾತಿ ಕ್ರಮವಲ್ಲ ಶಾಸಕರ ಕಿತ್ತಾಟ ಸದನ ಮುಗಿಯುವವರೆಗೆ ಮಾತ್ರ ಇರುತ್ತದೆ. ಕಳೆದ ಅಧಿವೇಶನದಲ್ಲಿ ನಡೆದ ಶಾಸಕರ ಅಮಾನತ್ತು ಪ್ರಕರಣ ಈಗ ಮುಗಿದು ಹೋಗಿರುವ ವಿಚಾರ. ಶಾಸಕರನ್ನು ಅಮಾನತ್ತು ಮಾಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಯಾವುದೇ ಸೂಚನೆ ಅಥವಾ ಸನ್ನೆಯನ್ನು ಮಾಡಿಲ್ಲ. ಇದು ನನ್ನದೇ ತೀರ್ಮಾನ ಎಂದು ಖಾದರ್ ಹೇಳಿದರು.

ಜನರೊಂದಿಗಿನ ಒಡನಾಟ ಮತ್ತು ಸ್ಪೀಕರ್ ಸ್ಥಾನದಲ್ಲಿ ಯಾವುದು ಎಂಬ ಆಯ್ಕೆ ನೀಡಿದರೆ ನಾನು ಜನರೊಂದಿಗಿನ ಒಡನಾಟವನ್ನು ಆಯ್ದು ಕೊಳ್ಳುತ್ತೇನೆ. ನಾನು ಶಿಷ್ಟಾಚಾರದೊಳಗೆ ಬಂಧಿಯಾಗದೆ ಈಗಲೂ ನನ್ನ ಕ್ಷೇತ್ರ ಉಳ್ಳಾಲದಲ್ಲಿ ಕಾರ್ಯಕ್ರಮಗಳಲ್ಲಿ ಭಾಗಿಯಾಗುತ್ತಿದ್ದೇನೆ ಎಂದು ಹೇಳಿದರು.

**ವಿಧಾನಸೌಧ ಪ್ರವೇಶಕ್ಕೆ ನೂತನ ವ್ಯವಸ್ಥೆ:** ವಿಧಾನಸೌಧದೊಳಗೆ ಪ್ರವೇಶ ವ್ಯವಸ್ಥೆಗೆ ಕಾಯಕಲ್ಪ ನೀಡಲಾಗುವುದು. ಈ ಬಗ್ಗೆ ಈಗಾಗಲೇ ವಿಧಾನಸಭೆ ಸಚಿವಾಲಯ, ಗೃಹ ಇಲಾಖೆಯ ಜೊತೆ ಸಮಾಲೋಚನೆ ನಡೆಸುತ್ತೇನೆ. ಒಬ್ಬ ವ್ಯಕ್ತಿ ಎಷ್ಟು ಗಂಟೆಗೆ ವಿಧಾನಸೌಧ ಪ್ರವೇಶಿಸಿದ, ಎಷ್ಟು ಗಂಟೆಗೆ ಹೊರ ಹೋದ ಎಂಬ ಮಾಹಿತಿ ಲಭ್ಯವಾಗುವ ರೀತಿಯಲ್ಲಿ ಹಾಗೆಯೇ ಜನಸಾಮಾನ್ಯರಿಗೆ ಹೊರೆ ಆಗದಂತೆ ನೂತನ ವ್ಯವಸ್ಥೆ ಜಾರಿಗೊಳಿಸುವುದಾಗಿ ಖಾದರ್ ಅವರು ಭರವಸೆ ನೀಡಿದರು.

ಸಂವಾದದಲ್ಲಿ ಪ್ರಸ್ ಕ್ಲಬ್ ಆಫ್ ಬೆಂಗಳೂರು ಅಧ್ಯಕ್ಷ ಶ್ರೀಧರ್, ಉಪಾಧ್ಯಕ್ಷ ಆನಂದ್ ಬೈದನಮನೆ, ಪ್ರಧಾನ ಕಾರ್ಯದರ್ಶಿ ಬಿ.ಪಿ.ಮಲ್ಲಪ್ಪ. ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

**ಟ್ರೋಲ್‌ಗೆ ಹೆದರದೇ ಕನ್ನಡ ಪರಿಪಕ್ವಗೊಳಿಸುವೆ:** ನನ್ನ ಕನ್ನಡ ಭಾಷೆಯ ಬಗ್ಗೆ ಕೆಲವರು ಸಾಮಾಜಿಕ ಜಾಲತಾಣಗಳಲ್ಲಿ ಟ್ರೋಲ್ ಮಾಡಿದ್ದರು. ನಮ್ಮದು ಪುಸ್ತಕದಲ್ಲಿರುವ ಕನ್ನಡ. ನಾನು ಶಾಲೆಯಲ್ಲಿ ಮಾತ್ರ ಕನ್ನಡ ಬಳಸುತ್ತಿದ್ದೆ ನಮ್ಮೂರಿನಲ್ಲಿ ಹಿಂದೂಗಳು ತುಳು, ಮುಸಲ್ಮಾನರು ಬ್ಯಾರಿ, ಕ್ರಿಶ್ಚಿಯನ್ನರು ಕೊಂಕಣಿ ಮಾತನಾಡುತ್ತಾರೆ. ನನ್ನ ಕನ್ನಡದ ಉಚ್ಚಾರಣೆಯಲ್ಲಿ ಸಮಸ್ಯೆ ಇರಬಹುದು. ಆದರೆ, ಟ್ರೋಲ್‌ಗಳನ್ನು ಸವಾಲನ್ನಾಗಿ ತೆಗೆದುಕೊಂಡು ನನ್ನ ಕನ್ನಡವನ್ನು ಪರಿಪಕ್ವಗೊಳಿಸುತ್ತೇನೆ ಎಂದು ಖಾದರ್ ಹೇಳಿದರು.

**ಆಧಾರ:** ಉದಯವಾಣಿ, ದಿನಾಂಕ: 09.08.2023.

## 55. ಪ್ರದರ್ಶನ ಕಲೆ ಮತ್ತು ಶಾಸ್ತ್ರೀಯ ನೃತ್ಯೋತ್ಸವ ಹಾಗೂ ರಾಷ್ಟ್ರೀಯ ಸಮ್ಮೇಳನ





ಭರತ ನೃತ್ಯ ಸಂಗೀತ ಅಕಾಡೆಮಿ, ಬೆಂಗಳೂರು ಇವರು ಕನ್ನಡ ವಿಶ್ವವಿದ್ಯಾಲಯ, ಹಂಪಿರವರ ಸಹಯೋಗದೊಂದಿಗೆ, ದಿನಾಂಕ:09–08–2023 ರಂದು ಹಂಪಿಯಲ್ಲಿ ನಡೆದ ಪ್ರದರ್ಶನ ಕಲೆ ಮತ್ತು ಶಾಸ್ತ್ರೀಯ ನೃತ್ಯೋತ್ಸವ ಹಾಗೂ ರಾಷ್ಟ್ರೀಯ ಸಮ್ಮೇಳನವನ್ನು ಮಾನ್ಯ ಸಭಾಪತಿ ಶ್ರೀ ಬಸವರಾಜ ಎಸ್ ಹೊರಟ್ಟಿ ಅವರು ಉದ್ಘಾಟಿಸಿ, ಪಾರಂಪರಿಕ ಕಲೆಗಳಾದ ಸಂಗೀತ, ಸಾಹಿತ್ಯ ಶಿಲ್ಪಕಲೆ, ಚಿತ್ರಕಲೆಗಳು ಮನುಷ್ಯನ ಒತ್ತಡವನ್ನು ದೂರು ಮಾಡಿ ನೆಮ್ಮದಿಯಿಂದ ಬಾಳುವಂತೆ ಮಾಡುವ ಶಕ್ತಿ ಇವುಗಳಲ್ಲಿದೆ ಎಂದು ಅಭಿಪ್ರಾಯ ಪಟ್ಟರು.

ಈ ಸಂದರ್ಭದಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ.ಡಿ.ವಿ ಪರಮಶಿವಮೂರ್ತಿ, ಹಂಪಿ ವಿಶ್ವವಿದ್ಯಾಲಯದ ಕುಲಸಚಿವರಾದ ಡಾ.ಸುಬ್ಬಣ್ಣ ರೈ, ನೃತ್ಯ ಸಂಗೀತ ಅಕಾಡೆಮಿ ಅಧ್ಯಕ್ಷರಾದ ಶ್ರೀಮತಿ ಶುಭಾರಾಣಿ ಬೋಳಾರ್ ಉಪಸ್ಥಿತರಿದ್ದರು.

## 56. ವಿಲೇಜ್ ಕ್ಲಿನಿಕ್ಕಿಗೆ ಸುವರ್ಣ ಮಹೋತ್ಸವ





ದಿನಾಂಕ: 13.08.23ರಂದು ಬೆಂಗಳೂರಿನ ಬಳಿ ಇರುವ ಬೇಗೂರು ಗ್ರಾಮದಲ್ಲಿ ಸ್ಥಾಪಿಸಿದ ಡಾ.ರಮಣ ರಾವ್ ಅವರ ನೇತೃತ್ವದ ವಿಲೇಜ್ ಕ್ಲಿನಿಕ್ಕಿನ ಗೋಲ್ಡನ್ ಜೂಬ್ಲಿ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದ ಮಾನ್ಯ ಸಭಾಪತಿಗಳಾದ ಶ್ರೀ ಬಸವರಾಜ ಎಸ್. ಹೊರಟ್ಟಿ ಅವರು ಕಳೆದ 50 ವರ್ಷಗಳಿಂದ ಪ್ರತಿ ರವಿವಾರ ಡಾ.ರಮಣರಾವ್ ಅವರು ಉಚಿತ ವೈದ್ಯಕೀಯ ಸೇವೆಯನ್ನು ನೀಡುವ ಮೂಲಕ ಸಾವಿರಾರು ಜನರಿಗೆ ವಿಶೇಷವಾಗಿ ಬಡ ಮಧ್ಯಮ ವರ್ಗದ ಜನರಿಗೆ ಮರುಜನ್ಮವನ್ನು ನೀಡಿದ್ದಾರೆ. ಇಂತಹ ಮಹನೀಯರ ಸೇವೆ ನಾಡಿನ ಜನರಿಗೆ ಇನ್ನಷ್ಟು ಸಿಗಲಿ."ವೈದ್ಯೋ ನಾರಾಯಣ ಹರಿ" ಎಂಬ ಮಾತು ಇವತ್ತು ನನಗೆ ನಿಜವಾಗಿಯೂ ಸತ್ಯ ಎನಿಸಿತು ಎಂದು ಹೃದಯ ತುಂಬಿ ಮನದಾಳದ ಮಾತುಗಳನ್ನು ಹೇಳಿದರು.

## 57. ಸುತ್ತೂರು ಮಠಕ್ಕೆ ಭೇಟಿ





ದಿನಾಂಕ: 14.08.2023ರಂದು ಮೈಸೂರಿನ ಸುತ್ತೂರು ಶ್ರೀಗಳು ಸಭಾಪತಿ ಶ್ರೀ ಬಸವರಾಜ್ ಹೊರಟ್ಟಿ ಅವರನ್ನು ಗೌರವಿಸಿ ಆಶೀರ್ವದಿಸಿದರು. ಕರ್ನಾಟಕ ವಿಧಾನ ಪರಿಷತ್ತಿಗೆ ಸತತ ಎಂಟು ಬಾರಿ ಆಯ್ಕೆಯಾಗುವ ಮೂಲಕ ಐತಿಹಾಸಿಕ ದಾಖಲೆ ನಿರ್ಮಿಸಿ ಪರಿಷತ್ತಿನಲ್ಲಿ ಸತತ 43 ವರ್ಷಗಳ ಕಾಲ ಅವಿರತ ಸಾರ್ಥಕ ಸೇವೆ ಸಲ್ಲಿಸಿದ ಮತ್ತು ಹಲವು ಬಾರಿ ಸಚಿವರಾಗಿ ಮೂರನೇ ಬಾರಿ ಸಭಾಪತಿಯಾಗಿ ಸೇವೆ ಸಲ್ಲಿಸುತ್ತಿರುವ ಶ್ರೀ ಬಸವರಾಜ್ ಹೊರಟ್ಟಿ ಅವರನ್ನು ತಮಿಳುನಾಡಿನ ನೀಲಗಿರಿ ಜಿಲ್ಲೆಯ ಸುಪ್ರಸಿದ್ಧ ಪ್ರವಾಸಿ ತಾಣವಾದ "ಊಟಿ"ಯಲ್ಲಿ ಶ್ರೀ ಬಸವರಾಜ್ ಹೊರಟ್ಟಿ ಅಭಿಮಾನಿ ಬಳಗದವರು ಹಾಗೂ

ಕೊತಗಿರಿ ಲಿಂಗಾಯತ ಸಂಘದವರು ಏರ್ಪಡಿಸಿದ ಅಭಿನಂದನಾ ಸಮಾರಂಭದ ಕಾರ್ಯಕ್ರಮದಲ್ಲಿ ಭಾಗವಹಿಸಲು ಆಗಮಿಸಿದ್ದ ಹೊರಟ್ಟಿ ಅವರನ್ನು ಮೈಸೂರಿನ ಸುತ್ತೂರು ಮಹಾಸಂಸ್ಥಾನ ಮಠದ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿ ಕೇಂದ್ರ ಮಹಾಸ್ವಾಮಿಗಳು ಪ್ರೀತಿಯಿಂದ ಬರಮಾಡಿಕೊಂಡು ಗೌರವಿಸಿ ಆಶೀರ್ವದಿಸಿದರು.

## 58. ಸ್ಪೀಕರ್– ಕಾನ್ಫರೆನ್ಸ್







ದಿನಾಂಕ: 14.08.2023ರಂದು ಸನ್ಮಾನ್ಯ ಸಭಾಧ್ಯಕ್ಷರು ಯುನೈಟೆಡ್ ಸ್ಟೇಟ್ಸ್ ಆಫ್ ಅಮೆರಿಕಾದ ಇಂಡಿಯನಾಪೊಲಿಸ್‌ನಲ್ಲಿ ನಡೆದ ಸ್ಪೀಕರ್ ಕಾನ್ಫರೆನ್ಸ್‌ನಲ್ಲಿ ಭಾಗವಹಿಸಿದ ಸಂದರ್ಭ.

## 59. ರಾಜ್ಯ ಶಾಸಕಾಂಗಗಳ ರಾಷ್ಟ್ರೀಯ ಸಮ್ಮೇಳನ ಶೃಂಗಸಭೆ



ದಿನಾಂಕ: 15.08.2023ರಂದು ಸನ್ಮಾನ್ಯ ಸಭಾಧ್ಯಕ್ಷರನ್ನು ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾದ ಇಂಡಿಯಾನಾಪೊಲೀಸ್‌ನಲ್ಲಿ ನಡೆದ ರಾಜ್ಯ ಶಾಸಕಾಂಗಗಳ ರಾಷ್ಟ್ರೀಯ ಸಮ್ಮೇಳನ

ಶೃಂಗಸಭೆ 2023 ರಲ್ಲಿ ಭಾಗವಹಿಸಿದ ಸಂದರ್ಭದಲ್ಲಿ ಶ್ರೀ ಸತೀಶ್ ನಂಜಪ್ಪ, ಅಧ್ಯಕ್ಷರು, ಇಂಡಿಯಾ ಅಸೋಸಿಯೇಷನ್, USA, ಇವರು ಆತ್ಮೀಯವಾಗಿ ಸ್ವಾಗತಿಸಿದ ಸಂದರ್ಭ.

## 60. "77ನೇ ಸ್ವಾತಂತ್ರ್ಯೋತ್ಸವ"





ದಿನಾಂಕ:15.08.2023ರಂದು ವಿಧಾನಸೌಧದ ಪೂರ್ವ ಭಾಗದ ಭವ್ಯ ಮೆಟ್ಟಿಲುಗಳ ಮುಂಭಾಗದಲ್ಲಿ 77ನೇ ಸ್ವಾತಂತ್ರ್ಯೋತ್ಸವದ ಧ್ವಜಾರೋಹಣವನ್ನು ಮಾನ್ಯ ಸಭಾಪತಿ ಶ್ರೀ ಬಸವರಾಜ ಎಸ್.ಹೊರಟ್ಟಿ ಅವರು ನೆರವೇರಿಸಿ, ಭಾರತಕ್ಕೆ ಸ್ವಾತಂತ್ರ್ಯ ಸುಮ್ಮನೆ ಬಂದಿಲ್ಲ ಲಕ್ಷಾಂತರ ಭಾರತೀಯರ ಅಮೂಲ್ಯ ಜೀವ ಬಲಿದಾನದ ಫಲವಾಗಿದೆ. ಸ್ವಾತಂತ್ರ್ಯ ಯೋಧರ ಆತ್ಮಕ್ಕೆ ಶಾಂತಿ ಕೋರುವುದರ ಜೊತೆಗೆ ಅವರ ಕುಟುಂಬಕ್ಕೆ ನಾವು ಸದಾ ಚಿರಋಣಿಯಾಗಿ ಇರಬೇಕು. ಸ್ವಾತಂತ್ರ್ಯ ಎನ್ನುವುದು ಬಹುದೊಡ್ಡ ಆಸ್ತಿ. ಅದು ಒಮ್ಮೆ ಕಳೆಯಿತೆಂದರೆ ಮರಳಿ ಪಡೆಯಲು ಅದರ ಹತ್ತರಷ್ಟು ಬೆಲೆ ಕಟ್ಟಬೇಕಾಗುತ್ತದೆ. ಅದರ ಮೌಲ್ಯ ಅರಿತು ಹಿರಿಯರು ತಂದುಕೊಟ್ಟ ಸ್ವಾತಂತ್ರ್ಯವನ್ನು ಕಾಪಾಡಿಕೊಂಡು ದೇಶಾಭಿಮಾನವನ್ನು ಹೆಚ್ಚಿಸಿಕೊಂಡು ಭವ್ಯ ಭಾರತ ಕಟ್ಟುವತ್ತ ಸಂಕಲ್ಪ ಮಾಡೋಣ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ವಿಧಾನಸಭೆ ಉಪಸಭಾಧ್ಯಕ್ಷರಾದ ಶ್ರೀ ರುದ್ರಪ್ಪ ಲಮಾಣಿ, ವಿಧಾನ ಪರಿಷತ್ತಿನ ಕಾರ್ಯದರ್ಶಿ ಶ್ರೀಮತಿ ಕೆ.ಆರ್ ಮಹಾಲಕ್ಷ್ಮಿ, ವಿಧಾನಸಭಾ ಕಾರ್ಯದರ್ಶಿ ಶ್ರೀಮತಿ ಎಂ.ಕೆ.ವಿಶಾಲಾಕ್ಷಿ, ಸಭಾಪತಿಗಳ ಆಪ್ತ ಕಾರ್ಯದರ್ಶಿ ಶ್ರೀಮತಿ ಕೆ.ಡಿ. ಶೈಲಾ, ವಿಶೇಷ ಕರ್ತವ್ಯಾಧಿಕಾರಿ ಡಾ.ಮಹೇಶ ವಾಳ್ವೇಕರ್ ಸೇರಿದಂತೆ ಗಣ್ಯರು, ಹಿರಿಯ ಅಧಿಕಾರಿ, ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ಧ್ವಜಾರೋಹಣದ ನಂತರ ಮಾನ್ಯ ಸಭಾಪತಿ ಅವರು ತಮ್ಮ ಆಪ್ತ ಶಾಖೆ ಸಿಬ್ಬಂದಿಗಳ ಜೊತೆ.

## 61. ರಾಷ್ಟ್ರೀಯ ಸಭಾಪತಿಗಳ ಸಮ್ಮೇಳನ











ರಾಜಸ್ಥಾನದ ಉದಯಪುರದಲ್ಲಿ ಆಗಸ್ಟ್ 21ರಿಂದ 23 ವರೆಗೆ ನಡೆಯುವ ರಾಷ್ಟ್ರೀಯ ಸಭಾಪತಿಗಳ ಸಮ್ಮೇಳನದಲ್ಲಿ ಭಾಗವಹಿಸಲು ಕರ್ನಾಟಕ ರಾಜ್ಯದ ಪ್ರತಿನಿಧಿಗಳಾಗಿ ಕರ್ನಾಟಕ ವಿಧಾನಪರಿಷತ್ತಿನ ಸಭಾಪತಿಗಳಾದ ಬಸವರಾಜ್ ಹೊರಟ್ಟಿ ಅವರು ವಿಧಾನಸಭೆ ಅಧ್ಯಕ್ಷರಾದ ಯು.ಟಿ.ಖಾದರ್ ಅವರು ರಾಜ್ಯವಿಧಾನ ಪರಿಷತ್ತಿನ ಉಪಸಭಾಪತಿಗಳಾದ ಎಂ.ಕೆ.ಪ್ರಾಣೇಶ್ ಅವರು ಭಾಗವಹಿಸಲಿದ್ದಾರೆ.

ಈ ಸಂದರ್ಭ ರಾಜಸ್ಥಾನದ ಉದಯಪುರ ತಲುಪಿದ ಸಂದರ್ಭದಲ್ಲಿ ಕರ್ನಾಟಕ ವಿಧಾನ ಪರಿಷತ್ತಿನ ಗೌರವಾನ್ವಿತ ಸಭಾಪತಿಗಳಾದ ಬಸವರಾಜ್ ಹೊರಟ್ಟಿ ಅವರು ರಾಜಸ್ಥಾನ ಸರ್ಕಾರದ ಪರವಾಗಿ ಗೌರವವಂದನೆ ಸ್ವೀಕರಿಸಿದರು.

ರಾಜಸ್ಥಾನ ರಾಜ್ಯದ ಉದಯಪುರದಲ್ಲಿ ನಡೆಯುತ್ತಿರುವ ಆಗಸ್ಟ್ 21ರಿಂದ 23 ವರೆಗೆ 3 ದಿನಗಳ ಕಾಮನ್‌ವೆಲ್ತ್ ಸಂಸದೀಯ ಸಂಘದ ಭಾರತ ವಲಯದ ಸಮ್ಮೇಳನದಲ್ಲಿ ಕರ್ನಾಟಕ ರಾಜ್ಯದ ಪ್ರತಿನಿಧಿಗಳಾಗಿ ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿಗಳಾದ ಬಸವರಾಜ್ ಹೊರಟ್ಟಿ, ವಿಧಾನಸಭೆ ಅಧ್ಯಕ್ಷರಾದ ಶ್ರೀ ಯು.ಟಿ. ಖಾದರ್, ರಾಜ್ಯ ವಿಧಾನ ಪರಿಷತ್ತಿನ ಉಪ ಸಭಾಪತಿಗಳಾದ ಎಂ.ಕೆ ಪ್ರಾಣೇಶ್ ಅಧಿಕಾರಿ ವೃಂದದ ಪರವಾಗಿ ಪರಿಷತ್ತಿನ ಕಾರ್ಯದರ್ಶಿ ಕೆ.ಆರ್.ಮಹಾಲಕ್ಷ್ಮೀ, ಸಭಾಪತಿಗಳ ಆಪ್ತ ಕಾರ್ಯದರ್ಶಿ ಶೈಲಾ ಕೆ.ಡಿ. ಸೇರಿದಂತೆ ಮುಂತಾದವರು ಭಾಗವಹಿಸಿದ್ದರು. ಈ ಸಮಾವೇಶದಲ್ಲಿ ರಾಜ್ಯದ ಸಭಾಧ್ಯಕ್ಷರು, ಉಪಸಭಾಧ್ಯಕ್ಷರು ಸಭಾಪತಿಗಳು, ಉಪಸಭಾಪತಿಗಳು ಆಯಾ ರಾಜ್ಯದ ಪ್ರಮುಖ ಅಧಿಕಾರಿ ವೃಂದದವರು ಭಾಗವಹಿಸಿದ್ದಾರೆ. ದೇಶದ ಪ್ರಗತಿ ಹಾಗೂ ಅಭಿವೃದ್ಧಿಯ ಮುನ್ನೋಟವು ಪ್ರಜಾಪ್ರಭುತ್ವದ ಪರಿಣಾಮಕಾರಿ ಚಟುವಟಿಕೆಗಳ ಮೇಲೆ ಅವಲಂಬಿತವಾಗಿರುವ ವಿಷಯ ಹಾಗೂ ಜನಪ್ರತಿನಿಧಿಗಳ ಹೊಣೆಗಾರಿಕೆ ಕುರಿತು ಚಿಂತನ ಮಂಥನ ನಡೆಯಲಿದೆ.

ಇತ್ತೀಚೆಗೆ ಮುಂಬೈಯಲ್ಲಿ ನಡೆದ ನ್ಯಾಷನಲ್ ಲೆಜಿಸ್ಲೇಟರ್ ಕಾನ್ಫರೆನ್ಸ್ ಭಾರತ್ (ಇಂಡಿಯಾ) ಇದರ ಪ್ರಗತಿ ಪುಸ್ತಕವನ್ನು ರಾಜಸ್ಥಾನದ ಉದಯ್‌ಪುರದಲ್ಲಿ ನಡೆದ ರಾಷ್ಟ್ರಮಟ್ಟದ ಒಂಬತ್ತನೇ ಕಾಮನ್‌ವೆಲ್ತ್ ಸಂಸ್ಥೆಯ ಸಂಘದ ಭಾರತ್ ವಲಯದ ಸಮ್ಮೇಳನದಲ್ಲಿ ಮಾನ್ಯ ಸಭಾಪತಿಯವರು ಬಿಡುಗಡೆ ಮಾಡಿದರು.

ರಾಜಸ್ಥಾನ ರಾಜ್ಯದ ಉದಯಪುರದಲ್ಲಿ ಮೂರು ದಿನಗಳ ಕಾಲ ನಡೆಯುತ್ತಿರುವ 9ನೇ ಕಾಮನ್ವೆಲ್ತ್ ಸಂಸದೀಯ ಸಂಘದ ಭಾರತ ವಲಯದ ಸಮ್ಮೇಳನದಲ್ಲಿ ಮಾನ್ಯ ಸಭಾಪತಿ ಬಸವರಾಜ್ ಹೊರಟ್ಟಿ ಅವರು "ಪ್ರಜಾಪ್ರಭುತ್ವ ಸಂಸ್ಥೆಗಳ ಮೂಲಕ ರಾಷ್ಟ್ರವನ್ನು ಸಧೃಡಗೊಳಿಸುವಲ್ಲಿ ಜನಪ್ರತಿನಿಧಿಗಳ ಪಾತ್ರ" ಎಂಬ ವಿಷಯದ ಕುರಿತು ವಿಚಾರ ಮಂಡಿಸಿದರು ಹಾಗೂ ದೇಶದ ಪ್ರಗತಿ ಮುನ್ನೋಟವು

ಪ್ರಜಾಪ್ರಭುತ್ವ ಸಂಸ್ಥೆಗಳ ಪರಿಣಾಮಕಾರಿ ಕಾರ್ಯಚಟುವಟಿಕೆಗಳ ಮೇಲೆ ಅವಲಂಬಿತವಾಗಿದೆ. ಜನಪ್ರತಿನಿಧಿಗಳ ಕ್ರಿಯಾಶೀಲತೆ ಮತ್ತು ಅಭಿವೃದ್ಧಿಪರ ಚಿಂತನೆಯಿಂದ ರಾಷ್ಟ್ರದ ಭವಿಷ್ಯ ಉಜ್ವಲವಾಗಬಲ್ಲದು ಎಂದು ಅಭಿಮತ ವ್ಯಕ್ತಪಡಿಸಿದರು.

ಕಾಮನ್ವೆಲ್ತ್ ಪಾರ್ಲಿಮೆಂಟ್ ಅಸೋಸಿಯೇಶನ್ ಅಧ್ಯಕ್ಷರಾದ ಬ್ರಿಟನಿನ ಇಯಾನ್ ಲಿಡ್ಡೆಲ್ ಗ್ರಾಂಗರ್ ಅವರೊಂದಿಗೆ ಮಾನ್ಯ ಸಭಾಪತಿಯವರು ಹಾಗೂ ವಿಧಾನಸಭಾ ಅಧ್ಯಕ್ಷರಾದ ಶ್ರೀ ಯು.ಟಿ ಖಾದರ್ ಅವರು ಚರ್ಚಿಸುವ ಸಂದರ್ಭದಲ್ಲಿ 10ನೇ ಕಾಮನ್ವೆಲ್ತ್ ಪಾರ್ಲಿಮೆಂಟ್ ಅಸೋಸಿಯೇಶನ್ ಸಮ್ಮೇಳನವನ್ನು ಕರ್ನಾಟಕದಲ್ಲಿ ಆಯೋಜಿಸಲು ಎಲ್ಲ ರೀತಿಯ ಸಹಾಯ ಸಹಕಾರ ನೀಡುವುದಾಗಿ ಹೇಳಿದರು.

## 62. ರಾಜ್ಯ ಶಾಸಕಾಂಗಗಳ ರಾಷ್ಟ್ರೀಯ ಸಮ್ಮೇಳನದ (NCSL) ಕಾರ್ಯಾಗಾರ



ದಿನಾಂಕ: 16.08.2023ರಂದು ಸನ್ಮಾನ್ಯ ಸಭಾಧ್ಯಕ್ಷರು ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಇಂಡಿಯಾನಾಪೊಲೀಸ್‌ನಲ್ಲಿ ನಡೆದ ರಾಜ್ಯ ಶಾಸಕಾಂಗಗಳ ರಾಷ್ಟ್ರೀಯ ಸಮ್ಮೇಳನದ (NCSL) ಕಾರ್ಯಾಗಾರದಲ್ಲಿ ಭಾಗವಹಿಸುತ್ತಿರುವ ಸಂದರ್ಭ.

## 63. ವಿದ್ಯಾರ್ಥಿಗಳ ಪದವಿ ಪ್ರಧಾನ ಸಮಾರಂಭ






ದಿನಾಂಕ: 19.08.2023ರಂದು ಪಿ ಎ ಎಜುಕೇಷನಲ್ ಟ್ರಸ್ಟ್ ಕೊಣಾಜೆ ನಡುಪದವು ಇಲ್ಲಿನ ಕಾಲೇಜು ವಿದ್ಯಾರ್ಥಿಗಳ ಪದವಿ ಪ್ರಧಾನ ಹಾಗೂ ಸನ್ಮಾನ ಕಾರ್ಯಕ್ರಮದಲ್ಲಿ ಭಾಗವಹಿಸಿದ ಸಂದರ್ಭ.

## 64. ಮೇಲ್ಮನೆ ಪ್ರವೇಶಕ್ಕೆ ಅಂಕಿತ

ಸಾಕಷ್ಟು ವಿರೋಧಗಳ ನಡುವೆಯೇ ವಿಧಾನ ಪರಿಷತ್ತಿನ ನಾಮನಿರ್ದೇಶನಕ್ಕೆ ಸರ್ಕಾರ ಶಿಫಾರಸ್ಸು ಮಾಡಿದ್ದ ಮೂವರ ಹೆಸರಿಗೆ ರಾಜ್ಯಪಾಲ ಥಾವರ್ ಚಂದ್ ಗೆಹಲೋತ್ ಅಂಕಿತ ಹಾಕಿದ್ದಾರೆ. ಇದರೊಂದಿಗೆ ಮಾಜಿ ಸಚಿವರಾದ ಎಂ.ಆರ್.ಸೀತಾರಾಂ, ಉಮಾಶ್ರೀ ಹಾಗೂ ನಿವೃತ್ತ ಇ.ಡಿ.ಅಧಿಕಾರಿ ಸುಧಾಮ್ ದಾಸ್ ಮೇಲ್ಮನೆ ಪ್ರವೇಶಿಸಲಿದ್ದಾರೆ.

ಮೇಲ್ಮನೆಯಲ್ಲಿ ತೆರವಾದ ಮೂರು ಸ್ಥಾನಗಳಿಗೆ ಶಿಕ್ಷಣ ಕ್ಷೇತ್ರದಿಂದ ಹಿಂದುಳಿದ ವರ್ಗದ ಎಂ.ಆರ್.ಸೀತಾರಾಂ, ಸಮಾಜಸೇವಾ ಕ್ಷೇತ್ರದಿಂದ ಸುಧಾಮ್ ದಾಸ್(ಪರಿಶಿಷ್ಟ ಜಾತಿ ಎಡಗೈ) ಹಾಗೂ ಕಲಾ ಕ್ಷೇತ್ರದಿಂದ ನಟಿ ಉಮಾಶ್ರೀ ಅವರನ್ನು ಸರ್ಕಾರ ಶಿಫಾರಸ್ಸು ಮಾಡಿತ್ತು.

ಮೋಹನ್ ಕುಮಾರ್ ಕೊಂಡಜ್ಜಿ, ಪಿ.ಆರ್.ರಮೇಶ್ ಮತ್ತು ಸಿ.ಎಂ.ಲಿಂಗಪ್ಪರಿಂದ ತೆರವಾಗಿದ್ದ ಪರಿಷತ್ತಿನ ಸ್ಥಾನಗಳಿಗೆ ಕಾಂಗಿಸ್‌ನಲ್ಲಿ ತೀವ್ರ ಪೈಪೋಟಿ ಇತ್ತು. ಆಯ್ಕೆಯಲ್ಲಿ ಸಾಮಾಜಿಕ ನ್ಯಾಯ ಪಾಲಿಸಿಲ್ಲ. ವಿಶೇಷವಾಗಿ ಸುಧಾಮದಾಸ್ ಬದಲಿಗೆ ದಲಿತ ಸಮುದಾಯಕ್ಕೆ ಸೇರಿದ ಹಿರಿಯ ನಾಯಕರಿಗೆ ಅವಕಾಶ ನಿಡಬೇಕಿತ್ತು ಎಂದು ನಾಲ್ವರು ಸಚಿವರು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ದೂರು ಸಲ್ಲಿಸಿದ್ದರು.

ಮೂರು ದಶಕಗಳ ಕಾಲ ಪಕ್ಷಕ್ಕಾಗಿ ಕೆಲಸ ಮಾಡಿದ್ದ ದಲಿತ ನಾಯಕರಿಗೆ ಅವಕಾಶ ನೀಡದೆ, ಮೂರು ತಿಂಗಳ ಹಿಂದಷ್ಟೇ ಸರ್ಕಾರಿ ಅಧಿಕಾರಿಯಾಗಿದ್ದವರಿಗೆ ಅವಕಾಶ ನೀಡಿರುವುದು ಸರಿ ಅಲ್ಲ ಎಂದು ಸಚಿವರಾದ ಕೆ.ಎಚ್.ಮುನಿಯಪ್ಪ, ಡಾ.ಜಿ.ಪರಮೇಶ್ವರ್, ಡಾ.ಎಚ್.ಸಿ.ಮಹದೇವಪ್ಪ, ಆರ್.ಬಿ.ತಿಮ್ಮಾಪುರ ಪತ್ರ ಬರೆದಿದ್ದರು.

ಮೂರರ ಪೈಕಿ ಒಂದು ಸ್ಥಾನಕ್ಕೆ ಅಲ್ಪಸಂಖ್ಯಾತ ಅಭ್ಯರ್ಥಿ ಹೆಸರನ್ನು ಶಿಫಾರಸ್ಸು ಮಾಡುವಂತೆ ಒತ್ತಾಯ ಕೇಳಿ ಬಂದಿತ್ತು. ವಿಶೇಷವಾಗಿ ಮನ್ಸೂರ್ ಖಾನ್ ಹೆಸರು ಬಲವಾಗಿತ್ತು. ಈ ವಿಚಾರದಲ್ಲಿ ಅಲ್ಪಸಂಖ್ಯಾತರನ್ನೂ ಕಡೆಗಣಿಸಲಾಗಿದೆ ಎಂಬ ಆರೋಪ ಕೇಳಿ ಬಂದಿತ್ತು.

**ಆಧಾರ:** ಉದಯವಾಣಿ, ದಿನಾಂಕ: 20.08.2023.

## 65. ಕರ್ನಾಟಕದಲ್ಲಿ ಕಾಮನ್ವೆಲ್ತ್ ಸಂಸದೀಯ ಅಸೋಸಿಯೇಶನ್ ಸಮ್ಮೇಳನಕ್ಕೆ ಮನವಿ

ಕಾಮನ್ವೆಲ್ತ್ ಪಾರ್ಲಿಮೆಂಟ್ ಅಸೋಸಿಯೇಶನ್ 10ನೇ ಸಮ್ಮೇಳನವನ್ನು ಕರ್ನಾಟಕದಲ್ಲಿ ನಡೆಸುವಂತೆ ವಿಧಾನಪರಿಷತ್ ಸಭಾಪತಿ ಬಸವರಾಜ್ ಹೊರಟ್ಟಿ ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಅವರು ಕಾಮನ್ವೆಲ್ತ್ ಪಾರ್ಲಿಮೆಂಟ್ ಅಸೋಸಿಯೇಶನ್ ಅಧ್ಯಕ್ಷ ಬ್ರಿಟನ್ನ ಇಯಾನ್ ಲಿಡ್ಡೆಲ್ ಗ್ರಾಂಗರ್ ಅವರಿಗೆ ಮನವಿ ಸಲ್ಲಿಸಿದರು.

ರಾಜಸ್ಥಾನದ ಉದಯಪುರದಲ್ಲಿ ನಡೆಯುತ್ತಿರುವ 9ನೇ ಕಾಮನ್‌ವೆಲ್ತ್ ಪಾರ್ಲಿಮೆಂಟ್ ಅಸೋಸಿಯೇಶನ್ನಲ್ಲಿ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹಾಗೂ ವಿಧಾನ ಸಭಾಧ್ಯಕ್ಷ ಯು.ಟಿ.ಖಾದರ್ ಭಾಗಿಯಾಗಿದ್ದು, ಈ ಸಂದರ್ಭದಲ್ಲಿ ಇಯಾನ್ ಲಿಡ್ಡೆಲ್ ಗ್ರಾಂಗರ್ ಅವರನ್ನು ಭೇಟಿ ಮಾಡಿದ ಉಭಯ ಪೀಠಾಧ್ಯಕ್ಷರು ಕರ್ನಾಟಕ ವಿಧಾನ ಪರಿಷತ್ ಹಾಗೂ ವಿಧಾನಸಭೆಯ ಇತಿಹಾಸ ವಿವರಿಸಿದರು. ಕರ್ನಾಟಕ ವಿಧಾನ ಪರಿಷತ್‌ಗೆ 104 ವರ್ಷಗಳ ಇತಿಹಾಸವಿದೆ. ಕರ್ನಾಟಕದಲ್ಲಿ 10ನೇ ಕಾಮನ್ವೆಲ್ತ್ ಪಾರ್ಲಿಮೆಂಟ್ ಅಸೋಸಿಯೇಶನ್ ಸಮಾವೇಶಕ್ಕೆ ಮುಂದಾದರೆ ಎಲ್ಲ ರೀತಿಯ ಸಹಕಾರ ನೀಡಲಾಗುವುದು ಎಂದರು.

ರಾಷ್ಟ್ರೀಯ ಕಾಮನ್ವೆಲ್ತ್ ಅಸೋಸಿಯೇಶನ್ ಅಧ್ಯಕ್ಷ ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರ ಉಪಸ್ಥಿತಿಯಲ್ಲಿ ನಡೆಯುವ ಮಂಡಳಿ ಸಭೆಯಲ್ಲಿ ಚರ್ಚಿಸಿ ಈ ಬಗ್ಗೆ ನಿರ್ಧಾರ ಕೈಗೊಳ್ಳಲಾಗುವುದು ಎಂದು ಇಲಿಯಾನ ಲಿಡ್ಡೆಲ್ ಗ್ರಾಂಗರ್ ಭರವಸೆ ನೀಡಿದ್ದಾರೆ. ವಿಧಾನ ಪರಿಷತ್ ಉಪಸಭಾಪತಿ

ಎಂ.ಕೆ ಪ್ರಾಣೇಶ್, ಪರಿಷತ್ ಕಾರ್ಯದರ್ಶಿ ಕೆ.ಆರ್.ಮಹಾಲಕ್ಷ್ಮೀ, ಸಭಾಪತಿಗಳ ಆಪ್ತ ಕಾರ್ಯದರ್ಶಿ ಕೆ.ಡಿ.ಶೈಲಾ ಇದ್ದರು ಎಂದು ವಿಧಾನ ಪರಿಷತ್ ಸಭಾಪತಿಯವರು ಕಚೇರಿ ಪ್ರಕಟಣೆ ತಿಳಿಸಿದೆ.

**ಆಧಾರ:** ವಿಜಯವಾಣಿ, ದಿನಾಂಕ: 22.08.2023.

## 66. ಜನಪ್ರತಿನಿಧಿಗಳಿಗೆ ಅಭಿವೃದ್ಧಿಪರ ಚಿಂತನೆ ಅವಶ್ಯ

ದೇಶದ ಪ್ರಗತಿ ಮುನ್ನೋಟವು ಪ್ರಜಾಪ್ರಭುತ್ವ ಸಂಸ್ಥೆಗಳ ಪರಿಣಾಮಕಾರಿ ಕಾರ್ಯಚಟುವಟಿಕೆಗಳ ಮೇಲೆ ಅವಲಂಬಿತವಾಗಿದೆ. ಜನಪ್ರತಿನಿಧಿಗಳ ಕ್ರಿಯಾಶೀಲತೆ ಮತ್ತು ಅಭಿವೃದ್ಧಿ ಪರ ಚಿಂತನೆಯಿಂದ ರಾಷ್ಟ್ರದ ಭವಿಷ್ಯ ಉಜ್ವಲವಾಗಬಲ್ಲದು ಎಂದು ಕರ್ನಾಟಕ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅಭಿಮತ ವ್ಯಕ್ತಪಡಿಸಿದರು.

ರಾಜಸ್ಥಾನ ರಾಜ್ಯದ ಉದಯಪುರದಲ್ಲಿ ನಡೆಯುತ್ತಿರುವ ಮೂರು ದಿನಗಳ 9ನೇ ಕಾಮನ್ವೆಲ್ತ್ ಸಂಸದೀಯ ಸಂಘದ ಭಾರತ ವಲಯದ ಸಮ್ಮೇಳನದಲ್ಲಿ 'ಪ್ರಜಾಪ್ರಭುತ್ವ ಸಂಸ್ಥೆಗಳ ಮೂಲಕ ರಾಷ್ಟ್ರವನ್ನು ಸದೃಢಗೊಳಿಸುವಲ್ಲಿ ಜನಪ್ರತಿನಿಧಿಗಳ ಪಾತ್ರ' ಎಂಬ ವಿಷಯದ ಕುರಿತು ವಿಷಯ ಮಂಡನೆ ಮಾಡಿದರು.

140 ಕೋಟಿ ಜನಸಂಖ್ಯೆ ಹೊಂದಿದ ಈ ದೇಶದಲ್ಲಿ ವಿವಿಧ ಭಾಷೆ, ಹಲವು ಆಚಾರ ವಿಚಾರಗಳನ್ನು ಹಾಗೂ ಸಂಪ್ರದಾಯಗಳನ್ನು ಹೊಂದಿದ ಜನರಿದ್ದೇವೆ. ನಮ್ಮ ದೇಶದಲ್ಲಿ ಪ್ರಜಾಪ್ರಭುತ್ವ ಅಷ್ಟೇ ಗಟ್ಟಿಯಾಗಿ ಕಳೆದ 75 ವರ್ಷಗಳಿಂದ ಜನರ ಹಿತಕ್ಕಾಗಿ ಕೆಲಸ ಮಾಡುತ್ತ ಬಂದಿರುವುದು ಹೆಮ್ಮೆಯ ಸಂಗತಿಯಾಗಿದೆ ಎಂದರು. ಜಗತ್ತಿನಲ್ಲಿಯೇ ಅತ್ಯಂತ ದೊಡ್ಡ ಪ್ರಜಾಪ್ರಭುತ್ವ ಹೊಂದಿದ ದೇಶ ನಮ್ಮದು. ನನ್ನ 43 ವರ್ಷದ ಶಾಸನ ಸಭೆಯ ಅನುಭವಗಳನ್ನು ಇಂತಹ ಸಮ್ಮೇಳನಗಳಲ್ಲಿ ಹಂಚಿಕೊಳ್ಳಲು ಖುಷಿ ಸಹ ಆಗುತ್ತದೆ. ದೇಶದ ಮೂಲೆ ಮೂಲೆಯಿಂದ ಬಂದ ಜನಪ್ರತಿನಿಧಿಗಳೊಂದಿಗೆ ರಾಷ್ಟ್ರದ ಹಿತಕ್ಕಾಗಿ ಹತ್ತಾರು ಮಹತ್ವದ ಸಂಗತಿಗಳನ್ನು ಚಿಂತನೆ ಮಂಥನ ಗೈಯ್ಯುವ ಈ ಸಮ್ಮೇಳನ ಅತ್ಯಂತ ಮಹತ್ವದ್ದಾಗಿದೆ ಎಂದರು.

ಲೋಕಸಭಾಧ್ಯಕ್ಷ ಓಂ ಬಿರ್ಲಾ, ರಾಜಸ್ಥಾನದ ಮುಖ್ಯಮಂತ್ರಿ ಅಶೋಕ್ ಗೆಹ್ಲೋಟ್, ರಾಜ್ಯಸಭೆಯ ಉಪಸಭಾಪತಿ ಹರಿವಂಶ, ರಾಸ್ಥಾನದ ವಿಧಾನಸಭಾಧ್ಯಕ್ಷ ಸಿ.ಪಿ.ಜೋಶಿ, ಕರ್ನಾಟಕದ ಪ್ರತಿನಿಧಿಗಳಾದ ವಿಧಾನಸಭಾಧ್ಯಕ್ಷರಾದ ಯು.ಟಿ.ಖಾದರ್, ವಿಧಾನಪರಿಷತ್ತಿನ ಉಪಸಭಾಪತಿಗಳಾದ ಎಂ.ಕೆ.ಪ್ರಾಣೇಶ್, ಅಧಿಕಾರಿ ವೃಂದದ ಪರವಾಗಿ ಭಾಗವಹಿಸಿದ ಪರಿಷತ್ತಿನ ಕಾರ್ಯದರ್ಶಿ ಕೆ.ಆರ್.ಮಹಾಲಕ್ಷ್ಮೀ, ಸಭಾಪತಿಗಳ ಆಪ್ತಕಾರ್ಯದರ್ಶಿ ಶೈಲಾ ಕೆ.ಡಿ. ಸೇರಿದಂತೆ ರಾಜಸ್ಥಾನದ ಶಾಸಕರು, ಸಂಸದರು ಸಮಾರಂಭದಲ್ಲಿ ಭಗವಹಿಸಿದ್ದರು.

**ಆಧಾರ:** ಸಂಯುಕ್ತ ಕರ್ನಾಟಕ, ದಿನಾಂಕ: 23.08.2023.

## 67. ಮಾನ್ಯ ಶ್ರೀ ಎಂ. ಆರ್. ಸೀತಾರಾಮ್ ಸಭಾಪತಿಗಳ ಭೇಟಿ



ದಿನಾಂಕ: 25.08.2023ರಂದು ನೂತನ ವಿಧಾನಪರಿಷತ್ ಸದಸ್ಯರಾಗಿ ನೇಮಕಗೊಂಡ ಸನ್ಮಾನ್ಯ ಶ್ರೀ ಎಂ. ಆರ್. ಸೀತಾರಾಮ್ ಅವರು ಮಾನ್ಯ ಸಭಾಪತಿಗಳಾದ ಶ್ರೀ ಬಸವರಾಜ್ ಹೊರಟ್ಟಿ ಅವರನ್ನು ಅವರ ಕಛೇರಿಯಲ್ಲಿ ಭೇಟಿಯಾಗಿ ಗೌರವ ನಮನ ಸಲ್ಲಿಸಿದರು.

## 68. ಇಸ್ರೋ ಕಂಟ್ರೋಲರೂಮಿಗೆ ಭೇಟಿ





ದಿನಾಂಕ: 25.08.23ರಂದು ಬೆಂಗಳೂರಿನ ಪೀಣ್ಯದಲ್ಲಿರುವ ಇಸ್ರೋ ಕಂಟ್ರೋಲನ ರೂಮಿಗೆ ಭೇಟಿ ನೀಡಿ, ಚಂದ್ರಯಾನ–3 ಮಿಷನ್ ಯಶಸ್ವಿ ವಿಜ್ಞಾನಿಗಳ ತಂಡಕ್ಕೆ ಸನ್ಮಾನಿಸಿ ಮಾತನಾಡಿದ ಮಾನ್ಯ ಸಭಾಪತಿ ಶ್ರೀ ಬಸವರಾಜಹೊರಟ್ಟಿ ಚಂದ್ರನ ಮೇಲೆ ಬಾಹ್ಯಾಕಾಶ ನೌಕೆ ಇಳಿಸುವುದು ಸಣ್ಣ ವಿಷಯವಲ್ಲ. ಇಂದು ಇಡೀ ಜಗತ್ತು ಭಾರತದತ್ತ ಅಚ್ಚರಿಯಿಂದ ನೋಡುವ ಕೆಲಸವನ್ನು ನಮ್ಮ ವಿಜ್ಞಾನಿಗಳು ಮಾಡಿದ್ದಾರೆ. ಇಸ್ರೋ ವಿಜ್ಞಾನಿಗಳ ಸಾಧನೆ ಭಾರತ ಪಾಲಿಗೆ ಐತಿಹಾಸಿಕವಾದದ್ದು ಹೀಗಾಗಿ ಅವರಿಗೆ ಎಷ್ಟು ಗೌರವ ಸಲ್ಲಿಸಿದರೂ ಕಡಿಮೆಯೇ ಎಂದು ಸಭಾಪತಿ ಬಸವರಾಜ ಹೊರಟ್ಟಿ ಅವರು ವಿಜ್ಞಾನಿಗಳ ಸಾಧನೆ ಕುರಿತು ಬಣ್ಣಿಸಿದರು.

## 69. ದೈಹಿಕ ಶಿಕ್ಷಣ ಭೀಷ್ಮ ಪ್ರಶಸ್ತಿ




ದಿನಾಂಕ: 29.08.23 ರಂದು ಮಾನ್ಯ ಸಭಾಪತಿ ಶ್ರೀ ಬಸವರಾಜ ಎಸ್. ಹೊರಟ್ಟಿ ಅವರಿಗೆ ಕ್ರೀಡಾ ದಿನಾಚರಣೆಯಂದು ದಕ್ಷಿಣ ಕನ್ನಡ ಜಿಲ್ಲೆಯ ಮೂಡಬಿದರೆಯ ಸ್ಕೌಟ್ಸ್ ಗೈಡ್ಸ್ ಕನ್ನಡ ಭವನದಲ್ಲಿ ದೈಹಿಕ ಶಿಕ್ಷಣ ಭೀಷ್ಮ ಪ್ರಶಸ್ತಿ ನೀಡಿ ಗೌರವಿಸಿದರು. ಈ ಸಂದರ್ಭದಲ್ಲಿ ವಿಧಾನಸಭಾ ಅಧ್ಯಕ್ಷರಾದ ಶ್ರೀ ಯು.ಟಿ ಖಾದರ್, ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರಾದ ಶ್ರೀ ಮಧು ಬಂಗಾರಪ್ಪ, ವಿಧಾನ ಪರಿಷತ್ತು ಸದಸ್ಯರಾದ ಶ್ರೀ ಎಸ್.ಎಲ್ ಭೋಜೇಗೌಡರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದರು.

## 70. ತ್ರಿಚಕ್ರ ವಾಹನ ವಿತರಣೆ



ದಿನಾಂಕ: 29.08.23ರಂದು ಮಾನ್ಯ ಸಭಾಪತಿ ಶ್ರೀ ಬಸವರಾಜ ಎಸ್. ದಿನಾಂಕ: 30.08.23 ಗೌರವಾನ್ವಿತ ಸಭಾಪತಿಗಳಾದ ಶ್ರೀ ಬಸವರಾಜ್ ಹೊರಟ್ಟಿ ಅವರು ತಮ್ಮ ಶಾಸಕರ ಪ್ರದೇಶ ಅಭಿವೃದ್ಧಿ ಅನುದಾನದ ಅಡಿಯಲ್ಲಿ ಧಾರವಾಡ ಜಿಲ್ಲೆ ಕುಂದಗೋಳ ತಾಲೂಕಿನ ರಾಮನಕೊಪ್ಪ ಗ್ರಾಮದ ನಿವಾಸಿ ಶಿವಾಜಿಗೋರ್ಪಡೆ ಅವರಿಗೆ ಇಂದು ತ್ರಿಚಕ್ರ ವಾಹನವನ್ನು ವಿತರಣೆ ಮಾಡಿದರು. ತಮ್ಮ ಅನುದಾನವನ್ನು ಯಾವುದೇ ಜಾತಿ ಮತ ಪಂತ ನೋಡದೆ ಮತದಾರರು ಎಂದು ಗಮನದಲ್ಲಿಟ್ಟುಕೊಳ್ಳದೆ, ಎಲ್ಲ ಸಮುದಾಯಗಳಿಗೂ ಸರಿಯಾಗಿ ಹಂಚುವ ಮೂಲಕ" ಸರ್ವರಿಗೂ ಸಮಪಾಲು ಸರ್ವರಿಗೂ ಸಮಬಾಳು" ಎನ್ನುವ ತತ್ವದ ಅಡಿಯಲ್ಲಿ ಕಳೆದ ನಾಲ್ಕು ದಶಗಳಿಂದ ಕೆಲಸ ಮಾಡುತ್ತಾ ಬಂದಿದ್ದಾರೆ.

ಈ ಸಂದರ್ಭದಲ್ಲಿ ಧಾರವಾಡ ಜಿಲ್ಲಾ ಕನ್ನಡ ಸಾಹಿತ್ಯಪರಿಷತ್ ಅಧ್ಯಕ್ಷರಾದ ಡಾ.ಲಿಂಗರಾಜ್ ಅಂಗಡಿ ನಿವೃತ್ತ ಮುಖ್ಯೋಪಾಧ್ಯಾಯ ಕಾಡದೇವರಮಠ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.

## 71. ಸಚಿವಾಲಯದಲ್ಲಿ ಜಂಟಿ ಕಾರ್ಯದರ್ಶಿಯವರಿಗೆ ಶುಭ ಹಾರೈಕೆ



ದಿನಾಂಕ: 31.08.2023ರಂದು ಸನ್ಮಾನ್ಯ ಸಭಾಧ್ಯಕ್ಷರು ಕರ್ನಾಟಕ ವಿಧಾನಸಭೆ ಸಚಿವಾಲಯದಲ್ಲಿ ಜಂಟಿ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸಿ ನಿವೃತ್ತಿ ಹೊಂದುತ್ತಿರುವ ಶ್ರೀಮತಿ ಎಂ.ವಿದ್ಯಾಶ್ರೀ ಅವರಿಗೆ, ಕರ್ನಾಟಕ ವಿಧಾನ ಸಭೆ ಕಾರ್ಯದರ್ಶಿ ಹಾಗೂ ಇತರೆ ಅಧಿಕಾರಿಗಳ ಉಪಸ್ಥಿತಿಯಲ್ಲಿ ಶುಭ ಹಾರೈಸಿದ ಸಂದರ್ಭ.

## 72. ಮಾನ್ಯ ಸಭಾಧ್ಯಕ್ಷರಿಗೆ ಸನ್ಮಾನ



ದಿನಾಂಕ: 01.09.2023ರಂದು ಸನ್ಮಾನ್ಯ ಸಭಾಧ್ಯಕ್ಷರನ್ನು ಕರ್ನಾಟಕ ವಿಧಾನಸಭೆ ಸಚಿವಾಲಯ ನೌಕರರ ಸಂಘದ ಸದಸ್ಯರು ನೌಕರರ ಹಲವು ಬೇಡಿಕೆಗಳನ್ನು ಈಡೇರಿಸಿದ ಕುರಿತು ಸನ್ಮಾನ್ಯ ಸಭಾಧ್ಯಕ್ಷರಿಗೆ ಧನ್ಯವಾದಗಳನ್ನು ಸಲ್ಲಿಸಿದ ಸಂದರ್ಭ.

## 73. ಸಂಘದ ಸದಸ್ಯರುಗಳು– ಸ್ಪೀಕರ್ ಭೇಟಿ



ದಿನಾಂಕ: 01.09.2023ರಂದು ಸನ್ಮಾನ್ಯ ಸಭಾಧ್ಯಕ್ಷರನ್ನು ಸನ್ಮಾನ್ಯ ಕರ್ನಾಟಕ ವಿಧಾನ ಸಭೆ ಹಾಗೂ ವಿಧಾನ ಪರಿಷತ್‌ನ ಆಪ್ತ ಸಹಾಯಕರುಗಳ ಸಂಘದ ಸದಸ್ಯರುಗಳು ಭೇಟಿ ಮಾಡಿ ಮನವಿ ಸಲ್ಲಿಸುತ್ತಿರುವ ಸಂದರ್ಭ.

## 74. ದಕ್ಷಿಣ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವರೊಂದಿಗೆ ಚರ್ಚೆ



ದಿನಾಂಕ: 01.09.2023ರಂದು ಸನ್ಮಾನ್ಯ ಸಭಾಧ್ಯಕ್ಷರು ದಕ್ಷಿಣ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವರು, ಶಾಸಕರು ಹಾಗೂ ನಗರಾಭಿವೃದ್ಧಿ ಇಲಾಖೆಗೆ ಸಂಬಂಧಿಸಿದ ಅಧಿಕಾರಿಗಳೊಂದಿಗೆ ಅಭಿವೃದ್ಧಿ ಕಾಮಗಾರಿಗಳು ಹಾಗೂ ಇತರ ವಿಚಾರಗಳ ಕುರಿತು ಚರ್ಚಿಸುತ್ತಿರುವ ಸಂದರ್ಭ.

## 75. ಪರಿಷತ್ ಸದಸ್ಯರಾಗಿ ಪ್ರಮಾಣ ವಚನ

ವಿಧಾನ ಪರಿಷತ್ ನೂತನ ಸದಸ್ಯರಾಗಿ ಮಾಜಿ ಸಚಿವರಾದ ಎಂ.ಆರ್.ಸೀತಾರಾಮ್, ಉಮಾಶ್ರೀ ಮತ್ತು ಎಚ್.ಪಿ.ಸುಧಾಮ್‌ದಾಸ್ ಪ್ರಮಾಣ ವಚನ ಸ್ವೀಕರಿಸಿದರು. ವಿಧಾನಸೌಧದಲ್ಲಿ ಹಮ್ಮಿಕೊಳ್ಳಲಾಗಿದ್ದ ಕಾರ್ಯಕ್ರಮದಲ್ಲಿ ಸಭಾಪತಿ ಬಸವರಾಜ ಹೊರಟ್ಟಿ ಪ್ರತಿಜ್ಞಾ ವಿಧಿ ಬೋಧಿಸಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವರಾದ ಎಚ್.ಕೆ.ಪಾಟೀಲ್, ಬೋಸರಾಜು ಸೇರಿ ಶಾಸಕರು, ನೂತನ ಶಾಸಕರ ಕುಟುಂಬ ಸದಸ್ಯರು ಹಾಜರಿದ್ದರು. ಸೀತಾರಾಮ್ ದೇವರ ಹೆಸರಲ್ಲಿ, ಉಮಾಶ್ರೀ ಸಂವಿಧಾನ ಹಾಗೂ ಭಗವಂತನ ಹೆಸರಲ್ಲಿ ಸುಧಾಮ್ ದಾಸ್ ಬುದ್ಧ, ಬಸವ, ಅಂಬೇಡ್ಕರ್ ಹೆಸರಲ್ಲಿ ಪ್ರಮಾಣ ವಚನ ಸ್ವೀಕರಿಸಿದರು.

**ಆಧಾರ:** ವಿಜಯವಾಣಿ ದಿನಾಂಕ: 01.09.2023.

## 76. ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಕ್ರೀಡಾಕೂಟ



ದಿನಾಂಕ: 07.09.2023ರಂದು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಕ್ಷೇತ್ರ ಸಂಪನ್ಮೂಲ ಕೇಂದ್ರ, ಧಾರವಾಡ ಶಹರ ವಲಯ, ಧಾರವಾಡದಲ್ಲಿ ಬಿಜಿಎಸ್ ಎಜ್ಯುಕೇಶನ್ ಸೆಂಟರ್ ವಿಕಾಸ ನಗರ

ವತಿಯಿಂದ ನಡೆದ ತಾಲ್ಲೂಕು ಮಟ್ಟದ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಕ್ರೀಡಾಕೂಟ 2023–24ರ ಕಾರ್ಯಕ್ರಮದಲ್ಲಿ ಬಿಜಿಎಸ್ ಕ್ಷೇತ್ರ ಶಿಕ್ಷಣಾಧಿಕಾರಿಗಳ ಪೊಲೀಸ್ ವಸತಿ ಶಾಲೆ, ಸೆಂಟ್ ಜೋಸೆಫ್ ಶಾಲೆ, ಬಿಜಿಎಸ್ ಶಾಲೆ ಸೇರಿದಂತೆ ವಿವಿಧ ಶಾಲಾ ಮಕ್ಕಳು ಆಕರ್ಷಕ ಪಥ ಸಂಚಲನ ನಡೆಸಿ ಅತಿಥಿಗಳಿಗೆ ಗೌರವ ವಂದನೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಕ್ರೀಡಾಪಟುಗಳು ದೇಶಾಭಿಮಾನದ ಸಾಂಸ್ಕೃತಿಕ ನೃತ್ಯ ಪ್ರದರ್ಶಿಸಿದರು. ಇನ್ನು ಈ ಕ್ರೀಡಾಕೂಟದ ಕೇಂದ್ರ ಬಿಂದುವಾಗಿರುವ ಕ್ರೀಡಾ ಜ್ಯೋತಿಯನ್ನು ಕ್ರೀಡಾಪಟುಗಳು ಮುಖ್ಯ ಅತಿಥಿಗಳಾದ ಶ್ರೀ ಬಸವರಾಜ ಎಸ್ ಹೊರಟ್ಟಿ ಅವರಿಗೆ ಹಸ್ತಾಂತರಿಸಿ ಕ್ರೀಡಾ ಪ್ರತಿಜ್ಞೆ ಸ್ವೀಕರಿಸಿದರು.

## 77. ರಾಜ್ಯಪಾಲರ ಭೇಟಿ



ದಿನಾಂಕ: 08.09.2023ರಂದು ಸನ್ಮಾನ್ಯ ಸಭಾಧ್ಯಕ್ಷರು ದಕ್ಷಿಣ ಕನ್ನಡ ಜಿಲ್ಲೆಗೆ ಆಗಮಿಸಿದ ಗೌರವಾನ್ವಿತ ರಾಜ್ಯಪಾಲರಾದ ಶ್ರೀ ಥಾವರ್ ಚಂದ್ ಗೆಹ್ಲೋಟ್ ರವರನ್ನು ಭೇಟಿ ಮಾಡಿದ ಸಂದರ್ಭ.

## 78. ಮಂಗಳೂರು ಫಿಸಿಯೋಕಾನ್ ಅಂತರರಾಷ್ಟ್ರೀಯ ಸಮ್ಮೇಳನ





ದಿನಾಂಕ: 09.09.2023ರಂದು ಸೌತ್ಕೆನರಾಫಿಸಿಯೋಥೆರಪಿ ಶಿಕ್ಷಕರ ಸಂಘದ ಆಶ್ರಯದಲ್ಲಿ ನಗರದ ಟಿಎಂಎಪೈ ಸಭಾಂಗಣದಲ್ಲಿ ನಡೆದ ಎರಡು ದಿನಗಳ 'ಮಂಗಳೂರು ಫಿಸಿಯೋಕಾನ್ ಅಂತರ್ರಾಷ್ಟ್ರೀಯ ಸಮ್ಮೇಳನ'ದ ಸಮಾರೋಪ ಸಮಾರಂಭದಲ್ಲಿ ಶನಿವಾರ ಮುಖ್ಯ ಅತಿಥಿಯಾಗಿ ಭಾಗವಹಿಸಿದ ಮಾನ್ಯ ಸಭಾಪತಿ ಶ್ರೀ ಬಸವರಾಜ ಎಸ್ ಹೊರಟ್ಟಿ ಅವರು ಆರೋಗ್ಯವೃದ್ಧಿಗೆ ಫಿಸಿಯೋಥೆರಪಿ ಅಗತ್ಯ ವೈದ್ಯರಷ್ಟೇ ಪ್ರಾಮುಖ್ಯತೆ ಇವತ್ತಿನ ದಿನಗಳಲ್ಲಿ ಫಿಸಿಯೋಥೆರಪಿಸ್ಟ್‌ಗಳಿಗೆ ಇದೆ. ಪ್ರತಿಯೊಂದು ಶಸ್ತ್ರಚಿಕಿತ್ಸೆಯ ಬಳಿಕ ಫಿಸಿಯೋಥೆರಪಿಗೆ ವೈದ್ಯರು ಸಲಹೆ ನೀಡುತ್ತಾರೆ. ಮುಂದಿನ ದಿನಗಳಲ್ಲಿ ಇದರ ಬೇಡಿಕೆ ಇನ್ನಷ್ಟು ಹೆಚ್ಚಾಗಲಿದೆ ಎಂದು ತಿಳಿಸಿದರು.

## 79. ಎಸ್.ಎಸ್.ಎಫ್ ಗೋಲ್ಡನ್ ಫಿಫ್ಟಿ ಕಾನ್ಫರೆನ್ಸ್




ದಿನಾಂಕ: 10.09.2023ರಂದು ಸನ್ಮಾನ್ಯ ಸಭಾಧ್ಯಕ್ಷರು ಬೆಂಗಳೂರಿನ ಅರಮನೆ ಮೈದಾನದಲ್ಲಿ ನಡೆದ ಎಸ್.ಎಸ್.ಎಫ್ ಗೋಲ್ಡನ್ ಫಿಫ್ಟಿ ಕಾನ್ಫರೆನ್ಸ್‌ನಲ್ಲಿ ಸನ್ಮಾನ್ಯ ಮುಖ್ಯಮಂತ್ರಿಯವರೊಂದಿಗೆ ಭಾಗವಹಿಸಿದ ಸಂದರ್ಭ.

## 80. ಯಕ್ಷಗಾನ ಮಂಡಳಿಯ ಬೆಳ್ಳಿ ಹಬ್ಬ










ದಿನಾಂಕ: 10.09.2023ರಂದು ಸನ್ಮಾನ್ಯ ಸಭಾಧ್ಯಕ್ಷರು ಬೆಂಗಳೂರಿನ ರವೀಂದ್ರ ಕಲಾ ಕ್ಷೇತ್ರದಲ್ಲಿ ನಡೆದ ಕರ್ನಾಟಕ ಮಹಿಳಾ ಯಕ್ಷಗಾನ ಮಂಡಳಿಯ ಬೆಳ್ಳಿ ಹಬ್ಬದ ಸಂಭ್ರಮದಲ್ಲಿ ಭಾಗವಹಿಸಿದ ಸಂದರ್ಭ.

## 81. ಮಾಧ್ಯಮ ಅತ್ಯಂತ ಆದರಣೀಯ ಕ್ಷೇತ್ರ

ಸಮಾಜದಲ್ಲಿ ಮಾಧ್ಯಮ ಅತ್ಯಂತ ಆದರಣೀಯ ಕ್ಷೇತ್ರ ಎಂದು ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಹೇಳಿದ್ದಾರೆ.

ಕರ್ನಾಟಕ ಮಹಿಳಾ ಯಕ್ಷಗಾನ ಸಹಯೋಗದಲ್ಲಿ ಮೀಡಿಯಾ ಅಲ್ಯುಮ್ನಿ ಅಸೋಸಿಯೇಷನ್ ಆಫ್ ಮಂಗಳಗಂಗೋತ್ರಿ ಸಂಸ್ಥೆ ವತಿಯಿಂದ ಭಾನುವಾರ ರವೀಂದ್ರ ಕಲಾ ಕ್ಷೇತ್ರದಲ್ಲಿ ಆಯೋಜಿಸಲಾಗಿದ್ದ 'ಯಕ್ಷಗಾನ ಮಹಿಳೆ ಮಾಧ್ಯಮ' ಹಾಗೂ 'ಮಾಮ್ ಇನ್‌ಸ್ಪೈರ್ ಪ್ರಶಸ್ತಿ' ಪ್ರಧಾನ ಸಮಾರಂಭದಲ್ಲಿ ಮಾತನಾಡಿದರು. ಸಮಾಜದ ಬೆಳವಣಿಗೆಯಲ್ಲಿ ಮಾಧ್ಯಮ ಕ್ಷೇತ್ರ ತನ್ನದೇ ಆದ ವಿಶಿಷ್ಟ ಕೊಡುಗೆ ನೀಡುತ್ತಿದೆ. ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ 'ಮಾಮ್' ಕಾರ್ಯಕ್ರಮಕ್ಕೆ ರೂ. 30 ಸಾವಿರ ನೆರವು ನೀಡುವುದಾಗಿ ಘೋಷಿಸಿದರು.

ಹಿರಿಯ ಪತ್ರಕರ್ತ ರವಿ ಹೆಗಡೆ ಮಾತನಾಡಿ, ಇಂದಿನ ಮಾಧ್ಯಮ ಕ್ಷೇತ್ರದಲ್ಲಿ ಸ್ಫೂರ್ತಿದಾಯ ಅಂಶ ಕುಸಿತವಾಗುತ್ತಿದೆ. ಒಂದೆಡೆ ವಿಪರೀತ ವ್ಯಾಪಾರೀಕರಣ, ಮತ್ತೊಂದೆಡೆ ಸೈದಾಂತಿಕ ಬದ್ಧತೆ ಉಳಿಸಿಕೊಳ್ಳುವ ಸವಾಲು ಇದೆ. ಕೆಲ ಜಾಲತಾಣಗಳಿಂದ ಬರುವ ಸುಳ್ಳುಸುದ್ದಿ, ಬೇಡದ ವಿಚಾರಗಳ ವೈಭವೀಕರಣದಿಂದ ಈ ಕ್ಷೇತ್ರ ಇಕ್ಕಟ್ಟಿನಲ್ಲಿದೆ ಎಂದು ಕಳವಳ ವ್ಯಕ್ತಪಡಿಸಿದರು. ಇದೇ ವೇಳೆ ವಿಜೇತ ಕಾಲೇಜುಗಳಿಗೆ ಪ್ರಶಸ್ತಿ ಪ್ರಧಾನ ಮಾಡಲಾಯಿತು. ಯೂನಿವರ್ಸಲ್ ಸಮೂಜ ಸಂಸ್ಥೆಗಳ ಮುಖ್ಯಸ್ಥ ಆರ್.ಉಪೇಂದ್ರ ಶೆಟ್ಟಿ, ಮಾಮ್‌ನ ಗೌರವಾಧ್ಯಕ್ಷ ವೇಣುಶರ್ಮಾ, ಅಧ್ಯಕ್ಷ ನವೀನ್ ಅಮ್ಮೆಂಬಳ ಇದ್ದರು.

ಆಧಾರ: ವಿಜಯವಾಣಿ ದಿನಾಂಕ: 11.09.2023.

## 82. 66ನೇ ಸಿಪಿಎ ಸಮ್ಮೇಳನದ ಪೂರ್ವಭಾವಿ ಸಭೆ




ದಿನಾಂಕ: 11.09.2023ರಂದು ಅಕ್ಟೋಬರ್ ಮೊದಲ ವಾರದಲ್ಲಿ ನಡೆಯುವ ಪಶ್ಚಿಮ ಆಫ್ರಿಕಾದ ಘಾನಾದಲ್ಲಿ ನಡೆಯುವ 66ನೇ ಸಿಪಿಎ ಸಮ್ಮೇಳನದ (66$^{th}$ CPA conference) ಪೂರ್ವಭಾವಿ ಸಭೆ ನವದೆಹಲಿಯಲ್ಲಿ ನಡೆಯಿತು. ಲೋಕಸಭಾಧ್ಯಕ್ಷರಾದ ಶ್ರೀ ಓಂಬಿರ್ಲಾ ಅವರ ನೇತೃತ್ವದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ವಿಧಾನಪರಿಷತ್ತಿನ ಸನ್ಮಾನ್ಯ ಸಭಾಪತಿ ಶ್ರೀಬಸವರಾಜ ಎಸ್ ಹೊರಟ್ಟಿ ಭಾಗಿಯಾಗಿದ್ದರು.

ದೇಶದ ಹಲವು ರಾಜ್ಯಗಳ ವಿಧಾನಸಭಾಧ್ಯಕ್ಷರು ಹಾಗೂ ಸಭಾಪತಿಗಳು ಪಾಲ್ಗೊಂಡಿದ್ದರು. ದೇಶದಲ್ಲೇ ಅತ್ಯಂತ ಹಿರಿಯ ಸದಸ್ಯರು ಎಂಬ ಕೀರ್ತಿಗೆ ಪಾತ್ರರಾದ ಸಭಾಪತಿ ಶ್ರೀ ಬಸವರಾಜ್ ಹೊರಟ್ಟಿ ಅವರು ತಮ್ಮ 43 ವರ್ಷದ ಅನುಭವಗಳನ್ನು ಈ ಸಭೆಯಲ್ಲಿ ಹಂಚಿಕೊಂಡು ಪ್ರಜಾಪ್ರಭುತ್ವದ ಯಶಸ್ಸಿನಲ್ಲಿ ವಿಧಾನಮಂಡಲದ ಪಾತ್ರ ಕುರಿತು ವಿಚಾರ ಮಂಡಿಸಿದರು. ಘಾನಾದ ಸಮಾವೇಶದಲ್ಲಿ ಈ ಬಗ್ಗೆ ಪ್ರಸ್ತಾಪಿಸಬೇಕಾಗಿರುವ ಅಂಶಗಳ ಮೇಲೆ ಮಾನ್ಯ ಬಸವರಾಜ ಎಸ್ ಹೊರಟ್ಟಿ ಬೆಳಕು ಚೆಲ್ಲಿದರು.

## 83. ಪಂಜಾಬ್ ವಿಧಾನ ಸಭೆಯ ಉಪಸಭಾಧ್ಯಕ್ಷರ ನಿಯೋಗ ವಿಧಾನಸೌಧಕ್ಕೆ ಭೇಟಿ





ದಿನಾಂಕ: 12.09.2023ರಂದು ಸನ್ಮಾನ್ಯ ಸಭಾಧ್ಯಕ್ಷರು ಪಂಜಾಬ್ ರಾಜ್ಯ ಸರ್ಕಾರದ ಉಪ ಸಭಾಧ್ಯಕ್ಷರಾದ ಜೈಕ್ರಿಶಾನ್ ಸಿಂಗ್ ರವರ ನಿಯೋಗವು ವಿಧಾನಸೌಧಕ್ಕೆ ಭೇಟಿ ನೀಡಿದ ಸಂದರ್ಭ.

## 84. ಉನ್ನತ ಶಿಕ್ಷಣ ಸಚಿವರು–ಸ್ಪೀಕರ್ ಭೇಟಿ





ದಿನಾಂಕ:12.09.2023ರಂದು ಸನ್ಮಾನ್ಯ ಸಭಾಧ್ಯಕ್ಷರನ್ನು ಕರ್ನಾಟಕ ರಾಜ್ಯ ಸರ್ಕಾರದ ಉನ್ನತ ಶಿಕ್ಷಣ ಸಚಿವರಾದ ಡಾ.ಎಂ.ಸಿ ಸುಧಾಕರ್ ರವರು ಬೆಂಗಳೂರಿನ ನಿವಾಸದಲ್ಲಿ ಭೇಟಿ ಮಾಡಿದ ಸಂದರ್ಭ.

## 85. ಶ್ರೀ ಧನುಷ್ ಮಂಜುನಾಥ್‌ರವರಿಗೆ ಅಭಿನಂದನೆ



ದಿನಾಂಕ: 15/09/2023ರಂದು ಸನ್ಮಾನ್ಯ ಸಭಾಧ್ಯಕ್ಷರನ್ನು ಬೈಸಿಕಲ್ ಮೂಲಕ ಸುದೀರ್ಘ ಪ್ರಯಾಣ ನಡೆಸಿ ಗಿನ್ನೆಸ್ ದಾಖಲೆಯಲ್ಲಿ ಹೆಸರು ಪಡೆದ ಬೆಂಗಳೂರು ಕಾಡುಗೋಡಿನ ಶ್ರೀ ಧನುಷ್ ಮಂಜುನಾಥ್ ರವರನ್ನು ಅಭಿನಂದಿಸಿದ ಸಂದರ್ಭ.

## 86. ಭಾರತದ ಸಂವಿಧಾನ ಪೀಠಿಕೆಯ ವಾಚನ





ದಿನಾಂಕ: 15.09.2023ರಂದು ಸನ್ಮಾನ್ಯ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರ ನೇತೃತ್ವದಲ್ಲಿ ವಿಧಾನಸೌಧ ಮುಂಭಾಗ ಭಾರತದ ಸಂವಿಧಾನ ಪೀಠಿಕೆಯ ಜಾಗತಿಕ ವಾಚನ ಮಾಡುವ ಮೂಲಕ ಸಂವಿಧಾನದ ಮಹತ್ವ ಕುರಿತು ನಾಡಿನ ಜನರಿಗೆ ವಿಶೇಷ ಸಂದೇಶ ನೀಡಿದರು. ಸಂವಿಧಾನ ಸರ್ವರಿಗೂ ಸಮಬಾಳು ಎಂಬ ತತ್ವದ ಅಡಿ ರಚನೆಯಾಗಿದ್ದು ಅದರ ಸದುಪಯೋಗ ಪಡೆದುಕೊಂಡು ಪ್ರತಿಯೊಬ್ಬ ನಾಗರಿಕರು ಸ್ವಾಭಿಮಾನದ ಬದುಕನ್ನ ಕಳೆಯಬೇಕೆಂದು ಹೇಳಿದರು. ಮಾನ್ಯ ಸಭಾಪತಿಯವರು ಮಾತನಾಡಿ ಈ ಕಾರ್ಯಕ್ರಮ ಅತ್ಯಂತ ಅರ್ಥಪೂರ್ಣವಾದದ್ದು ಹಾಗೂ ದೇಶದ ಪ್ರತಿಯೊಬ್ಬ ಪ್ರಜೆಯು ದೇಶಾಭಿಮಾನ ಬೆಳೆಸಿಕೊಂಡು ಒಟ್ಟಾಗಿ ಒಂದಾಗಿ ಬಾಳಲು ಉತ್ತಮ ಸಂದೇಶ ಕೊಡುವ ಕಾರ್ಯಕ್ರಮ ಇದಾಗಿದೆ. ಇಂತಹ ಮಹತ್ವದ ಕಾರ್ಯಕ್ರಮ ಆಯೋಜಿಸಿದ ಕರ್ನಾಟಕ ಸರ್ಕಾರಕ್ಕೆ ವಿಶೇಷ ಅಭಿನಂದನೆಗಳನ್ನು ಸಲ್ಲಿಸುವುದಾಗಿ ಹೇಳಿದರು. ಈ ಸಂದರ್ಭದಲ್ಲಿ ಮಾನ್ಯ ಉಪಮುಖ್ಯಮಂತ್ರಿಗಳಾದ

ಶ್ರೀ ಡಿ.ಕೆ.ಶಿವಕುಮಾರ್, ಮಾನ್ಯ ಸಮಾಜ ಕಲ್ಯಾಣ ಸಚಿವರಾದ ಡಾ.ಎಚ್.ಸಿ ಮಹಾದೇವಪ್ಪ, ಮಾನ್ಯ ಗೃಹ ಸಚಿವರಾದ ಡಾ.ಎಚ್.ಜಿ ಪರಮೇಶ್ವರ, ಸೇರಿದಂತೆ ವಿವಿಧ ಖಾತೆಗಳ ಸಚಿವರು, ಸದಸ್ಯರು ಮತ್ತು ವಿದ್ಯಾರ್ಥಿಗಳು ಭಾಗವಹಿಸಿದ್ದರು.

## 87. ಸ್ವರ್ಣ ಜನ್ಮಜಯಂತಿ ಮಹೋತ್ಸವ





ದಿನಾಂಕ: 20.09.23ರಂದು ಹುಬ್ಬಳ್ಳಿ ಬಳಿ ಇರುವ "ವರೂರ್" ಗ್ರಾಮದಲ್ಲಿರುವ ನವಗ್ರಹತೀರ್ಥದ ಪೀಠಾಧಿಪತಿಗಳಾದ ಪರಮಪೂಜ್ಯ ರಾಷ್ಟ್ರಸಂತ ಆಚಾರ್ಯ ಶ್ರೀಗುಣಧರನಂದಿ ಮಹಾರಾಜರ ಸ್ವರ್ಣ ಜನ್ಮಜಯಂತಿ ಮಹೋತ್ಸವ ಕಾರ್ಯಕ್ರಮದಲ್ಲಿ ಗೌರವಾನ್ವಿತ ರಾಜ್ಯಪಾಲರಾದ ಶ್ರೀ ಥಾವರ್‌ಚಂದ್ ಗೆಹ್ಲೋಟ್, ಮಾನ್ಯ ಸಭಾಪತಿ ಶ್ರೀ ಬಸವರಾಜ ಎಸ್.ಹೊರಟ್ಟಿ ರವರು ಭಾಗವಹಿಸಿ ಕಳೆದ 15 ವರ್ಷಗಳ ಹಿಂದೆ ಇಲ್ಲಿ ಬಂದು ಶಿಕ್ಷಣ ಸಂಸ್ಥೆಗಳನ್ನು ಮಾಡಿ ಯಾವ ಸರ್ಕಾರವೂ ಮಾಡದ ಕೆಲಸವನ್ನು ಶ್ರೀಗಳು ಮಾಡಿದ್ದಾರೆ. ಇಂತಹ ಸ್ವಾಮೀಜಿಗಳು ಇದ್ದಲ್ಲಿ ಸಮಾಜ ಸುಭಿಕ್ಷೆಯಿಂದ ಇರಲು ಸಾಧ್ಯ. ಶ್ರೀಗಳಿಗೆ ಭಗವಂತ ಆರೋಗ್ಯ ನೀಡಲಿ ಅವರಿಂದ ಇನ್ನಷ್ಟು ಸಾಮಾಜಿಕ ಕಾರ್ಯಗಳಾಗಲಿ ಎಂದು ಮಾತನಾಡಿದರು. ಈ ಸಂದರ್ಭದಲ್ಲಿ ಗುಣಧರನಂದಿ ಸ್ವಾಮೀಜಿ ಜೀವನ ಚರಿತ್ರೆಯನ್ನೊಳಗೊಂಡ ರಾಷ್ಟ್ರಸಂತ ಪುಸ್ತಕವನ್ನು ಲೋಕಾರ್ಪಣೆ ಮಾಡಿದರು.

ಶ್ರೀಗುಣಧರನಂದಿ ಮಹಾರಾಜರ ಸ್ವರ್ಣ ಜನ್ಮಜಯಂತಿ ಮಹೋತ್ಸವ ಕಾರ್ಯಕ್ರಮದ ನಂತರ ಛಬ್ಬಿ ಕ್ರಾಸ್ ಬಳಿ ಇರುವ ಮಾನ್ಯ ಸಭಾಪತಿ ಬಸವರಾಜ್ ಎಸ್ ಹೊರಟ್ಟಿ ಅವರು ತಮ್ಮ ನಿಸರ್ಗ ಫಾರ್ಮಿಗೆ ಗೌರವಾನ್ವಿತ ರಾಜ್ಯಪಾಲರನ್ನ ಅತ್ಯಂತ ಪ್ರೀತಿಯಿಂದ ಗೌರವ ಪೂರ್ವಕವಾಗಿ ತಮ್ಮ ತೋಟಕ್ಕೆ ಬರಮಾಡಿಕೊಂಡು ನಿಸರ್ಗ ಫಾರ್ಮನಲ್ಲಿರುವ ಎಲ್ಲ ವಿವಿಧ ಜಾತಿಯ ಮರಗಳ ಕುರಿತು ಪ್ರಾಣಿಗಳ ಬಗ್ಗೆ ಬೆಳೆಯುವ ಬೆಳೆಗಳ ಕುರಿತು ಹಾಗೂ ತೋಟದ ಎಲ್ಲಾ ಕೃಷಿ ಚಟುವಟಿಕೆಗಳ ಬಗ್ಗೆ ರಾಜ್ಯಪಾಲರಿಗೆ ಸಮಗ್ರ ಮಾಹಿತಿ ನೀಡಿದರು.

 

ಈ ಸಂದರ್ಭದಲ್ಲಿ ರಾಜ್ಯಪಾಲರು, ಹೊರಟ್ಟಿ ಅವರು ಎಷ್ಟೇ ಎತ್ತರಕ್ಕೆ ಬೆಳೆದರೂ ತಮ್ಮ ಕೃಷಿ ಪ್ರೇಮವನ್ನು ಎಂದಿಗೂ ಬಿಟ್ಟುಕೊಟ್ಟಿಲ್ಲ ಎನ್ನುವುದಕ್ಕೆ ಸುಂದರವಾದ, ಸ್ವಚ್ಛ, ವಿಶಾಲವಾದ ನಿಸರ್ಗ ಫಾರ್ಮ್ ಸಾಕ್ಷಿ. ಕಳೆದ ಎರಡು ತಿಂಗಳ ಹಿಂದೆ ಬೆಂಗಳೂರಿನಲ್ಲಿ ಅವರ ಮಾತೋ ಶ್ರೀ ಗುರವ್ವನವರ ಸ್ಮರಣಾರ್ಥ ಹೊರಟ್ಟಿಯವರ ನೇತೃತ್ವದ ಅವ್ವ ಸೇವಾ ಟ್ರಸ್ಟ್ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರ ಮಾತೃಪ್ರೇಮ ಸಮಾಜಮುಖಿ ಚಟುವಟಿಕೆಗಳನ್ನು ಸಹ ವೀಕ್ಷಿಸಿ ಖುಷಿಪಟ್ಟಿದ್ದೆ. ಈಗ ಅವರ ತೋಟವನ್ನು ಸಹ ನೋಡಿ ಸಾಕಷ್ಟು ಆನಂದಪಟ್ಟಿದ್ದೇನೆ ಕಳೆದ ನಾಲ್ಕು ದಶಗಳಿಂದ ಎಲ್ಲ ಸಮುದಾಯ ಎಲ್ಲ ಕ್ಷೇತ್ರದಲ್ಲೂ ತಮ್ಮದೇ ಆದ ಹೆಜ್ಜೆ ಗುರುತುಗಳನ್ನು ಮೂಡಿಸುವ ಮೂಲಕ ಒಬ್ಬ ಮಾದರಿ ಜನಪ್ರತಿನಿಧಿಯಾಗಿ ಹೊರಟ್ಟಿಯವರು ನಮ್ಮ ಮಧ್ಯೆ ಇದ್ದಿದ್ದು ನಮಗೆಲ್ಲ ಹೆಮ್ಮೆ ಅವರ ಸೇವೆ ಇನ್ನಷ್ಟು ಸಮಾಜಕ್ಕೆ, ಕೃಷಿ ಕ್ಷೇತ್ರಕ್ಕೆ ದೊರೆಯಲಿ ಎಂದು ಆಶಿಸಿ ಹೊರಟ್ಟಿ ಅವರಿಗೆ ಅಭಿನಂದನೆಗಳನ್ನು ಸಲ್ಲಿಸಿದರು.

## 88. ಜ್ಞಾನಾರ್ಜನೆಗೆ ತರಬೇತಿ ಕೇಂದ್ರಗಳು ಅತ್ಯವಶ್ಯಕ

ವಿದ್ಯಾರ್ಥಿಗಳ ಜ್ಞಾನಾರ್ಜನೆಗೆ ತರಬೇತಿ ಕೇಂದ್ರಗಳು ಅವಶ್ಯಕ ಜಿಲ್ಲೆಗಳಲ್ಲಿಯೂ ಪ್ರಾರಂಭವಾಗಬೇಕು, ಇದರಿಂದ ಗ್ರಾಮೀಣ ಪ್ರದೇಶದ ಮಕ್ಕಳಿಗೆ ಅವಕಾಶ ಸಿಗುತ್ತದೆ ಎಂದು ವಿಧಾನಸಭೆಯ ಸಭಾಧ್ಯಕ್ಷ ಯು.ಟಿ.ಖಾದರ್ ತಿಳಿಸಿದರು.

ವಿನ್ಯಾಸ ಶಾಲೆಗಳ ಪ್ರವೇಶ ಪರೀಕ್ಷೆಗಾಗಿ ತರಬೇತಿ ನೀಡುವ ಫಿಡಾ ವಿನ್ಯಾಸ ಶಾಲೆಗೆ ಚಾಲನೆ ನೀಡಿ ಮಾತನಾಡಿದ ಅವರು, ಸರಕಾರಿ ಶಾಲಾ ಮಕ್ಕಳಿಗೆ ಅನುಕೂಲಕರವಾದ ವಾತಾವರಣ ನಿರ್ಮಿಸುವುದು ನಮ್ಮ ಜವಾಬ್ದಾರಿ. ಹೆಚ್ಚು ತರಬೇತಿ ನೀಡುವ ಮೂಲಕ ಶಾಲಾ ಮಕ್ಕಳಲ್ಲಿ ಉತ್ತಮ ಕೌಶಲ್ಯ ತುಂಬಬೇಕು ಎಂದರು.

ಶಾಲೆಯ ಸಂಸ್ಥಾಪಕ ನಿರ್ದೇಶಕಿ ಎಸ್. ಫರೀದಾ ಖಾನ್ ಮಾತನಾಡಿ, ಉನ್ನತ ವಿನ್ಯಾಸ ಶಾಲೆಗಳಿಗೆ ಪ್ರವೇಶ ಪರೀಕ್ಷೆಗಳಿಗೆ ತರಬೇತಿ ನೀಡುವಲ್ಲಿ ನಮ್ಮ ಶಾಲೆ ಪ್ರಮುಖ ಸಂಸ್ಥೆಯಾಗಲಿದೆ. ನಾವು ವಿದ್ಯಾರ್ಥಿಗಳು ತಮ್ಮ ವೃತ್ತಿಯಲ್ಲಿ ಛಾಪು ಮೂಡಿಸಲು ಸಹಾಯ ಮಾಡುತ್ತೇವೆ. ಅಭ್ಯರ್ಥಿಗಳಿಗೆ ದೇಶದ ಉನ್ನತ ವಿನ್ಯಾಸ ಶಾಲೆಗಳಿಗೆ ಉತ್ತಮ ಅವಕಾಶವಿದೆ ಎಂದು ಖಚಿತಪಡಿಸುವ ನಿಟ್ಟಿನಲ್ಲಿ ಸರಿಯಾದ ತರಬೇತಿಯನ್ನು ನೀಡುತ್ತದೆ ಎಂದರು.

**ಆಧಾರ**: ವಿಶ್ವವಾಣಿ ದಿನಾಂಕ: 21.09.2023

## 89. ಪ್ರಗತಿಪರ ರೈತನ ತೋಟಕ್ಕೆ ಯು.ಟಿ.ಖಾದರ್ ಭೇಟಿ

ತಾಲ್ಲೂಕಿನ ಬಿಳಿಗುಂಬ ಗ್ರಾಮದ ಪ್ರಗತಿಪರ ಸಾವಯವ ಕೃಷಿಕ ವಾಸು ಅವರ ತೋಟಕ್ಕೆ ವಿಧಾನಸಭೆ ಸ್ಪೀಕರ್ ಯು.ಟಿ.ಖಾದರ್ ಅವರು ಭೇಟಿ ನೀಡಿ ಸಿರಿಧಾನ್ಯಗಳಿಂದ ಸಿದ್ಧಪಡಿಸುವ ಉತ್ಪನ್ನಗಳನ್ನು ವೀಕ್ಷಣೆ ಮಾಡಿದರು.

ಬಿಳಿಗುಂಬ ಗ್ರಾಮದ ಬಳಿಯ ವಾಸು ಅವರ ತೋಟದಲ್ಲಿ ನಿರ್ಮಿಸಿರುವ ಸಿರಿಧಾನ್ಯ ಉತ್ಪನ್ನಗಳ ತಯಾರಿಕಾ ಘಟಕಕ್ಕೆ ಭೇಟಿ ನೀಡಿದ ವೇಳೆ ಅಲ್ಲಿನ ಬೆಳೆ ಮತ್ತು ಆಹಾರ ಉತ್ಪನ್ನಗಳ ವೈವಿಧ್ಯತೆ, ಸಂಸ್ಕರಣಾ ಘಟಕ ಹಾಗೂ ಸಿರಿಧಾನ್ಯಗಳಿಂದ ತಯಾರಿಸಿದ ರಾಮ್ ಗೋಲ್ಡ್ ಬ್ರಾಂಡ್ ಹೆಸರಿನ ಉತ್ಪನ್ನಗಳನ್ನು ಆಸಕ್ತಿಯಿಂದ ಪರಿಶೀಲಿಸಿ ಕುತೂಹಲ ತಣಿಸಿಕೊಂಡರು.

ಈ ವೇಳೆ ಸುದ್ದಿಗಾರರೊಂದಿಗೆ ಅವರು ಮಾತನಾಡಿ, ಕೃಷಿ ಕ್ಷೇತ್ರದಲ್ಲಿ ಹೊಸ ಅವಿಷ್ಕಾರಗಳಾಗುತ್ತಿವೆ. ಆಧುನಿಕ ತಂತ್ರಜ್ಞಾನ ಬಳಸಿಕೊಂಡು ಸಾಕಷ್ಟು ಯುವಜನರು ಕೃಷಿ ಕಡೆಗೆ ವಾಸ ಮಾಡುತ್ತಿದ್ದು ಹೆಚ್ಚು ಲಾಭ ಗಳಿಸುತ್ತಿರುವುದು ಸಂತಸ ತಂದಿದೆ. ಆಧುನಿಕ ಕೃಷಿಗಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಅನೇಕ ಯೋಜನೆಗಳ ಜೊತೆಗೆ ಸಾಲ ಸೌಲಭ್ಯವೂ ದೊರೆಯುತ್ತಿದೆ ಎಂದರು.

ಸಿರಿಧಾನ್ಯ ಬೆಳೆಯುವ ರೈತರು ಸಂಸ್ಕರಣಾ ಘಟಕಗಳನ್ನು ತೆರೆದು ವಿವಿಧ ರೀತಿಯ ಉತ್ಪನ್ನಗಳನ್ನು ತಯಾರಿಸುತ್ತಿರುವುದು ಉತ್ತಮ ಬೆಳವಣಿಗೆ. ಈ ಉತ್ಪನ್ನಗಳಿಗೆ ಸೂಕ್ತ ಮಾರುಕಟ್ಟೆ ಒದಗಿಸಬೇಕಿದೆ. ಈ ಕುರಿತು ಸರ್ಕಾರದ ಗಮನಕ್ಕೂ ತರಲಾಗುವುದು ಎಂದರು.

ಇದೇ ಸಂದರ್ಭದಲ್ಲಿ ರಾಮ್ ಗೋಲ್ಡ್ ಬ್ರಾಂಡ್ ಉತ್ಪನ್ನಗಳನ್ನು ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಅವರು ಲೋಕಾರ್ಪಣೆ ಮಾಡಿದರು. ಅಲ್ಲದೆ ಸ್ಥಳದಲ್ಲಿ ಹಾಜರಿದ್ದ 23 ಜನ ಕ್ಷಯ ರೋಗಿಗಳಿಗೆ ಪೌಷ್ಠಿಕಾಂಶಯುಕ್ತರಾಗಿ ಮತ್ತು ಸಿರಿಧಾನ್ಯ ಆಹಾರದ ಪುಡಿಗಳಿದ್ದ ಕಿಟ್‌ಗಳನ್ನು ವಿತರಿಸಿದರು. ಶಾಸಕ ಎಚ್.ಎ.ಇಕ್ಬಾಲ್ ಹುಸೇನ್, ಮಾಜಿ ಶಾಸಕ ಕೆ.ರಾಜು, ಜಿಲ್ಲಾ ಆರೋಗ್ಯಾಧಿಕಾರಿ ಕಾಂತರಾಜು, ತಾ.ಪಂ.ಇ.ಒ ಕೆ.ಪ್ರದೀಪ್, ನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎ.ಬಿ.ಚೇತನ್ ಕುಮಾರ್, ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಸಿ.ಎನ್.ಆರ್.ವೆಂಕಟೇಶ್, ಪ್ರಗತಿಪರ ಕೃಷಿಕ ವಾಸು ಹಾಗೂ ಪುತ್ರ ಕೃತಿಕ್ ಕುಮಾರ್ ಮತ್ತು ಕುಟುಂಬದವರು ಇದ್ದರು.

**ಆಧಾರ**: ಸಂಯುಕ್ತ ಕರ್ನಾಟಕ ದಿನಾಂಕ: 22.09.2023

## 90. ವಿಧಾನಸೌಧದ ದ್ವಾರಕ್ಕೆ ಸಂವಿಧಾನ, ನಾಡಗೀತೆ

ವಿಧಾನಸೌಧಕ್ಕೆ ಹೊಸ ರೂಪ ಕೊಡುವ ನಿಟ್ಟಿನಲ್ಲಿ ಗೇಟ್‌ಗಳಿಗೆ ಸಂವಿಧಾನ ಪೀಠಿಕೆ ಹಾಗೂ ನಾಡಗೀತೆ ಅಳವಡಿಸುವ ಬಗ್ಗೆ ಚಿಂತನೆ ಶುರುವಾಗಿದೆ. ವಿಧಾನಸೌಧದ ಮುಂಭಾಗ ಹಾಗೂ ಪಶ್ಚಿಮ ದ್ವಾರದ ಸೌಂದರ್ಯ ಹೆಚ್ಚಿಸುವ ನಿಟ್ಟಿನಲ್ಲಿ ಸಿದ್ಧತೆ ನಡೆಸಿಕೊಳ್ಳಲಾಗಿದೆ. ಈ ಸಂಬಂಧ ಶಿಲ್ಪಿಗಳ ಅಭಿಪ್ರಾಯ ಪಡೆಯಲಾಗುತ್ತಿದೆ ಎಂದು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಅವರು ತಿಳಿಸಿದಾರೆ.

**ಆಧಾರ:** ಸಂಯುಕ್ತ ಕರ್ನಾಟಕ, ದಿನಾಂಕ: 22.09.2023

## 91. ವಿಧಾನಸೌಧದ ಗೇಟ್‌ಗಳಿಗೆ ಸಂವಿಧಾನ ಪೀಠಿಕೆ ಅಳವಡಿಕೆ

ವಿಧಾನಸೌಧಕ್ಕೆ ಹೊಸ ರೂಪ ಕೊಡುವ ನಿಟ್ಟಿನಲ್ಲಿ ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಚಿಂತನೆ ನಡೆಸಿದ್ದು, ಇದರ ಭಾಗವಾಗಿ ವಿಧಾನಸೌಧದ ಗೇಟ್‌ಗಳಿಗೆ ಸಂವಿಧಾನ ಪೀಠಿಕೆ ಹಾಗೂ ನಾಡಗೀತೆ ಅಳವಡಿಸುವ ಯೋಜನೆ ಶುರುವಾಗಿದೆ. ಈಗಾಗಲೇ ಯಾವ ರೀತಿಯಲ್ಲಿ ಈ ಕಬ್ಬಿಣ ಗೇಟ್‌ಗಳ ಅಂದವನ್ನು ಹೆಚ್ಚಿಸಬಹುದು ಎಂದು ಶಿಲ್ಪಿಗಳ ಅಭಿಪ್ರಾಯ ಪಡೆಯಲಾಗುತ್ತಿದೆ ಎಂದು ತಿಳಿದುಬಂದಿದೆ. ಈ ಬಗ್ಗೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ವಿಧಾನಸಭಾಧ್ಯಕ್ಷ ಯು.ಟಿ.ಖಾದರ್, ವಿಧಾನಸೌಧದ ಮುಂಭಾಗ ಹಾಗೂ ಪಶ್ಚಿಮ ದ್ವಾರದ ಸೌಂದರ್ಯಗಳಲ್ಲಿರುವ ಕಬ್ಬಿಣದ ಗ್ರಿಲ್‌ಗಳನ್ನು ತೆಗೆದು ಆಕರ್ಷಿತವಾಗಿ ಕಾಣುವಂತೆ ಮರದ ಕೆತ್ತನೆಯಲ್ಲಿ ಮಾಡಿದ ವಿನ್ಯಾಸವನ್ನು ಅಳವಡಿಸುವ ಉದ್ದೇಶವಿದೆ. ಈ ಬಗ್ಗೆ ಪರಿಣಿತ ಶಿಲ್ಪಿಗಳ ಅಭಿಪ್ರಾಯ ಪಡೆಯಲಾಗುತ್ತಿದೆ. ಒಬ್ಬೊಬ್ಬರು ಒಂದೊಂದು ರೀತಿ ಹೇಳುತ್ತಿದ್ದಾರೆ. ವಿಧಾನಸೌಧಕ್ಕೆ ಲಕ್ಷಾಂತರ ಜನರು ಬರುತ್ತಾರೆ. ಹಾಗಾಗಿ ಪ್ರವೇಶದ್ವಾರಗಳು ಹೆಚ್ಚು ಆಕರ್ಷಕವಾಗಿ, ಸೌಂದರ್ಯಯುತವಾಗಿ ಇರಬೇಕೆಂಬುದು ನಮ್ಮ ಉದ್ದೇಶ. ಸದ್ಯಕ್ಕೆ ಪ್ರವೇಶದ್ವಾರದ ಒಂದು ಬದಿಯಲ್ಲಿ ಸಂವಿಧಾನ ಪೀಠಿಕೆಯ ಫಲಕ ಪ್ರದರ್ಶಿಸಬೇಕು ಹಾಗೂ ಮತ್ತೊಂದು ಭಾಗದಲ್ಲಿ ನಾಡಗೀತೆ ಪ್ರದರ್ಶಿಸಬೇಕೆಂಬ ಸಲಹೆ ಬಂದಿದೆ. ಆದರೆ ಈ ಬಗ್ಗೆ ಅಂತಿಮ ತೀರ್ಮಾನವಾಗಿಲ್ಲ ಎಂದು ತಿಳಿಸಿದರು.

**ಆಧಾರ:** ವಿಶ್ವವಾಣಿ ದಿನಾಂಕ: 23.09.2023

## 92. ವಿಧಾನಸೌಧ ವೀಕ್ಷಣೆಗೆ ಆಗಮಿಸಿದ ಕೇರಳಿಗರಿಗೆ –ಸ್ಪೀಕರ್ ಯು.ಟಿ.ಖಾದರ್ ಸ್ವಾಗತ

ವಿಮಾನಯಾನದ ಅನುಭವ ಕಂಡಿರದ ಕೇರಳದ ಕುನ್ನಮಂಗಲಂ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬಡ ಮಕ್ಕಳು ಹಾಗೂ ಸ್ಥಳೀಯರು ವಿಧಾನಸೌಧದ ವೀಕ್ಷಣೆಗಾಗಿ ಆಗಮಿಸಿದ ಸಂದರ್ಭದಲ್ಲಿ ಸ್ಪೀಕರ್ ಯು.ಟಿ.ಖಾದರ್ ಅವರನ್ನು ಆತ್ಮೀಯವಾಗಿ ವಿಧಾನಸೌಧಕ್ಕೆ ಬರಮಾಡಿಕೊಂಡರು.

ಇದೇ ವೇಳೆ ಮಾತನಾಡಿದ ಯು.ಟಿ.ಖಾದರ್, ಕೇರಳ ರಾಜ್ಯದ ಕುನ್ನಮಂಗಲಂ ಗ್ರಾಪಂ ಸದಸ್ಯರು, ಬಡ ಮಕ್ಕಳು ಹಾಗೂ ಸ್ಥಳೀಯವರು ವಿಧಾಸೌಧದ ವೀಕ್ಷಣೆಗಾಗಿ ಅನುಮತಿ ಕೋರಿ ಪತ್ರ ಬರೆದಿದ್ದರು. ರಾಜ್ಯದ ಪ್ರಮುಖ ಪ್ರವಾಸಿ ತಾಣವಾದ ವಿಧಾನಸೌಧದ ವೀಕ್ಷಣೆಯನ್ನು ಪ್ರತಿಯೊಬ್ಬರೂ ಮಾಡಲಿ ಎಂದು ಮುಕ್ತವಾಗಿ ಒಪ್ಪಿ, ಅನುಮತಿ ನೀಡಲಾಯಿತು. ವಿಧಾನಸೌಧದ ಇತಿಹಾಸ ಎಲ್ಲರೂ ಅರಿಯಬೇಕು. ಇತರೆ ರಾಜ್ಯಗಳು ಸೇರಿದಂತೆ ವಿದೇಶದಲ್ಲೂ ಈ ಭವ್ಯ ಸೌಧದ ಕುರಿತು ಮಾಹಿತಿ ಪಸರಿಸಬೇಕು ಎಂದು ಹೇಳಿದರು.

ವಿಧಾನಸೌಧದ ವೀಕ್ಷಣೆಗಾಗಿ ಕೇರಳದಿಂದ ಆಗಮಿಸಿದವರಿಗೆ ಗೈಡ್ ವ್ಯವಸ್ಥೆ ಸಹ ಮಾಡಲಾಗಿದ್ದು, ಮುಂದಿನ ದಿನಗಳಲ್ಲಿ ಪ್ರವಾಸಿಗರಿಗೆ ಅನುಕೂಲ ಮಾಡಿಕೊಡುವ ನಿಟ್ಟಿನಲ್ಲಿ ಕ್ರಮವಹಿಸಲಾಗುವುದು ಎಂದು ಸ್ಪೀಕರ್ ತಿಳಿಸಿದರು.

**ಆಧಾರ:** ಉದಯವಾಣಿ, ದಿನಾಂಕ: 26.09.2023

## 93. ವಿಶೇಷ ಶಾಲೆ ರಜೆ ಸಮಸ್ಯೆ ಇತ್ಯರ್ಥಕ್ಕೆ ಕ್ರಮ: ಖಾದರ್

ವಿಶೇಷ ಶಾಲೆಗಳ ದಸರಾ ರಜೆ ಸಮಸ್ಯೆ ಬಗೆಹರಿಸುವುದಾಗಿ ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಭರವಸೆ ನೀಡಿದ್ದಾರೆ. ನಗರದ ಸೈಂಟ್ ಅಗ್ನೆಸ್ ವಿಶೇಷ ಶಾಲೆಯಲ್ಲಿ ವಿಶೇಷ ಅಗತ್ಯವುಳ್ಳ ಮಕ್ಕಳಿಗಾಗಿ ಆಯೋಜಿಸಿದ್ದ ಎರಡು ದಿನಗಳ ಸೌಟ್ಸ್ ಮತ್ತು ಗೈಡ್ಸ್ ವಾರ್ಷಿಕ ಶಿಬಿರದಲ್ಲಿ ಭಾಗವಹಿಸಿ ಮಾತನಾಡಿದರು. ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ವಿಶೇಷ ಶಾಲೆಗಳಿಗೆ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇತ್ತೀಚೆಗೆ ಸುತ್ತೋಲೆ ಹೊರಡಿಸಿ, ವಿಶೇಷ ಶಾಲೆಗಳಿಗೆ ದಸರಾ ಅಥವಾ ಬೇಸಿಗೆ ರಜೆ ನೀಡುವುದಿಲ್ಲ ಎಂದು ತಿಳಿಸಿದೆ. ಇದು ಅಮಾನವೀಯ. ಇದು ಇಲಾಖೆಯ ಹಿಂದಿನ ನಿರ್ದೇಶಕರ ತಪ್ಪು ರಜಾ ದಿನಗಳಿಗೆ ಸಂಬಂಧಿಸಿ ವಿಶೇಷ ಶಾಲೆಗಳೆನ್ನುವ ವ್ಯತ್ಯಾಸ ಮಾಡಬಾರದು. ನಾನು ಈ ಸಮಸ್ಯೆಯನ್ನು ಸರ್ಕಾರದೊಂದಿಗೆ ಚರ್ಚಿಸುತ್ತೇನೆ ಎಂದು ಖಾದರ್ ಭರವಸೆ ನೀಡಿದರು. ವಿಶೇಷ ಶಾಲಾ ಶಿಕ್ಷಕರು ದಣಿವರಿಯದೆ ಕೆಲಸ ಮಾಡುತ್ತಾರೆ, ಅವರಿಗೆ ರಜೆಯ ಅಗತ್ಯವಿದೆ ಎಂದರು.

**ಆಧಾರ:** ಕನ್ನಡ ಪ್ರಭ ದಿನಾಂಕ: 28.09.2023.

## 94. ಪ್ರಶಸ್ತಿ ಪ್ರದಾನ ಮತ್ತು ಗ್ರಂಥ ಲೋಕಾರ್ಪಣೆ ಕಾರ್ಯಕ್ರಮ





ದಿನಾಂಕ: 28-09-2023 ರಂದು ಹುಬ್ಬಳ್ಳಿಯ ಶ್ರೀನಿವಾಸ ಗಾರ್ಡನ್‌ನಲ್ಲಿ ಗಂಗಮ್ಮ ಸೋಮಪ್ಪ ಬೊಮ್ಮಾಯಿ ಟ್ರಸ್ಟ್ ಆಯೋಜಿಸಿದ್ದ ಪ್ರಶಸ್ತಿ ಪ್ರದಾನ ಮತ್ತು ಗ್ರಂಥ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಮಾನ್ಯ ಸಭಾಪತಿ ಶ್ರೀ ಬಸವರಾಜ ಎಸ್ ಹೊರಟ್ಟಿ ಭಾಗವಹಿಸಿ ಮಕ್ಕಳ ಭವಿಷ್ಯಕ್ಕಾಗಿ ತನ್ನ ಇಡೀ ಜೀವನವನ್ನೇ ಸವೆಸುವ ತಾಯಿಯ ಋಣ ತೀರಿಸಲು ಯಾರಿಂದಲೂ ಸಾಧ್ಯವಿಲ್ಲ. ತಾಯಿ ಪಡುವ ಕಷ್ಟಕರ್ಪಾಣ್ಯಗಳು ತಿಳಿಯಲು ಬಾಲ್ಯದಿಂದಲೇ ಮಕ್ಕಳಿಗೆ ಅವಕಾಶ ಕೊಡಬೇಕು. ಬಾಲ್ಯದಲ್ಲೇ ರೆಸಿಡೆನ್ಸಿ ಸ್ಕೂಲ್‌ಗೆ ಹಾಕುವುದು ಸರಿಯಲ್ಲ ಎಂದು ಅಭಿಪ್ರಾಯಪಟ್ಟರು. ಈ ಸಂದರ್ಭದಲ್ಲಿ ಸಾಹಿತಿ ಹೇಮಾಪಟ್ಟಣ ಶೆಟ್ಟಿ, ನೇಹಾ ರಾಮಾಪುರ, ಹೊರೆಯಾಲ ದೊರೆಸ್ವಾಮಿ ಅವರಿಗೆ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು. ಮಾಜಿ ಸಿ.ಎಂ.ಶಾಸಕರಾದ ಶ್ರೀ ಬಸವರಾಜ ಬೊಮ್ಮಾಯಿ, ಶಾಸಕರಾದ ಶ್ರೀ ಅರವಿಂದ ಬೆಲ್ಲದ, ಎಂ.ಆರ್ ಪಾಟೀಲ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಭಾಗ–2

# ಕರ್ನಾಟಕ ವಿಧಾನಮಂಡಲದ ಕಾರ್ಯಚಟುವಟಿಕೆಗಳು

# 1. ವಿಧಾನ ಪರಿಷತ್ತಿನ ಅಧಿವೇಶನದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

ವಿಧಾನ ಪರಿಷತ್ತಿನ 150ನೇ ಅಧಿವೇಶನದಲ್ಲಿ ನಡೆದಿರುವ ಕಾರ್ಯಕಲಾಪಗಳ ವಿವರವನ್ನು ಸದನಕ್ಕೆ ತಿಳಿಸಲು ಇಚ್ಛಿಸುತ್ತೇನೆ. 150ನೇ ವಿಧಾನ ಪರಿಷತ್ ಅಧಿವೇಶನವು ದಿನಾಂಕ: 03.07.2023 ರಿಂದ 21.07.2023 ರವರೆಗೆ ಒಟ್ಟು 15 ದಿನಗಳು ಅಂದರೆ, 70.16 ಗಂಟೆಗಳು ನಡೆಸಲಾಗಿರುತ್ತದೆ.

ದಿನಾಂಕ 03.07.2023 ರಂದು ಮಧ್ಯಾಹ್ನ 12.00 ಗಂಟೆಗೆ ಘನತೆವೆತ್ತ ರಾಜ್ಯಪಾಲರು ವಿಧಾನ ಮಂಡಲದ ಉಭಯ ಸದನಗಳ ಭಾಷಣದ ನಂತರ ಮಧ್ಯಾಹ್ನ 1.00 ಗಂಟೆಗೆ ಸದನವು ಪ್ರಾರಂಭಗೊಂಡಿತು.

ಪ್ರತಿ ಅಧಿವೇಶನದ ಪ್ರಾರಂಭದಲ್ಲಿ ಸಂವಿಧಾನದ ಪೀಠಿಕೆಯನ್ನು ಎಲ್ಲಾ ಮಾನ್ಯ ಶಾಸಕರುಗಳು ಓದಬೇಕೆಂದು ನಿರ್ಣಯಿಸಲಾಗಿರುವ ರೀತ್ಯಾ, ಪ್ರಸ್ತುತ ಅಧಿವೇಶನದ ಮೊದಲ ದಿನದ ಉಪವೇಶನದಲ್ಲಿ ಎಲ್ಲಾ ಮಾನ್ಯ ಶಾಸಕರುಗಳಿಂದ ಸಂವಿಧಾನದ ಪೀಠಿಕೆಯನ್ನು ಪಠಣ ಮಾಡಲಾಯಿತು.

ರಾಜ್ಯಪಾಲರ ವಂದನಾ ನಿರ್ಣಯದ ಮೇಲೆ 13 ಗಂಟೆ 33 ನಿಮಿಷಗಳು ಚರ್ಚೆ ನಡೆಸಿ ದಿನಾಂಕ: 14.07.2023 ರಂದು ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದಂತೆ ವಂದನಾರ್ಪಣಾ ನಿರ್ಣಯವನ್ನು ಸದನವು ಅಂಗೀಕರಿಸಿತು.

ಕಳೆದ ಅಧಿವೇಶನದಿಂದೀಚೆಗೆ ನಿಧನರಾದ ಒಟ್ಟು 10 ಗಣ್ಯರುಗಳಿಗೆ ಸದನವು ತನ್ನ ಸಂತಾಪವನ್ನು ವ್ಯಕ್ತಪಡಿಸಿತು.

ಎಂ.ಐ.ಟಿ ಸ್ಕೂಲ್ ಆಫ್ ಗೌರ್ನಮೆಂಟ್, ಪುಣೆ ಇವರ ವತಿಯಿಂದ ರಾಷ್ಟ್ರಮಟ್ಟದ ನ್ಯಾಷನಲ್ ಲೆಜಿಸ್‌ಲೇಟರ್ಸ್ ಕಾನ್ಫರೆನ್ಸ್–2023ನ್ನು ದಿನಾಂಕ 15.06.2023 ರಿಂದ 17.06.2023ರವರೆಗೆ ಮುಂಬೈನ ಜಿಯೋ ವರ್ಲ್ಡ್ ಸೆಂಟರ್‌ನಲ್ಲಿ ಸಮರ್ಥ ಭಾರತವನ್ನು ನಿರ್ಮಾಣ ಮಾಡುವ ದಿಶೆಯಲ್ಲಿ ಆಯೋಜಿಸಿದ್ದ ಸಮ್ಮೇಳನದ ರುವಾರಿಯಾಗಿದ್ದ ಶ್ರೀ ರಾಹುಲ್ ಕರಾಡೆ ಜೀ ಹಾಗೂ ಅವರ ತಂಡಕ್ಕೆ ಸದನವು ಅಭಿನಂದನಾ ನಿರ್ಣಯವನ್ನು ಮಂಡಿಸಲಾಯಿತು.

ಕಳೆದ ಅಧಿವೇಶನದಲ್ಲಿ ವರದಿಯನ್ನು ಒಪ್ಪಿಸಿದ ನಂತರ ರಾಷ್ಟ್ರಪತಿಯವರಿಂದ ಹಾಗೂ ರಾಜ್ಯಪಾಲರಿಂದ ಒಪ್ಪಿಗೆ ಪಡೆದ ವಿಧೇಯಕಗಳ ಪಟ್ಟಿಯನ್ನು ಕಾರ್ಯದರ್ಶಿಯವರು ಮಂಡಿಸಿದರು.

ದಿನಾಂಕ: 07.07.2023ರಂದು ಮಾನ್ಯ ಮುಖ್ಯಮಂತ್ರಿಯವರು 2023–24ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ಒಪ್ಪಿಸಿದರು. ಆಯವ್ಯಯ ಅಂದಾಜುಗಳ ಮೇಲೆ ಸುಮಾರು 06 ಗಂಟೆ 0.40 ನಿಮಿಷಗಳ ಕಾಲ ಚರ್ಚೆ ನಡೆಸಿ, ದಿನಾಂಕ:21.07.2023ರಂದು ಸರ್ಕಾರದಿಂದ ಉತ್ತರಿಸಲಾಯಿತು.

ಸಭೆಯ ಮುಂದಿಡಲಾಗುವ ಕಾಗದ ಪತ್ರಗಳ 01, 02, 03 ಹಾಗೂ 04ನೇ ಪಟ್ಟಿಗಳನ್ನು ಮಂಡಿಸಲಾಯಿತು.

ಭಾರತ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆ ಮಾರ್ಚ್ 2022ಕ್ಕೆ ಕೊನೆಗೊಂಡ ವರ್ಷಕ್ಕೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕ ಪರಿಶೋಧಕರ ರಾಜ್ಯ ಸರ್ಕಾರದ ಹಣಕಾಸಿನ ವ್ಯವಹಾರಗಳ ಲೆಕ್ಕಪರಿಶೋಧನಾ ವರದಿಯನ್ನು (2023ನೇ ವರ್ಷದ ವರದಿ ಸಂಖ್ಯೆ:2) ಸಭೆಯ ಮುಂದಿಡಲಾಯಿತು.

ಕರ್ನಾಟಕ ವಿಧಾನಪರಿಷತ್ತಿನ ಹಕ್ಕುಬಾಧ್ಯತಾ ಸಮಿತಿಯ 100ನೇ ವರದಿ, ಭರವಸೆಗಳ ಸಮಿತಿಯ 49ನೇ ವರದಿ, 2023ನೇ ಸಾಲಿನ ಸದಸ್ಯರುಗಳ ಖಾಸಗಿ ವಿಧೇಯಕಗಳು ಹಾಗೂ

ನಿರ್ಣಯಗಳ ಸಮಿತಿಯ ಮೊದಲನೇ ವರದಿ, 15ನೇ ವಿಧಾನ ಸಭೆಯ 2020–21ನೇ ಸಾಲಿನ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಸಂಬಂಧಪಟ್ಟ ಹನ್ನೆರಡನೇ ವಿಶೇಷ ವರದಿಗಳನ್ನು ಸದನದಲ್ಲಿ ಮಂಡಿಸಲಾಯಿತು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಕುಡಿಯುವ ನೀರು ಮತ್ತು ನೈರ್ಮಲ್ಯ ಕಾರ್ಯಕ್ರಮಕ್ಕೆ ಬಿಡುಗಡೆಯಾದ ಹಣದಲ್ಲಿ ಅವ್ಯವಹಾರ ಮಾಡಿರುವುದನ್ನು ಪರಿಶೀಲಿಸಲು ರಚಿಸಲಾಗಿರುವ ವಿಶೇಷ ಸದನ ಸಮಿತಿಯ ವರದಿಯನ್ನು ಒಪ್ಪಿಸಲಾಯಿತು.

ರಾಜ್ಯದ ವಿವಿಧ ನಿಗಮಗಳಲ್ಲಿ ಗಂಗಾ ಕಲ್ಯಾಣ ಯೋಜನೆಯಡಿ ಕೈಗೊಂಡಿರುವ ಕಾಮಗಾರಿಗಳಲ್ಲಿ ನಡೆದಿರುವ ಅವ್ಯವಹಾರಗಳ ಸಂಬಂಧ ಪರಿಶೀಲಿಸಿ ವರದಿಯನ್ನು ಸಲ್ಲಿಸಲು ರಚಿಸಲಾಗಿರುವ ವಿಶೇಷ ಸದನ ಸಮಿತಿಯು ತನ್ನ ವರದಿಯನ್ನು ಸಲ್ಲಿಸಲು ದಿನಾಂಕ: 22.04.2023 ರಿಂದ 06 ತಿಂಗಳ ಕಾಲಾವಕಾಶವನ್ನು ಸದನದ ಸಹಮತಿಯನ್ನು ಕಾಯ್ದಿರಿಸಿ ವಿಸ್ತರಿಸಿರುವ ಹಾಗೂ ರಾಜ್ಯದಲ್ಲಿರುವ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಕ್ಲಬ್‌ಗಳ ಕಾರ್ಯವೈಖರಿ ಮತ್ತು ಚಟುವಟಿಕೆಗಳನ್ನು ಪರಿಶೀಲಿಸಲು ರಚಿಸಲಾಗಿರುವ ಸದನ ಸಮಿತಿಯು ತನ್ನ ವರದಿಯನ್ನು ಸಲ್ಲಿಸಲು ದಿನಾಂಕ: 21.03.2023 ರಿಂದ 06 ತಿಂಗಳ ಕಾಲಾವಕಾಶವನ್ನು ಸದನದ ಸಹಮತಿಯನ್ನು ಕಾಯ್ದಿರಿಸಿ ವಿಸ್ತರಿಸಲಾಗಿರುವ ಪ್ರಸ್ತಾವಗಳನ್ನು ಸದನದಲ್ಲಿ ಮಂಡಿಸಿ, ಸದನದ ಸಹಮತಿಯನ್ನು ಪಡೆಯಲಾಯಿತು.

ವಿಧಾನ ಮಂಡಲದ/ವಿಧಾನ ಪರಿಷತ್ತಿನ ವಿವಿಧ ಸಮಿತಿಗಳಿಗೆ, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯದ ಸೆನೆಟ್‌ಗೆ ಹಾಗೂ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ವ್ಯವಸ್ಥಾಪನಾ ಮಂಡಳಿಗೆ ಚುನಾವಣೆ ನಡೆಸುವ ಬದಲು ನಾಮನಿರ್ದೇಶಿಸಲು ಮಾನ್ಯ ಸಭಾಪತಿಯವರಿಗೆ ಅಧಿಕಾರ ನೀಡುವ ಬಗ್ಗೆ ಪ್ರಸ್ತಾವವನ್ನು ಸದನದಲ್ಲಿ ಮಂಡಿಸಿ ಸದನದ ಸಹಮತಿಯನ್ನು ಪಡೆಯಲಾಯಿತು.

ನಿಯಮ 59 ರಡಿಯಲ್ಲಿ ಒಟ್ಟು 05 ಸೂಚನೆಗಳನ್ನು ಸ್ವೀಕರಿಸಲಾಗಿದ್ದು, ಆ ಪೈಕಿ 02 ಸೂಚನೆಗಳು ತಿರಸ್ಕೃತಗೊಂಡಿದ್ದು, 03 ಸೂಚನೆಗಳು ನಿಯಮ 68ಕ್ಕೆ ಪರಿವರ್ತನೆಯಾಗಿರುವ ಪೈಕಿ 01 ಸೂಚನೆಗೆ ಸದನದಲ್ಲಿ ಉತ್ತರಿಸಲಾಗಿದೆ.

ಪ್ರಸ್ತುತ ಅಧಿವೇಶನದಲ್ಲಿ ಒಟ್ಟು 939 ಪ್ರಶ್ನೆಗಳನ್ನು ಸ್ವೀಕರಿಸಿದ್ದು, ಅದರಲ್ಲಿ 135 ಪ್ರಶ್ನೆಗಳನ್ನು ಚುಕ್ಕೆ ಗುರುತಿನ ಪ್ರಶ್ನೆಗಳನ್ನಾಗಿ ಅಂಗೀಕರಿಸಿದ್ದು, ಅವುಗಳ ಪೈಕಿ 104 ಪ್ರಶ್ನೆಗಳಿಗೆ ಸದನದಲ್ಲಿ ಉತ್ತರಿಸಲಾಯಿತು ಹಾಗೂ 29 ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ಉತ್ತರಗಳನ್ನು ಮಂಡಿಸಲಾಯಿತು. ಲಿಖಿತ ಮೂಲಕ ಉತ್ತರಿಸುವ ಒಟ್ಟು 804 ಪ್ರಶ್ನೆಗಳ ಪೈಕಿ 521 ಪ್ರಶ್ನೆಗಳಿಗೆ ಸದನದಲ್ಲಿ ಉತ್ತರಗಳನ್ನು ಮಂಡಿಸಲಾಗಿದೆ.

ನಿಯಮ 58ರಡಿಯಲ್ಲಿ ಅರ್ಧಗಂಟೆ ಕಾಲಾವಧಿ ಚರ್ಚೆಗಾಗಿ ಒಟ್ಟು 04 ಸೂಚನೆಗಳನ್ನು ಸ್ವೀಕರಿಸಲಾಗಿರುತ್ತದೆ. ಯಾವುದೇ ಸೂಚನೆಗಳನ್ನು ಚರ್ಚಿಸಿರುವುದಿಲ್ಲ.

ನಿಯಮ 72ರಡಿಯಲ್ಲಿ 159 ಸೂಚನೆಗಳನ್ನು ಸ್ವೀಕರಿಸಿದ್ದು, ಅವುಗಳ ಪೈಕಿ 19 ಸೂಚನೆಗಳಿಗೆ ಸದನದಲ್ಲಿ ಉತ್ತರಿಸಲಾಗಿದೆ.

ನಿಯಮ 330ರಡಿಯಲ್ಲಿ 85ಸೂಚನೆಗಳನ್ನು ಸ್ವೀಕರಿಸಿದ್ದು, ಅವುಗಳ ಪೈಕಿ 10 ಸೂಚನೆಗಳಿಗೆ ಸದನದಲ್ಲಿ ಉತ್ತರಿಸಲಾಗಿದೆ. ಹಾಗೂ ಶೂನ್ಯ ವೇಳೆ ಪ್ರಸ್ತಾವನೆಯ ಒಟ್ಟು 56 ಸೂಚನೆಗಳ ಪೈಕಿ 46 ಸೂಚನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸಲಾಗಿದೆ.

ನಿಯಮ 330ಎರ ವಿಶೇಷ ಪ್ರಸ್ತಾವಗಳಡಿಯಲ್ಲಿ ಸ್ವೀಕರಿಸಲಾಗಿರುವ ಒಟ್ಟು 12 ಸೂಚನೆಗಳ ಪೈಕಿ 07 ಸೂಚನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸಲಾಗಿದೆ.

ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ ಒಟ್ಟು 13 ವಿಧೇಯಕಗಳಿಗೆ ವಿಧಾನ ಪರಿಷತ್‌ಯಿಂದ ಸಹಮತಿಯನ್ನು ನೀಡಲಾಗಿದೆ.

ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ)(ತಿದ್ದುಪಡಿ) ವಿಧೇಯಕ, 2023ನ್ನು ಪರಿಶೀಲನಾ ಸಮಿತಿಗೆ ವಹಿಸಲಾಯಿತು.

ಅಂತಿಮವಾಗಿ ಸನ್ಮಾನ್ಯ ಸಭಾಪತಿಗಳು ಮಾನ್ಯ ಮುಖ್ಯಮಂತ್ರಿಗಳಿಗೆ, ಮಾನ್ಯ ಸಭಾನಾಯಕರಿಗೆ, ಎಲ್ಲಾ ಮಂತ್ರಿ ವರ್ಗದವರಿಗೆ, ಸರ್ಕಾರದ ಮುಖ್ಯ ಸಚೇತಕರಿಗೆ, ಪತ್ರಿಕಾ ಹಾಗೂ ಮಾಧ್ಯಮ ವರದಿಗಾರರಿಗೆ, ವಿಧಾನ ಪರಿಷತ್ತಿನ ಸಚಿವಾಲಯದ ಅಧಿಕಾರಿ/ನೌಕರ ವರ್ಗದವರಿಗೆ ಮತ್ತು ಸರ್ಕಾರದ ಎಲ್ಲಾ ಅಧಿಕಾರಿ/ನೌಕರ ವೃಂದದವರಿಗೆ ಸದನದ ಕಾರ್ಯಕಲಾಪಗಳನ್ನು ಸುಗಮವಾಗಿ ನಡೆಸಲು ಸಹಕರಿಸಿದ್ದಕ್ಕೆ ತುಂಬು ಹೃದಯದ ಧನ್ಯವಾದಗಳನ್ನು ಸಲ್ಲಿಸಿದರು.

****

## 2. ವಿಧಾನಸಭೆಯ 11ನೇ ಅಧಿವೇಶನದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

ಹದಿನಾರನೇ ವಿಧಾನಸಭೆಯ ಮೊದಲನೇ ಅಧಿವೇಶನದ ಮುಂದುವರೆದ ಉಪವೇಶನವು ದಿನಾಂಕ 03ನೇ ಜುಲೈ, 2023 ರಿಂದ 21ನೇ ಜುಲೈ, 2023 ರವರೆಗೆ ಒಟ್ಟು 15 ದಿನಗಳ ಕಾಲ ಸುಮಾರು 77 ಗಂಟೆ 19 ನಿಮಿಷಗಳ ಕಾಲ ಕಾರ್ಯಕಲಾಪ ನಡೆಸಲಾಗಿದೆ.

- ದಿನಾಂಕ: 03.07.2023 ರಂದು ಮಾನ್ಯ ರಾಜ್ಯಪಾಲರು ವಿಧಾನಮಂಡಲದ ಉಭಯ ಸದನಗಳ ಸದಸ್ಯರನ್ನುದ್ದೇಶಿಸಿ ಭಾಷಣ ಮಾಡಿರುತ್ತಾರೆ. ಮಾನ್ಯ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದಲ್ಲಿ 34 ಮಾನ್ಯ ಸದಸ್ಯರುಗಳು ಒಟ್ಟು 12 ಗಂಟೆಗೆ 39 ನಿಮಿಷಗಳ ಕಾಲ ಭಾಗವಹಿಸಿದ್ದು, ವಂದನಾ ನಿರ್ಣಯದ ಪ್ರಸ್ತಾವವನ್ನು ದಿನಾಂಕ: 13.07.2023 ರಂದು ಅಂಗೀಕರಿಸಲಾಗಿದೆ.

- 2023–24ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ಮಾನ್ಯ ಮುಖ್ಯಮಂತ್ರಿಯವರು ದಿನಾಂಕ: 07.07.2023 ರಂದು ಮಂಡಿಸಿರುತ್ತಾರೆ. ಆಯವ್ಯಯದ ಸಾಮಾನ್ಯ ಚರ್ಚೆಯಲ್ಲಿ 62 ಮಾನ್ಯ ಸದಸ್ಯರುಗಳು ಒಟ್ಟು 12 ಗಂಟೆಗೆ 52 ನಿಮಿಷಗಳ ಕಾಲ ಭಾಗವಹಿಸಿದ್ದು, ದಿನಾಂಕ: 20.07.2023 ರಂದು ಮಾನ್ಯ ಮುಖ್ಯಮಂತ್ರಿಯವರು ಉತ್ತರ ನೀಡಿದ ನಂತರ ಮತಕ್ಕೆ ಹಾಕಿ ಅಂಗೀಕರಿಸಲಾಯಿತು.

- ಈ ಅಧಿವೇಶನದಲ್ಲಿ ವಿಧಾನಸಭೆಯ ನೂತನ ಉಪ ಸಭಾಧ್ಯಕ್ಷರನ್ನಾಗಿ ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ ಇವರನ್ನು ಚುನಾಯಿಸಲಾಗಿರುತ್ತದೆ.

- ಇತ್ತೀಚೆಗೆ ನಿಧನ ಹೊಂದಿದ ಗಣ್ಯರುಗಳಿಗೆ ಸಂತಾಪ ಸೂಚನಾ ನಿರ್ಣಯವನ್ನು ಮಂಡಿಸಿ, ಅಂಗೀಕರಿಸಲಾಗಿದೆ.

- ಮಾನ್ಯ ರಾಜ್ಯಪಾಲರಿಂದ ಒಪ್ಪಿಗೆ ಪಡೆದ ವಿಧೇಯಕಗಳ ಬಗ್ಗೆ ಕಾರ್ಯದರ್ಶಿಯವರ ವರದಿಯನ್ನು ಮಂಡಿಸಲಾಗಿದೆ.

- ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ನೀಡಿರುವ ರಾಜ್ಯ ಸರ್ಕಾರದ ಹಣಕಾಸಿನ ವ್ಯವಹಾರಗಳ ಲೆಕ್ಕ ಪರಿಶೋಧನಾ ವರದಿಯನ್ನು (2023ರ ವರದಿ ಸಂಖ್ಯೆ–2) ಸದನದಲ್ಲಿ ಮಂಡಿಸಲಾಗಿದೆ.

- ಹದಿನೈದನೇ ವಿಧಾನಸಭೆಯ 2021–22 ಹಾಗೂ 2022–23ನೇ ಸಾಲಿನ ಸರ್ಕಾರಿ ಭರವಸೆಗಳ ಸಮಿತಿಯ ಹದಿನೈದನೇ ವರದಿ, ಹದಿನೈದನೇ ವಿಧಾನಸಭೆಯ 2020–21ನೇ ಸಾಲಿನ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಸಂಬಂಧಪಟ್ಟ ಹನ್ನೆರಡನೇ ವಿಶೇಷ ವರದಿಯನ್ನು ಸದನದಲ್ಲಿ ಮಂಡಿಸಲಾಗಿದ್ದು ಒಟ್ಟು 29 ಅಧಿಸೂಚನೆಗಳು 02 ಅಧ್ಯಾದೇಶಗಳು ಮತ್ತು 70 ವಾರ್ಷಿಕ ವರದಿಗಳು, 99 ಲೆಕ್ಕ ಪರಿಶೋಧನಾ ವರದಿಗಳು, 04 ಅನುಪಾಲನ ವರದಿಗಳು ಹಾಗೂ 01 ಲೆಕ್ಕ ತಪಾಸಣಾ ವರದಿಯನ್ನು ಸದನದಲ್ಲಿ ಮಂಡಿಸಲಾಗಿದೆ.

- ಈ ಅಧಿವೇಶನದಲ್ಲಿ ಧನವಿನಿಯೋಗ ವಿಧೇಯಕವೂ ಸೇರಿದಂತೆ ಒಟ್ಟು 14 ವಿಧೇಯಕಗಳನ್ನು ಮಂಡಿಸಿ ಅಂಗೀಕರಿಸಲಾಗಿದೆ.

- ನಿಯಮ 60 ರಡಿಯಲ್ಲಿ ನೀಡಿದ್ದ 06 ಸೂಚನೆಗಳನ್ನು ನಿಯಮ 69ಕ್ಕೆ ಪರಿವರ್ತಿಸಲಾಗಿದ್ದು, ಒಟ್ಟು 04 ಸೂಚನೆಗಳನ್ನು ನಿಯಮ 69ರಡಿಯಲ್ಲಿ ಚರ್ಚಿಸಲಾಗಿರುತ್ತದೆ.

**ನೆಹರೂ ಶ್ಲಾಘಿಸಿದ ಮೋದಿ:** ಸಂದರ್ಭ ಸಿಕ್ಕಾಗಲೆಲ್ಲ ದೇಶದ ಪ್ರಥಮ ಪ್ರಧಾನಿ ಜವಾಹರಲಾಲ್ ನೆಹರೂ ಮತ್ತು ಅವರ ಕುಟುಂಬದ ಮೇಲೆ ಹರಿಹಾಯುವ ಪ್ರಧಾನಿ ಮೋದಿ, ಹಳೆಯ ಸಂಸತ್ ಭವನದಲ್ಲಿ ನಡೆದ ಕೊನೆಯ ಹಾಗೂ ವಿದಾಯ ಅಧಿವೇಶನದ ವೇಳೆ ನೆಹರೂ ಅವರನ್ನು ಬಾಯಿ ತುಂಬಾ ಹೊಗಳಿದ್ದು ವಿಶೇಷವಾಗಿತ್ತು. ಸ್ವಾತಂತ್ರ್ಯ ದೊರೆತ ಸಂದರ್ಭದಲ್ಲಿ ನೆಹರೂ ಅವರು ಇದೇ ಸೆಂಟ್ರಲ್ ಹಾಲ್ನಲ್ಲಿ ಮಾಡಿದ್ದ 'ಭವಿಷ್ಯದೊಂದಿಗೆ ಮುಖಾಮುಖಿ' (ಟ್ರಿಸ್ಟ್ ವಿದ್ ಡೆಸ್ಟಿನಿ) ಭಾಷಣವು ಇಂದಿಗೂ ಪ್ರತಿಯೊಬ್ಬರಿಗೂ ಸ್ಫೂರ್ತಿದಾಯಕವಾಗಿದೆ ಎಂದು ಮೋದಿ ವರ್ಣಿಸಿದರು. ಇನ್ನೊಬ್ಬ ಮಾಜಿ ಪ್ರಧಾನಿ ಎ.ಬಿ.ವಾಜಪೇಯಿಯವರ 'ಸರ್ಕಾರಗಳು ಬರುತ್ತವೆ, ಹೋಗುತ್ತವೆ' ಎಂಬ ಪ್ರಖ್ಯಾತ ನುಡಿಯನ್ನು ಉಲ್ಲೇಖಿಸಿದರು. ದೇಶದ ಸಂಸದೀಯ ಪಯಣದ 75 ವರ್ಷಗಳನ್ನು ಮೆಲುಕು ಹಾಕುವಾಗ 1975ರ ತುರ್ತು ಪರಿಸ್ಥಿತಿಯನ್ನು ನೆನೆದು ಕಾಂಗ್ರೆಸ್‌ಗೆ ಪರೋಕ್ಷವಾಗಿ ಗುದ್ದು ಹಾಕಲೂ ಅವರು ಮರೆಯಲಿಲ್ಲ. ಅಲ್ಲದೆ, ಮನಮೋಹನ್ ಸಿಂಗ್ ಸರ್ಕಾರದ ಮೊದಲ ಅವಧಿಯ 2008ರ ನೋಟಿಗಾಗಿ ನೋಟು ಹಗರಣವನ್ನು ಕೂಡ ಪ್ರಧಾನಿ ಪ್ರಸ್ತಾಪಿಸಿದರು. ಹಿಂದಿನ ಪ್ರಧಾನಿಗಳಾದ ಲಾಲ್ ಬಹದೂರ್ ಶಾಸ್ತ್ರಿ, ಇಂದಿರಾಗಾಂಧಿ ಮತ್ತು ಪಿ.ವಿ.ನರಸಿಂಹ ರಾವ್ ಅವರ ಗುಣಗಾನವನ್ನು ಮಾಡಿದರು.

**ಹೊಸ ಕಟ್ಟಡದಲ್ಲಿ ಕಲಾಪ ಆರಂಭ:** ಹಳೆಯ ಕಟ್ಟಡದ ಸಮೀಪವೇ ಇರುವ ನೂತನ ಸಂಸತ್ ಭವನದಲ್ಲಿ ಲೋಕಸಭೆ ಕಲಾಪ ಆರಂಭವಾಗಿ ಭಾರತದ ಸಂಸದೀಯ ಇತಿಹಾಸದಲ್ಲಿ ಹೊಸ ಅಧ್ಯಾಯವೊಂದು ತೆರೆದು ಕೊಂಡಿತು. ಕೇಂದ್ರ ಸಚಿವರಾದ ಅಮಿತ್ ಷಾ, ರಾಜನಾಥ್ ಸಿಂಗ್, ನಿತಿನ್ ಗಡ್ಕರಿ ಮತ್ತಿತರ ನಾಯಕರೊಂದಿಗೆ ಪ್ರಧಾನಿ ಮೋದಿ ಸಂವಿಧಾನ ಸದನದಿಂದ ನೂತನ ಭವನಕ್ಕೆ ನಡೆದುಕೊಂಡು ಬಂದರು. ಅವರನ್ನು ಹಿಂಬಾಲಿಸಿದ ಎನ್‌ಡಿಎ ಸಂಸದರು, ಭಾರತ್ ಮಾತಾ ಕೀ ಜೈ, ವಂದೇ ಮಾತರಂ ಎಂಬ ಘೋಷಣೆಗಳನ್ನು ಕೂಗಿದರು. ಪ್ರತಿಪಕ್ಷಗಳ ಅನೇಕ ಎಂಪಿಗಳು ಕೂಡ ನೂತನ ಕಟ್ಟಡಕ್ಕೆ ನಡೆದುಕೊಂಡೇ ಬಂದರು. ಮೊದಲ ದಿನದ ಕಲಾಪಗಳನ್ನು ಆರಂಭಿಸಿದ ಲೋಕಸಭೆ ಸ್ಪೀಕರ್ ಓಂ ಬಿರ್ಲಾ, ಸದಸ್ಯರಿಗೆ ಗಣೇಶ ಚತುರ್ಥಿಯ ಶುಭಾಶಯ ಕೋರಿದರು. ಜನರ ಸಮಸ್ಯೆಗಳನ್ನು ಚರ್ಚಿಸುವ ಮೂಲಕ ಸಂಸದೀಯ ಚರ್ಚೆಯ ಹೊಸ ಮಟ್ಟವನ್ನು ರೂಪಿಸಿ ಎಂದು ಸದಸ್ಯರಿಗೆ ಸಲಹೆ ನೀಡಿದರು. ಪ್ರಧಾನಿ ಮೋದಿ ಮೇ 28 ರಂದು ಉದ್ಘಾಟಿಸಿದ ನೂತನ ಸಂಸತ್ ಭವನ ವೇದ ಕಾಲದಿಂದ ಹಿಡಿದು ಇಂದಿನವರೆಗಿನ ಭಾರತದ ಜನತಾಂತ್ರಿಕ ಪರಂಪರೆಗಳನ್ನು ವರ್ಣಿಸುವ ಕಲಾಕೃತಿಗಳನ್ನು ಹೊಂದಿದೆ.

**ಸಂಕಲ್ಪ ಕಾರ್ಯಕ್ರಮ:** ಭಾರತದ ಸಂಸತ್ತಿನ ಶ್ರೀಮಂತ ಪರಂಪರೆಯನ್ನು ಸ್ಮರಿಸಲು ಮತ್ತು ಭಾರತವನ್ನು 2047ರೊಳಗೆ ಅಭಿವೃದ್ಧಿ ಹೊಂದಿದ ದೇಶವನ್ನಾಗಿ ಮಾಡುವ ಸಂಕಲ್ಪ ಕೈಗೊಳ್ಳಲು ಕಾರ್ಯಕ್ರಮ ಆಯೋಜಿಸಲಾಗಿತ್ತು.

**ಆಧಾರ:** ವಿಜಯವಾಣಿ, ದಿನಾಂಕ: 07.09.2023.

## 15. ಸಂಸದೀಯ ಚರಿತ್ರೆಯಲ್ಲಿ ಹೊಸ ಶಕೆ

ನೂತನ ಸಂಸತ್ ಭವನದಲ್ಲಿ ಲೋಕಸಭೆಯ ಕಲಾಪ ನಡಯಿತು. ಇದರೊಂದಿಗೆ ಭಾರತದ ಸಂಸದೀಯ ಇತಿಹಾಸದಲ್ಲಿ ಹೊಸ ಅಧ್ಯಾಯ ಆರಂಭವಾಯಿತು.

ಪ್ರಧಾನಿ ನರೇಂದ್ರ ಮೋದಿ ಅವರು ಕೇಂದ್ರ ಸಚಿವರಾದ ಅಮಿತ್ ಶಾ, ರಾಜನಾಥ್ ಸಿಂಗ್, ನಿತಿನ್ ಗಡ್ಕರಿ ಮತ್ತಿತರ ನಾಯಕರೊಂದಿಗೆ ಹಳೆಯ ಸಂಸತ್ ಭವನದಿಂದ ನಿರ್ಗಮಿಸಿ ಹೊಸ ಸಂಸತ್ತಿಗೆ ಪದಾರ್ಪಣೆ ಮಾಡಿದರು.

ಸ್ಪೀಕರ್ ಓಂ ಬಿರ್ಲಾ ಅವರು, 'ಹೊಸ ಸಂಸತ್ ಭವನ ಪ್ರವೇಶವನ್ನು ಐತಿಹಾಸಿಕ ಕಾರ್ಯಕ್ರಮ' ಎಂದು ಬಣ್ಣಿಸಿದರು.

ಸಂಸದರಿಗೆ ಗಣೇಶ ಚತುರ್ಥಿಯ ಶುಭಾಶಯ ಕೋರಿದ ಅವರು, 'ಜನರಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಧ್ವನಿ ಎತ್ತುವ ಮೂಲಕ ಸಂಸದೀಯ ಚರ್ಚೆಗಳಿಗೆ ಹೊಸ ಭಾಷ್ಯ ಬರೆಯೋಣ' ಎಂದು ಕರೆ ನೀಡಿದರು. ರಾಷ್ಟ್ರವನ್ನು ಕಟ್ಟಿದ ಮತ್ತು ದೇಶಕ್ಕೆ ತನ್ನದೇ ಸಂವಿಧಾನ ರಚಿಸಿಕೊಟ್ಟ ಮಹಾತ್ಮರಿಗೆ ಗೌರವ ನಮನ ಸಲ್ಲಿಸಿದರು.

**ಹೊಸ ಸಂಸತ್ತು ಹೇಗಿದೆ:** ನೂತನ ಸಂಸತ್ ಭವನವು ವೇದಕಾಲದಿಂದ ಈವರೆಗಿನ ಭಾರತದ ಪ್ರಜಾಸತ್ತಾತ್ಮಕ ಪರಂಪರೆಯ ಕಥೆಗಳನ್ನು ಸಾರಿದೆ. ದೇಶದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ ಬೆಳೆದು ಬಂದ ಹಾದಿಯನ್ನು ಬಿಂಬಿಸುವ ಹಲವು ವಸ್ತುಗಳನ್ನು ಇಲ್ಲಿನ ಕಾನ್ಸ್ಟಿಟ್ಯೂಷನ್ ಹಾಲ್‌ನಲ್ಲಿ ಪ್ರದರ್ಶಿಸಲಾಗಿದೆ. ಹಿಂದೂಗಳು ಪೂಜಿಸುವ, ಶಕ್ತಿಯ ಮೂಲ ಎಂದು ಆರಾಧಿಸುವ 'ಶ್ರೀ ಯಂತ್ರ' ವನ್ನು ಕಾನ್ಸ್ಟಿಟ್ಯೂಷನ್ ಹಾಲ್ ಹೋಲುತ್ತದೆ.

ಕಟ್ಟಡದಲ್ಲಿ ಮಹಾತ್ಮ ಗಾಂಧಿ, ಚಾಣಕ್ಯ, ಗಾರ್ಗಿ, ಸರ್ದಾರ್ ವಲ್ಲಭಾಯಿ ಪಟೇಲ್, ಬಿ.ಆರ್.ಅಂಬೇಡ್ಕರ್ ಮತ್ತು ಕೋನಾರ್ಕ್ನ ಸೂರ್ಯ ದೇಗುಲದ ರಥದ ಚಕ್ರದ ಕಂಚಿನ ಪ್ರತಿಮೆಗಳನ್ನು ಪ್ರದರ್ಶನಕ್ಕೆ ಇಡಲಾಗಿದೆ.

**ನವಿಲು, ಕಮಲದ ವಿನ್ಯಾಸ:** ಲೋಕಸಭೆಯ ಸಭಾಂಗಣವನ್ನು ರಾಷ್ಟ್ರೀಯ ಪಕ್ಷಿ ನವಿಲಿನ ಥೀಮ್‌ನಲ್ಲಿ ಮತ್ತು ರಾಜ್ಯಸಭೆಯ ಸಭಾಂಗಣವನ್ನು ರಾಷ್ಟ್ರಿಯ ಪುಷ್ಪ ಕಮಲದ ಥೀಮ್‌ನಲ್ಲಿ ವಿನ್ಯಾಸಗೊಳಿಸಲಾಗಿದೆ.

ನಾಲ್ಕು ಅಂತಸ್ತಿನ ಸಂಸತ್ ಭವನವು 64,500 ಚದರ ಮೀಟರ್ ಪ್ರದೇಶದಲ್ಲಿ ನಿರ್ಮಾಣವಾಗಿದೆ. ಲೋಕಸಭೆಯ ಸಭಾಂಗಣದಲ್ಲಿ 888 ಆಸನಗಳ ವ್ಯವಸ್ಥೆ ಇದೆ. ಇದನ್ನು 1,272ಕ್ಕೆ ಹೆಚ್ಚಿಸಲು ಅವಕಾಶವಿದೆ. ರಾಜ್ಯಸಭಾ ಸಭಾಂಗಣವು 384 ಆಸನಗಳ ಸಾಮರ್ಥ್ಯ ಹೊಂದಿದೆ.

ನೂತನ ಸಂಸತ್ತಿಗೆ ಆರು ಆಗಮನ–ನಿರ್ಗಮನ ದ್ವಾರಗಳಿವೆ. ಈ ಪೈಕಿ ಬನವಾಸಿ ಮಧುಕೇಶ್ವರ ದೇವಾಲಯದ ಎದುರು ಕ್ರಿ.ಪೂ.9ನೇ ಶತಮಾನದಲ್ಲಿ ನಿರ್ಮಿಸಿದ್ದ ಕಲ್ಲಿನ ಆನೆಗಳೆರಡು ಗಜದ್ವಾರಕ್ಕೆ ಪ್ರೇರಣೆ ಎನ್ನಲಾಗಿದೆ. ಉಳಿದಂತೆ ಅಶ್ವದ್ವಾರ, ಶಾರ್ದುಲ ದ್ವಾರ, ಹಂಸದ್ವಾರ, ಮಕರ ದ್ವಾರ ಮತ್ತು ಗರುಡ ದ್ವಾರಗಳಿವೆ.

'ಪಾರ್ಲಿಮೆಂಟ್ ಹೌಸ್ ಆಫ್ ಇಂಡಿಯಾ': ಸಂಸತ್ ಭವನದ ಹೊಸ ಕಟ್ಟಡಕ್ಕೆ 'ಪಾರ್ಲಿಮೆಂಟ್ ಹೌಸ್ ಆಫ್ ಇಂಡಿಯಾ' ಎಂದು ನಾಮಕರಣ ಮಾಡಿ ಲೋಕಸಭಾ ಸಚಿವಾಲಯವು ಅಧಿಸೂಚನೆ ಹೊರಡಿಸಿದೆ. ಸಂಸತ್ ಭವನದ ಪ್ಲಾಟ್ ನಂ 118ರ ಆವರಣದಲ್ಲಿ ಹೊಸ ಕಟ್ಟಡವಿದೆ. ನವದೆಹಲಿಯ ರೈಸಿನಾ ರಸ್ತೆಯಿಂದ ದಕ್ಷಿಣ ಹಾಗೂ ರೆಡ್ಕ್ರಾಸ್ ರಸ್ತೆಯಿಂದ ಉತ್ತರ ಭಾಗದವರೆಗೆ ವ್ಯಾಪಿಸಿರುವ ಈ

ಕಟ್ಟಡಕ್ಕೆ **'ಪಾರ್ಲಿಮೆಂಟ್ ಹೌಸ್ ಆಫ್ ಇಂಡಿಯಾ'** ಎಂದು ನಾಮಕರಣ ಮಾಡಲಾಗಿದೆ ಎಂದು ಸ್ಪೀಕರ್ ತಿಳಿಸಿದ್ದಾರೆ.

**ಕಾಲ್ನಡಿಗೆಯಲ್ಲೇ ಬಂದರು:** ವಿಶೇಷ ಅಧಿವೇಶನದ ಎರಡನೇ ದಿನವಾದ ಸಂಸತ್‌ನ ಹಳೆಯ ಕಟ್ಟಡದಲ್ಲಿರುವ ಸೆಂಟ್ರಲ್ ಹಾಲ್ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಂಸದರನ್ನು ಉದ್ದೇಶಿಸಿ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ ಅವರು, ಸಂಸದೀಯ ಪರಂಪರೆಯನ್ನು ಮೆಲುಕು ಹಾಕಿದರು.

ಬಳಿಕ ಮೋದಿ ಸೇರಿದಂತೆ ಸಂಸದರು ಹೊಸ ಸಂಸತ್ ಭವನದತ್ತ ಹೆಜ್ಜೆ ಹಾಕಿದರು. ಕೇಂದ್ರದ ರಕ್ಷಣಾ ಸಚಿವ ರಾಜನಾಥ ಸಿಂಗ್, ಗೃಹ ಸಚಿವ ಅಮಿತ್ ಶಾ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಸೇರಿದಂತೆ ಎನ್‌ಡಿಎ ಕೂಟದ ಸಂಸರು ಪ್ರಧಾನಿಯ ಜೊತೆಗೂಡಿದರು. ಈ ವೇಳೆ 'ಭಾರತ್ ಮಾತಾ ಕೀ ಜೈ...', 'ವಂದೇ ಮಾತರಂ' ಘೋಷಣೆ ಕೂಗಿದರು.

ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಪ್ರತ್ಯೇಕವಾಗಿ ನಡೆದುಕೊಂಡೇ ಹೊಸ ಭವನಕ್ಕೆ ತೆರಳಿದರು. ಬಳಿಕ ಪ್ರತಿಪಕ್ಷಗಳ ಸಂಸದರು ಕೂಡ ಕಾಲ್ನಡಿಗೆಯಲ್ಲಿಯೇ ಸಾಗಿದರು.

**ಆಧಾರ:** ಪ್ರಜಾವಾಣಿ, ದಿನಾಂಕ: 20.09.2023.

## 16. ನಾರಿ ಶಕ್ತಿ ಇತಿಹಾಸ ರಾಜ್ಯಸಭೆಯಲ್ಲೂ ಸರ್ವಾನುಮತದ ಪಾಸ್

ಲೋಕಸಭೆಯಲ್ಲಿ ಮಹಿಳಾ ಮೀಸಲು ಮಸೂದೆಗೆ ಅನುಮೋದನೆ ದೊರೆತ ಬೆನ್ನಲ್ಲೆ ರಾಜ್ಯಸಭೆಯಲ್ಲೂ ಪಕ್ಷಾತೀತವಾಗಿ ಸರ್ವಾನುಮತದ ಬೆಂಬಲ ವ್ಯಕ್ತವಾಗಿದೆ. ಮಸೂದೆ ಪರವಾಗಿ 215 ಸದಸ್ಯರು ಮತ ಚಲಾಯಿಸಿದರು. ವಿರೋಧವಾಗಿ ಯಾರೊಬ್ಬರೂ ಕೈಎತ್ತಲಿಲ್ಲ. ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ, ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ್ ಖರ್ಗೆ ನಾರಿಶಕ್ತಿ ವಂದನ್ ಮಸೂದೆಗೆ ಬೆಂಬಲ ಸೂಚಿಸಿದರು.

ಲೋಕಸಭೆ ಹಾಗೂ ರಾಜ್ಯ ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಶೇ.33 ಮೀಸಲಾತಿ ಕಲ್ಪಿಸುವ ಈ ವಿಧೇಯಕ ಕಾಯ್ದೆಯಾಗಲು ರಾಷ್ಟ್ರಪತಿ ಅಂಕಿತವೊಂದೇ ಬಾಕಿ ಉಳಿದಿದೆ. ಲೋಕಸಭಾ ಕ್ಷೇತ್ರ ಪುನರ್ ವಿಂಗಡಣೆ ಬಳಿಕ ಜಾರಿಗೆ ಬರಲಿದೆ. ಮಹಿಳಾ ಮೀಸಲು ಸ್ಥಾನಗಳನ್ನು ಪಾರದರ್ಶಕವಾಗಿ ಗುರುತಿಸಲಾಗುವುದು ಎಂದು ಲೋಕಸಭೆಯಲ್ಲಿ ಗೃಹ ಸಚಿವ ಅಮಿತ ಷಾ ಭರವಸೆ ನೀಡಿದ್ದರು.

ಮೇಲ್ಮನೆಯಲ್ಲೂ ನಾರಿಶಕ್ತಿ ಇತಿಹಾಸ: ಲೋಕಸಭೆ ಹಾಗೂ ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಶೇ.33 ಮೀಸಲಾತಿ ಕಲ್ಪಿಸುವ ವಿಧೇಯಕವನ್ನು (ನಾರಿ ಶಕ್ತಿ ವಂದನ್ ಅಧಿನಿಯಮ) ರಾಜ್ಯಸಭೆಯು ಸರ್ವಾನುಮತದಿಂದ ಅಂಗೀಕರಿಸಿತು. ಈ ಮೂಲಕ ಭಾರತೀಯ ಪ್ರಜಾಪ್ರಭುತ್ವ ವ್ಯವಸ್ಥೆ ಹೊಸ ಇತಿಹಾಸಕ್ಕೆ ಮುನ್ನುಡಿ ಬರೆದಿದೆ.

ಲೋಕಸಭೆಯಲ್ಲಿ ಈ ವಿಧೇಯಕಕ್ಕೆ ಅನುಮೋದನೆ ನೀಡಲಾಗಿದ್ದು, ರಾಷ್ಟ್ರಪತಿ ಅಂಕಿತ ದೊರೆತ ನಂತರ ಈ ವಿಧೇಯಕವು ಕಾನೂನಾಗಿ ಜಾರಿಗೆ ಬರಲಿದೆ. ಲೋಕಸಭೆಯಲ್ಲಿ ಈ ವಿಧೇಯಕದ ಪರವಾಗಿ 454 ಮತಗಳು ಹಾಗೂ ವಿರುದ್ಧವಾಗಿ 2 ಮತಗಳು ಚಲಾವಣೆಗೊಂಡಿದ್ದವು. ಎಐಎಂಐಎಂ ಪಕ್ಷದ ಇಬ್ಬರು ಸಂಸದರು ವಿಧೇಯಕದ ವಿರುದ್ಧ ಮತ ಚಲಾಯಿಸಿದ್ದರು. ಆದರೆ, ರಾಜ್ಯಸಭೆಯಲ್ಲಿ ಈ ವಿಧೇಯಕಕ್ಕೆ ಸರ್ವಾನುಮತದ ಬೆಂಬಲ ವ್ಯಕ್ತವಾಯಿತು.

ರಾಜ್ಯಸಭೆಯಲ್ಲಿ 215 ಸದಸ್ಯರು ವಿಧೇಯಕದ ಪರ ಮತದಾನ ಮಾಡಿದರು. ಯಾವೊಬ್ಬ ಸದಸ್ಯರೂ ವಿರುದ್ಧವಾಗಿ ಮತ ಚಲಾಯಿಸಲಿಲ್ಲ. ರಾಜ್ಯಸಭೆಯಲ್ಲಿ ವಿಧೇಯಕ ಒಪ್ಪಿಗೆ ವಿಶ್ವಾಸದಲ್ಲಿದ್ದ

ಗೃಹ ಸಚಿವ ಅಮಿತ್ ಷಾ, ಮಹಿಳೆಯರಿಗೆ ಮೀಸಲಿಡಬೇಕಾದ ಸ್ಥಾನ ಗುರುತಿಸಲು ಪಾರದರ್ಶಕ ಪ್ರಕ್ರಿಯೆ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದ್ದರು.

ಬೆಳಿಗ್ಗೆ ಪ್ರಧಾನಿ ನರೇಂದ್ರ ಮೋದಿ ಲೋಕಸಭೆಯಲ್ಲಿ ಮಹಿಳಾ ಮೀಸಲಾತಿ ಮಸೂದೆ ಪರವಾಗಿ ಮತ ಚಲಾಯಿಸಿದ್ದಕ್ಕಾಗಿ ಪಕ್ಷಾತೀತವಾಗಿ ಸಂಸದರಿಗೆ ಧನ್ಯವಾದ ಅರ್ಪಿಸಿದರು. 'ಸಂವಿಧಾನ (128ನೇ ತಿದ್ದುಪಡಿ) ಮಸೂದೆ, 2023 ಅನ್ನು ಲೋಕಸಭೆಯಲ್ಲಿ ಅದ್ಭುತ ಬೆಂಬಲದೊಂದಿಗೆ ಅಂಗೀಕರಿಸಿದ್ದಕ್ಕಾಗಿ ಸಂತೋಷವಾಗಿದೆ. ನಾರಿ ಶಕ್ತಿ ವಂದನ ಅಧಿನಿಯಮವು ಒಂದು ಐತಿಹಾಸಿಕ ಶಾಸನವಾಗಿದ್ದು, ಇದು ಮಹಿಳಾ ಸಬಲೀಕರಣವನ್ನು ಮತ್ತಷ್ಟು ಹೆಚ್ಚಿಸುತ್ತದೆ ಮತ್ತು ನಮ್ಮ ರಾಜಕೀಯ ಪ್ರಕ್ರಿಯೆಯಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನು ಹೆಚ್ಚಿನ ಪ್ರಮಾಣದಲ್ಲಿ ಸಕ್ರಿಯಗೊಳಿಸುತ್ತದೆ' ಎಂದು ಹೇಳಿದ್ದಾರೆ.

**ಸುವರ್ಣ ಕ್ಷಣ ಎಂದ ಮೋದಿ:** ಸಂಸತ್‌ನಲ್ಲಿ ಮಹಿಳಾ ಮೀಸಲಾತಿ ಮಸೂದೆ ಅಂಗೀಕಾರವಾಗಿರುವುದು ಭಾರತದ ಸಂಸದೀಯ ಪಯಣದಲ್ಲಿ 'ಸುವರ್ಣ ಕ್ಷಣ'ವಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ವರ್ಣಿಸಿದ್ದಾರೆ. ಎಲ್ಲ ರಾಜಕೀಯ ಪಕ್ಷಗಳು ಮತ್ತು ಸದನದ ಸದಸ್ಯರಿಗೆ ಇದರ ಶ್ರೇಯಸ್ಸು ಸಲ್ಲುತ್ತದೆ. ಈ ಮಸೂದೆ ದೇಶದ ಜನರಲ್ಲಿ ಹೊಸ ವಿಶ್ವಾಸ ಮೂಡಿಸಲಿದೆ. ಎಲ್ಲ ಸದಸ್ಯರು ಮತ್ತು ರಾಜಕೀಯ ಪಕ್ಷಗಳು ಮಹಿಳೆಯರ ಸಬಲೀಕರಣ ಮತ್ತು 'ನಾರಿ ಶಕ್ತಿ' ಹೆಚ್ಚಿಸುವಲ್ಲಿ ಮಹತ್ವದ ಪಾತ್ರವನ್ನು ವಹಿಸಿವೆ. ದೇಶಕ್ಕೆ ಉತ್ತಮ ಸಂದೇಶ ನೀಡಿದೆ ಎಂದರು.

**ಆಧಾರ:** ವಿಜಯವಾಣಿ, ದಿನಾಂಕ: 22.09.2023.

# ಭಾಗ–4

# ಕೇಂದ್ರ ಸರ್ಕಾರದ ಸುದ್ದಿಗಳು

# 1. ಚಂದ್ರನಲ್ಲಿ ಶಿವಶಕ್ತಿ ತಿರಂಗಾ

ಬಾಹ್ಯಾಕಾಶ ವಿಜ್ಞಾನ, ತಂತ್ರಜ್ಞಾನಕ್ಕೆ ಬಲ ಹಾಗೂ ಈ ಕ್ಷೇತ್ರದಲ್ಲಿ ತೊಡಗಿದ ವಿಜ್ಞಾನಿಗಳಿಗೆ ಬೆಂಬಲ ನೀಡಲು ಕೇಂದ್ರ ಸರ್ಕಾರ ಬದ್ಧವೆಂದು ಸ್ಪಷ್ಟ ಸಂದೇಶ ರವಾನಿಸಿದ ಪ್ರಧಾನಮಂತ್ರಿ ನರೇಂದ್ರ ಮೋದಿ, ಮೂರು ಘೋಷಣೆಗಳ ಮೂಲಕ ಹುರಿದುಂಬಿಸಿದ್ದಾರೆ.

ಗ್ರೀಸ್‌ನಿಂದ ವಿಶೇಷ ವಿಮಾನದಲ್ಲಿ ಬೆಂಗಳೂರಿಗೆ ಬಂದಿಳಿದ ಮೋದಿ, ಹೆಚ್‌ಎಎಲ್ ವಿಮಾನ ನಿಲ್ದಾಣದ ಮುಂಭಾಗ ನೆರೆದವರನ್ನುದ್ದೇಶಿಸಿ ಚುಟುಕು ಭಾಷಣ ಮಾಡಿದರು. ನಂತರ ರಸ್ತೆ ಮಾರ್ಗವಾಗಿ ಪೀಣ್ಯದ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ಇಸ್ರೋ) ಕಮಾಂಡ್ ಸೆಂಟರ್ಗೆ ಹೆಜ್ಜೆಯಿಟ್ಟಾಗ ಹರ್ಷೋದ್ಗಾರದ ಹೊಳೆ ಹರಿಯಿತು. ಪರಸ್ಪರ ಆಪ್ತತೆ, ಭಾವುಕತೆ, ಚಪ್ಪಾಳೆಗಳ ಸದ್ದು, ಉತ್ಸಾಹದಲ್ಲಿ ಕಚೇರಿ ಆವರಣ ಮಿಂದೆದ್ದರೆ, ಆ ರೋಚಕ ಮತ್ತು ರೋಮಾಂಚಕ ಕ್ಷಣಗಳು ಕಣ್ಣಿಗೆ ಕಟ್ಟಿದಂತಿವೆ ಎಂದ ಮೋದಿ, ಪ್ರತಿಬಾರಿಯೂ ನೆರೆದ ವಿಜ್ಞಾನಿಗಳು, ತಂತ್ರಜ್ಞರು, ಸಿಬ್ಬಂದಿಯನ್ನು ಉದ್ದೇಶಿಸಿ 'ನನ್ನ ಪರಿವಾರವೇ' ಎಂದು ಸಂಬೋಧಿಸಿದ್ದು ವಿಶೇಷವಾಗಿತ್ತು.

ಚಂದ್ರಯಾನ-3 ಮಿಷನ್ ಚಂದ್ರ ಮೇಲೆ ಸ್ಪರ್ಶಿಸಿದ ಸಾಧನೆಯ ಮೂಲಕ ಭಾರತವು ವಿಶ್ವದ ನಾಲ್ಕನೇ ದೇಶವಾಯಿತು. ವಿಕ್ರಮ ಲ್ಯಾಂಡರ್ ಚಂದ್ರನ ದಕ್ಷಿಣ ಧ್ರುವದಲ್ಲಿ ಇಳಿದು, ಅಂಗದನ ರೀತಿಯಲ್ಲಿ ದೃಢವಾಗಿ ನಿಂತರೆ, ಪ್ರಜ್ಞಾನ್ ರೋವರ್ ಪರಾಕ್ರಮ ಮೆರೆದಿದೆ. ಪ್ರಪಂಚ ಯಾವುದೇ ದೇಶ ಮಾಡದ ಸಾಧನೆಯನ್ನು ಭಾರತ ಸಾಧಿಸಿದೆ. ನಮ್ಮ ವಿಜ್ಞಾನಿಗಳನ್ನು ಇದಕ್ಕಾಗಿ ಎಷ್ಟು ಕೊಂಡಾಡಿದರೂ ಕಡಿಮೆಯೇ. ಚಂದ್ರನ ಅಂಗಳಕ್ಕೆ ಮೇಕ್ ಇನ್ ಇಂಡಿಯಾ ತಲುಪಿಸಿದೆ. ದೇಶದ ವಿಜ್ಞಾನದ ಶಕ್ತಿ-ಸಾಮರ್ಥ್ಯದ ಶಂಖನಾದ ಆ.23ರಂದು ಮೊಳಗಿದೆ ಎಂದು ಮೋದಿ ಅನನ್ಯವಾಗಿ ವರ್ಣಿಸಿದರು. ಭಾರತದ ಈ ಯಶಸ್ಸು ಸಮಸ್ತ ಮನುಕುಲದ ಒಳಿತಿನ ಉದ್ದೇಶ ಹೊಂದಿದೆ. ಭೂಮಿ ಮೇಲಿನ ಸವಾಲುಗಳಿಗೆ ಪರಿಹಾರದ ನಿರೀಕ್ಷೆ ಹಾಗೂ ವಿಶ್ವಾಸ ಹುಟ್ಟು ಹಾಕಿದೆ ಎಂದರು. ವಿದೇಶದಲ್ಲಿದ್ದಾಗ ಕಂಡ ಭಾರತದ ಅಭೂತಪೂರ್ವ ಸಾಧನೆಯು ಅಕ್ಷರದಲ್ಲಿ ಬಿಡಿಸಿ ಹೇಳಲಾಗದಷ್ಟು ಆನಂದದಾಯಕ. ಯಾವಾಗ ನಿಮ್ಮನ್ನು ನೋಡಿ, ಅಭಿನಂದಿಸಿಯೇನೋ ಎಂಬ ಕಾತರ ಹಾಗೂ ಆತುರ ಹೆಚ್ಚಿಸಿತು. ನನ್ನನ್ನು ಕಾಡಿದ ಚಡಪಡಿಕೆ ನಿಮ್ಮನ್ನು ನಸುಕಿನಲ್ಲಿ ಈ ಕೇಂದ್ರಕ್ಕೆ ಎಳೆದುತಂದಿದೆ. ತಾಪತ್ರಯವನ್ನೂ ನೀಡಿದೆ ಎಂಬ ಭಾವನೆಯೂ ಕಾಡಿದೆ. ಆದರೆ, ಅದ್ವಿತೀಯ ಸಾಧಕರು, ಜಗತ್ತು ಮೆಚ್ಚಿದವರನ್ನು ಖುದ್ದಾಗಿ ಕಂಡು ಪಾವನನಾಗಿರುವೆಯೆಂದು ಮೋದಿ ಹೇಳಿದಾಗ ನೆರೆದವರು ಆನಂದ ತನ್ಮೀಲರಾದರು.

ಪೀಣ್ಯದ ಇಸ್ರೋ ಕಮಾಂಡ್ ಆಗಮಿಸಿದ ಮೋದಿ ಅವರನ್ನು ಇಸ್ರೋ ಅಧ್ಯಕ್ಷ ಎಸ್.ಸೋಮನಾಥ್ ಮತ್ತವರ ತಂಡ ಸ್ವಾಗತಿಸಿತು. ಇದೇ ವೇಳೆ ಸೋಮನಾಥ್ ಬೆನ್ನು ತಟ್ಟಿದ ಮೋದಿ ಖುಷಿ ಹಂಚಿಕೊಂಡರು ಚಂದ್ರಯಾನ-3ರ ಯಶೋಗಾಥೆ, ಭವಿಷ್ಯದ ಯೋಜನೆಗಳ ಮಾದರಿಯನ್ನು ವೀಕ್ಷಿಸಿದ ಬಳಿಕ ಕಚೇರಿಯೊಳಗೆ ಕಾಲಿಡುತ್ತಿದ್ದಂತೆ ಚಪ್ಪಾಳೆಯ ಸದ್ದು, ಪ್ರತಿಯಾಗಿ ಮೋದಿ ಚಪ್ಪಾಳೆ ತಟ್ಟುತ್ತಾ ನಗುಮೊಗದಿಂದ ತಮಗೆ ನಿಗದಿಪಡಿಸಿದ ಆಸನದಲ್ಲಿ ಕುಳಿತರು. ಚಂದ್ರಯಾನ-3 ಅನಿಮೇಷನ್ ವೀಕ್ಷಿಸಿದರು. ಅಭಿನಂದನಾ ಭಾಷಣ ಮುಗಿಸಿಕೊಂಡು ವಾಪಸ್ ಹೊರಡುವ ವೇಳೆ ಸುತ್ತವರಿದ ಮಹಿಳಾ ವಿಜ್ಞಾನಿಗಳ ಜೊತೆ ಔಪಚಾರಿಕ ಮಾತುಕತೆ ನಡೆಸಿದರು. ವಿಜ್ಞಾನಿಗಳು, ಇಂಜಿನಿಯರ್‌ಗಳು ಹಾಗೂ ಸಿಬ್ಬಂದಿ ತಂಡದೊಂದಿಗೆ ಫೋಟೊ ಸೆಷನ್‌ನಲ್ಲಿ ಪಾಲ್ಗೊಂಡು ಎಲ್ಲರನ್ನೂ ಹಸನ್ಮುಖಿಯಾಗಿಸಿದರು. ಇದೇ ಸಂಧರ್ಭದಲ್ಲಿ ಇಸ್ರೋ ಲಾಂಛನವುಳ್ಳ ವಿಕ್ರಮ ಲ್ಯಾಂಡರ್ ಸ್ಮರಣಿಕೆ, ಚಂದ್ರನ ದಕ್ಷಿಣ ಧ್ರುವದಲ್ಲಿ ವಿಕ್ರಮ ಲ್ಯಾಂಡರ್ ನೌಕೆ ಇಳಿದ ನಂತರ ಕ್ಲಿಕ್ಕಿಸಿದ ಮೊದಲ ಫೋಟೊ

ಹಾಗೂ ಲ್ಯಾಂಡರ್‌ನಿಂದ ಪ್ರಜ್ಞಾನ್ ರೋವರ್ ಬರುವಾಗ ತೆಗೆದ ಮೊದಲ ಫೋಟೊವನ್ನು ಸೋಮನಾಥ ಮೋದಿ ಅವರಿಗೆ ಕಾಣಿಕೆಯಾಗಿ ನೀಡಿದರು.

ಬಾಹ್ಯಾಕಾಶ ಕ್ಷೇತ್ರದಲ್ಲಿ ಭಾರತ ದಾಪುಗಾಲಿಡುತ್ತಿದೆ. ಸೃಷ್ಟಿಸುತ್ತಿರುವ ವಿಪುಲ ಅವಕಾಶಗಳನ್ನು ಬಳಸಿಕೊಂಡು ವೈಯಕ್ತಿಕ ಪ್ರಗತಿ ಜೊತೆಗೆ ದೇಶವನ್ನು ಮುನ್ನಡೆಸುವ ಜವಾಬ್ದಾರಿ ಯುವ ಜನರದ್ದು ಎಂದು ಪ್ರಧಾನಿ ನರೇಂದ್ರ ಮೋದಿ ಟಾಸ್ಕ್ ನೀಡಿದರು. ಪೀಣ್ಯದ ಇಸ್ರೋ ಕಮಾಂಡ್ ಸೆಂಟರ್‌ನಲ್ಲಿ ವಿಜ್ಞಾನಿಗಳು, ಇಂಜಿನಿಯರ್‌ಗಳು ಮತ್ತು ಸಿಬ್ಬಂದಿಗೆ ಅಭಿನಂದನೆ ಸಲ್ಲಿಸಿ ಮಾತನಾಡಿದರು. ಬಾಹ್ಯಾಕಾಶ ವಿಜ್ಞಾನ, ತಂತ್ರಜ್ಞಾನಕ್ಕೆ ಸಂಬಂಧಿಸಿದ ನವೋದ್ಯಮಗಳು ಬೆರಳೆಣಿಕೆಯಷ್ಟಿದ್ದವು. ಇದೀಗ ನವೋದ್ಯಮಗಳ ಸಂಖ್ಯೆ ಎರಡೂವರೆ ಸಾವಿರ ಮೇಲ್ಪಟ್ಟಿದೆ. ಈ ಕ್ಷೇತ್ರದ ವಾರ್ಷಿಕ ವಹಿವಾಟು ಒಂದು ಬಿಲಿಯನ್ ಡಾಲರ್‌ನಿಂದ 16 ಬಿಲಿಯನ್ ಡಾಲರ್‌ಗೆ ತಲುಪಿದೆ. 2047ರ ವೇಳೆಗೆ ಭಾರತ ಅಭಿವೃದ್ಧಿ ಹೊಂದಿದ ದೇಶವಾಗಬೇಕೆಂಬ ಸಂಕಲ್ಪಕ್ಕೆ ಒತ್ತಾಸೆಯಾಗಿದೆ ಎಂದು ಮೋದಿ ಹೇಳಿದರು.

ಚಂದ್ರಯಾನ–3 ಯಶಸ್ಸಿನ ಸ್ಮರಣೆಗಾಗಿ ಕೇಂದ್ರ ಸರ್ಕಾರದ ಅಂತರ್ಜಾಲ ತಾಣದಲ್ಲಿ ರಾಷ್ಟ್ರಮಟ್ಟದ ರಸಪ್ರಶ್ನೆ ಸ್ಪರ್ಧೆ ಏರ್ಪಡಿಸಲಿದ್ದು, ಶಾಲಾ–ಕಾಲೇಜು, ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳು ಹಾಗೂ ಸಂಶೋಧಕರು ಪಾಲ್ಗೊಳ್ಳಲು ಅವಕಾಶವಿದೆ.

ಬಾಹ್ಯಾಕಾಶ ವಿಜ್ಞಾನ ಬಳಕೆ ಕುರಿತು ರಾಷ್ಟ್ರಮಟ್ಟದ ಹ್ಯಾಕಥಾನ್ ಆಯೋಜಿಸಬೇಕು. ಈ ಕಾರ್ಯಕ್ರಮಕ್ಕೆ ಇಸ್ರೋ, ಕೇಂದ್ರ ಸರ್ಕಾರದ ವಿವಿಧ ಇಲಾಖೆಗಳು ಹಾಗೂ ರಾಜ್ಯ ಸರ್ಕಾರದ ಸಹಭಾಗಿತ್ವವೂ ಅಗತ್ಯ, ಹವಾಮಾನ ಮುನ್ಸೂಚನೆ ಆರೋಗ್ಯ, ಶಿಕ್ಷಣ, ಟೆಲಿಮೆಡಿಸಿನ್ ಇತ್ಯಾದಿ ವಿಷಯಗಳಲ್ಲಿ ಸಂಶೋಧನೆಗೆ ಮುಂದೆ ಬರುವಂತೆ ಯುವಜನರಿಗೆ ಪ್ರೇರೇಪಿಸಲು ಹ್ಯಾಕಥಾನ್ ವೇದಿಕೆಯಾಗಬೇಕು ಎಂದು ಮೋದಿ ಸಲಹೆ ನೀಡಿದರು. ಬಾಹ್ಯಾಕಾಶ ವಿಜ್ಞಾನ, ತಂತ್ರಜ್ಞಾನದ ಆವಿಷ್ಕಾರ, ಸಂಶೋಧನೆ ಮತ್ತು ಯೋಜನೆಗಳಿಗೆ ಸುರಿಯುವ ಬಹುಕೋಟಿ ರೂ.ಗಳು ವ್ಯರ್ಥವಲ್ಲವೆಂದು ಸಮರ್ಥಿಸಿಕೊಂಡ ಮೋದಿ, ಆ ಮೂಲಕ ಚಂದ್ರಯಾನ ಟೀಕಾಕಾರರಿಗೆ ಪರೋಕ್ಷವಾಗಿ ಉತ್ತರಿಸಿದರು.

'ಬಯಲು ಬರ್ಹಿದೆಸೆ ಮುಕ್ತ ಭಾರತ'ದ ಆಕಾಂಕ್ಷೆಯುಳ್ಳ ಸ್ವಚ್ಛ ಭಾರತ ಯೋಜನೆಯಡಿ ಶೌಚಗೃಹಗಳ ನಿರ್ಮಾಣ, ನಿರ್ವಹಣೆ ಯೋಜನೆಗೆ ಬಾಹ್ಯಾಕಾಶ ತಂತ್ರಜ್ಞಾನ ನೆರವಾಗಿದೆ. ಉಪಗ್ರಹಗಳ ನೆರವಿನಿಂದ ಹವಾಮಾನ ಮುನ್ಸೂಚನೆ ಲಭಿಸುತ್ತಿದೆ. ರೈತರು, ಮೀನುಗಾರರು ತಮ್ಮ ಅಂಗೈಯಲ್ಲಿರುವ ಮೊಬೈಲ್‌ನಿಂದಲೇ ಹವಾಮಾನ ಪರಿಸ್ಥಿತಿ ತಿಳಿದುಕೊಳ್ಳಲು ಸಾಧ್ಯವಾಗಿದೆ. ಚಂಡಮಾರುತದ ಸಾಗುವ ಮಾರ್ಗವು ಮುಂಚಿತವಾಗಿ ತಿಳಿಯುತ್ತದೆ.  ಜೀವ, ಆಸ್ತಿ–ಪಾಸ್ತಿ ಹಾನಿ ತಪ್ಪಿಸಲು ಅನುಕೂಲವಾಗಿದೆ. ಈ ಅಗಾಧತೆಯನ್ನು ಲೆಕ್ಕಕ್ಕೆ ತೆಗೆದುಕೊಂಡರೆ ಬಾಹ್ಯಾಕಾಶ ಯೋಜನೆಗಳಿಗೆ ವ್ಯಯಿಸುವ ಹಲವು ನೂರು ಕೋಟಿ ರೂ.ಗಳು ದೊಡ್ಡ ಮೊತ್ತವೇನಲ್ಲ. ಅಮೃತ ಸರೋವರ ಹಾಗೂ ಪ್ರಧಾನಮಂತ್ರಿ ಗತಿ–ಶಕ್ತಿ ಯೋಜನೆಗಳ ರೂಪರೇಷೆ, ವಿಸ್ತೃತ ಯೋಜನಾ ವರದಿ ತಯಾರಿ, ಅನುಷ್ಠಾನಕ್ಕೆ ಬಾಹ್ಯಾಕಾಶ ಕ್ಷೇತ್ರದ ಕೊಡುಗೆ ಮಹತ್ವದ್ದಾಗಿದೆ ಎಂದು ಹೇಳಿದರು.

ಚಂದ್ರಯಾನ–3 ಯಶೋಗಾಥೆ ಚಿರಸ್ಥಾಯಿಯಾಗಿಸಲು, ಭಾರತೀಯರ ಅಪೇಕ್ಷೆಯಂತೆ ಪ್ರಧಾನಿ ನರೇಂದ್ರ ಮೋದಿ ಮೂರು ಪ್ರಮುಖ ಹೆಸರುಗಳನ್ನು ಘೋಷಿಸಿದರು.

1. ಚಂದ್ರಯಾನ–3ರ ವಿಕ್ರಮ ಲ್ಯಾಂಡರ್ ಚಂದ್ರನ ದಕ್ಷಿಣ ಧ್ರುವದಲ್ಲಿ ಸ್ಪರ್ಶಿಸಿದ ಸ್ಥಳ 'ಶಿವಶಕ್ತಿ' ಎಂದು ನಾಮಕರಣ. ಶಿವ ಎಂದರೆ ಮಾನವ ಕಲ್ಯಾಣ, ಈ ಸಂಕಲ್ಪದ ಸಾಕಾರ ರೂಪವೇ ಶಕ್ತಿ, ಸೃಷ್ಟಿ, ಸ್ಥಿತಿ, ಲಯದಲ್ಲಿ ನಾರಿಶಕ್ತಿ ಅವಿರ್ಭವಿಸಿದೆ ಎಂದು ಮಹಿಳಾ ವಿಜ್ಞಾನಿಗಳನ್ನು ಮೋದಿ ಕೊಂಡಾಡಿದರು.

2. ಜಗತ್ತನ್ನು ನಿಬ್ಬೆರಗಾಗಿಸಿದ ಚಂದ್ರಯಾನ–3 ಫಲಪ್ರದವಾದ ದಿನದ ಸ್ಮರಣೆಗೆ ಆ.23 ಇನ್ನು ಮುಂದೆ ರಾಷ್ಟ್ರೀಯ ಬಾಹ್ಯಾಕಾಶ ದಿನ. ಬಾಹ್ಯಾಕಾಶ ವಿಜ್ಞಾನ, ಆವಿಷ್ಕಾರ, ಅಧ್ಯಯನ ಮತ್ತು ಸಂಶೋಧನೆಗೆ ಪ್ರೋತ್ಸಾಹದ ಚಿಮ್ಮು ಹಲಗೆಯಾಗಿ ಆ ದಿನವನ್ನು ಬಳಸಿಕೊಳ್ಳಬೇಕೆಂಬ ಮಹತ್ತರ ಉದ್ದೇಶವಿದೆ.

3. ಚಂದ್ರಯಾನ–2 ನೌಕೆ ಪತನವಾದ ಸ್ಥಳ 'ತಿರಂಗಾ' ಎಂದು ನಾಮಕರಣ. ವೈಫಲ್ಯ ಅಂತಿಮವಲ್ಲ ಎನ್ನುವುದನ್ನು ಚಂದ್ರಯಾನ–3 ಯಶಸ್ಸು ಸಾರಿದೆ. ಅಂದು ಚಂದ್ರನಲ್ಲಿ ಹಾರಿದ ತಿರಂಗಾ ಇಂದು ಪ್ರತಿಯೊಬ್ಬ ಭಾರತೀಯನ ಮನೆ–ಮನದಲ್ಲಿದೆ.

ವಿಜ್ಞಾನಿಗಳನ್ನು ಪ್ರಶಂಸಿಸಿ ಅಭಿನಂದಿಸುವ ವೇಳೆ ಮೋದಿ ಭಾವುಕರಾಗಿ ಅರೆಕ್ಷಣದ ಬಳಿಕ ಮಾತು ಮುಂದುವರಿಸಿದರು. ವಿಕ್ರಮ ಲ್ಯಾಂಡರ್ ಚಂದ್ರನ ದಕ್ಷಿಣ ಧ್ರುವದಲ್ಲಿ ಇಳಿಯುವ ವೇಳೆ ನಾನು ದಕ್ಷಿಣ ಆಫ್ರಿಕಾದಲ್ಲಿದ್ದರೂ ನನ್ನ ಮನಸ್ಸು ಇಲ್ಲೇ ಇತ್ತು. ನಿಮ್ಮನ್ನು ನೋಡಿದ ಕ್ಷಣದಿಂದ ನಾನು ಪಾವನನಾದೆ. ನಿಮ್ಮ ಧೈರ್ಯ,ಉತ್ಸಾಹ, ಪರಿಶ್ರಮ, ಛಲಬಿಡದ ಪ್ರಯತ್ನಕ್ಕೆ ನನ್ನ ಸೆಲ್ಯೂಟ್ ಎಂದು ಮೋದಿ, ಇಸ್ರೋದ ಸಾಧಕರಿಗೆ ಗೌರವ ಸಲ್ಲಿಸಿದರು.

**ಆಧಾರ:** ವಿಜಯವಾಣಿ, ದಿನಾಂಕ: 27.08.2023

## 2. ಏಕ ಚುನಾವಣೆ ಸಮಿತಿಯಲ್ಲಿ ಅಮಿತ್ ಷಾ, ಆಜಾದ್, ಸಾಳ್ವೆ

ದೇಶಾದ್ಯಂತ ಏಕಕಾಲಕ್ಕೆ ಚುನಾವಣೆ ನಡೆಸುವ ವಿಷಯದ ಬಗ್ಗೆ ಪರಿಶೀಲಿಸಿ, ವರದಿ ನೀಡಲು ಎಂಟು ಸದಸ್ಯರ ಉನ್ನತ ಮಟ್ಟದ ಸಮಿತಿಯನ್ನು ರಚನೆ ಮಾಡಿ ಕೇಂದ್ರ ಸರ್ಕಾರ ಆದೇಶ ಹೊರಡಿಸಿದೆ.

ಮಾಜಿ ರಾಷ್ಟ್ರಪತಿ ರಾಮನಾಥ ಕೋವಿಂದ ನೇತೃತ್ವದಲ್ಲಿ ತಜ್ಞರ ಸಮಿತಿ ರಚಿಸುವುದಾಗಿ ಪ್ರಕಟಿಸಿದ್ದ ಕೇಂದ್ರ ಸರ್ಕಾರ, ಉಳಿದ ಸದಸ್ಯರನ್ನು ಆಯ್ಕೆ ಮಾಡಿ ಆದೇಶಿಸಿದೆ. ಕೇಂದ್ರ ಗೃಹ ಸಚಿವ ಅಮಿತ್ ಷಾ, ಲೋಕಸಭೆಯಲ್ಲಿ ಕಾಂಗ್ರೆಸ್ ನಾಯಕ ಅಧೀರ್ ರಂಜನ್ ಚೌಧರಿ, ರಾಜ್ಯಸಭೆಯಲ್ಲಿ ವಿರೋಧ ಪಕ್ಷದ ಮಾಜಿ ನಾಯಕ ಗುಲಾಂ ನಬಿ ಅಜಾದ್, ಹಣಕಾಸು ಆಯೋಗದ ಮಾಜಿ ಅಧ್ಯಕ್ಷ ಎನ್.ಕೆ.ಸಿಂಗ್, ಲೋಕಸಭೆಯ ಮಾಜಿ ಪ್ರಧಾನ ಕಾರ್ಯದರ್ಶಿ ಸುಭಾಷ್ ಕಶ್ಯಪ್, ಹಿರಿಯ ವಕೀಲ ಹರೀಶ್ ಸಾಳ್ವೆ ಮತ್ತು ಜಾಗೃತ ದಳದ ಮಾಜಿ ಮುಖ್ಯಸ್ಥ ಸಂಜಯ್ ಕೊಠಾರಿ ಸಮಿತಿಯ ಸದಸ್ಯರಾಗಿದ್ದಾರೆ. ಸಮಿತಿಯ ಸಭೆಗಳಲ್ಲಿ ವಿಶೇಷ ಅಹ್ವಾನಿತರಾಗಿ ಕಾನೂನು ಸಚಿವ ಅರ್ಜುನ್‌ರಾಮ್ ಮೇಘವಾಲ್ ಭಾಗವಹಿಸಲಿದ್ದಾರೆ. ಕಾನೂನು ವ್ಯವಹಾರಗಳ ಕಾರ್ಯದರ್ಶಿ ನಿತೇನ್ ಚಂದ್ರರನ್ನು ಸಮಿತಿಯ ಕಾರ್ಯದರ್ಶಿಯನ್ನಾಗಿ ನೇಮಕ ಮಾಡಲಾಗಿದೆ.

ಒಂದು ರಾಷ್ಟ್ರ, ಇಂದು ಚುನಾವಣೆ ಪರಿಕಲ್ಪನೆಯನ್ನು ಅನುಷ್ಠಾನಗೊಳಿಸುವ ಸಾಧ್ಯತೆಯನ್ನು ವಿಸ್ತೃತವಾಗಿ ಅಧ್ಯಯನ ನಡೆಸಿ, ಸರ್ಕಾರಕ್ಕೆ ವರದಿ ಸಲ್ಲಿಸುವುದು ಸಮಿತಿಯ ಕೆಲಸವಾಗಿದೆ. ಲೋಕಸಭೆ, ರಾಜ್ಯ ವಿಧಾನಸಭೆಗಳು. ಪುರಸಭೆಗಳು ಮತ್ತು ಪಂಚಾಯತ್‌ಗಳಿಗೆ ದೇಶಾದ್ಯಂತ ಏಕಕಾಲದಲ್ಲಿ ಚುನಾವಣೆ ನಡೆಸುವುದು ಕೇಂದ್ರ ಸರ್ಕಾರದ ಉದ್ದೇಶವಾಗಿದೆ.

ಏಕಕಾಲ ಚುನಾವಣೆ ಜಾರಿಗೆ ತರಲು ಸಂವಿಧಾನಕ್ಕೆ ಯಾವ ತಿದ್ದುಪಡಿಗಳನ್ನು ಮಾಡಬೇಕು? ಪ್ರಜಾಪ್ರತಿನಿಧಿ ಕಾಯ್ದೆಗೆ ತಿದ್ದುಪಡಿಗಳು, ಇತರ ಕಾನೂನುಗಳು ಮತ್ತು ನಿಯಮಗಳ ಅಗತ್ಯತೆ ಪರಿಶೀಲನೆ ನಡೆಸಲಿದೆ. ಸಂವಿಧಾನದ ತಿದ್ದುಪಡಿಗಳಿಗೆ ರಾಜ್ಯಗಳು ಅನುಮೋದಿಸುವ ಅಗತ್ಯವಿದೆಯೇ? ಎಂಬುದನ್ನು ಸಮಿತಿ ಪರಿಶೀಲಿದೆ. ಸಮಗ್ರ ಅಧ್ಯಯನದ ನಂತರ ಮುಂದಿನ ಕ್ರಮದ ಬಗ್ಗೆ ಕೇಂದ್ರ ಸರ್ಕಾರಕ್ಕೆ ವರದಿ ನೀಡಲಿದೆ. ಚುನಾವಣೆ ನಂತರ ಅತಂತ್ರ ಫಲಿತಾಂಶ ಬಂದರೆ ಏನು ಮಾಡಬೇಕು? ಅವಿಶ್ವಾಸ

ನಿರ್ಣಯದ ಅಂಗೀಕಾರ, ಜನಪ್ರತಿನಿಧಿಗಳು ಪಕ್ಷಾಂತರ ಮಾಡಿದರೆ ಅಥವಾ ಏಕಕಾಲ ಚುನಾವಣೆಯ ಸಂದರ್ಭದಲ್ಲಿ ಯಾವುದೇ ಇತರ ಬಿಕ್ಕಟ್ಟಿನ ಸನ್ನಿವೇಶಗಳು ನಿರ್ಮಾಣವಾದರೆ ಪರಿಹಾರಗಳನ್ನು ಹೇಗೆ ಕಂಡುಕೊಳ್ಳಬಹುದು ಎಂಬುದನ್ನು ಸಮಿತಿ ಸದಸ್ಯರು ಚರ್ಚೆ ನಡೆಸಲಿದ್ದಾರೆ. ಜೊತೆಗೆ ಸಾರ್ವಜನಿಕರು, ಚಿಂತಕರು, ತಜ್ಞರ ಅಭಿಪ್ರಾಯಗಳನ್ನೂ ಸಮಿತಿ ಸಂಗ್ರಹ ಮಾಡಲಿದೆ.

ಏಕ ಚುನಾವಣೆ ತಜ್ಞರ ಸಮಿತಿ ಸದಸ್ಯರಾಗಿ ನೇಮಕಗೊಂಡಿರುವ ಲೋಕಸಭೆಯಲ್ಲಿನ ಕಾಂಗ್ರೆಸ್ ನಾಯಕ ಅಜಿತ್ ರಂಜನ್ ಚೌಧರಿ, ಸಮಿತಿಯಿಂದ ಹೊರಬರಲು ನಿರ್ಧರಿಸಿದ್ದಾರೆ. ಗೃಹ ಸಚಿವ ಅಮಿತ್ ಷಾ ಅವರಿಗೆ ಪತ್ರ ಬರೆದಿರುವ ಅವರು, ಸಾರ್ವತ್ರಿಕ ಚುನಾವಣೆ ಸಮೀಪದಲ್ಲಿ ಅಸಾಧ್ಯವಾದ ಹಾಗೂ ಸಾಧ್ಯವಲ್ಲದ ಕಾರ್ಯಕ್ಕೆ ಕೈ ಹಾಕಿರುವುದಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ರಾಜ್ಯಸಭೆಯ ಪ್ರತಿಪಕ್ಷದ ನಾಯಕರನ್ನು ಸಮಿತಿಯಿಂದ ಹೊರಗೆ ಇಟ್ಟಿರುವುದು ಸಂಸದೀಯ ವ್ಯವಸ್ಥೆಗೆ ಮಾಡಿದ ಅಪಮಾನಕ ಎಂದು ತಿಳಿಸಿದ್ದಾರೆ.

**ಆಧಾರ**: ವಿಜಯವಾಣಿ, ದಿನಾಂಕ: 03.09.2023

## 3.'India' and 'Bharat' interchangeable, can be used in official invite, say legal experts

An official invitation from president Droupadi Murmu to G-20 guests in which she is decribed as the "President of Bharat" has triggered speculation that the Narendra Modi government could officially change the name of " India" to "Bharat" during the five-day-long Special Session of Parliament that starts on September 18.

While the issue has predictably sent political temperatures soaring, there is ambivalence within the legal fraternity on whether a constitutional amendment is required for a change of name.

"The fact is that the terms Bharat and India can be used interchangeably, especially in view of the authorised Hindi version of the Indian Constitution, but the government can not stipulate that everyone use only one name; either is permissible and usable interchangeably," senior Supreme Court advocate and Congress member Abhishek Singhvi told The Hindu.

Mr.Singhavi, who is also a former Chairman of the Parliamentary Standing Committee on Law and Justice, said anamendment would be required only if the government insisted on the use of any one term or wanted to remove a particular term.

Former Additional Solicitor General and senior Supreme Court advocate Aman Lekhi said it was officially the " Republic of India" and even the G-20 presidency was know as the "Indian presidency" He said that any change of name would require a constitutional amendment under Article 368.

"The change is possible but is it necessary? There are certain things that should be free of controversy and the name of the country should highest in that list," Mr Lekhi said.

"Unless any intention to the contrary is made explicit, the terminology is only a question of semantics. And at this stage, there is no need to read anything sinister," former Law Minister Ashwani Kumar said.

Another top constitutional expert, who did not wish to be named, said there was nothing wrong in sending an invitation as the "President of Bharat" However, it should not be seen as the first step towards doing away with the use of English language.

"Article 348(1)of the Constitution states that all proceedings in the Supreme Court and in very High Court shall be in English language until Parliament passes a law," the expert noted, adding," If they want to pass such a law, then that would be a federal issue."

The debate over the language of Government Bills started last month after Union Home Minister Amit Shah introduced the Bharatiya Nyaya Sanhita, the Bharatiya Nagarik Suraksha Sanhita, and the Bharatiya Sakshya Bill in the Lok Sabha to replace the Indian penal Code, the Code of Criminal procedure and the Evidence Act, respectively.

**Courtesy:** The Hindu, date: 06.09.2023

## 4. 'ನವದೆಹಲಿ ಘೋಷಣೆ'ಗೆ 'ಜಿ–20' ಒಮ್ಮತದ ಮುದ್ರೆ

ಜಿ–20 ಶೃಂಗಸಭೆಯ ಮೊದಲನೆಯ ದಿನದಂದು ಜಾಗತಿಕ ನಾಯಕರು ಪರಸ್ಪರ ವಿಸ್ತೃತ ಚರ್ಚೆಯ ಮೂಲಕ **'ನವದೆಹಲಿ ಘೋಷಣೆ'** ಕುರಿತು ಒಮ್ಮತ ಅಭಿಪ್ರಾಯಕ್ಕೆ ಬಂದಿದ್ದಾರೆ. ಉಕ್ರೇನ್ ವಿರುದ್ಧ ವಿಶೇಷ ಸೇನಾ ಕಾರ್ಯಚರಣೆ ನಡೆಸಿದ ರಷ್ಯಾವನ್ನು ಖಂಡಿಸುವುದರಿಂದ ದೂರ ಉಳಿಯಲು ಸದಸ್ಯ ರಾಷ್ಟ್ರಗಳ ನಾಯಕರು ತೀರ್ಮಾನಿಸಿದ್ದಾರೆ. ಆದರೆ ಯುದ್ದದಿಂದ ವಿಶ್ವದ ಆರ್ಥಿಕತೆ, ಆಹಾರ ಮತ್ತು ಇಂಧನದ ಮೇಲೆ ಉಂಟಾಗಿರುವ ಪರಿಣಾಮವನ್ನು ಗಂಭೀರವಾಗಿ ಪರಿಗಣಿಸಿದ್ದಾರೆ.

ಭಾರತದ ಅಧ್ಯಕ್ಷತೆಯಲ್ಲಿ ರಾಷ್ಟ್ರ ರಾಜಧಾನಿಯಲ್ಲಿ ಆರಂಭವಾಗಿರುವ ಜಿ–20 18ನೇ ಶೃಂಗಸಭೆಯಲ್ಲಿ **'ನವದೆಹಲಿ ಘೋಷಣೆ'** ಸೇರಿದಂತೆ ಹಲವು ಮಹತ್ವದ ತೀರ್ಮಾನಗಳನ್ನು ಕೈಗೊಳ್ಳಲಾಗಿದೆ. ಉಕ್ರೇನ್ ಯುದ್ಧದ ಬಗ್ಗೆ ಉಲ್ಲೇಖದ ಕುರಿತು ಸದಸ್ಯ ರಾಷ್ಟ್ರಗಳ ನಡುವೆ ಹಲವು ಸುತ್ತಿನ ಮಾತುಕತೆ ನಡೆಯಿತು. ಬಳಿಕ ಎಲ್ಲ ರಾಷ್ಟ್ರಗಳು ನಿರ್ಣಯದ ಕುರಿತು ಒಮ್ಮತದ ಅಭಿಪ್ರಾಯಕ್ಕೆ ಬಂದವು. ನವದೆಹಲಿ ಘೋಷಣೆಗೆ ತ್ವರಿತಗತಿಯಲ್ಲಿ ಅಂಗೀಕಾರ ಸಿಕ್ಕಿದ್ದು ಭಾರತದ ಪಾಲಿಗೆ ದೊಡ್ಡ ಮೈಲಿಗಲ್ಲು ಎಂದು ಬಣ್ಣಿಸಲಾಗಿದೆ.

ಎರಡನೇ ದಿನದ ಅಧಿವೇಶನದಂದು ಜಂಟಿ ಹೇಳಿಕೆ ಬಿಡುಗಡೆಗೊಳಿಸಿದ ಭಾರತದ ಪ್ರಧಾನಿ ನರೇಂದ್ರ ಮೋದಿ, **'ಸ್ನೇಹಿತರೇ, ಈಗ ನಮಗೆ ಒಳ್ಳೆಯ ಸುದ್ದಿ ಬಂದಿದೆ'** ಎಂದರು. **'ನಮ್ಮ ತಂಡಗಳ ಕಠಿಣ ಪರಿಶ್ರಮದಿಂದ ಮತ್ತು ನಿಮ್ಮೆಲ್ಲರ ಸಹಕಾರದೊಂದಿಗೆ ನವದೆಹಲಿ ಜಿ–20 ಶೃಂಗಸಭೆಯ ನಾಯಕರ ಘೋಷಣೆಗೆ ಒಮ್ಮತವಿದೆ'** ಎಂದು ಹೇಳಿದರು.

ನವದೆಹಲಿ ಘೋಷಣೆ ಪ್ರಕಾರ, ವಿಶ್ವದ ಹಲವೆಡೆ ನಡೆಯುತ್ತಿರುವ ಯುದ್ಧ ಮತ್ತು ಬಿಕ್ಕಟ್ಟುಗಳಿಂದ ಮಾನವರು ಎದುರಿಸುತ್ತಿರುವ ತೀವ್ರ ಸಂಕಷ್ಟದ ಬಗ್ಗೆ ಜಿ–20 ನಾಯಕರು ಗಂಭೀರ ಕಳವಳ ವ್ಯಕ್ತಪಡಿಸಿದ್ದಾರೆ. ಈ ಘೋಷಣೆಯಲ್ಲಿ, 2022ರ ನವೆಂಬರ್‌ನಲ್ಲಿ ಇಂಡೋನೇಷ್ಯಾದ ಬಾಲಿಯಲ್ಲಿ ನಡೆದ 17ನೇ ಶೃಂಗಸಭೆಯ ನಿರ್ಣಯಗಳನ್ನು ಉಲ್ಲೇಖಿಸಲಾಗಿದೆ. ಜೊತೆಗೆ, ವಿಶ್ವಸಂಸ್ಥೆಯ

ಭದ್ರತಾ ಪರಿಷತ್ ಹಾಗೂ ಸಾಮಾನ್ಯ ಸಭೆಯಲ್ಲಿ ಕಲಹದ ಕುರಿತು ಕೈಗೊಂಡ ನಿರ್ಣಯವನ್ನು ಪ್ರಸ್ತಾಪಿಸಲಾಗಿದೆ.

ಎಲ್ಲ ರಾಷ್ಟ್ರಗಳು, ಇತರ ರಾಷ್ಟ್ರಗಳ ಏಕತೆ ಮತ್ತು ಸಮಗ್ರತೆಗೆ ಧಕ್ಕೆ ತರುವುದು ಅಥವಾ ರಾಜಕೀಯ ಸ್ವಾತಂತ್ರ್ಯವನ್ನು ಸ್ವಾಧೀನಪಡಿಸಿಕೊಳ್ಳಲು ಬೆದರಿಕೆ ಒಡ್ಡುವುದು ಅಥವಾ ಸೇನೆಯನ್ನು ಬಳಸುವುದರಿಂದ ದೂರ ಉಳಿಯಬೇಕು ಎಂದು ಜಿ–20 ನಾಯಕರು ನಿರ್ಣಯದಲ್ಲಿ ಸ್ಪಷ್ಟಪಡಿಸಿದ್ದಾರೆ.

ಬಾಲಿಯಲ್ಲಿ ತೆಗೆದುಕೊಂಡ ನಿರ್ಣಯದಂತೆ, ಉಕ್ರೇನ್ ವಿರುದ್ಧ ಆಕ್ರಮಣಶೀಲ ಮನೋಭಾವ ತೋರುತ್ತಿರುವ ರಷ್ಯಾದ ವಿರುದ್ಧ ಈ ಶೃಂಗಸಭೆ ಯಾವುದೇ ನಿರ್ಣಯ ಕೈಗೊಂಡಿಲ್ಲ. ಉಕ್ರೇನ್ ಪ್ರಾಂತ್ಯದಿಂದ ರಷ್ಯಾ ತನ್ನೆಲ್ಲ ಸೇನಾ ಪಡೆಗಳನ್ನು ಸಂಪೂರ್ಣವಾಗಿ ಹಾಗೂ ಬೇಷರತ್ ಆಗಿ ಹಿಂಪಡೆಯಬೇಕು ಎಂದು 'ಬಾಲಿ ನಿರ್ಣಯದಲ್ಲಿ ಅಗ್ರಹಿಸಲಾಗಿತ್ತು. ಆದರೆ, ನವದೆಹಲಿ ನಿರ್ಣಯದಲ್ಲಿ ಅಂತಹ ಯಾವುದೇ ಪ್ರಸ್ತಾಪ ಇಲ್ಲ.

ಕಳೆದ ವಾರ ಭಾರತದ ವಿದೇಶಾಂಗ ಸಚಿವ ಜೈಶಂಕರ್–ರಷ್ಯಾದ ವಿದೇಶಾಂಗ ಸಚಿವ ಸೆರ್ಗಿ ಲಾವ್ರೋವ್ ಭೇಟಿ ಮಾಡಿದರು. ಶೃಂಗಸಭೆಗೆ ಮುನ್ನ ಮೋದಿ ಹಾಗೂ ಅಮೆರಿಕದ ಅಧ್ಯಕ್ಷ ಜೋ ಬೈಡನ್ ಅವರು ಸಮಾಲೋಚನೆ ನಡೆಸಿದರು. ಆ ಬಳಿಕ ಹೊಸ ಕರಡನ್ನು ಸದಸ್ಯ ರಾಷ್ಟ್ರಗಳಿಗೆ ಭಾರತವು ನೀಡಿತು. ಆ ನಂತರ ನಿರ್ಣಯಕ್ಕೆ ಅಂಗೀಕಾರ ಸಿಕ್ಕಿದೆ.

ಈ ಕುರಿತು ಪ್ರತಿಕ್ರಿಯೆ ನೀಡಿರುವ ಜೈಶಂಕರ್, 'ಬಾಲಿ ಘೋಷಣೆಯ ನಂತರ ಹಲವು ಮಹತ್ವದ ಬೆಳವಣಿಗೆಗಳು ನಡೆದಿವೆ' ಎಂದರು. 'ನವದಹಲಿ ಘೋಷಣೆ' ಇಂದಿನ ಪರಿಸ್ಥಿತಿಗೆ ಸ್ಪಂದಿಸುತ್ತದೆ. ಅಂದಿನ ಕಾಳಜಿಗಳಿಗೆ 'ಬಾಲಿ ಘೋಷಣೆ' ಪ್ರತಿಕ್ರಿಯಿಸಿದಂತೆ 'ನವದಹಲಿ ಘೋಷಣೆ' ಇಂದಿನ ಕಳವಳಿಗಳಿಗೆ ಪ್ರತಿಕ್ರಿಯಿಸುತ್ತದೆ' ಎಂದು ಸ್ಪಷ್ಟಪಡಿಸಿದರು.

ಭಯೋತ್ಪಾದನೆಯನ್ನು ಗಂಭೀರ ಬೆದರಿಕೆ ಎಂದು ಕರೆದಿರುವ ಜಿ–20 ಘೋಷಣೆಯು ಭಯೋತ್ಪಾದಕರ ಗುಂಪಿನ ಸುರಕ್ಷಿತ ತಾಣಗಳು, ಕಾರ್ಯಾಚರಣೆಗಳು, ಚಲನವಲನ ಮತ್ತು ನೇಮಕಾತಿಯ ಸ್ವಾತಂತ್ರ್ಯ, ಹಣಕಾಸಿನ ನೆರವು ಅಥವಾ ರಾಜಕೀಯ ಬೆಂಬಲವನ್ನು ತಿರಸ್ಕರಿಸಲು ಅಂತರ ರಾಷ್ಟ್ರೀಯ ಸಹಕಾರ ಹೆಚ್ಚುವಂತೆ ನೋಡಿಕೊಳ್ಳಬೇಕು ಎಂದು ಕರೆ ನೀಡಿದೆ.

2019ರ ಮಟ್ಟಕ್ಕೆ ಹೋಲಿಸಿದರೆ 2030ರ ವೇಳೆಗೆ ಇಂಗಾಲದ ಹೆಜ್ಜೆ ಗುರುತನ್ನು ಶೇ.43ರಷ್ಟು ಕಡಿತ ಮಾಡಲು ಜಾಗತಿಕ ಹಸಿರುಮನೆ ಅನಿಲ ಹೊರಸೂಸುವಿಕೆಯ ಮೇಲೆ 'ಕ್ಷಿಪ್ರ, ಆಳವಾದ ಮತ್ತು ನಿರಂತರ' ನಿಯಂತ್ರಣ ಸಾಧಿಸುವ ಅಗತ್ಯವಿದೆ ಎಂದು ಜಿ–20 ದೇಶಗಳು ಹೇಳಿವೆ. ಆದರೆ, ಇಂತಹ ಕ್ರಮಕ್ಕೆ ಅಗತ್ಯ ಸಂಪನ್ಮೂಲ ಒದಗಿಸುವ ಕುರಿತು ಯಾವುದೇ ಹೇಳಿಕೆ ನೀಡಿಲ್ಲ.

- ಜಿ–20 ಗುಂಪಿಗೆ ಆಫ್ರಿಕನ್ ಒಕ್ಕೂಟ ಹೊಸದಾಗಿ ಸೇರ್ಪಡೆ.
- ವಿಶ್ವದಾದ್ಯಂತ ಶೇ20ರಷ್ಟು ಎಥೆನಾಲ್ ಮಿಶ್ರಿತ ಪೆಟ್ರೋಲ್ ಬಳಕೆ ಹೆಚ್ಚಿಸುವ ಜಾಗತಿಕ ಜೈವಿಕ ಇಂಧನ ಕೂಟ ರಚನೆಯ ಘೋಷಣೆ.
- ಭಾರತ, ಮಧ್ಯಪ್ರಾಚ್ಯ, ಯುರೋಪ್ ನಡುವೆ ಆರ್ಥಿಕ ಕಾರಿಡಾರ್ ಯೋಜನೆಗೆ ಚಿಂತನೆ.
- ಜಿ–20ರಾಷ್ಟ್ರಗಳ ಪರಿಸರ ಮತ್ತು ಹವಾಮಾನ ವೀಕ್ಷಣೆಗಾಗಿ ಉಪಗ್ರಹ ಯೋಜನೆ.
- ಭಾರತ ಮತ್ತು ಬ್ರಿಟನ್ ನಡುವೆ ವ್ಯಾಪಾರ, ಹೂಡಿಕೆ ಕುರಿತು ಮೋದಿ ಹಾಗೂ ರಿಷಿ ಸುನಕ್ ದ್ವಿಪಕ್ಷೀಯ ಮಾತುಕತೆ.

- ವಾಣಿಜ್ಯ ಸೇರಿದಂತೆ ಇತರೆ ಕ್ಷೇತ್ರಗಳಲ್ಲಿ ಭಾರತ ಮತ್ತು ಜಪಾನ್ ನಡುವೆ ಪರಸ್ಪರ ಸಹಕಾರಕ್ಕೆ ಸಮ್ಮತಿ
- ವ್ಯಾಪಾರ, ವಾಣಿಜ್ಯ, ರಕ್ಷಣೆ ತಂತ್ರಜ್ಞಾನ ಕ್ಷೇತ್ರದಲ್ಲಿ ಒಟ್ಟಾಗಿ ಕೆಲಸ ಮಾಡಲು ಭಾರತ–ಇಟಲಿ ಒಪ್ಪಿಗೆ
- ಔತಣಕೂಟಕ್ಕೆ ಆಗಮಿಸಿದ ನಾಯಕರಿಗೆ ಸ್ವಾಗತ ಕೋರಿದ ರಾಷ್ಟ್ರಪತಿ ದ್ರೌಪದಿ ಮುರ್ಮು.

**ಆಧಾರ:** ಪ್ರಜಾವಾಣಿ, ದಿನಾಂಕ: 10.09.2023

## 5. ಆನ್‌ಲೈನ್ ಗೇಮಿಂಗ್‌ಗೆ ಶೇ.28 ಜಿಎಸ್‌ಟಿ ಅನ್ವಯ

ಯುವ ಜನತೆಯನ್ನು ಸೆಳೆಯುವ ಆನ್‌ಲೈನ್ ಗೇಮಿಂಗ್ ಸೇರಿ ಕುದುರೆ ರೇಸ್, ಕ್ಯಾಸಿನೊಗಳ ಮೇಲೆ ಬರೋಬ್ಬರಿ ಶೇ 28 ಜಿ.ಎಸ್.ಟಿ ವಿಧಿಸುವ ಮಹತ್ವದ ತೀರ್ಮಾನವನ್ನು ಜಿಎಸ್‌ಟಿ ಸಮಿತಿ ಕೈಗೊಂಡಿದೆ. ನವದೆಹಲಿಯಲ್ಲಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ನೇತೃತ್ವದಲ್ಲಿ ನಡೆದ 50ನೇ ಜಿಎಸ್‌ಟಿ ಸಮಿತಿ ಸಭೆಯಲ್ಲಿ ಈ ತೀರ್ಮಾನ ತೆಗೆದುಕೊಳ್ಳಲಾಗಿದೆ.

ಆದರೆ, ಇದು ದಮನಕಾರಿ ಕ್ರಮ ಎಂದು ಆನ್‌ಲೈನ್ ಗೇಮಿಂಗ್ ಕಂಪನಿಗಳು ಪ್ರತಿಕ್ರಿಯಿಸಿದೆ. ಶೇ.28 ಜಿಎಸ್‌ಟಿ ವಿಧಿಸುವ ನಿರ್ಧಾರ ಅತ್ಯಂತ ದುರದೃಷ್ಟಕರ ಮತ್ತು ಹೆಚ್ಚಿನ ತೆರಿಗೆಯಿಂದ ಉದ್ಯಮದಲ್ಲಿ ಯಾರಿಗೂ ಪ್ರಯೋಜನವಾಗುವುದಿಲ್ಲ ಎಂದು ಆಲ್ ಇಂಡಿಯಾ ಗೇಮಿಂಗ್ ಫೆಡರೇಷನ್(ಎಐಜಿಎಫ್) ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ರೋಲ್ಯಾಂಡ್ ಲ್ಯಾಂಡರ್ಸ್ ಹೇಳಿದ್ದಾರೆ. ಈ ಕ್ರಮದಿಂದ ಅಕ್ರಮ ಬೆಟ್ಟಿಂಗ್ ಅಥವಾ ಜೂಜಿನ ಉದ್ಯಮಕ್ಕೆ ಲಾಭವಾಗಬಹುದು. ಆದರೆ, ಆನ್‌ಲೈನ್ ಗೇಮಿಂಗ್ ಕ್ಷೇತ್ರದ ಸ್ಟಾರ್ಟಪ್ ಸಂಸ್ಥೆಗಳು ಸಂಪೂರ್ಣವಾಗಿ ನಾಶವಾಗಲಿದೆ ಎಂದು ಬೇಸರ ಹೊರಹಾಕಿದ್ದಾರೆ.

ತಂತ್ರಜ್ಞಾನ ಮತ್ತು ಹ್ಯಾಂಡ್‌ಹೆಲ್ಡ್ ಸಾಧನಗಳ ಬಳಕೆ ಹೆಚ್ಚಿರುವುದರಿಂದ ಆನ್‌ಲೈನ್ ಗೇಮಿಂಗ್ ಮಾರುಕಟ್ಟೆಯು 40 ಕೋಟಿಗೂ ಹೆಚ್ಚು ಬಳಕೆದಾರರನ್ನು ಹೊಂದಿದೆ. ಈ ಮಾರುಕಟ್ಟೆ 3 ಬಿಲಿಯನ್ ಅಮೆರಿಕನ್ ಡಾಲರ್‌ನಷ್ಟು ಬೆಳೆದಿದೆ ಮತ್ತು ಮುಂದಿನ ಐದು ವರ್ಷದಲ್ಲಿ ಮತ್ತಷ್ಟು ವೇಗದಲ್ಲಿ ಬೆಳೆಯುವ ನಿರೀಕ್ಷೆಯಿದೆ. ಹೀಗಾಗಿ ಭಾರತದ ಉದ್ಯಮ ಕೂಡ ಸ್ಪರ್ಧಾತ್ಮಕವಾಗಿ ಉಳಿಯಲು ಜಾಗತಿಕ ತೆರಿಗೆ ದರಗಳಿಗೆ ಸಮನಾಗಿ ತೆರಿಗೆಯನ್ನು ವಿಧಿಸುವುದು ಮುಖ್ಯವಾಗಿತ್ತು ಎಂದು ವಿಶ್ಲೇಷಿಸಲಾಗಿದೆ.

ಕ್ಯಾಸಿನೊ, ಆನ್‌ಲೈನ್ ಗೇಮಿಂಗ್‌ಗೆ ತೆರಿಗೆ ನಿಗದಿ ಬಗ್ಗೆ ಸಚಿವರ ಸಮಿತಿ ನೀಡಿದ ಶಿಫಾರಸನ್ನು ಪರಿಗಣಿಸಿ ಈ ಕ್ರಮ ಕೈಗೊಳ್ಳಲಾಗಿದೆ. ಆನ್‌ಲೈನ್ ಗೇಮ್‌ಗೆ ಸಂಬಂಧಿಸಿದ ಕಾನೂನನ್ನು ತಿದ್ದುಪಡಿ ಮಾಡಲಾಗುವುದು ಎಂದು ಸಭೆಯ ಅಧ್ಯಕ್ಷತೆ ವಹಿಸಿದ್ದ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ. ಸಹಕಾರ ಸಂಸ್ಥೆಗಳಿಗೆ ಪೂರೈಕೆ ಮಾಡುವ ಕಚ್ಚಾ ಹತ್ತಿ ಮೇಲೆ ಜಿಎಸ್‌ಟಿ ಅನ್ವಯವಾಗಲಿದೆ. ತೆರಿಗೆ ಗುರುತಿಸಿರುವ ಐದು ವಸ್ತುಗಳ ಬಗ್ಗೆ ನಂತರದಲ್ಲಿ ಸ್ಪಷ್ಟನೆ ನೀಡಲಾಗುವುದು ಎಂದು ನಿರ್ಮಲಾ ಹೇಳಿದರು. ಜಿಎಸ್‌ಟಿ ಮಂಡಳಿ 50ನೇ ಸಭೆಯ ವೇಳೆಯಲ್ಲೇ ವಿಶೇಷ **'ಮೈಸ್ಟ್ಯಾಂಪ್'** ಅನ್ನು ಸಚಿವೆ ಬಿಡುಗಡೆ ಮಾಡಿದರು.

ಈ ನಡುವೆ, ಕ್ಯಾನ್ಸರ್ ಔಷದ ಡಿನುಟುಕ್ಸಿಮ್ಯಾಬ್ ಮತ್ತು ಎಫ್‌ಎಸ್‌ಎಂಪಿಯಂತಹ ಔಷಧ ಉತ್ಪನ್ನಗಳ ಅಮದುಗಳ ಮೇಲಿನ ಜಿಎಸ್‌ಟಿಗೆ ವಿನಾಯಿತಿ ನೀಡಲು ನಿರ್ಧರಿಸಲಾಗಿದೆ. ಚಲನಚಿತ್ರ ಪ್ರೇಮಿಗಳಿಗೂ ಜಿಎಸ್‌ಟಿ ಸಮಿತಿ ಖುಷಿ ಸುದ್ದಿ ನೀಡಿದ್ದು, ಚಿತ್ರಮಂದಿರಗಳಲ್ಲಿ ನೀಡಲಾಗುವ ಆಹಾರದ ಮೇಲಿನ ಜಿಎಸ್‌ಟಿ ದರವನ್ನು ಶೇಕಡ 5ಕ್ಕೆ ಇಳಿಸಲು ನಿರ್ಧರಿಸಿದೆ. ಈ ಹಿಂದೆ ಶೇ.18 ಜಿಎಸ್‌ಟಿ

ವಿಧಿಸಲಾಗಿತ್ತು ಅದಾಗ್ಯೂ, ಸಿನಿಮಾ ಟಿಕೆಟ್, ಪಾಪ್‌ಕಾರ್ನ್ ಅಥವಾ ತಂಪು ಪಾನೀಯಗಳಂತಹ ತಿನಿಸುಗಳನ್ನು ಒಟ್ಟಿಗೆ ಸೇರಿಸಿ ಮಾರಾಟ ಮಾಡಿದರೆ ಅವುಗಳನ್ನು ಸಂಯೋಜಿತ ಪೂರೈಕೆ ಎಂದು ಪರಿಗಣಿಸಬೇಕು ಮತ್ತು ಸಿನಿಮಾ ಟಿಕೆಟ್‌ಗೆ ಅನ್ವಯವಾಗುವ ದರದಂತೆ ತೆರಿಗೆ ವಿಧಿಸಬೇಕು ಎಂದು ಹೇಳಲಾಗಿದೆ. ಪ್ರಸ್ತುತ, ರೂ.100ಗಿಂತ ಕಡಿಮೆ ಇರುವ ಚಲನಚಿತ್ರ ಟಿಕೆಟ್‌ಗಳಿಗೆ ಶೇ. 12 ತೆರಿಗೆ ವಿಧಿಸಲಾಗುತ್ತಿದೆ. ಈ ಮಿತಿಗಿಂತ ಹೆಚ್ಚಿನವುಗಳಿಗೆ ಶೇ.18ದರ ನಿಗದಿಯಾಗಿದೆ.

**ಆಧಾರ**: ವಿಜಯವಾಣಿ, ದಿನಾಂಕ: 12.07.2023.

## 6. ದೆಹಲಿ ಆಡಳಿತ ಮೇಲೆ ಕೇಂದ್ರದ ಹಿಡಿತ

ಮಳೆಗಾಲದ ಅಧಿವೇಶನದಲ್ಲಿ ಸಂಸತ್ ಅಂಗೀಕರಿಸಿದ ಮಸೂದೆಗಳ ಪೈಕಿ ನಾಲ್ಕು ವಿಧೇಯಕಗಳಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅಂಕಿತ ಹಾಕಿದ್ದಾರೆ ಎಂದು ರಾಷ್ಟ್ರಪತಿ ಭವನ ತಿಳಿಸಿದೆ. ಜನನ ಮತ್ತು ಮರಣ ನೋಂದಣಿ ತಿದ್ದುಪಡಿ ಮಸೂದೆ, ಜನವಿಶ್ವಾಸ ತಿದ್ದುಪಡಿ ವಿಧೇಯಕ ಹಾಗೂ ವಿರೋಧ ಪಕ್ಷಗಳು ತೀವ್ರ ಆಕ್ಷೇಪ ವ್ಯಕ್ತಪಡಿಸಿದ ದೆಹಲಿ ರಾಷ್ಟ್ರೀಯ ರಾಜಧಾನಿ ದೆಹಲಿ ತಿದ್ದುಪಡಿ ಮಸೂದೆ ಮತ್ತು ಡಿಜಿಟಲ್ ವೈಯಕ್ತಿಕ ಡೇಟಾ ಸುರಕ್ಷತಾ ಮಸೂದೆಗೆ ರಾಷ್ಟ್ರಪತಿ ಒಪ್ಪಿಗೆ ಮುದ್ರೆ ಒತ್ತಿದ್ದಾರೆ.

ದೆಹಲಿ ಅಧಿಕಾರಿಗಳ ಹುದ್ದೆ ಮತ್ತು ವರ್ಗಾವಣೆ ಅಧಿಕಾರ ಚುನಾಯಿತ ರಾಜ್ಯ ಸರ್ಕಾರಕ್ಕೆ ಇರಬೇಕು ಎಂದು ಸುಪ್ರೀಂಕೋರ್ಟ್ ತೀರ್ಪು ನೀಡಿದ ನಂತರ ಕೇಂದ್ರ ಸರ್ಕಾರ ಸುಗ್ರೀವಾಜ್ಞೆ ಮೂಲಕ ಈ ಅಧಿಕಾರವನ್ನು ತನ್ನ ಬಳಿಯಲ್ಲೇ ಇರಿಸಿಕೊಳ್ಳುವ ಶಾಸನ ತಂದಿತ್ತು. ಅದಕ್ಕೆ ಸಂಸತ್ ಒಪ್ಪಿಗೆ ಪಡೆದು ಕಾಯ್ದೆಗಾಗಿ ಪರಿವರ್ತಿಸಲು ಈ ಮಸೂದೆ ಮಂಡಿಸಿತ್ತು. ಇದನ್ನು ದೆಹಲಿ ಕೇಂದ್ರಾಡಳಿತ ಪ್ರದೇಶದಲ್ಲಿ ಆಡಳಿತ ನಡೆಸುತ್ತಿರುವ ಅಮ್ ಆದ್ಮಿ ಪಕ್ಷ (ಆಪ್) ಬಲವಾಗಿ ವಿರೋಧಿಸಿ, ಸುಪ್ರೀಂಕೋರ್ಟ್ ತೀರ್ಪನ್ನು ನಿರರ್ಥಕಗೊಳಿಸುವ ಮತ್ತು ಚುನಾಯಿತ ಸರ್ಕಾರದ ಅಧಿಕಾರ ಮೊಟಕು ಮಾಡುವ ಶಾಸನ ಎಂದು ಟೀಕಿಸಿತ್ತು. ರಾಜ್ಯ ಸಭೆಯಲ್ಲಿ ಈ ಮಸೂದೆಯನ್ನು ಸೋಲಿಸಲು ವಿರೋಧ ಪಕ್ಷಗಳ ಬೆಂಬಲವನ್ನು ಯಾಚಿಸಿತ್ತು. ಆದರೆ ಮೇಲ್ಮನೆಯಲ್ಲಿ ಈ ಮಸೂದೆ 131–102 ಮತಗಳ ಅಂತರದಲ್ಲಿ ಅಂಗೀಕಾರ ಪಡೆಯಿತು.

ಡಿಜಿಟಲ್ ವೈಯಕ್ತಿಕ ಡೇಟಾ ಮಸೂದೆಯ ಕೆಲ ಅಂಶಗಳಿಗೆ ತಿದ್ದುಪಡಿಯಾಗಬೇಕು ಎಂದು ಪ್ರತಿಪಕ್ಷಗಳು ಆಗ್ರಹಿಸಿದ್ದವು. ಜನರ ದತ್ತಾಂಶಗಳು ಸರ್ಕಾರದ ನಿಗಕ್ಕೆ ಒಳಪಡುವ ಆತಂಕ ಇದೆ ಎಂದು ಕಳವಳ ವ್ಯಕ್ತಪಡಿಸಿದ್ದವು. ಮಸೂದೆಯಲ್ಲಿ ಪ್ರಸ್ತಾಪಿಸಿರುವ ಕೆಲ ಅಂಶಗಳು ಪತ್ರಿಕಾ ಸ್ವಾತಂತ್ರ್ಯಕ್ಕೆ ಧಕ್ಕೆಯುಂಟು ಮಾಡುತ್ತದೆ ಎಂದು ಎಡಿಟರ್ಸ್ ಗಿಲ್ಡ್ ಕೂಡ ಆಕ್ಷೇಪಿಸಿತ್ತು. ಡೇಟಾ ಸುರಕ್ಷತೆಯನ್ನು ಉಲ್ಲಂಘಿಸುವ ಆನ್‌ಲೈನ್ ವೇದಿಕೆಗಳಿಗೆ ರೂ.250 ಕೋಟಿವರೆಗೆ ದಂಡ ವಿಧಿಸುವ ಪ್ರಸ್ತಾವ ಈ ಮಸೂದೆಯಲ್ಲಿ ಇದೆ.

ಹೊಸ ಮೂರು ಮಸೂದೆಗಳಲ್ಲಿ ಕ್ರಿಮಿನಲ್ ನ್ಯಾಯದಾನ ವ್ಯವಸ್ಥೆಯಲ್ಲಿ ಅಮೂಲಾಗ್ರ ಬದಲಾವಣೆ ತರುವ ಉದ್ದೇಶವನ್ನು ಸರ್ಕಾರ ವ್ಯಕ್ತಪಡಿಸಿದೆ ಗುಂಪು ಹಲ್ಲೆ, ವಿಚಾರಣಾಧೀನ ಕೈದಿಗಳ ಜಾಮೀನಿಗೆ ಸಂಬಂಧಿಸಿದ ನಿಯಮ, ಶೂನ್ಯ ಎಫ್‌ಐಆರ್ ಬಹು ಚರ್ಚಿತವಾಗಿದೆ. ಗುಂಪು ಹಲ್ಲೆ ಮತ್ತು ಜಾತಿ, ಜನಾಂಗ, ಸಮದಾಯವನ್ನು ಗುರಿಯಾಗಿಟ್ಟುಕೊಂಡು ನಡೆಸುವ ಹತ್ಯೆಗೆ ಏಳು ವರ್ಷ ಕನಿಷ್ಠ ಸಜೆಯು ಹೊಸ ಮಸೂದೆಯಲ್ಲಿ ಇದೆ. ಗರಿಷ್ಠ ಮರಣದಂಡನೆಯನ್ನೂ ವಿಧಿಸಬಹುದು. ಆರೋಪಿಯ ಆಸ್ತಿಯನ್ನು ಜಪ್ತಿ ಮಾಡುವಂತಹ ಹೊಸ ಅಂಶ ಇರುವುದರಿಂದ ಆರೋಪಿಗಳು ವಿಚಾರಣೆಗೆ ತಪ್ಪಿಸುವುದನ್ನು ತಡೆಯುತ್ತದೆ. ಆರ್ಥಿಕ ಅಪರಾಧ ಎಸಗಿ ವಿದೇಶಕ್ಕೆ ಪಲಾಯನ ಮಾಡಿದವರು ವಿಚಾರಣೆಗೆ ಸಹಕರಿಸದಿದ್ದರೆ ಅವರನ್ನು ಕಠಿಣವಾಗಿ ಶಿಕ್ಷಿಸುವ ಅಧಿಕಾರ ಹೊಸ ಮಸೂದೆಯಲ್ಲಿ ಇದೆ.

ಠಾಣಾ ವ್ಯಾಪ್ತಿಯ ಹೊರಗೆ ಆದರೆ, ರಾಜ್ಯದ ಪರಿಮಿತಿಯಲ್ಲಿ ಯಾವುದೇ ಭಾಗದಲ್ಲಿ ಶೂನ್ಯ ಎಫ್‌ಐಆರ್ ದಾಖಲಿಸಲು ಹೊಸ ಮಸೂದೆ ಅವಕಾಶ ನೀಡಲಿದೆ. ಹಾಗೆಯೇ ಇ–ಎಫ್‌ಐಆರ್ ದಾಖಲಿಸಲು ಪ್ರತಿ ಜಿಲ್ಲೆಯಲ್ಲೂ ಅಧಿಕಾರಿಗಳನ್ನು ನಿಯುಕ್ತಿ ಮಾಡಬೇಕು ಎಂಬ ಅಂಶ ಜನೋಪಕಾರಿಯಾಗಿದೆ. ಮೂರು ವರ್ಷದವರೆಗೆ ಸಜೆಗೆ ಅವಕಾಶ ಇರುವ ಪ್ರಕರಣಗಳಲ್ಲಿ ಆರೋಪಪಟ್ಟಿ ಸಲ್ಲಿಸಿದ ನಂತರ ಹೆಚ್ಚುವರಿ ತನಿಖೆ ಅವಶ್ಯಕವಾದರೆ, ಅದನ್ನು 90 ದಿನದಲ್ಲಿ ಮುಗಿಸಬೇಕು. ಅದನ್ನೂ ಮೀರಿದ ಕಾಲಾವಧಿ ಬೇಕಿದ್ದರೆ ಕೋರ್ಟ್ ಅನುಮತಿ ಕಡ್ಡಾಯ ಮಾಡಲಾಗಿದೆ. ಮೊದಲ ಸಲ ಅಪರಾಧ ಎಸಗಿದವರು ಶಿಕ್ಷೆಯ ಅವಧಿಯಲ್ಲಿ ಮೂರನೇ ಒಂದು ಭಾಗದ ಅವಧಿಯನ್ನು ಮುಗಿಸಿದ್ದರೆ ಅಂಥವರಿಗೆ ಜಾಮೀನು ನೀಡಬಹುದು. ವಿಚಾರಣಾಧೀನ ಖೈದಿಗಳು ಪ್ರಕರಣದಲ್ಲಿ ಗರಿಷ್ಠ ಶಿಕ್ಷೆಯ ಅರ್ಧದಷ್ಟು ಅಥವಾ ಮೂರನೇ ಒಂದು ಭಾಗದಷ್ಟು ಅವಧಿಯನ್ನು ಜೈಲಿನಲ್ಲಿ ಕಳೆದಿದ್ದರೆ ಜಾಮೀನಿಗೆ ಅರ್ಹರು, ಆದರೆ, ಈ ನಿಯಮಗಳು ಜೀವಾವಧಿ ಅಥವಾ ಮರಣದಂಡನೆಯಂತಹ ಪ್ರಕರಣಗಳಿಗೆ ಅನ್ವಯ ಆಗುವುದಿಲ್ಲ.

**ಅಂಗೀಕಾರಗೊಂಡ ಕಾನೂನುಗಳು**

**ಡೇಟಾ ಸಂರಕ್ಷಣಾ ಕಾನೂನು**

- ಇ–ಕಾಮರ್ಸ್ ವ್ಯಾಪಾರ ಮತ್ತು ಹೆಚ್ಚಾದ ನಂತರ ಜನರ ವೈಯಕ್ತಿಕ ಡಿಜಿಟಲ್ ಡೇಟಾದ ಸುರಕ್ಷತೆ ಬಗ್ಗೆ ಆತಂಕ ಹೆಚ್ಚಾಯಿತು. ಇದನ್ನು ದೂರ ಮಾಡುವುದು ಈ ಕಾನೂನಿನ ಉದ್ದೇಶ.
- ವೈಯಕ್ತಿಕ ಡಿಜಿಟಲ್ ಡೇಟಾವನ್ನು ಕಾನೂನಾತ್ಮಕ ಕೆಲಸಗಳಿಗೆ ಮಾತ್ರ ಬಳಸಬೇಕು. ಉದ್ದೇಶ ಪೂರ್ಣವಾದ ನಂತರ ಡಿಲೀಟ್ ಮಾಡಬೇಕು.
- ಸ್ವಇಚ್ಛೆಯಿಂದ ಡೇಟಾ ಹಂಚಿಕೊಳ್ಳುವ ಅಧಿಕಾರ ವೈಯಕ್ತಿವಾದುದು ಮತ್ತು ಇದಕ್ಕೆ ಯಾರದ್ದೇ ಒಪ್ಪಿಗೆ ಅವಶ್ಯಕತೆ ಇಲ್ಲ.
- ದೇಶದ ರಕ್ಷಣೆ, ಕಾನೂನು ಸುವ್ಯವಸ್ಥೆ ಮತ್ತು ಅಪರಾಧ ತಡೆಯುವಿಕೆ ವಿಷಯದಲ್ಲಿ ಸರ್ಕಾರಕ್ಕೆ ಕೆಲ ಡೇಟಾ ನಿಯಂತ್ರಣ ಇದೆ.
- ಭಾರತೀಯ ಡೇಟಾ ಸಂರಕ್ಷಣಾ ಮಂಡಳಿ ಸ್ಥಾಪಿಸಲು ಈ ಕಾಯ್ದೆ ಅವಕಾಶ ಮಾಡಿಕೊಡುತ್ತದೆ.

**ಅಧಿಕಾರಿಗಳ ಸೇವಾ ಕಾನೂನು:**

- ದೆಹಲಿ ರಾಷ್ಟ್ರರಾಜಧಾನಿ ವ್ಯಾಪ್ತಿಯಲ್ಲಿ ಅಧಿಕಾರಿಗಳ ನಿಯೋಜನೆ ಸಂಬಂಧ ಪ್ರಾಧಿಕಾರ ರಚನೆಗೆ ಹೊಸ ತಿದ್ದುಪಡಿ ಅವಕಾಶ ಕಲ್ಪಿಸಲಿದೆ.
- ಅಧಿಕಾರಿಗಳ ವರ್ಗಾವಣೆಯ ಸಂಪೂರ್ಣ ಅಧಿಕಾರ ಲೆಫ್ಟಿನೆಂಟ್ ಗವರ್ನರ್ ಬಳಿ ಇರುತ್ತದೆ.
- ದೆಹಲಿಯಲ್ಲಿ ಭೂಮಿ, ಪೊಲೀಸ್ ಹಾಗೂ ಕಾನೂನು ಸುವ್ಯವಸ್ಥೆ ಹೊರತು ಪಡಿಸಿದ ವಿಷಯಗಳಲ್ಲಿ ಸ್ಥಳೀಯ ಚುನಾಯಿತ ಸರ್ಕಾರಕ್ಕೆ ಅಧಿಕಾರ ಎಂದು ಕಳೆದ ಮೇ 11 ಸುಪ್ರೀಂ ಕೋರ್ಟ್ ತೀರ್ಪು ನೀಡಿತ್ತು. ಇದನ್ನು ತಡೆಯಲು ಕೇಂದ್ರ ಸರ್ಕಾರ ಸುಗ್ರೀವಾಜ್ಞೆ ಜಾರಿ ಮಾಡಿತ್ತು.

**ಜನವಿಶ್ವಾಸ ತಿದ್ದುಪಡಿ:**

- ಸಣ್ಣಪುಟ್ಟ ಅಪರಾಧಗಳನ್ನು ಕ್ರಿಮಿನಲ್ ಸ್ವರೂಪದಿಂದ ಹೊರಗಿಡುವುದು.
- ಜೈಲು ಪಾಲಾಗುವುದನ್ನು ತಪ್ಪಿಸುವ ಅಂಶ. ದಂಡ ವಿಧಿಸುವ ಮೂಲಕ ಇತ್ಯರ್ಥ.

- ಸಣ್ಣಪುಟ್ಟ ಪ್ರಕರಣಗಳು ಕೋರ್ಟ್ ಮೆಟ್ಟಿಲೇರುವುದನ್ನು ತಪ್ಪಿಸುತ್ತದೆ.
- ಈ ರೀತಿಯ ಪ್ರಕರಣಗಳ ನಿರ್ವಹಣೆ ನಿಗಮ.

**ಜನನ ಮತ್ತು ಮರಣ ನೋಂದಣಿ ತಿದ್ದುಪಡಿ:**

- ಜನನ ಪ್ರಮಾಣ ಪತ್ರವನ್ನು ವ್ಯಕ್ತಿಯ ಗುರುತಿನ ಏಕೈಕ ಆಧಾರ ಪತ್ರವನ್ನಾಗಿ ಬಳಸಬಹುದು. ಶಿಕ್ಷಣ, ಮತದಾರರ ಪಟ್ಟಿಗೆ ನೋಂದಣಿ, ಆಧಾರ್, ಪ್ಯಾನ್ ಕಾರ್ಡ್ ಪಡೆಯಲು, ಸರ್ಕಾರಿ ಉದ್ಯೋಗಕ್ಕೆ ನೇಮಕ, ವಿವಾಹ ನೋಂದಣಿ ಹಾಗೂ ಕೇಂದ್ರ ಸರ್ಕಾರ ಸೂಚಿತ ಇನ್ನಿತರ ವಿಷಯಗಳು.
- ರಾಜ್ಯ ಸರ್ಕಾರಗಳು ಜನನ ಮತ್ತು ಮರಣಕ್ಕೆ ಸಂಬಂಧಿಸಿದ ನೋಂದಣಿ ಮಾಹಿತಿಯನ್ನು ರಾಷ್ಟ್ರೀಯ ಡೇಟಾ ಬೇಸ್ ಜೊತೆಗೆ ಹಂಚಿಕೊಳ್ಳಬೇಕು.
- ಇ–ಪ್ರಮಾಣ ಪತ್ರ ವಿತರಣೆಗೆ ಅವಕಾಶ.

**ಆಧಾರ:** ವಿಜಯವಾಣಿ, ದಿನಾಂಕ: 13.08.2023

## 7. ಸ್ವಾತಂತ್ರ್ಯ ದಿನಕ್ಕೆ ದೇಶದ 1800 ವಿಶೇಷ ಅತಿಥಿಗಳು

ದೇಶದ 77ನೇ ಸ್ವಾತಂತ್ರ್ಯ ದಿನಾಚರಣೆಯ ಮುಖ್ಯ ಸಮಾರಂಭ ಪ್ರತಿ ವರ್ಷದಂತೆ ಈ ಸಲವೂ ದಿಲ್ಲಿಯ ಕೆಂಪುಕೋಟೆಯಲ್ಲಿ ಏರ್ಪಾಡಾಗಿದ್ದು, ಪ್ರಧಾನಿ ನರೇಂದ್ರ ಮೋದಿ ಧ್ವಜಾರೋಹಣ ಮಾಡಿ ಸಾಂಪ್ರದಾಯಿಕ ಭಾಷಣ ಮಾಡಲಿದ್ದಾರೆ. ಆದರೆ ಈ ಸಲದ ಸ್ವಾತಂತ್ರೋತ್ಸವ ಎಂದಿನಂತೆ ಇರದೇ ಭಿನ್ನವಾಗಿರಲಿದೆ.

ಪ್ರಧಾನಿ ನರೇಂದ್ರ ಮೋದಿ ಅವರ ಚಿಂತನೆಯ 'ಜನ ಭಾಗೀದಾರಿಕೆ' ತತ್ವದಂತೆ ಅನೇಕ ಕನ್ನಡಿಗರೂ ಸೇರಿ ಸುಮಾರು 1,800 'ವಿಶೇಷ ಅತಿಥಿಗಳು' ಕೆಂಪುಕೋಟೆ ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ. ಹಾಗಂತ ಇವರೇನೂ ವಿವಿಐಪಿಗಳಲ್ಲ, ಬದಲಾಗಿ ಸಾಮಾನ್ಯರಲ್ಲಿ ಸಾಮಾನ್ಯರಂತೆ ಬದುಕುತ್ತಿರುವ ದೇಶದ ಜನಸಾಮಾನ್ಯರು.

77ನೇ ಸ್ವಾತಂತ್ರ್ಯ ದಿನದ ಅಂಗವಾಗಿ ಹಮ್ಮಿಕೊಳ್ಳಲಾಗಿರುವ 'ಹರ್ ಘರ್ ತಿರಂಗಾ' ಅಭಿಯಾನದಡಿ ಜನರು ಸಾಮಾಜಿಕ ಜಾಲತಾಣಗಳ ಡಿ.ಪಿಯನ್ನು ತ್ರಿವರ್ಣ ಧ್ವಜದ ಚಿತ್ರಕ್ಕೆ ಬದಲಿಸಿಕೊಳ್ಳಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಕರೆ ಕೊಟ್ಟಿದ್ದಾರೆ.

ಜನಸಾಮಾನ್ಯರು ಆಡಳಿತದಲ್ಲಿ ಪಾಲ್ಗೊಳ್ಳುವಂತೆ ಉತ್ತೇಜಿಸಲು ಕನ್ನಡಿಗರೂ ಸೇರಿದಂತೆ 1800 ಜನಸಾಮಾನ್ಯರನ್ನು ವಿಶೇಷ ಅತಿಥಿಗಳ ರೂಪದಲ್ಲಿ ಸ್ವಾತಂತ್ರ್ಯ ದಿನಾಚರಣೆಗೆ ಆಹ್ವಾನಿಸಲಾಗಿದೆ.

ಇವರಲ್ಲಿ 660 ಉತ್ತಮ ಗ್ರಾಮಗಳ 400 ಸರಪಂಚರು, ರೈತ ಉತ್ಪಾದಕ ಸಂಸ್ಥೆಗಳ 250 ರೈತರು, ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆ ಮತ್ತು ಕೌಶಲ್ ವಿಕಾಸ ಯೋಜನೆಯ ತಲಾ 50 ಫಲಾನುಭವಿಗಳು, ಹೊಸ ಸಂಸತ್ತಿನ ಕಟ್ಟಡ ನಿರ್ಮಾಣ ಸೇರಿದಂತೆ ಸೆಂಟ್ರಲ್ ವಿಸ್ಟಾ ಯೋಜನೆಯಲ್ಲಿ ಭಾಗಿ ಆಗಿರುವ 50 ಶ್ರಮ ಯೋಗಿಗಳು (ನಿರ್ಮಾಣ ಕೆಲಸಗಾರರು), 50 ಖಾದಿ ಕಾರ್ಮಿಕರು, ಗಡಿ ರಸ್ತೆಗಳ ನಿರ್ಮಾಣ, ಅಮೃತ್ ಸರೋವರ ಮತ್ತು ಮನೆ ಮನೆಗೆ ಜಲ ಯೋಜನೆಯ ತಲಾ 50 ಕಾರ್ಮಿಕರು, 50 ಪ್ರಾಥಮಿಕ ಶಾಲಾ ಶಿಕ್ಷಕರು, ದಾದಿಯರು ಮತ್ತು ಬೆಸ್ತರು ಇರಲಿದ್ದಾರೆ. ಇವರಿಗೆ ರಾಷ್ಟ್ರೀಯ ಯುದ್ಧ ಸ್ಮಾರಕಕ್ಕೆ ಭೇಟಿಗೂ ವ್ಯವಸ್ಥೆ ಮಾಡಲಾಗಿದೆ.

ಪ್ರತಿ ರಾಜ್ಯ/ಕೇಂದ್ರಾಡಳಿತ ಪ್ರದೇಶದಿಂದ 75 ಜೋಡಿಗಳಿಗೆ ಕೂಡ ಅವರವರ ಸಾಂಪ್ರದಾಯಿಕ ಉಡುಗೆಯಲ್ಲಿ ಕೆಂಪು ಕೋಟೆಯಲ್ಲಿ ಸಮಾರಂಭ ವೀಕ್ಷಿಸಲು ಆಹ್ವಾನಿಸಲಾಗಿದೆ.

ಸರ್ಕಾರದ ವಿವಿಧ ಯೋಜನೆಗಳು ಮತ್ತು ಉಪಕ್ರಮಗಳಿಗೆ ಮೀಸಲಾಗಿರುವ ಸೆಲ್ಫಿ ಪಾಯಿಂಟ್‌ಗಳನ್ನು ದೆಹಲಿಯ 12 ಸ್ಥಳಗಳಲ್ಲಿ ಸ್ಥಾಪಿಸಲಾಗಿದೆ ಹಾಗೂ ಸೆಲ್ಫಿ ಸ್ಪರ್ಧೆ ಏರ್ಪಡಿಸಲಾಗಿದೆ.

ಸ್ವಾತಂತ್ರ್ಯ ದಿನಾಚರಣೆಯ ಭಾಗವಾಗಿ, ರಕ್ಷಣಾ ಸಚಿವಾಲಯವು ಮೈಗವ್ ಪೋರ್ಟಲ್‌ನಲ್ಲಿ ಆಗ.15ರಿಂದ 20ರವರೆಗೆ ಆನ್‌ಲೈನ್ ಸೆಲ್ಫಿ ಸ್ಪರ್ಧೆಯನ್ನು ನಡೆಸುತ್ತದೆ. ಜನರು 12 ಸೆಲ್ಫಿ ಪಾಯಿಂಟ್‌ಗಳಲ್ಲಿ ಒಂದು ಅಥವಾ ಹೆಚ್ಚಿನ ಸೆಲ್ಫಿಗಳನ್ನು ತೆಗೆದುಕೊಂಡು ಅವುಗಳನ್ನು ಮೈಗವ್ ಪ್ಲಾಟ್ ಫಾರ್ಮ್‌ನಲ್ಲಿ ಅಪ್ಲೋಡ್ ಮಾಡಬಹುದಾಗಿದೆ.

ಅಂತಿಮವಾಗಿ 12 ಉತ್ತಮ ಸೆಲ್ಫಿಗಳನ್ನು ಆಯ್ಕೆ ಮಾಡಿ 12 ವಿಜೇತರ ಹೆಸರು ಘೋಷಿಸಲಾಗುತ್ತದೆ ವಿಜೇತರಿಗೆ ತಲಾ ರೂ.10000/– ಬಹುಮಾನ ನೀಡಲಾಗುವುದು ಎಂದು ಸರ್ಕಾರ ಹೇಳಿದೆ. ರಾಷ್ಟ್ರೀಯ ಯುದ್ಧ ಸ್ಮಾರಕ, ಇಂಡಿಯಾ ಗೇಟ್, ವಿಜಯ್ ಚೌಕ ನವದೆಹಲಿ ರೈಲು ನಿಲ್ದಾಣ, ಪ್ರಗತಿ ಮೈದಾನ ರಾಜಘಾಟ್, ಜಾಮಾ ಮಸೀದಿ ಮೆಟ್ರೋ ನಿಲ್ದಾಣ, ರಾಜೀವ್ ಚೌಕ ಮೆಟ್ರೋ ನಿಲ್ದಾಣ, ದೆಹಲಿ ಗೇಟ್ ಮೆಟ್ರೋ ನಿಲ್ದಾಣ ಐಟಿಒ ಮೆಟ್ರೋ ಗೇಟ್, ನೌಬತ್ ಖಾನಾ ಮತ್ತು ಶೀಷ್ ಗಂಜ್ ಗುರುದ್ವಾರಗಳಲ್ಲಿ ಸೆಲ್ಫಿ ಪಾಯಿಂಟ್ ಇರಲಿದೆ.

**ಆಧಾರ**: ಕನ್ನಡ ಪ್ರಭ, ದಿನಾಂಕ: 14.08.2023

## 8. President launches Ayushman Bhav health campaign

President Droupadi Murmu virtually launched an Ayshman Bhav campaign and portal from the Raj Bhavan in Gandhinagar .

"This historic launch of the campaign and the portal marked a significant leap towards achieving Universal Health Coverage (UHC) and ensuring healthcare for all as it strives to further consolidate the accessibility and affordability of healthcare services particularly for the underserved," the President said.

At the launch, the President was joined by Health Minister Mansukh Mandaviya, and Gujarat Chief Minister Bhupendra Patel. Ms. Murmu praised the multi-ministerial approach adopted by the Ayushman Bhav campaign to achieve the ambitious goal of delivering healthcare services to the last mile of India, saying that this will play a role in the accomplishment of this endeavour.

Underscoring the philosophy of antyodaya, which means good health for all and leaving no one behind, Ms.Murmu praised the involvement and support of local governance in this endeavour and stated that gram panchayats who successfully achieved their goals would be declared as Ayushman gram panchayats.

Highlighting the role of the government and its commitment to achieve the set sustainable development goals in due time, Mr.Murmu also commended the Seva Pakhwada initiative, which will run from September 17 to October 2, and which strives to ensure that every individual receives essential health services. The President also applauded the goals of

Ayushman Bhav to further facilitate access of Ayushman cards, generate ABHA IDs, and raise awareness of health schemes and disease conditions, such as non-communicable diseases, tuberculosis, and sickle cell disease.

**Courtesy:** The Hindu, dated: 14.09.2023

## 9. ರಾಜ್ಯಕ್ಕೆ 3ನೇ ವಂದೇಭಾರತ್: 24ಕ್ಕೆ ಮೋದಿ ಚಾಲನೆ

ರಾಜ್ಯದ ಮೂರನೇ ವಂದೇ ಭಾರತ್ ಎಕ್ಸಪ್ರೆಸ್ ರೈಲಿಗೆ ಸೆಪ್ಟೆಂಬರ್ 24 ರಂದು ಪ್ರಧಾನಿ ನರೇಂದ್ರ ಮೋದಿ ಚಾಲನೆ ನೀಡಲಿದ್ದಾರೆ. ಹೈದರಾಬಾದ್‌ನ ಕಾಚಿಗುಡ–ಯಶವಂತಪುರ ನಿಲ್ದಾಣದ ನಡುವೆ ರೈಲು ಸಂಚರಿಸಲಿದೆ.

ಈ ನಿಮಿತ್ತ ರೈಲಿನ ಮೊದಲ ಪ್ರಾಯೋಗಿಕ ಸಂಚಾರ ನಡೆಯಲಿದೆ. ಇದು ದಕ್ಷಿಣ ಭಾರತದ ಎರಡು ಐಟಿ ನಗರಗಳ ನಡುವಿನ ಮೊದಲ ವಂದೇ ಭಾರತ್ ಎನ್ನಿಸಿಕೊಂಡಿದೆ. ಪ್ರಯೋಗಾರ್ಥವಾಗಿ ಈ ರೈಲು ಬೆಳಗ್ಗೆ ಕಾಚಿಗುಡದಿಂದ ಹೊರಟು ಮಧ್ಯಾಹ್ನ 2 ಗಂಟೆಗೆ ಯಶವಂತಪುರ ನಿಲ್ದಾಣ ತಲುಪುವ ನಿರೀಕ್ಷೆಯಿದೆ. ಪುನ: ಇಲ್ಲಿಂದ 2.45ಕ್ಕೆ ಇಲ್ಲಿಂದ ಕಾಚಿಗುಡಕ್ಕೆ ತೆರಳಲಿದೆ ಎಂದು ಬೆಂಗಳೂರು ನೈಋತ್ಯ ರೈಲ್ವೇ ವಿಭಾಗೀಯ ಅಧಿಕಾರಿಗಳು ತಿಳಿಸಿದ್ದಾರೆ.

ಸುಮಾರು 610 ಕಿ.ಮೀ. ಅಂತರವನ್ನು 7 ಗಂಟೆಯಲ್ಲಿ ಈ ರೈಲು ಕ್ರಮಿಸಬಹುದು. ಯಶವಂತಪುರದಿಂದ ಧರ್ಮಾವರಂ, ದೋನ್, ಕರ್ನೂಲ್ ನಗರ, ಗಡ್ವಾಲ ಜಂಕ್ಷನ್ ಮೆಹಬೂಬ ನಗರ, ಶಾದ್‌ನಗರ ಮೂಲಕ ಕಾಚಿಗುಡಕ್ಕೆ ಈ ರೈಲು ಸಂಚರಿಸಲಿದೆ.

ಬೆಂಗಳೂರು–ಹುಬ್ಬಳ್ಳಿ, ಕೆಎಸ್‌ಆರ್ ಬೆಂಗಳೂರು–ವೇಲಂಕಣಿ ಹಾಗೂ ಯಶವಂತಪುರ–ವಿಜಯಪುರ ಎಕ್ಸ್‌ಪ್ರೆಸ್ ರೈಲುಗಳ ಸೇವೆಯನ್ನು ಮತ್ತಷ್ಟು ದಿನಗಳ ಕಾಲ ವಿಸ್ತರಿಸಲಾಗಿದೆ.

ಬೆಂಗಳೂರು (ಕೆಎಸ್‌ಆರ್ ರೈಲ್ವೆ ನಿಲ್ದಾಣ) ಹಾಗೂ ಹುಬ್ಬಳ್ಳಿ (ಎಸ್‌ಎಸ್‌ಎಸ್ ರೈಲ್ವೆ ನಿಲ್ದಾಣ) ನಡುವಿನ ವಿಶೇಷ ಎಕ್ಸ್‌ಪ್ರೆಸ್ ರೈಲುಗಳ ಸೇವೆಯನ್ನು ಈಗಿರುವ ಸಮಯ, ನಿಲುಗಡೆ ಮತ್ತು ಸಂಯೋಜನೆಯೊಂದಿಗೆ ನೈಋತ್ಯ ರೈಲ್ವೆ ವಿಸ್ತರಿಸಿದೆ. ಎಸ್‌ಎಸ್‌ಎಸ್ ಹುಬ್ಬಳ್ಳಿ ಮತ್ತು ಕೆಎಸ್‌ಆರ್ ಬೆಂಗಳೂರು ಡೈಲಿ. ವಿಶೇಷ ಎಕ್ಸ್‌ಪ್ರೆಸ್ ರೈಲನ್ನು (07339) ಸೆ. 30 ರವರೆಗೆ ಓಡಿಸಲು ಮೊದಲು ನಿರ್ಧರಿಸಲಾಗಿತ್ತು. ಅದನ್ನು ಅಕ್ಟೋಬರ್ 31 ರವರೆಗೆ ವಿಸ್ತರಿಸಲಾಗುತ್ತಿದೆ. ಹಿಂದಿರುಗುವ ಇದೇ ರೈಲು (07340) ಅ.1 ರವರೆಗೆ ಓಡಿಸಲು ಈ ಮೊದಲು ಸೂಚಿಸಲಾಗಿತ್ತು. ಅದನ್ನು ನವೆಂಬರ್ 1 ರವರೆಗೆ ವಿಸ್ತರಿಸಲಾಗುತ್ತಿದೆ.

ಕೆಎಸ್‌ಆರ್ ಬೆಂಗಳೂರು ಮತ್ತು ವೇಲಂಕಣಿ ಸಾಪ್ತಾಹಿಕ ವಿಶೇಷ ಎಕ್ಸ್‌ಪ್ರೆಸ್ ರೈಲನ್ನು (06547) ಸೆಪ್ಟೆಂಬರ್ 30 ರವರೆಗೆ ಓಡಿಸಲು ಮೊದಲು ನಿರ್ಧರಿಸಲಾಗಿತ್ತು. ಅದನ್ನು ಅಕ್ಟೋಬರ್ 28 ರವರೆಗೆ ವಿಸ್ತರಿಸಲಾಗುತ್ತಿದೆ. ಅದೇ ರೀತಿ ಹಿಂದಿರುಗುವ ಈ ರೈಲನ್ನು (06548) ಸೆ.30 ರವರೆಗೆ ಓಡಿಸಲು ನಿರ್ಧರಿಸಲಾಗಿತ್ತು. ಇದೀಗ ಅ. 28 ರವರೆಗೆ ವಿಸ್ತರಿಸಲಾಗುತ್ತಿದೆ.

ಯಶವಂತಪುರ ಮತ್ತು ವಿಜಯಪುರ ಡೈಲಿ ವಿಶೇಷ ಎಕ್ಸ್‌ಪ್ರೆಸ್ ರೈಲನ್ನು (06545) ಸೆಪ್ಟೆಂಬರ್ 29 ರವರೆಗೆ ಓಡಿಸಲು ಮೊದಲು ನಿರ್ಧರಿಸಲಾಗಿತ್ತು.. ಅದನ್ನು ಡಿ–31ರವರೆಗೆ ವಿಸ್ತರಿಸಲಾಗುತ್ತಿದೆ. ವಿಜಯಪುರ ಮತ್ತು ಯಶವಂತಪುರ ಡೈಲಿ ವಿಶೇಷ ಎಕ್ಸ್‌ಪ್ರೆಸ್ ರೈಲನ್ನು (06546) ಸೆ.30 ರವರೆಗೆ ಓಡಿಸಲು ನಿರ್ಧಾರವಾಗಿತ್ತು. ಈ ರೈಲನ್ನು ಜನವರಿ 1ರವರೆಗೆ ವಿಸ್ತರಿಸಲಾಗುತ್ತಿದೆ.

**ಆಧಾರ:** ಕನ್ನಡ ಪ್ರಭ ದಿನಾಂಕ: 21.09.2023

# ಭಾಗ–5
# ರಾಜ್ಯ ಸರ್ಕಾರ ಸುದ್ದಿಗಳು

## 1. ಮೂರನೇ ಗ್ಯಾರಂಟಿ ಜಾರಿ

ರಾಜ್ಯದ ಬಡ ಕುಟುಂಬಗಳಿಗೆ ಆಹಾರದ ಭದ್ರತೆ ಒದಗಿಸಿರುವ 'ಅನ್ನಭಾಗ್ಯ'ಕ್ಕೆ ಈಗ ದಶಕದ ಸಂಭ್ರಮ. ಹೆಚ್ಚುವರಿ ಐದು ಕೆಜಿ ಅಕ್ಕಿಯ ಬದಲಿಗೆ ನಗದು ವರ್ಗಾವಣೆ ಮಾಡುವ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಈ ಸಂಭ್ರಮವನ್ನು ಅಕ್ಷರಶ: ಇಮ್ಮಡಿಗೊಳಿಸಿತು.

2013ರಲ್ಲಿ ಇದೇ ಸರ್ಕಾರ ಕೇವಲ 1 ರೂ.ಗೆ ಕೆಜಿಯಂತೆ ಪ್ರತಿ ಕುಟುಂಬದ ವ್ಯಕ್ತಿಗೆ ತಲಾ ಐದು ಕೆಜಿ ಅಕ್ಕಿ ನೀಡುವ ಮೂಲಕ 'ಅನ್ನಭಾಗ್ಯ'ಕ್ಕೆ ಚಾಲನೆ ನೀಡಿತ್ತು. ಈಗ ಅದೇ ಸರ್ಕಾರವು ದುಪ್ಪಟ್ಟು ಅಂದರೆ ಐದು ಕೆಜಿ ಅಕ್ಕಿಯ ಜೊತೆಗೆ ಹೆಚ್ಚುವರಿ ಐದು ಕೆಜಿ ಅಕ್ಕಿಗೆ ತಗಲುವ ಹಣವನ್ನು ನೇರವಾಗಿ ಫಲಾನುಭವಿಗಳ ಖಾತೆಗೆ ಜಮೆ ಮಾಡುವ ಯೋಜನೆಗೆ ಚಾಲನೆ ನೀಡಿತು. ಇದರೊಂದಿಗೆ ಹತ್ತು ವರ್ಷಗಳ ಅವಧಿಯಲ್ಲಿ ಸರ್ಕಾರದಿಂದ ಬಡವರ್ಗ ಪಡೆಯುವ ಅಕ್ಕಿಯ ಪ್ರಮಾಣ ದುಪ್ಪಟ್ಟಾಗಿದೆ. ಈ ಐತಿಹಾಸಿಕ ಕ್ಷಣಗಳಿಗೆ ವಿಧಾನಸೌಧ ಸಾಕ್ಷಿಯಾಯಿತು.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ 'ನೆಮ್ಮದಿಯ ಬದುಕಿಗೆ ಅನ್ನಭಾಗ್ಯ' ಶೀರ್ಷಿಕೆ ಅಡಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಜಂಟಿಯಾಗಿ ಮೈಸೂರು ಕೋಲಾರ ಜಿಲ್ಲೆಗಳ ಫಲಾನುಭವಿಗಳಿಗೆ ಹೆಚ್ಚುವರಿ 5 ಕೆಜಿ ಅಕ್ಕಿಯ ಬದಲಿಗೆ ಹಣ (ಪ್ರತಿ ವ್ಯಕ್ತಿಗೆ 345=170 ರೂ.ಗಳಂತೆ) ವನ್ನು 'ನೇರ ನಗದು ವರ್ಗಾವಣೆ' ಮಾಡುವ ಮೂಲಕ ಚಾಲನೆ ನೀಡಿದರು. ಮುಂದಿನ ಹತ್ತು ದಿನಗಳಲ್ಲಿ ರಾಜ್ಯದ ಎಲ್ಲ ಫಲಾನುಭವಿಗಳಿಗೆ ಈ ಯೋಜನೆ ಅಡಿ ಹಣ ಕೈ ಸೇರಲಿದೆ.

ಇದರೊಂದಿಗೆ ಸರ್ಕಾರದ 5 ಗ್ಯಾರಂಟಿಗಳ ಪೈಕಿ ಅಧಿಕಾರಕ್ಕೆ ಬಂದ ಕೇವಲ ಎರಡು ತಿಂಗಳ ಅಂತರದಲ್ಲಿ ಮೂರು ಈಡೇರಿದಂತಾಗಿದೆ. ಈಗಾಗಲೇ ಶಕ್ತಿ ಯೋಜನೆಗೆ ಚಾಲನೆ ದೊರಕಿದ್ದು, ಅಭೂತ ಪೂರ್ವ ಸ್ಪಂದನೆ ದೊರೆಯುತ್ತಿದೆ. ಇನ್ನು ಉಚಿತ ವಿದ್ಯುತ್ ಕಲ್ಪಿಸುವ 'ಗೃಹಜ್ಯೋತಿ'ಗೆ ನೋಂದಣಿ ಪ್ರಕ್ರಿಯೆ ಆರಂಭಗೊಂಡಿದ್ದು, ಒಂದು ಕೋಟಿಗೂ ಅಧಿಕ ಗ್ರಾಹಕರು ನೋಂದಾಯಿಸಿಕೊಂಡಿದ್ದಾರೆ. ಬರುವ ತಿಂಗಳಿಂದ ಆ ವರ್ಗ ವಿದ್ಯುತ್ ಬಿಲ್ ಪಾವತಿಸಬೇಕಿಲ್ಲ. ಈಗ ಇದರ ಸಾಲಿಗೆ 'ಅನ್ನಭಾಗ್ಯ'ವೂ ಸೇರಿಕೊಂಡಿದೆ.

ಇದರ ಬೆನ್ನಲ್ಲೇ ಸರ್ಕಾರ ಪ್ರತಿ ಕುಟುಂಬದ ಯಜಮಾನಿಗೆ ಮಾಸಿಕ ಎರಡು ಸಾವಿರ ರೂ. ನೀಡುವ 'ಗೃಹಲಕ್ಷ್ಮೀ' ಯೋಜನೆಗೆ ಸಿದ್ಧತೆ ಮಾಡಿ ಕೊಂಡಿದ್ದು, ಜುಲೈ 15 ರಿಂದ ಯೋಜನೆ ಅಡಿ ನೋಂದಣಿ ಪ್ರಕ್ರಿಯೆ ಆರಂಭಿಸಲಿದೆ. ಇದಾಗಿ ಸರಿಯಾಗಿ ಒಂದು ತಿಂಗಳಲ್ಲಿ ಅಂದರೆ ಆಗಸ್ಟ್ 16 ರಂದು ಕುಟುಂಬದ ಮುಖ್ಯಸ್ಥರಾಗಿರುವ ಮಹಿಳಾಮಣಿಗಳ ಖಾತೆಗೆ ಸರ್ಕಾರದಿಂದ ರೂ.ಎರಡು ಸಾವಿರ ಜಮೆ ಆಗಲಿದೆ. ನಂತರದ 3 ತಿಂಗಳಲ್ಲಿ ಐದನೇ ಗ್ಯಾರಂಟಿ 'ಯುವನಿಧಿ'ಯನ್ನೂ ಸರ್ಕಾರ ಅನುಷ್ಠಾನಗೊಳಿಸಲಿದೆ. ಅದರಡಿ 2022–23ನೇ ಸಾಲಿನಲ್ಲಿ ಉತ್ತೀರ್ಣರಾದ ಪದವೀಧರರಿಗೆ ಮಾಸಿಕ ಮೂರು ಸಾವಿರ ರೂ. ಹಾಗೂ ಡಿಪ್ಲೊಮಾ ಪೂರೈಸಿದ ಯುವಕರಿಗೆ 1,500 ರೂ. ನೀಡಲಿದೆ. ಅಂದುಕೊಂಡಂತಾದರೆ, ಕಾಂಗ್ರೆಸ್ ಅಧಿಕಾರಕ್ಕೆ ಬಂದ ಕೇವಲ ಎಂಟು ತಿಂಗಳಲ್ಲಿ ಐದೂ ಯೋಜನೆಗಳು ಜಾರಿಗೆ ಬಂದಂತಾಗುತ್ತದೆ. ಇದರಿಂದ ಪ್ರತಿ ಕುಟುಂಬಕ್ಕೆ ಮಾಸಿಕ ಸರಾಸರಿ 4 ರಿಂದ 5 ಸಾವಿರ ರೂ. ಸರ್ಕಾರದಿಂದಲೇ ಬರಲಿದೆ ಎಂದು ಅಂದಾಜಿಸಲಾಗಿದೆ.

**ಆಧಾರ**: ಉದಯವಾಣಿ, ದಿನಾಂಕ: 11.07.2023.

## 2. ಅಬ್ಬರದ ಮಳೆ, ಉಕ್ಕಿದ ನದಿಗಳು

ರಾಜ್ಯಾದ್ಯಂತ ಮುಂಗಾರು ಮಳೆ ಅಬ್ಬರ ಇನ್ನಷ್ಟು ಹೆಚ್ಚಿದೆ. ಕರಾವಳಿ ಮತ್ತು ಮಲೆನಾಡು ಭಾಗಗಳಲ್ಲಿ ಅಕ್ಷರಶಃ ವರುಣನ ರೌದ್ರಾವತಾರವೇ ಅನಾವರಣಗೊಂಡಿದೆ. ನದಿ ತೊರೆಗಳು ಉಕ್ಕಿ ಹರಿಯುತ್ತಿದ್ದು ಅನೇಕ ಕಡೆ ರಸ್ತೆ ಸೇತುವೆಗಳು ತುಂಡಾಗಿವೆ. ಮನೆಗಳೂ ಕುಸಿದು ಬಿದ್ದು ಜೀವ ಹಾನಿ ಸಂಭವವಿದೆ. ಧುಮ್ಮಿಕ್ಕುವ ಜಲಪಾತ, ನದಿ ತೀರ, ಜಲಾಶಯಗಳು ಅಪಾಯಕಾರಿ ತಾಣಗಳಾಗಿ ಬದಲಾಗಿವೆ.

ಮೂರು ದಿನದಿಂದ ನಿರಂತರ ಸುರಿಯುತ್ತಿರುವ ಮಳೆಯಿಂದಾಗಿ ಇಡೀ ಮಲೆನಾಡು ತೊಯ್ದು ತೊಪ್ಪೆಯಂತಾಗಿದೆ. ತುಂಗಾ, ಭದ್ರಾ, ಹೇಮಾವತಿ, ನೇತ್ರಾವತಿ, ಶರಾವತಿ, ಮಾಲತಿ, ವರದಾ, ಕುಮದ್ವತಿ, ದಂಡಾವತಿ ನದಿಗಳು ಅಪಾಯ ಮಟ್ಟ ಮೀರಿ ಹರಿಯುತ್ತಿವೆ. ವರದಾ ನದಿಯು ಸಾಗರ ಮತ್ತು ಸೊರಬದಲ್ಲಿ ನೆರೆ ಸೃಷ್ಟಿಸಿದೆ. ಸಾವಿರಾರು ಎಕರೆ ಗದ್ದೆ ತೋಟ ಜಲಾವೃತವಾಗಿವೆ. ಗಾಳಿ, ಮಳೆಗೆ ಮರ ಮತ್ತು ರೆಂಬೆಗಳು ವಿದ್ಯುತ್ ಮಾರ್ಗಗಳ ಮೇಲೆ ಉರುಳಿವೆ. ಕೆಲವೆಡೆ ವಿದ್ಯುತ್ ಕಂಬಗಳೇ ಧರೆಗುರುಳಿವೆ. ದುರಸ್ತಿಗೂ ಅವಕಾಶವಾಗದಂತೆ ಮಳೆ ಸುರಿಯುತ್ತಿದ್ದು, ನೂರಾರು ಹಳ್ಳಿಗಳು ನಾಲ್ಕೈದು ದಿನಗಳಿಂದ ಕತ್ತಲಲ್ಲಿ ಉಳಿದಿವೆ. ಮೊಬೈಲ್‌ಗಳು ಸ್ವಿಚ್ಡ್‌ಆಫ್ ಆಗಿವೆ.

**ಬಿಸ್ಲೆಯಲ್ಲಿ ಭೂ ಕುಸಿತ:** ಸಕಲೇಶಪುರ ತಾಲೂಕು ಬಿಸಿಲೆ ಮಾರ್ಗದ ಹಡ್ಲಗದ್ದೆ ರಸ್ತೆಯಲ್ಲಿ ಭೂ ಕುಸಿತದಿಂದ ಸಂಚಾರ ಸ್ಥಗಿತವಾಗಿದೆ. ಮಾಗೇರಿ ಸೇತುವೆ ಮುಳುಗಿದ್ದು, ಹಾಸನ–ಮಂಗಳೂರು ರಾಷ್ಟ್ರೀಯ ಹೆದ್ದಾರಿ ಶಿರಾಡಿ ಮಾರ್ಗದ ಅಲ್ಲಲ್ಲಿ ಭೂ ಕುಸಿತದ ಆತಂಕ ಮುಂದುವರಿದಿದೆ. ರಸ್ತೆ ಕಾಮಗಾರಿ ಅಪೂರ್ಣಗೊಂಡಿರುವುದೇ ಸಮಸ್ಯೆಗೆ ಕಾರಣ ಎಂಬುದು ಸ್ಥಳೀಯರ ಆರೋಪ. ಹೀಗಾಗಿ ವಾಹನ ಸವಾರರು ಪರದಾಡುತ್ತಿದ್ದಾರೆ.

24 ಜುಲೈ 2023

**ಜಲಾಶಯ ಸ್ಥಿತಿಗತಿ**

| ಜಲಾಶಯ | ಪೂರ್ಣ ಮಟ್ಟ | ಇಂದಿನ ಮಟ್ಟ | ಒಳ ಹರಿವು |
|---|---|---|---|
| ಕೆಆರ್‌ಎಸ್ | 124.80 ಅಡಿ | 96.15 ಅಡಿ | 37130 ಕ್ಯುಸೆಕ್ |
| ಕಬಿನಿ | 2284 ಅಡಿ | 2279.25 ಅಡಿ | 20,640 ಕ್ಯುಸೆಕ್ |
| ಹೇಮಾವತಿ | 2922 ಅಡಿ | 2903.05 ಅಡಿ | 23,142 ಕ್ಯುಸೆಕ್ |
| ಹಾರಂಗಿ | 2859 ಅಡಿ | 2854.38 ಅಡಿ | 28,120 ಕ್ಯುಸೆಕ್ |
| ತುಂಗಭದ್ರಾ | 1633.00 ಅಡಿ | 1602.84 ಅಡಿ | 47,294 ಕ್ಯುಸೆಕ್ |
| ಆಲಮಟ್ಟಿ | 519.60 ಮೀ. | 515.39 ಮೀ. | 1,26,333 ಕ್ಯುಸೆಕ್ |
| ಲಿಂಗನಮಕ್ಕಿ | 1819 ಅಡಿ | 1775.15 ಅಡಿ | 73,505 ಕ್ಯುಸೆಕ್ |
| ಭದ್ರಾ | 186 ಅಡಿ | 149.5 ಅಡಿ | 39,348 ಕ್ಯುಸೆಕ್ |
| ಮಾಣಿ | 594.36 ಮೀ. | 577.98 ಮೀ. | 7138 ಕ್ಯುಸೆಕ್ |
| ಘಟಪ್ರಭಾ | 2175 ಅಡಿ | 2127 ಅಡಿ | 29501 ಕ್ಯುಸೆಕ್ |
| ಮಲಪ್ರಭಾ | 2079.50 ಅಡಿ | 2051 ಅಡಿ | 21,247 ಕ್ಯುಸೆಕ್ |
| ಕದ್ರಾ | 34.50 ಮೀ. | 30.09 ಮೀ. | 52,752 ಕ್ಯುಸೆಕ್ |
| ಸೂಪಾ | 564 ಮೀ. | 538 ಮೀ. | 52,653 ಕ್ಯುಸೆಕ್ |

**ಭಾಗಮಂಡಲ ಜಲಾವೃತ:** 24 ಗಂಟೆಗಳಲ್ಲಿ ಭಾಗಮಂಡಲ ವ್ಯಾಪ್ತಿಯಲ್ಲಿ 197 ಮಿ.ಮೀ ಮಳೆಯಾಗಿದೆ. ಹೆಚ್ಚಿನ ಮಳೆಯಿಂದ ತ್ರಿವೇಣಿ ಸಂಗಮದಲ್ಲಿ ಪ್ರವಾಹ ಪರಿಸ್ಥಿತಿ ನಿರ್ಮಾಣವಾಗಿದ್ದು, ಭಾಗಮಂಡಲ–ಮಡಿಕೇರಿ, ಅಯ್ಯಂಗೇರಿ–ಭಾಗಮಂಡಲ, ತಲಕಾವೇರಿ–ಭಾಗಮಂಡಲ ರಸ್ತೆಗಳ ಮೇಲೆ ನೀರು ಹರಿಯುತ್ತಿದ್ದು, ಮೂರೂ ರಸ್ತೆಗಳಲ್ಲಿ ವಾಹನ ಸಂಚಾರ ಸ್ಥಗಿತಗೊಂಡಿದೆ. ಕಾವೇರಿ, ಸುಜ್ಯೋತಿ, ಕನ್ನಿಕೆ ನದಿಗಳು ಉಕ್ಕಿ ಹರಿಯುತ್ತಿದ್ದು, ಭಾಗಮಂಡಲ, ತಾವೂರು ಸೇರಿ ಸುತ್ತಮುತ್ತಲ ಗ್ರಾಮಗಳಲ್ಲಿ ಪ್ರವಾಹ ಪರಿಸ್ಥಿತಿ ನಿರ್ಮಾಣವಾಗಿದೆ. ನೂರಾರು ಎಕರೆ ಗದ್ದೆಗಳಿಗೆ ನದಿ ನೀರು ನುಗ್ಗಿದ್ದು, ಭಗಂಡೇಶ್ವರ ದೇವಾಲಯದ ಒಳಭಾಗಕ್ಕೆ ನೀರು ಆವರಿಸಲು ಇನ್ನೂ ಒಂದು ಮೆಟ್ಟಿಲಷ್ಟೇ ಬಾಕಿಯಿದೆ.

ಕಾವೇರಿ ನದಿ ಅಪಾಯದ ಮಟ್ಟ ಮೀರಿ ಹರಿಯುತ್ತಿದ್ದು, ಹಾರಂಗಿಯಿಂದಲೂ ಹೆಚ್ಚಿನ ಪ್ರಮಾಣದ ನೀರು ಹರಿಸುತ್ತಿರುವುದರಿಂದ ಕಾವೇರಿ ಮತ್ತು ಹಾರಂಗಿ ಸಂಗಮದಿಂದ ಕುಶಾಲನಗರ ಮತ್ತು ಕೊಪ್ಪ ವ್ಯಾಪ್ತಿಯ ತಗ್ಗು ಪ್ರದೇಶದಲ್ಲಿರುವ ಬಡಾವಣೆಗಳಿಗೆ ನೀರು ನುಗ್ಗುವ ಆತಂಕ ಎದುರಾಗಿದೆ.

**ಉಕ್ಕಿದ ತುಂಗಭದ್ರೆ:** ದಾವಣಗೆರೆ ಜಿಲ್ಲಾದ್ಯಂತ ಮಳೆ ಸುರಿದಿದೆ. ಮಾಯಕೊಂಡ ಭಾಗದಲ್ಲಿ ಧಾರಾಕಾರ ಮಳೆ ಆಗಿದೆ. ಇದೇ ರೀತಿ ಮಳೆ ಮುಂದುವರಿದರೆ ಮೆಕ್ಕೆಜೋಳ ಬೆಳೆಗೆ ಶೀತಭಾದೆ ಕಾಡಲಿದ್ದು, ಇಳುವರಿ ಮೇಲೆ ಪರಿಣಾಮ ಬೀರುವ ಅಪಾಯವಿದೆ. ಈ ಹಿಂದೆ ಮಳೆ ಬಾರದೆ ಕೆಡಿಸಿತ್ತು, ಈಗ ಮಳೆ ಬಂದು ಕೆಡಿಸುತ್ತಿದೆ ಎಂದು ರೈತರು ಬೇಸರ ವ್ಯಕ್ತಪಡಿಸುತ್ತಿದ್ದಾರೆ.

ಸರಕಾರ ಹೇಳುತ್ತಿರುವುದೇನು:

- ನೆರೆ ಪರಿಸ್ಥಿತಿ ನಿರ್ವಹಣೆಗೆ ಸಿದ್ಧವಾಗಿರಲು ಸಂಬಂಧಿತ ಜಿಲ್ಲಾಡಳಿತಗಳಿಗೆ ಸೂಚನೆ.
- ಕೃಷ್ಣಾ ನದಿ ಪಾತ್ರದ 12 ಸೇತುವೆಗಳ ಮೇಲೆ ನೀರು ಹರಿಯುತ್ತಿದೆ.
- ಜನವಸತಿ ಪ್ರದೇಶಗಳಿಗೆ ನೀರು ನುಗ್ಗಿಲ್ಲ, ಜನರ ಪ್ರಾಣ, ಆಸ್ತಿ–ಪಾಸ್ತಿ ರಕ್ಷಣೆಗೆ ಆದ್ಯತೆ ನೀಡಲು ಜಿಲ್ಲಾಧಿಕಾರಿಗಳಿಗೆ ಸೂಚನೆ.
- ಹಲವು ನದಿಗಳು ಮೈದುಂಬಿ ಹರಿಯುತ್ತಿದ್ದು, ಎಲ್ಲೂ ಅಪಾಯದ ಮಟ್ಟ ಮೀರಿ ಹರಿಯುತ್ತಿಲ್ಲ.
- ಜಿಲ್ಲಾಧಿಕಾರಿಗಳು ಹಾಗೂ ತಹಸೀಲ್ದಾರ್‌ಗಳು ಕೇಂದ್ರ ಸ್ಥಾನದಲ್ಲಿರಬೇಕು.
- ಜಿಲ್ಲಾಧಿಕಾರಿಗಳ ಖಾತೆಗಳಲ್ಲಿ ರೂ.540 ಕೋಟಿ ಹಣವಿದ್ದು, ಪ್ರವಾಹ ನಿರ್ವಹಣೆಗೆ ಹಣದ ಕೊರತೆ ಇಲ್ಲ.
- ಉತ್ತರ ಒಳನಾಡಿನಲ್ಲಿ ಕಳೆದ 15 ದಿನಗಳಿಂದ ವಾಡಿಕೆಗಿಂತ ಹೆಚ್ಚು ಮಳೆಯಾಗಿದೆ.
- ರಾಜ್ಯದ ಪ್ರಮುಖ ಜಲಾಶಯಗಳಲ್ಲಿ ಶೇ.50 ರಷ್ಟು ನೀರು ಸಂಗ್ರಹವಾಗಿದೆ.
- ಕೃಷ್ಣಾ ಮತ್ತು ಕಾವೇರಿ ಕೊಳ್ಳದ ಜಲಾಶಯಗಳಿಗೂ ಒಳಹರಿವು ಹೆಚ್ಚಾಗಿದ್ದು, ನೀರಿನ ಸಂಗ್ರಹ ಪ್ರಮಾಣ ಸುಧಾರಿಸಿದೆ.
- ಆಲಮಟ್ಟಿಗೆ 1,14,445 ಕ್ಯುಸೆಕ್ ಹಾಗೂ ತುಂಗಭದ್ರಾ ಜಲಾಶಯಕ್ಕೆ 47294 ಕ್ಯುಸೆಕ್ ಒಳ ಹರಿವು ಇದೆ.
- ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಕೋಲಾರ, ಚಿಕ್ಕಬಳ್ಳಾಪುರ, ಚಾಮರಾಜನಗರ, ಮಂಡ್ಯ, ಮೈಸೂರು ಭಾಗದಲ್ಲಿ ವಾಡಿಕೆಗಿಂತ ಕಡಿಮೆ ಮಳೆಯಾಗಿದೆ.

➢ ಮಳೆ ಕೊರತೆಯಿಂದ ಬೆಳೆ ಹಾನಿಗೆ ಪರಿಹಾರ ನೀಡುವ ಸಂಬಂಧ ಪರಿಶೀಲನೆ ನಡೆಯುತ್ತಿದೆ.

(ಕಂದಾಯ ಸಚಿವ ಕೃಷ್ಣಭೈರೇಗೌಡ ಅವರು ಬೆಂಗಳೂರಿನಲ್ಲಿ ನೀಡಿದ ಹೇಳಿಕೆ)

**ಆಧಾರ**: ವಿಜಯ ಕರ್ನಾಟಕ, ದಿನಾಂಕ: 25.07.2023

## 3. ಕಾವೇರಿಗೆ ಮಿಡಿದ ಕರ್ನಾಟಕ

ಕಾವೇರಿಗಾಗಿ ಇಡೀ ಕರ್ನಾಟಕವೇ ಸಂಘಟಿತವಾಗಿದ್ದರೂ, ಅದರ ಫಲ ರಾಜ್ಯಕ್ಕೆ ದಕ್ಕುತ್ತಿಲ್ಲ. ಇತ್ತ, ತಮಿಳನಾಡಿಗೆ ನೀರು ಬಿಡುಗಡೆ ವಿರೋಧಿಸಿ ಹೋರಾಟಗಾರರು ಬೀದಿಗಿಳಿದಿದ್ದರೆ ಅತ್ತ, ಕಾವೇರಿ ನಿರ್ವಹಣಾ ಪ್ರಾಧಿಕಾರ ನೀರು ಹರಿಸುವ ಆದೇಶ ಪಾಲಿಸುವಂತೆ ಸೂಚಿಸಿದೆ. ಹೀಗಾಗಿ ರಾಜ್ಯದ ಇಕ್ಕಟ್ಟಿನ ಪರಿಸ್ಥಿತಿ ಮುಂದುವರಿಯುವಂತಾಗಿದೆ. ಈ ನಡುವೆ, ಸಿಎಂ ಕಾನೂನು ತಜ್ಞರೊಂದಿಗೆ ಸಭೆ ನಡೆಸಿದ್ದು, ಕಾವೇರಿ ಪ್ರಾಧಿಕಾರ ಹಾಗೂ ಸುಪ್ರೀಂಕೋರ್ಟ್‌ಗೆ ಮೇಲ್ಮನವಿ ಸಲ್ಲಿಸುವ ಮೂಲಕ ಕಾನೂನು ಹೋರಾಟ ಜಾರಿಯಲ್ಲಿಡಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ಬೆಂಗಳೂರು ಬಂದ್ನ ಬೆನ್ನಲ್ಲೇ 'ಕರ್ನಾಟಕ ಬಂದ್'ಗೂ ರಾಜ್ಯಾದ್ಯಂತ ಬೆಂಬಲ ವ್ಯಕ್ತವಾಯಿತು. ಕಾವೇರಿ ಕಣಿವೆಯ ಬೆಂಗಳೂರು, ಚಾಮರಾಜನಗರ, ಮೈಸೂರು, ಮಂಡ್ಯ, ರಾಮನಗರ, ತುಮಕೂರು, ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಎಲ್ಲ ಚಟುವಟಿಕೆಗಳು ಸ್ತಬ್ಧವಾಗಿದ್ದವು. ಉಳಿದ ಜಿಲ್ಲೆಗಳಲ್ಲೂ ಬಂದ್‌ಗೆ ಉತ್ತಮ ಸ್ಪಂದನೆ ವ್ಯಕ್ತವಾಗುವ ಮುಖೇನ ಕಾವೇರಿ ನೀರಿನ ವಿಚಾರದಲ್ಲಿ ಕನ್ನಡಿಗರಿಗೆ ಅನ್ಯಾಯವಾದರೆ ಯಾವುದೇ ಕಾರಣಕ್ಕೂ ಸಹಿಸಲ್ಲ ಎಂದು ಒಗ್ಗಟ್ಟಿನ ಸಂದೇಶ ರವಾನೆಯಾಗಿದೆ. ಕನ್ನಡಪರ ಸಂಘಟನೆಗಳ ಒಕ್ಕೂಟ ಕರೆ ನೀಡಿದ್ದ ಬಂದ್‌ಗೆ ರಾಜ್ಯಾದ್ಯಂತ ಸಾವಿರಾರು ಸಂಘಟನೆಗಳ ಬೆಂಬಲದ ಜತೆಗೆ ಬಿಜೆಪಿ, ಜೆಡಿಎಸ್, ಸ್ಯಾಂಡಲ್ ವುಡ್ ಸಾಥ್ ಕೊಟ್ಟಿತ್ತು. ಹಿರಿಯ ನಟ ಡಾ.ಶಿವರಾಜಕುಮಾರ್ ನೇತೃತ್ವದಲ್ಲಿ ನಟ ದರ್ಶನ್, ಧ್ರುವಸರ್ಜಾ ಸೇರಿ ಎಲ್ಲ ಹಿರಿಯ–ಕಿರಿಯ ಕಲಾವಿದರು ಬೆಂಗಳೂರಿನ ಚಲನಚಿತ್ರ ವಾಣಿಜ್ಯ ಮಂಡಳಿ ಎದುರು ಸಮಾವೇಶಗೊಳ್ಳುವ ಮೂಲಕ ಬಂದ್‌ನಲ್ಲಿ ಪಾಲ್ಗೊಂಡರು. ಕೆಲ ಜಿಲ್ಲೆಗಳಲ್ಲಿ ಬಂದ್‌ಗೆ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಯಿತು. ಮೆರವಣಿಗೆಗೆ ಅವಕಾಶ ಕೊಡದ ಹಿನ್ನೆಲೆಯಲ್ಲಿ ಅಲ್ಲಲ್ಲಿ ಹೋರಾಟಗಾರರು ಮತ್ತು ಪೊಲೀಸರ ನಡುವೆ ವಾಗ್ವಾದ ನಡೆಸಿದ್ದು, ಹೊರತುಪಡಿಸಿದರೆ ಬಂದ್ ಬಹುತೇಕ ಶಾಂತಿಯುತವಾಗಿ ನಡೆದಿದೆ.

ನಮ್ಮ ಹೋರಾಟ ಇಲ್ಲಿಗೆ ನಿಲ್ಲವುದಿಲ್ಲ. ಕಾವೇರಿ ನೀರು ತಮಿಳುನಾಡಿಗೆ ಹರಿಸುವುದನ್ನು ರಾಜ್ಯ ಸರ್ಕಾರ ನಿಲ್ಲಿಸಬೇಕೆಂದು ಒತ್ತಾಯಿಸಿ ಅಕ್ಟೋಬರ್ 5ಕ್ಕೆ ಕೆಆರ್‌ಎಸ್ ಚಲೋ ಚಳುವಳಿ ನಡೆಸಲಾಗುವುದು ಎಂದು ಕನ್ನಡಪರ ಸಂಘಟನೆಗಳ ಒಕ್ಕೂಟ ಅಧ್ಯಕ್ಷ ವಾಟಾಳ್ ನಾಗರಾಜ್ ತಿಳಿಸಿದರು.

ಮೈಸೂರು ಜಿಲ್ಲೆಯ ಪ್ರತಿ ಗ್ರಾಮ, ತಾಲ್ಲೂಕು, ನಗರ ಪ್ರದೇಶಕ್ಕೆ ಬಂದನ ಬಿಸಿ ತಟ್ಟಿತು. ಮಂಡ್ಯ ಜಿಲ್ಲಾದ್ಯಂತ ಸಂಘಟನೆಗಳು ಪ್ರತಿಭಟನೆ, ಬೈಕ್ ರ್‍ಯಾಲಿ ನಡೆಸಿದವು. ಹಾಸನದಲ್ಲಿ ಹಲವು ಸಂಘಟನೆಗಳ ಕಾರ್ಯಕರ್ತರು ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿದರು. ಚಾಮರಾಜನಗರದಲ್ಲಿ ತಮಿಳು ಸಂಘ ಬಂದ್‌ಗೆ ಸಂಪೂರ್ಣ ಬೆಂಬಲ ನೀಡುವ ಮೂಲಕ ಗಮನ ಸೆಳೆಯಿತು. ಧಾರವಾಡ ಜುಬಿಲಿ ವೃತ್ತದಲ್ಲಿ ವಾಹನ ಸಂಚಾರ ತಡೆ ನಡೆಸಿದ ಪ್ರತಿಭಟನಾಕಾರರನ್ನು ಪೊಲೀಸರು ವಶಕ್ಕೆ ಪಡೆದರು. ಹಾವೇರಿಯಲ್ಲಿ ಕರವೇ ಕಾರ್ಯಕರ್ತರು ಸಿರಿಂಜ್ ಮೂಲಕ ಕೈಯಲ್ಲಿನ ರಕ್ತ ತೆಗೆದು ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ. ಶಿವಕುಮಾರ್ ಹಾಗೂ ತಮಿಳುನಾಡು ಸಿಎಂ ಸ್ಟಾಲಿನ್ ಭಾವಚಿತ್ರಕ್ಕೆ ಎರಚಿ ಆಕ್ರೋಶ ವ್ಯಕ್ತಪಡಿಸಿದರು. ಗದಗದಲ್ಲಿ ಜಯ ಕರ್ನಾಟಕ ಸಂಘದ ಸದಸ್ಯರು ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು.

ತಮಿಳುನಾಡಿಗೆ 3000 ಕ್ಯೂಸೆಕ್ ನೀರು ಬಿಡುಗಡೆಗೆ ಕಾವೇರಿ ನಿಯಂತ್ರಣ ಸಮಿತಿ ಸೂಚಿಸಿದ್ದನ್ನೇ ಪ್ರಾಧಿಕಾರವು ಎತ್ತಿಹಿಡಿದಿರುವ ಹಿನ್ನಲೆಯಲ್ಲಿ ಎದುರಾಗಿರುವ ಸಂಕಷ್ಟದ ಪರಿಸ್ಥಿತಿ ನಿರ್ವಹಿಸಲು ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ಸುಪ್ರೀಂ ಹಾಗೂ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿಗಳು ಹಾಗೂ ಮಾಜಿ ಅಡ್ವೋಕೇಟ್ ಜನರಲ್‌ಗಳ ಜತೆ ಚರ್ಚೆ ನಡೆಸಿದರು. ಸಲಹಾ ಸಮಿತಿ ರಚನೆಗೆ ತಜ್ಞರು ಸಲಹೆ ನೀಡಿದ್ದಾರೆ. ಪ್ರಾಧಿಕಾರ ಹಾಗೂ ಸುಪ್ರೀಂಕೋರ್ಟ್‌ಗೂ ಮರುಪರಿಶೀಲನಾ ಅರ್ಜಿ ಸಲ್ಲಿಸಲು ಸರ್ಕಾರ ತೀರ್ಮಾನಿಸಿದೆ. ಅಗತ್ಯವಾದರೆ ವಿಶೇಷ ಅಧಿವೇಶನಕ್ಕೂ ಸಿದ್ಧ ಎಂದು ಸಿಎಂ ಸಿದ್ದರಾಮಯ್ಯ ಹೇಳಿದ್ದಾರೆ.

**ಆಧಾರ:** ವಿಜಯವಾಣಿ, ದಿನಾಂಕ: 30.09.2023

## 4. ಹುಲಿ ಗಣತಿಯಲ್ಲಿ 2ನೇ ಸ್ಥಾನಕ್ಕೆ ತೃಪ್ತಿ

ರಾಜ್ಯದಲ್ಲಿ ಕ್ಯಾಮರಾ ಕಣ್ಣಿಗೆ ಸೆರೆ ಸಿಕ್ಕಿದ್ದ 435 ಹುಲಿಗಳೂ ಸೇರಿದಂತೆ 563 ಹುಲಿಗಳ ಕುರುಹು ಪತ್ತೆಯಾಗಿದ್ದು, ದೇಶದಲ್ಲೇ ಅತಿ ಹೆಚ್ಚು ಹುಲಿಗಳನ್ನು ಹೊಂದಿರುವ 2ನೇ ರಾಜ್ಯವಾಗಿ ಹೊರಹೊಮ್ಮಿದೆ.

ಅಂತಾರಾಷ್ಟ್ರೀಯ ಹುಲಿ ದಿನದ ಅಂಗವಾಗಿ ಭಾರತೀಯ ವನ್ಯಜೀವಿ ಸಂಸ್ಥೆ ಹಾಗೂ ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ (ಎನ್ಟಿಸಿಎ) ಬಿಡುಗಡೆಗೊಳಿಸಿರುವ 2022ರ ಹುಲಿ ಗಣತಿಯ ಅಂಕಿ–ಅಂಶಗಳು ಹೊರಬಿದ್ದಿದ್ದು, ದೇಶಾದ್ಯಂತ 3080 ಹುಲಿಗಳು ಕ್ಯಾಮರಾ ಕಣ್ಣಿಗೆ ಬಿದ್ದಿದ್ದು, ಇವೂ ಸೇರಿದಂತೆ ಒಟ್ಟು 3167 ಹುಲಿಗಳ ಕುರುಹು ಪತ್ತೆಯಾಗಿವೆ.

ಈ ಪೈಕಿ ಬಿಹಾರ, ಉತ್ತರಾಖಂಡ, ಉತ್ತರ ಪ್ರದೇಶ ಒಳಗೊಂಡ ಶಿವಾಲಿಕ್ ಬೆಟ್ಟಗಳಲ್ಲಿ 819 ಹುಲಿಗಳ ಕುರುಹು ಸಿಕ್ಕಿದ್ದು, ಮಧ್ಯ ಭಾರತ ಹಾಗೂ ಪೂರ್ವ ಘಟ್ಟಗಳಲ್ಲಿ 1,439 ಹುಲಿಗಳು ಪತ್ತೆಯಾಗಿವೆ. ಪಶ್ಚಿಮಘಟ್ಟಗಳಲ್ಲಿ 1,087 ಹುಲಿಗಳು ಸಿಕ್ಕರೆ, ಈಶಾನ್ಯ ರಾಜ್ಯಗಳಲ್ಲಿ 236 ಹುಲಿಗಳು ಪ್ರತ್ಯಕ್ಷವಾಗಿವೆ. ದೇಶಾದ್ಯಂತ ಸರಾಸರಿ 3167 ರಿಂದ 3925 ಹುಲಿಗಳಿರಬಹುದು ಎಂದು ಅಂದಾಜಿಸಲಾಗಿದೆ.

ಬರೋಬ್ಬರಿ 785 ಹುಲಿಗಳನ್ನು ಹೊಂದಿರುವ ಮಧ್ಯಪ್ರದೇಶವು ಮತ್ತೆ ಮೊದಲ ಸ್ಥಾನ ಪಡೆದುಕೊಂಡಿದ್ದರೆ, 563 ಹುಲಿಗಳನ್ನು ಹೊಂದಿರುವ ಕರ್ನಾಟಕವು 2ನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಳ್ಳಬೇಕಾಗಿದೆ. 2018ರ ಗಣತಿ ಪ್ರಕಾರ ಮಧ್ಯಪ್ರದೇಶದಲ್ಲಿ 526 ಹುಲಿಗಳು ಪತ್ತೆಯಾಗಿದ್ದರೆ, ಕರ್ನಾಟಕದಲ್ಲಿ 524 ಹುಲಿಗಳು ಗಣತಿಗೆ ಸಿಕ್ಕಿದ್ದವು. ಕೇವಲ 2 ಹುಲಿಗಳ ಅಂತರದಲ್ಲಿದ್ದ ಮಧ್ಯಪ್ರದೇಶ ಹಾಗೂ ಕರ್ನಾಟಕದ ನಡುವಿನ ಅಂತರವು 222 ಕ್ಕೆ ಜಿಗಿದಿದೆ.

**ಪಶ್ಚಿಮ ಘಟ್ಟಗಳಲ್ಲಿ ಬೇಕಿದೆ ಇನ್ನಷ್ಟು ಸಂರಕ್ಷಣೆ:** ದೇಶದಲ್ಲೇ ಅತಿ ಹೆಚ್ಚು ಜೀವವೈವಿಧ್ಯವುಳ್ಳ ಪಶ್ಚಿಮಘಟ್ಟಗಳಲ್ಲಿ ಅಭಿವೃದ್ಧಿ ಕಾರ್ಯಗಳು ಹೆಚ್ಚುತ್ತಿರುವುದರಿಂದ ವನ್ಯಜೀವಿ ಹಾಗೂ ಮಾನವರ ಬದುಕು ಪರಸ್ಪರ ಅತಿಕ್ರಮಿಸಿಕೊಳ್ಳುತ್ತಿದೆ ಎಂಬುದನ್ನು ಉಲ್ಲೇಖಿಸಿರುವ ವರದಿಯು, 2018ರ ಹುಲಿಗಣತಿ ವೇಳೆ 981 ಹುಲಿಗಳಿದ್ದ ಪಶ್ಚಿಮಘಟ್ಟಗಳಲ್ಲಿ ಪ್ರಸ್ತುತ 1087 ಹುಲಿಗಳಿರಬಹುದೆಂದು ಅಂದಾಜಿಸಲಾಗಿದೆ. ಆದರೆ, 824 ಹುಲಿಗಳು ಮಾತ್ರವೇ ಕ್ಯಾಮರಾ ಕಣ್ಣಿಗೆ ಪತ್ತೆಯಾಗಿವೆ. ವಿಶ್ವದ ಅತಿ ದೊಡ್ಡ ಹುಲಿಗಳ ತವರು ಎಂದೇ ಕರೆಯಿಸಿಕೊಳ್ಳುವ ನೀಲಗಿರಿ ಕ್ಲಸ್ಟರ್‌ನಲ್ಲೂ ಹುಲಿಗಳ ಸಂತತಿ ಕ್ಷೀಣಿಸಿದೆ. ಅಣಶಿ–ದಾಂಡೇಲಿ ಸುತ್ತಮುತ್ತಲ ಕಾಳಿ ಹುಲಿ ಸಂರಕ್ಷಿತ ಪ್ರದೇಶವನ್ನು ಹೊರತುಪಡಿಸಿ ಉಳಿದೆಡೆ ಇದೇ ಪರಿಸ್ಥಿತಿ ಇದೆ. ನಿರೀಕ್ಷಿತ ಪ್ರಮಾಣದ ಹುಲಿ ಸಂರಕ್ಷಣೆಯಾಗಿಲ್ಲ. ಬಂಡೀಪುರ(150), ನಾಗರಹೊಳೆ(141) ಪ್ರದೇಶದಲ್ಲಿ ಕೊಂಚ ಪ್ರಮಾಣದ ಸುಧಾರಣೆಯಾಗಿದ್ದರೆ, ಬಿಆರ್‌ಟಿ, ಮೂಕಾಂಬಿಕಾ, ಶರಾವತಿ, ಭದ್ರಾ,

ಶಿರಸಿ ಸುತ್ತುಮುತ್ತಲ ಪ್ರದೇಶಗಳಲ್ಲಿ ಗಣನೀಯ ಇಳಿಕೆ ಕಂಡಿದೆ. ಶಿರಸಿ ಸುತ್ತಮುತ್ತಲ ಪ್ರದೇಶಗಳಲ್ಲಂತೂ ಹುಲಿಗಳ ಸಂತತಿ ಅಳಿವಿನಂಚಿನಲ್ಲಿವೆ ಎಂಬುದನ್ನು ವರದಿಯು ಬೊಟ್ಟು ಮಾಡಿ ತೋರಿಸಿದೆ.

**ಅತಿ ಹೆಚ್ಚು ಹುಲಿಗಳನ್ನು ಹೊಂದಿರುವ 5 ರಾಜ್ಯಗಳು**

| ರಾಜ್ಯ | 2006 | 2010 | 2014 | 2018 | 2022 |
|---|---|---|---|---|---|
| ಮಧ್ಯಪ್ರದೇಶ | 300 | 257 | 308 | 526 | 785 |
| ಕರ್ನಾಟಕ | 290 | 300 | 406 | 524 | 563 |
| ಉತ್ತರಾಖಂಡ | 178 | 227 | 340 | 442 | 560 |
| ಮಹಾರಾಷ್ಟ್ರ | 103 | 168 | 190 | 312 | 444 |
| ತಮಿಳುನಾಡು | 76 | 163 | 229 | 264 | 306 |

**ಅತಿ ಕಡಿಮೆ ಹುಲಿಗಳನ್ನು ಹೊಂದಿರುವ 5 ರಾಜ್ಯಗಳು**

| ರಾಜ್ಯ | 2006 | 2010 | 2014 | 2018 | 2022 |
|---|---|---|---|---|---|
| ಮಿಜೋರಾಂ | 06 | 05 | 03 | 00 | 00 |
| ಜಾರ್ಖಂಡ್ | – | 10 | 03 | 05 | 01 |
| ಗೋವಾ | – | – | 05 | 03 | 05 |
| ಅರುಣಾಚಲ ಪ್ರದೇಶ | 14 | – | 28 | 29 | 09 |
| ಒಡಿಶಾ | 45 | 32 | 28 | 28 | 20 |

ಹುಲಿಗಳ ಗಣತಿ ಅತ್ಯಂತ ಕ್ಲಿಷ್ಟಕರ ಕಾರ್ಯ. ದೇಶದಲ್ಲಿ ಅತಿ ಹೆಚ್ಚು ಹುಲಿಗಳನ್ನು ಹೊಂದಿರುವ ರಾಜ್ಯಗಳ ಪೈಕಿ ಕರ್ನಾಟಕವು 2ನೇ ಸ್ಥಾನ ಪಡೆದಿರುವುದು ಸಂತಸದ ವಿಷಯವಾಗಿದೆ. 2018ರಲ್ಲಿ 404 ಹುಲಿಗಳು ಕ್ಯಾಮರಾ ಟ್ರ್ಯಾಪ್ಗೆ ಸಿಕ್ಕಿದ್ದರೆ, 524 ಹುಲಿಗಳಿವೆ ಎಂದು ಅಂದಾಜಿಸಲಾಗಿತ್ತು. ಈಗಿನ ವರದಿ ಪ್ರಕಾರ ಕ್ಯಾಮರಾ ಟ್ರ್ಯಾಪ್‌ಗೆಲ್ಲಿ 435 ಹುಲಿಗಳು ಪತ್ತೆಯಾಗಿದ್ದರೆ, ಒಟ್ಟು 563 ಹುಲಿಗಳಿರುವ ಅಂದಾಜಿದೆ ಎಂದು ಈಶ್ವರ ಖಂಡ್ರೆ ಅರಣ್ಯ ಸಚಿವ ರವರು ತಿಳಿಸಿದ್ದಾರೆ.

**ಆಧಾರ**: ಉದಯವಾಣಿ, ದಿನಾಂಕ: 30.07.2023.

## 5. ಸೈಬರ್ ನೀತಿಗೆ ಅಸ್ತು

ಡಿಜಿಟಲೀಕರಣ ಹೆಚ್ಚುತ್ತಿರುವಂತೆ ಸೈಬರ್ ಕಳ್ಳತನ, ವೈಯಕ್ತಿಕ ಮಾಹಿತಿ ಸೋರಿಕೆಯ ಪ್ರಕರಣ ವ್ಯಾಪಕವಾಗುತ್ತಿದೆ. ಹೀಗಾಗಿ ಜನಸಾಮಾನ್ಯರಲ್ಲಿ ಇದರ ಬಗ್ಗೆ ಅರಿವು ಮೂಡಿಸಲು ಮತ್ತು ಸೂಕ್ತ ಗಮನ ಕೊಡಲು 'ಕರ್ನಾಟಕ ಸೈಬರ್ ಭದ್ರತಾ ನೀತಿ'ಯನ್ನು ಅಳವಡಿಸಿಕೊಳ್ಳಲು ಸರ್ಕಾರ ನಿರ್ಧರಿಸಿದೆ. ನಡೆದ ಸಂಪುಟ ಸಭೆಯಲ್ಲಿ ಈ ನೀತಿಯ ಅಂಶಗಳು ಪ್ರಸ್ತಾಪವಾಗಿದ್ದು, ಐಟಿ–ಬಿಟಿ ಸಚಿವ ಪ್ರಿಯಾಂಕ್ ಖರ್ಗೆ ನೀತಿಯ ಅಗತ್ಯತೆಯನ್ನು ಸಂಪುಟ ಸಹೋದ್ಯೋಗಿಗಳಿಗೆ ಮನವರಿಕೆ ಮಾಡಿಕೊಟ್ಟರು.

ನೀತಿಯ ಪ್ರಮುಖ ಸಂಗತಿ: ರಾಜ್ಯ ಸರ್ಕಾರದ ನೇತೃತ್ವದಲ್ಲಿ ನಡೆಯುವ ಹೊಸ ತಂತ್ರಾಂಶಗಳ ಪ್ರಾರಂಭ, ಆನ್‌ಲೈನ್ ಬ್ಯಾಂಕಿಂಗ್ ಮತ್ತು ತಾಂತ್ರಿಕ ಸಾಕ್ಷರತೆ ಕಾರ್ಯಕ್ರಮಗಳು, ಸೈಬರ್ ಭದ್ರತೆ, ಜಾಗೃತಿ, ತರಬೇತಿ ನೀಡುವುದನ್ನು ನೀತಿ ಒಳಗೊಂಡಿದೆ ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ.ಪಾಟೀಲ್ ಸಂಪುಟ ಸಭೆಯ ನಿರ್ಧಾರವನ್ನು ಸುದ್ದಿಗೋಷ್ಠಿಯಲ್ಲಿ ವಿವರಿಸಿದರು. ಸೈಬರ್ ಭದ್ರತೆಯನ್ನು ಮತ್ತು ದತ್ತಾಂಶ ಖಾಸಗಿತನದ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯಕ್ರಮ ಆಯೋಜಿಸುವುದು, ರಾಜ್ಯ ಸರ್ಕಾರ ಮತ್ತು ಸ್ಥಳೀಯ ಸಂಸ್ಥೆಗಳು, ಪಂಚಾಯಿತಿಗಳು ಈ ಜಾಗೃತಿ ಕಾರ್ಯಕ್ರಮವನ್ನು ಕಾಲಕಾಲಕ್ಕೆ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದು, ಜೊತೆಗೆ ಈ ಪ್ರಯತ್ನದ ಮೌಲ್ಯಮಾಪನ, ಸಾಮಾಜಿಕ ಜಾಲತಾಣಗಳು ಪರಸ್ಪರ ಸಂಪರ್ಕ ತಂತ್ರಜ್ಞಾನ ಔದ್ಯಮಿಕ ಸಹಭಾಗಿತ್ವದೊಂದಿಗೆ ಕಾರ್ಯಕ್ರಮ ಕೈಗೊಳ್ಳುವುದು ನೀತಿಯಲ್ಲಿರುವ ಪ್ರಮುಖ ಪ್ರಸ್ತಾಪಗಳಾಗಿವೆ.

ಇದರೊಟ್ಟಿಗೆ, ಪ್ರಸ್ತುತ ಸೈಬರ್ ಭದ್ರತೆ ಮತ್ತು ದತ್ತಾಂಶ ಖಾಸಗಿತನದ ಕುರಿತು ಸಮೀಕ್ಷೆಗಳನ್ನು ನಡೆಸಲಾಗುತ್ತದೆ. ಸ್ಥಳೀಯ, ಶೈಕ್ಷಣಿಕ ಸಂಸ್ಥೆಗಳು, ಸ್ವಯಂಸೇವಾ ಕಾರ್ಯಕರ್ತರ ಮೂಲಕ ಜಾಗೃತಿ ಮೂಡಿಸಲು ವಿಕೇಂದ್ರಿತ ಕ್ರಮ ಕೈಗೊಳ್ಳಲಾಗುತ್ತದೆ.

**ಪ್ರಮುಖ ತೀರ್ಮಾನಗಳು:–**

1. ತಾಳೆ ಎಣ್ಣೆ ಬದಲು ಸೂರ್ಯಕಾಂತಿ: ಅಂಗನವಾಡಿ ಕೇಂದ್ರಗಳ ಫಲಾನುಭವಿಗಳಿಗೆ ಪೂರಕ ಪೌಷ್ಟಿಕ ಆಹಾರ ತಯಾರಿಕೆಗೆ ತಾಳೆ ಎಣ್ಣೆಯ (ಪಾಮೋಲಿನ್) ಬದಲು ಸೂರ್ಯಕಾಂತಿ ಎಣ್ಣೆ ಬಳಸಲು ನಿರ್ಧಾರ.

2. ರಾಜ್ಯದ 15 ಆಸ್ಪತ್ರೆಗಳಲ್ಲಿ ಎಂಆರ್‌ಐ ಹದಿನೈದು ಜಿಲ್ಲಾ ಸಾರ್ವಜನಿಕ ಆಸ್ಪತ್ರೆಗಳಲ್ಲಿ ಎಂಆರ್‌ಐ ಮತ್ತು 5 ಜಿಲ್ಲಾ ಸಾರ್ವಜನಿಕ ಆಸ್ಪತ್ರೆಗಳಲ್ಲಿ ಸಿಟಿ ಸ್ಕ್ಯಾನ್ ಸೇವೆ ಹೆಚ್ಚುವರಿಯಾಗಿ ಒದಗಿಸಲು ಒಪ್ಪಿಗೆ.

3. ಬಸ್ ಟ್ರ್ಯಾಕಿಂಗ್: ರಾಜ್ಯ ರಸ್ತೆ ಸಾರಿಗೆ ನಿಗಮದ ವಾಹನಗಳಲ್ಲಿ ವೆಹಿಕಲ್ ಟ್ರ್ಯಾಕಿಂಗ್ ಹಾಗೂ ಪ್ಯಾನಿಕ್ ಬಟನ್ ವ್ಯವಸ್ಥೆಯೊಂದಿಗೆ ಕಂಟ್ರೋಲ್ ರೂಂ ಸ್ಥಾಪನೆಗೆ ಕ್ರಮ.

4. **23 ತಾಲ್ಲೂಕು ಕರಾವಳಿ ವ್ಯಾಪ್ತಿಗೆ:** ಕರಾವಳಿ ಅಭಿವೃದ್ಧಿ ಪ್ರಾಧಿಕಾರವನ್ನು ಕರಾವಳಿ ಪ್ರದೇಶಾಭಿವೃದ್ಧಿ ಮಂಡಳಿ ಎಂದು ಬದಲಿಸಲು ನಿರ್ಧರಿಸಿದ್ದು, ಎಂಎಡಿಬಿಯಲ್ಲಿದ್ದ 23 ತಾಲೂಕುಗಳನ್ನು ಈ ಮಂಡಳಿ ವ್ಯಾಪ್ತಿಗೆ ತರಲಾಗಿದೆ.

**ಸಂಚಾರಿ ಘಟಕ:**

ಎಸ್‌ಸಿಎಸ್‌ಪಿ–ಟಿಎಸ್‌ಪಿ ಕಾರ್ಯಕ್ರಮದಲ್ಲಿ ಪರಿಶಿಷ್ಟ ಜಾತಿ ಹಾಗೂ ಪಂಗಡಗಳ ಮೀಸಲು ಕ್ಷೇತ್ರಗಳಲ್ಲಿ ಖಾಸಗಿ ಸಹಭಾಗಿತ್ವದಲ್ಲಿ 20 ಸಂಚಾರಿ ಆರೋಗ್ಯ ಘಟಕಗಳನ್ನು ರೂ.20 ಕೋಟಿ ವೆಚ್ಚದಲ್ಲಿ ಸ್ಥಾಪಿಸುವ ಬಗ್ಗೆ ಸಂಪುಟ ಸಭೆಯಲ್ಲಿ ಚರ್ಚೆ ನಡೆದಿದೆ. 2019ರ ಡಿಸೆಂಬರ್ 30 ರಂದು ನಡೆದ

ಸಂಪುಟ ಸಭೆ ನೀಡಿದ ಅನುಮೋದನೆಯಂತೆ 2022ರ ಏಪ್ರಿಲ್ 20ರಲ್ಲಿ ಹೊರಡಿಸಿದ್ದ ಆದೇಶ ರದ್ದುಗೊಳಿಸಲು ಸರ್ಕಾರ ಬಯಸಿದೆ. ಗ್ರಾಮ ಮಟ್ಟದಲ್ಲಿ ಸಂಚಾರಿ ಆರೋಗ್ಯ ಘಟಕಗಳ ಸೇವೆಯನ್ನು ನೀಡುವುದು ಇದರ ಉದ್ದೇಶವಾಗಿದೆ.

**ಆಧಾರ**: ವಿಜಯ ವಾಣಿ, ದಿನಾಂಕ: 11.08.2023.

## 6. ಇಸ್ರೋ ವಿಜ್ಞಾನಿಗಳಿಗೆ ಸರ್ಕಾರದಿಂದ ಸನ್ಮಾನ

ಚಂದ್ರಯಾನ–3 ಅಭೂತಪೂರ್ವ ಯಶಸ್ಸಿನ ಹಿನ್ನೆಲೆಯಲ್ಲಿ ಇಸ್ರೋ ವಿಜ್ಞಾನಿಗಳಿಗೆ ಸರ್ಕಾರದ ವತಿಯಿಂದ ಸನ್ಮಾನಿಸಲು ನಿರ್ಧರಿಸಲಾಗಿದೆ.

ಚಂದ್ರನ ಮೇಲೆ ವಿಕ್ರಂ ಲ್ಯಾಂಡರ್ ಸುರಕ್ಷಿತವಾಗಿ ಇಳಿದಿರುವುದು ಐತಿಹಾಸಿಕ ಸಾಧನೆಯಾಗಿದೆ. ಇದರಿಂದ ಇಡೀ ಜಗತ್ತು ಭಾರತದ ಕಡೆಗೆ ನೋಡುವಂತಾಗಿದೆ. ಈ ಸಾಧನೆಯಲ್ಲಿ ಪ್ರಮುಖ ಪಾತ್ರ ವಹಿಸಿದ ವಿಜ್ಞಾನಿಗಳನ್ನು ಸರ್ಕಾರದಿಂದ ಸೆಪ್ಟೆಂಬರ್ ಮೊದಲ ವಾರ ಅಭಿನಂದಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಪೀಣ್ಯದಲ್ಲಿರುವ ಇಸ್ರೋ ನಿರ್ವಹಣಾ ಕೇಂದ್ರಕ್ಕೆ ಭೇಟಿ ನೀಡಿ ಅಧ್ಯಕ್ಷ ಎಸ್.ಸೋಮನಾಥ್ ಹಾಗೂ ವಿಜ್ಞಾನಿಗಳನ್ನು ಅಭಿನಂದಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜಗತ್ತಿನಲ್ಲಿಯೇ ರಷ್ಯಾ, ಅಮೆರಿಕ, ಚೀನಾ ಬಿಟ್ಟರೆ ಚಂದ್ರನ ಅಂಗಳದಲ್ಲಿ ಕಾಲಿರಿಸಿರುವ ನಾಲ್ಕನೇ ದೇಶ ಭಾರತ. ನಾವೆಲ್ಲರೂ ಇಸ್ರೋ ಸಾಧನೆಯನ್ನು ಮೆಚ್ಚಿ ಅಭಿನಂದಿಸಬೇಕು. ಹಾಗಾಗಿ, ವಿಧಾನಸೌಧದ ಬ್ಯಾಂಕ್ವೆಟ್ ಹಾಲ್ನಲ್ಲಿ ಈ ಸಂಬಂಧ ವಿಶೇಷ ಕಾರ್ಯಕ್ರಮ ಆಯೋಜಿಸಿ ಇಸ್ರೋ ವಿಜ್ಞಾನಿಗಳನ್ನು ಸರ್ಕಾರ ಗೌರವಿಸಲಿದೆ ಎಂದರು.

ಇಸ್ರೋ ಅಧ್ಯಕ್ಷ ಸೋಮನಾಥ್ ಸೇರಿದಂತೆ ಕರ್ನಾಟಕದ 500 ವಿಜ್ಞಾನಿಗಳು ಇದರಲ್ಲಿ ಪಾಲ್ಗೊಂಡಿದ್ದು, ಅವರೆಲ್ಲರೂ ಸನ್ಮಾನಕ್ಕೆ ಪಾತ್ರರಾಗಲಿದ್ದಾರೆ ಎಂದ ಅವರು, ವಿಜ್ಞಾನಿಗಳು ಹಗಲಿರುಳು ಎನ್ನದೆ ಈ ಯಶಸ್ಸಿಗಾಗಿ ಶ್ರಮಿಸಿದ್ದಾರೆ. ದೇಶದ ಒಟ್ಟು ಒಂದು ಸಾವಿರ ವಿಜ್ಞಾನಿಗಳು ಇದರಲ್ಲಿ ತೊಡಗಿಸಿಕೊಂಡಿದ್ದಾರೆ. ಬೆಂಗಳೂರಿನಿಂದಲೇ 500 ಜನ ಪಾಲ್ಗೊಂಡಿದ್ದಾರೆ ಎಂದು ಹೇಳಿದರು.

3.84 ಲಕ್ಷ ಕಿ.ಮೀ. ಪ್ರಯಾಣ ಮಾಡಿರುವ ವಿಕ್ರಂ ಸಾಧನೆ ಕಡಿಮೆಯಲ್ಲ, ಸರ್ಕಾರದ ಸಹಕಾರ ಮತ್ತು ಬೆಂಬಲ ಸದಾ ಇರಲಿದೆ. ಇದು ದೇಶದ ಹೆಮ್ಮೆ ಎಂದ ಅವರು, ಇಸ್ರೋ ವಿಜ್ಞಾನಿಗಳನ್ನು ಸನ್ಮಾನಿಸುವುದು ನಮ್ಮ ಕರ್ತವ್ಯ ಎಂದೂ ಹೇಳಿದರು. ಇದಕ್ಕೂ ಮುನ್ನ ವಿಜ್ಞಾನಿಗಳನ್ನು ಭೇಟಿಯಾದ ಮುಖ್ಯಮಂತ್ರಿಗಳು, ಹಸ್ತಲಾಘವ ಮಾಡಿ ಅಭಿನಂದನೆ ಸಲ್ಲಿಸಿದರು. ಯೋಜನೆಯಲ್ಲಿ ಮುಂಚೂಣಿಯಲ್ಲಿದ್ದವರಿಗೆ ಶಾಲು ಹೊದಿಸಿ, ಮೈಸೂರು ಪೇಟ ಧರಿಸಿ ಗೌರವಿಸಿದರು.

**ಇಸ್ರೋ ಅಧ್ಯಕ್ಷರಿಗೆ ರಾಜ್ಯಪಾಲರ ಅಭಿನಂದನಾ ಪತ್ರ :** ಚಂದ್ರಯಾನ–3 ಯಶಸ್ವಿಯಾದ ಹಿನ್ನೆಲೆಯಲ್ಲಿ ಇಸ್ರೋ ಅಧ್ಯಕ್ಷ ಎಸ್.ಸೋಮನಾಥ್ ಅವರಿಗೆ ದೂರವಾಣಿ ಕರೆ ಮಾಡಿ ಶುಭ ಕೋರಿದ ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಅವರು ಅಭಿನಂದನಾ ಪತ್ರವನ್ನೂ ಬರೆದಿದ್ದಾರೆ. ಚಂದ್ರಯಾನ–3 ಮಿಶನ್ ಯಶಸ್ವಿಯಾಗುವ ಮೂಲಕ ಬಾಹ್ಯಾಕಾಶ ಪರಿಶೋಧನೆಯ ಭಾರತದ ಅನ್ವೇಷಣೆಯು ಗಮನಾರ್ಹವಾದ ಮೈಲಿಗಲ್ಲು ತಲುಪುತ್ತದೆ. ಚಂದ್ರಯಾನ–3 ಅಮೃತ ಕಾಲದ ಮುಂಜಾನೆ ಯಶಸ್ಸಿನ ಮೊದಲ ಬೆಳಕು ಎಂದಿದ್ದಾರೆ. ಮನುಕುಲದ ಆರಂಭದಿಂದಲೂ ಚಂದ್ರನತ್ತ ದೃಷ್ಟಿ ನೆಟ್ಟಿದ್ದೆವು. ನಮ್ಮ ಮನಸ್ಸಿನ ಮೇಲೆ ಚಮತ್ಕಾರವನ್ನೇ ಮಾಡಿದ್ದೀರಿ. ಚಂದ್ರನ್ನು ನಮ್ಮನ್ನು ಕನಸುಗಾರರನ್ನಾಗಿ ಮಾಡಿದ್ದ ಈ ಚಂದ್ರಯಾನವು ದೇಶದ ಅಭಿವೃದ್ಧಿಯುತ ತಂತ್ರಜ್ಞಾನದ ಪರಾಕ್ರಮ

ಮತ್ತು ಬಾಹ್ಯಾಕಾಶ ಸಂಶೋಧನೆಯಲ್ಲಿನ ನಮ್ಮ ಬದ್ಧತೆಯ ಒಡಂಬಡಿಕೆಯಾಗಿದೆ. ಭಾರತದ ಬಾಹ್ಯಾಕಾಶ ಪ್ರಯಾಣದಲ್ಲಿ ಈ ಮೈಲಿಗಲ್ಲು ಸಾಧಿಸಲು ನಿಮ್ಮ ಪರಿಶ್ರಮ ಮತ್ತು ಸಮರ್ಪಣೆಗಾಗಿ, ನಿಮ್ಮ ವಿಜ್ಞಾನಿಗಳು ಮತ್ತು ಎಂಜಿನಿಯರ್‌ಗಳ ತಂಡ ಮತ್ತು ಸಿಬ್ಬಂದಿಗೆ ಅಭಿನಂದಿಸುತ್ತಾ, ನಿಮ್ಮ ಇಡೀ ತಂಡದ ಬಗ್ಗೆ ಪ್ರತಿ ಭಾರತೀಯ ಹೆಮ್ಮೆ ಪಡುತ್ತಾನೆ ಎಂದು ಶ್ಲಾಘಿಸಿದ್ದಾರೆ.

ಚಂದ್ರಕ್ರಾಂತಿಗೆ ನನ್ನದೊಂದು ಸಲಾಂ: ಸ್ಪೀಕರ್ ಖಾದರ್: ಚಂದ್ರಯಾನ–3 ಯಶಸ್ವಿಯಾಗುತ್ತಿದ್ದಂತೆ ಇಸ್ರೋ ಕೇಂದ್ರಕ್ಕೆ ಭೇಟಿ ನೀಡಿದ ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಅವರು ಇಸ್ರೋ ಅಧ್ಯಕ್ಷ ಎಸ್.ಸೋಮನಾಥ್ ಸೇರಿ ಅವರ ತಂಡವನ್ನು ಅಭಿನಂದಿಸಿದರು. ಇಸ್ರೋ ಸಾಧಕರನ್ನು ವಿಧಾನಸೌಧದ ಬ್ಯಾಂಕ್ವೆಟ್ ಸಭಾಂಗಣದಲ್ಲಿ ಸನ್ಮಾನಿಸುವ ಸಿಎಂ ಹಾಗೂ ಸರ್ಕಾರದ ನಿರ್ಧಾರವನ್ನು ಸ್ವಾಗತಿಸಿದ ಅವರು, ನಾಡಿನ ಜನರ ಪರವಾಗಿ ಹೆಮ್ಮೆಯ ಸಾಧಕರನ್ನು ಅಭಿನಂದಿಸುವುದು ಸೂಕ್ತ ಎಂದರು. ದೇಶದ ಹೆಮ್ಮೆಯ ಬಾಹ್ಯಾಕಾಶ ಸಂಸ್ಥೆಯಾದ ಇಸ್ರೋದ ಚಂದ್ರಕ್ರಾಂತಿಗೆ ನನ್ನದೊಂದು ಸಲಾಂ. ಚಂದ್ರನ ದಕ್ಷಿಣ ಧ್ರುವದ ಮೇಲಿಳಿದ ಜಗತ್ತಿನ ಮೊದಲ ದೇಶ ಭಾರತ ಎಂಬ ಮಾತು ಕೇಳುತ್ತಲೇ ಮೈ ರೋಮಾಂಚನವಾಗುತ್ತಿದೆ. ಈ ಐತಿಹಾಸಿಕ ಕಾಲಘಟ್ಟಕ್ಕೆ ನಾನೂ ಸಾಕ್ಷಿಯಾಗಿದ್ದೇನೆ ಎಂಬುದೇ ಹೆಮ್ಮೆಯ ವಿಚಾರ. ಇಸ್ರೋ ಸಂಸ್ಥೆಯ ಮುಖ್ಯಸ್ಥರು ಹಾಗೂ ಎಲ್ಲ ಸಿಬ್ಬಂದಿಗೂ ಅಭಿನಂದನೆಗಳು. ನಮ್ಮ ವಿಜ್ಞಾನಿಗಳ ಸಾಧನೆ ದಿಗಂತದಾಚೆಗೂ ಮುಂದುವರಿಯಲಿ, ಇಸ್ರೋ ಗೆಲ್ಲುತ್ತಲೇ ಇರಲಿ. ಭಾರತದ ಬಾವುಟ ಹೊಸ ಕಕ್ಷೆ ತಲುಪಲಿ. ಮೇರಾ ಭಾರತ್ ಮಹಾನ್ ಎಂದು ಟ್ವೀಟ್ ಕೂಡ ಮಾಡಿದ್ದಾರೆ.

**ಆಧಾರ:** ಉದಯವಾಣಿ, ದಿನಾಂಕ: 25.08.2023.

## 7. ಗೃಹಲಕ್ಷ್ಮಿ ಯೋಜನೆಗೆ ಅದ್ದೂರಿ ಚಾಲನೆ

ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ 'ಗೃಹಲಕ್ಷ್ಮಿ' ಯೋಜನೆಗೆ ನಗರದ ಮಹಾರಾಜ ಕಾಲೇಜು ಮೈದಾನದಲ್ಲಿ ಅದ್ದೂರಿ ಚಾಲನೆ ದೊರೆಯಿತು.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ವಿಶೇಷ ಅತಿಥಿಯಾಗಿದ್ದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ದೀಪ ಬೆಳಗಿಸಿ ಕಾರ್ಯಕ್ರಮ ಉದ್ಘಾಟಿಸುತ್ತಿದ್ದಂತೆ ಸೇರಿದ್ದ ಸಹಸ್ರಾರು ಮಹಿಳೆಯರು ಹರ್ಷೋದ್ಗಾರ ಮೊಳಗಿಸಿದರು.

ರಾಹುಲ್ ರಿಮೋಟ್ ಒತ್ತುತ್ತಿದ್ದಂತೆ ವೇದಿಕೆ ಮುಂಭಾಗ ರೂ.2 ಸಾವಿರ ಮೌಲ್ಯದ ಚೆಕ್ ಪ್ರತಿಕೃತಿಯು ನಿಧಾನಗತಿಯಲ್ಲಿ ಮೇಲೆದ್ದಿತು. ಅಷ್ಟಲಕ್ಷ್ಮಿ ವೇಷಧಾರಿ ಯುವತಿಯರು ವೇದಿಕೆಗೆ ಬಂದರೆ, ಇನ್ನೊಂದೆಡೆ ಸಾಧುಕೋಕಿಲ ತಂಡದವರು ಯೋಜನೆಯ ಆಶಯ ಗೀತೆ 'ಲಕ್ಷ್ಮಿ ಬಾರಮ್ಮ' ಹಾಡಿದರು.

ಜಿಲ್ಲೆಯ ವಿವಿಧ ಗ್ರಾಮಗಳ ಫಲಾನುಭವಿಗಳಾದ ದೊಡ್ಡ ಮಹದೇವಮ್ಮ, ಶೋಭಾರಾಣಿ, ಆಶಾ, ಅನಿತಾ, ಮೊಹಸಿನ್ ತಾಜ್ ಭಾಗ್ಯಾ, ಅಶ್ವಿನಿ, ಪುಷ್ಪಲತಾ, ಸುನೀತಾ ಹಾಗೂ ಬನಶಂಕರಿ ಅವರು ಕ್ಯೂಆರ್ ಕೋಡ್ ಹಾಗೂ ಟ್ಯಾಗ್ ಸಹಿತ ಸ್ಮಾರ್ಟ್ ಕಾರ್ಡ್‌ಗಳನ್ನು ಪಡೆದು ಪಡೆದು ಸಂಭ್ರಮಿಸಿದರು. ಮುಖ್ಯಮಂತ್ರಿ ಸಿದ್ಧರಾಮಯ್ಯ ಮತ್ತು ರಾಹುಲ್ ಗಾಂಧಿ ತಮ್ಮ ಬಳಿ ನಿಂತಿದ್ದ ಫಲಾನುಭವಿಗಳೊಂದಿಗೆ ಕೆಲ ಹೊತ್ತು ಮಾತುಕತೆ ನಡೆಸಿದರು.

ವಿಧಾನ ಪರಿಷತ್ ಸದಸ್ಯ ಎ.ಎಚ್.ವಿಶ್ವನಾಥ್ ಉಪಸ್ಥಿತಿ ಗಮನ ಸೆಳೆಯಿತು. ಅವರು ಕೆಲ ನಿಮಿಷ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಅವರೊಂದಿಗೆ ಚರ್ಚಿಸಿದರು. ವಂದಿತಾ ಶರ್ಮ ಅವರು ಮಹಿಳೆಯಾಗಿ, ರಾಜ್ಯದ ಮುಖ್ಯ ಕಾರ್ಯದರ್ಶಿ ಸ್ಥಾನವನ್ನು ಸಮರ್ಥವಾಗಿ ನಿಭಾಯಿಸುತ್ತಿದ್ದಾರೆ' ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಸ್ವಾಗತ

ಭಾಷಣದಲ್ಲಿ ಶ್ಲಾಘಿಸಿದರು. ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ.ಮಹದೇವಪ್ಪ ಅವರು ಸಭಿಕರಿಗೆ ಸಂವಿಧಾನದ ಪ್ರಸ್ತಾವನೆಯನ್ನು ಬೋಧಿಸಿದರು.

ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಚಿವರಾದ ಡಾ.ಜಿ.ಪರಮೇಶ್ವರ, ಎನ್.ಎಸ್.ಬೋಸರಾಜು, ಎನ್.ಚಲುವರಾಯಸ್ವಾಮಿ, ಕೆ.ಎಚ್.ಮುನಿಯಪ್ಪ, ಕೃಷ್ಣ ಬೈರೇಗೌಡ, ಕೆ.ಎನ್.ರಾಜಣ್ಣ ಕೆ.ವೆಂಕಟೇಶ್, ಬೈರತಿ ಸುರೇಶ್, ಸತೀಶ್ ಜಾರಕಿಹೊಳಿ ಹಾಗೂ ವಿವಿಧ ಜಿಲ್ಲೆಗಳ ಶಾಸಕರು ಉಪಸ್ಥಿತರಿದ್ದರು.

ವೇದಿಕೆ ಮುಂಭಾಗ ಹಾಕಲಾಗಿದ್ದ ಸಾವಿರಾರು ಕುರ್ಚಿಗಳು ಭರ್ತಿಯಾಗಿದ್ದರಿಂದ, ವೇದಿಕೆಯ ಎಡ–ಬಲದಲ್ಲಿ ಮಹಿಳೆಯರು ನಿಂತುಕೊಂಡೇ ಕಾರ್ಯಕ್ರಮ ವೀಕ್ಷಿಸಿದರು. ಮಂಡ್ಯ, ಚಾಮರಾಜನಗರ, ಹಾಸನ ಹಾಗೂ ಕೊಡಗು ಜಿಲ್ಲೆಗಳಿಂದ ಸರ್ಕಾರಿ ಬಸ್‌ಗಳಲ್ಲಿ ಕರೆ ತಂದಿದ್ದ ಮಹಿಳೆಯರಲ್ಲಿ ನೂರಾರು ಮಂದಿಗೆ ವೇದಿಕೆ ಬಳಿಗೂ ಬರಲಾಗದೆ, ಮೈದಾನದ ಹೊರ ಆವರಣದ ರಸ್ತೆ ಬದಿ ಮರಗಳಡಿ ಕುಳಿತುಕೊಂಡಿದ್ದರು. ವೇದಿಕೆ ಸುತ್ತಮುತ್ತ ಮಹಿಳಾ ದಟ್ಟಣೆಯನ್ನು ನಿರ್ವಹಿಸುವಲ್ಲಿ ಪೊಲೀಸರೂ ಸುಸ್ತಾದರು. ಮೈದಾನಕ್ಕೆ ಸಂಪರ್ಕ ಕಲ್ಪಿಸುವ ಎಲ್ಲ ರಸ್ತೆಗಳಲ್ಲೂ ಸಾವಿರಾರು ಮಹಿಳೆಯರು ಕಂಡು ಬಂದರು. ರಾಜ್ಯದ 12 ಸಾವಿರಕ್ಕೂ ಹೆಚ್ಚಿನ ಸ್ಥಳಗಳಲ್ಲಿ ಕಾರ್ಯಕ್ರಮದ ನೇರ ಪ್ರಸಾರಕ್ಕೆ ವ್ಯವಸ್ಥೆ ಮಾಡಲಾಗಿತ್ತು.

ರಾಜ್ಯ ಸರ್ಕಾರ 100 ದಿನಗಳನ್ನು ಪೂರೈಸಿರುವ ಹೊತ್ತಿನಲ್ಲಿ, ಜನರಿಗೆ ನೀಡಿದ್ದ ಭರವಸೆಗಳನ್ನು ಈಡೇರಿಸಿದೆ ರಾಜ್ಯದ ಯೋಜನೆಗಳು ಇಡೀ ದೇಶಕ್ಕೇ ಮಾದರಿಯಾಗಿವೆ. ದೇಶಕ್ಕೂಂದು ದಿಕ್ಕು ತೋರಿಸಿವೆ' ಎಂದು ರಾಹುಲ್ ಗಾಂಧಿ ಹೇಳಿದರು.

ಚುನಾವಣೆಗೂ ಮುನ್ನ ಗ್ಯಾರೆಂಟಿಗಳನ್ನು ಘೋಷಿಸಿದಾಗ, ಕಾಂಗ್ರೆಸ್ ಸುಳ್ಳು ಹೇಳುತ್ತಿದೆ ಎಂದು ಪ್ರಧಾನಿ ಹೇಳಿದ್ದರು. ಸತ್ಯ ನಿಮ್ಮ ಕಣ್ಣು ಮುಂದಿದೆ. ಮಹಿಳೆಯರು ಬಸ್‌ಗಳಲ್ಲಿ ಉಚಿತವಾಗಿ ಪ್ರಯಾಣಿಸುತ್ತಿದ್ದಾರೆ. ಪ್ರತಿ ಮನೆಗೂ 200 ಯೂನಿಟ್ ವಿದ್ಯುತ್ ಉಚಿತವಾಗಿ ನೀಡಲಾಗುತ್ತಿದೆ. ಪ್ರತಿ ಬಿಪಿಎಲ್ ಕುಟುಂಬಕ್ಕೆ 10 ಕೆಜಿ ಅಕ್ಕಿ ಉಚಿತವಾಗಿ ನೀಡಲಾಗುತ್ತಿದೆ. ಶೀಘ್ರದಲ್ಲೇ ಯುವನಿಧಿ ಕಾರ್ಯಕ್ರಮವೂ ಅನುಷ್ಠಾನಕ್ಕೆ ಬರಲಿದೆ' ಎಂದರು.

ವಿಶ್ವದಲ್ಲೇ ಅತ್ಯಂತ ಬೃಹತ್ತಾದ ಯೋಜನೆ ಗೃಹಲಕ್ಷ್ಮಿ, ಇಂಥ ಯೋಜನೆ ಬೇರೆಲ್ಲೂ ಇಲ್ಲ. 2 ಸಾವಿರ ಸಣ್ಣದಲ್ಲ. ಮಹಿಳೆಗೆ ಸಂರಕ್ಷಣೆ ಭಾವವನ್ನು ನೀಡುತ್ತದೆ. ಮಕ್ಕಳ ಶಿಕ್ಷಣಕ್ಕೆ ಬಳಸಬಹುದು. ಯಾವುದೇ ಊರಾಗಲಿ, ಇಡೀ ರಾಜ್ಯದ ಭದ್ರ ಬುನಾದಿ ನೀವೆ. ದೇಶದಲ್ಲಿ 75 ವರ್ಷಗಳ ಅಭಿವೃದ್ಧಿಯೂ ನಿಮ್ಮಿಂದಲೇ ಆಗಿದೆ' ಎಂದರು.

ಇದು ಯೋಜನೆಯಲ್ಲ. ನೀವು ಯೋಜನೆಯ ದಾರಿ ತೋರಿಸಿದ್ದೀರಿ ಎಂದು ಭಾರತ್ ಜೋಡೋ ಯಾತ್ರೆಯನ್ನು ಸ್ಮರಿಸಿದರು. 'ರಾಜ್ಯದಲ್ಲಿ ಸಾವಿರಾರು ಮಹಿಳೆಯರನ್ನು ಮಹಿಳೆಯರನ್ನು ಭೇಟಿ ಮಾಡಿದ್ದೆ. ಬೆಲೆ ಏರಿಕೆಯ ಏಟು ತಮ್ಮ ಮೇಲೆ ಬೀಳುತ್ತದೆಂದು ಅವರು ಹೇಳಿದ್ದರು ನಡೆಯುತ್ತಾ, ಮಹಿಳೆಯರೇ ಈ ರಾಜ್ಯದ ಅಡಿಪಾಯ, ಅವರಿಲ್ಲದೆ ಈ ರಾಜ್ಯ ನಿಲ್ಲದು ಎಂಬುದು ಅರಿವಿಗೆ ಬಂದಿತ್ತು' ಎಂದರು.

'ಕಾಂಗ್ರೆಸ್ ಸರ್ಕಾರ ಮುಂದಿನ ಐದು ವರ್ಷಗಳಲ್ಲಿ ಎಲ್ಲ ಭರವಸೆಗಳನ್ನೂ ಈಡೇರಿಸುವ ವಿಶ್ವಾಸವಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು. ಸರ್ಕಾರದ ಯಾವುದೇ ಕಾರ್ಯಕ್ರಮಕ್ಕೆ ತೊಂದರೆಯಾಗದಂತೆ ಗ್ಯಾರಂಟಿಗಳನ್ನು ಜಾರಿಗೊಳಿಸಲಾಗುತ್ತಿದೆ' ಎಂದು ಪ್ರತಿಪಾದಿಸಿದರು. 'ವಿರೋಧ ಪಕ್ಷದವರು ಏನೇ ಹೇಳಿದರೂ ಗ್ಯಾರಂಟಿ ಕಾರ್ಯಕ್ರಮಗಳು ಮತ್ತು ಭರವಸೆಗಳನ್ನು ಈಡೇರಿಸಿಯೇ ತೀರುತ್ತೇವೆ' ಎಂದರು.

**ಆಧಾರ**: ಪ್ರಜಾವಾಣಿ, ದಿನಾಂಕ: 31.08.2023

## 8. ಶಕ್ತಿ ತುಂಬಲು ಹೊಸ ಬಸ್

ರಾಜ್ಯದ ನಾಲ್ಕು ಸಾರಿಗೆ ನಿಗಮಗಳಿಗೆ 1,195 ಹೊಸ ಬಸ್‌ಗಳ ಖರೀದಿಗೆ ರೂ.500 ಕೋಟಿ ಅಂದಾಜು ವೆಚ್ಚ ಭರಿಸಲು ಸಚಿವ ಸಂಪುಟ ಸಭೆಯು ನಿರ್ಣಯಿಸಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ನಾಲ್ಕು ಸಾವಿರ ಹೊಸ ಬಸ್ ಖರೀದಿಸುವುದಾಗಿ ಘೋಷಿಸಿದ್ದರು. ಮೊದಲ ಕಂತಿನಲ್ಲಿ ಸಾವಿರಕ್ಕೂ ಅಧಿಕ ಬಸ್‌ಗಳ ಖರೀದಿ ತೀರ್ಮಾನ ಕೈಗೊಂಡಿದೆ. ಆಡಳಿತದ ಚುಕ್ಕಾಣಿ ಹಿಡಿದು ಮೊದಲ ಶತಕ ಸಂಭ್ರಮದಲ್ಲಿರುವ ಸರ್ಕಾರ ಗ್ಯಾರಂಟಿಗಳ ವೆಚ್ಚ ಸರಿದೂಗಿಸುವ ವಿಶ್ವಾಸ ವೃದ್ಧಿಸಿಕೊಂಡಿದೆ. ಹೀಗಾಗಿ ಹಲವು ನಿರ್ಧಾರಗಳ ಅನುಷ್ಠಾನಕ್ಕೆ ಬೇಕಾದ ವೆಚ್ಚ ಭರಿಸುವಲ್ಲಿಯೂ ಉದಾರತೆ ತೋರಲಾರಂಭಿಸಿದೆ.

'ಶಕ್ತಿ' ಯೋಜನೆಯಡಿ ಮಹಿಳೆಯರಿಗೆ ಉಚಿತ ಪ್ರಯಾಣಕ್ಕೆ ಅವಕಾಶ ಕಲ್ಪಿಸಿದ ನಂತರ ಸಾರಿಗೆ ನಿಗಮಗಳ ಬಸ್‌ಗಳಿಗೆ ಡಿಮಾಂಡ್ ಹೆಚ್ಚಿದೆ. ಬೇಡಿಕೆಗೆ ತಕ್ಕಂತೆ ಹೊಸ ಬಸ್‌ಗಳ ಪೂರೈಕೆ ನಿಟ್ಟಿನಲ್ಲಿ ಮಹತ್ವದ ಹೆಜ್ಜೆಯಿಟ್ಟಿದೆ. ರಾಜ್ಯ ರಸ್ತೆ ಸಾರಿಗೆ ನಿಗಮ ಹಾಗೂ ಕಲ್ಯಾಣ ಕರ್ನಾಟಕ ಸಾರಿಗೆ ನಿಗಮಕ್ಕೆ ರೂ.100 ಕೋಟಿ ವೆಚ್ಚದಲ್ಲಿ ತಲಾ 250, ವಾಯುವ್ಯ ಕರ್ನಾಟಕ ಸಾರಿಗೆಗೆ ರೂ.150 ಕೋಟಿ ವೆಚ್ಚದಲ್ಲಿ 375 ಹೊಸ ಬಸ್‌ಗಳನ್ನು ಖರೀದಿಸಲು ಅನುಮೋದನೆ ನೀಡಲಾಗಿದೆ. ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಿಂದ 320 ಹವಾನಿಯಂತ್ರಿತ ಎಲೆಕ್ಟ್ರಿಕ್ ಬಸ್‌ಗಳಿಗೆ ರೂ.150 ಕೋಟಿ ಅಂದಾಜು ನಿಗದಿಪಡಿಸಲಾಗಿದೆ. ನಿವ್ವಳ ವೆಚ್ಚ ಗುತ್ತಿಗೆ (ಜೆಸಿಸಿ)ಯ ಆಧಾರದಲ್ಲಿ ಕಾರ್ಯಾಚರಣೆಗೆ ಸಮ್ಮತಿಸಿದೆ.

ಶಕ್ತಿ ಯೋಜನೆಯಡಿ ಸರ್ಕಾರಿ ಸಂಸ್ಥೆಗಳ ಬಸ್‌ಗಳಲ್ಲಿ ಉಚಿತ ಪ್ರಯಾಣಕ್ಕೆ ಅವಕಾಶ ಪಡೆದ ಫಲಾನುಭವಿ ಮಹಿಳೆಯರಿಗೆ ಸ್ಮಾರ್ಟ್ ಕಾರ್ಡ್ ವಿತರಿಸಲು ಸರ್ಕಾರ ಈಗಾಗಲೇ ತೀರ್ಮಾನಿಸಿದೆ. ಸೇವಾ ಕೇಂದ್ರಗಳ ಮೂಲಕ ಸ್ಮಾರ್ಟ್ ಕಾರ್ಡ್ ಒದಗಿಸಲಿದ್ದು, ಪ್ರತಿ ಕಾರ್ಡ್‌ಗೆ ರೂ.14.16 ಸೇವಾ ಶುಲ್ಕ ನಿಗದಿಪಡಿಸಲು ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ. ಆದರೆ ಸ್ಮಾರ್ಟ್ ಕಾರ್ಡ್ ವಿತರಣೆಗೆ ವಿಧಿಸಿರುವ ಕಾಲಾವಧಿಯನ್ನು ಮತ್ತೆ ಆರು ತಿಂಗಳು ವಿಸ್ತರಿಸಿದೆ. ಇದರಿಂದಾಗಿ ಸ್ಮಾರ್ಟ್ ಕಾರ್ಡ್‌ಗಳು ಮಹಿಳೆಯರ ಕೈ ಸೇರಲು ಇನ್ನಷ್ಟು ಕಾಲಾವಕಾಶ ತೆಗೆದುಕೊಳ್ಳಲಿದೆ. 'ಶಕ್ತಿ' ಯೋಜನೆಯಡಿ ರಾಜ್ಯ ರಸ್ತೆ ಸಾರಿಗೆ ನಿಗಮಗಳ ಆಯ್ದ ಅಂತಾರಾಜ್ಯ ಸಾರಿಗೆ ಬಸ್‌ಗಳಲ್ಲಿ ರಾಜ್ಯದ ಮಹಿಳೆಯರಿಗೆ ಉಚಿತ ಪ್ರಯಾಣಕ್ಕೆ ನೀಡಿರುವ ಅನುಮತಿಗೆ ಸಚಿವ ಸಂಪುಟ ಸಭೆಯು ಘಟನೋತ್ತರ ಅನುಮೋದನೆ ನೀಡಿದೆ.

**ಆಧಾರ:** ವಿಜಯವಾಣಿ, ದಿನಾಂಕ: 08.09.2023.

## 9. ಇ–ಎಫ್‌ಐಆರ್, ಇ–ಚಲನ್ ವ್ಯವಸ್ಥೆಗೆ ಚಾಲನೆ

ರಾಜ್ಯ ರಾಜಧಾನಿ ಪೋಲಿಸರಿಗೆ ಇನ್ನಷ್ಟು ಬಲ ತುಂಬುವ ನಿಟ್ಟಿನಲ್ಲಿ 2,454 ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು. ಜೊತೆಗೆ 5 ಹೊಸ ಸಂಚಾರ ಪೊಲೀಸ್ ಠಾಣೆ ಹಾಗೂ 6 ಮಹಿಳಾ ಠಾಣೆ ಸ್ಥಾಪಿಸಲು ಸರ್ಕಾರ ಆದೇಶ ಹೊರಡಿಸಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ಈ ಕುರಿತು ಸುದ್ದಿಗಾರರ ಜೊತೆ ಮಾತನಾಡಿದ ಅವರು, ಸಮರ್ಪಕವಾಗಿ ಕೆಲಸ ಮಾಡುವ ಉದ್ದೇಶದಿಂದ ಸರ್ಕಾರಕ್ಕೆ ಪೊಲೀಸ್ ಇಲಾಖೆ ಕೆಲವೊಂದು ಮನವಿ ಸಲ್ಲಿಸಿತ್ತು. ಅದರಂತೆ

2,454 ಪೊಲೀಸ್ ಸಿಬ್ಬಂದಿ ನೇಮಿಸಲಾಗುವುದು. 5 ಸಂಚಾರ ಹಾಗೂ 6 ಮಹಿಳಾ ಠಾಣೆಗಳು ಪ್ರಾರಂಭಿಸಲಾಗುವುದು ಎಂದರು.

ಚಿಕ್ಕಬಾಣಾವರ ಉತ್ತರ ಸಂಚಾರ ಠಾಣೆ, ಜ್ಞಾನಭಾರತಿ ಸಂಚಾರ ಠಾಣೆ, ಜೆಪಿನಗರ ಸಂಚಾರ ಠಾಣೆ, ಶೇಷಾದ್ರಿಪುರ ಸಂಚಾರ ಠಾಣೆ, ಸಂಜಯ್ ನಗರ ಸಂಚಾರ ಠಾಣೆ ಸ್ಥಾಪಿಸಲು ಸರ್ಕಾರವು ಆದೇಶಿಸಿದೆ. ಅದೇ ರೀತಿ ಉತ್ತರ, ಕೇಂದ್ರ, ಪಶ್ಚಿಮ, ಈಶಾನ್ಯ, ಆಗ್ನೇಯ, ವೈಟ್‌ಫೀಲ್ಡ್‌ನಲ್ಲಿ ನೂತನ ಮಹಿಳಾ ಪೊಲೀಸ್ ಠಾಣೆ ಸ್ಥಾಪನೆಯಾಗಲಿವೆ.

ಇ–ಎಫ್‌ಐಆರ್, ಇ–ಚಲನ್‌ಗೆ ಸಿಎಂ ಚಾಲನೆ: ಪೊಲೀಸ್ ಮಹಾನಿರ್ದೇಶಕರ ಕಛೇರಿಯಲ್ಲಿ ಹಮ್ಮಿಕೊಂಡಿದ್ದ ವಾರ್ಷಿಕ ಸಮ್ಮೇಳನದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇ–ಎಫ್‌ಐಆರ್, ಇ–ಚಲನ್ ವ್ಯವಸ್ಥೆಗೆ ಚಾಲನೆ ನೀಡಿ, ಆ್ಯಂಟಿ ಫೋರೆನ್ಸಿಕ್ ಸಂಬಂಧಿತ ತಾಂತ್ರಿಕ ಸಂಶೋಧನಾ ವರದಿ ಅನಾವರಣಗೊಳಿಸಿದರು.

ಆ್ಯಂಟಿ ಫೋರೆನ್ಸಿಕ್ ಸಂಬಂಧಿತ ತಾಂತ್ರಿಕ ಸಂಶೋಧನಾ ವರದಿಯು ಅಪರಾಧ ಪ್ರಕರಣಗಳ ತನಿಖೆಯಲ್ಲಿ ಸಾಕ್ಷ್ಯ ಸಂಗ್ರಹಿಸಲು ಸಹಕಾರಿಯಾಗಿದೆ. ಡಿಜಿಟಲ್ ಫೋರೆನ್ಸಿಕ್ ದತ್ತಾಂಶ ಧ್ವಂಸಗೊಳಿಸುವುದು, ವಿದ್ಯುನ್ಮಾನ ಸಾಕ್ಷ್ಯಗಳ ಕುರುಹು ನಾಶಪಡಿಸುವಂತಹ ಪ್ರಕರಣಗಳಲ್ಲಿ ಮಾಹಿತಿ ನೀಡಲಿವೆ. ರಾಜ್ಯದಲ್ಲಿ ಸಿಐಡಿ, ಡಾಟಾ ಸೆಕ್ಯೂರಿಟಿ ಕೌನ್ಸಿಲ್ ಆಫ್ ಇಂಡಿಯಾ ಮತ್ತು ಇನ್ಫೋಸಿಸ್ ಫೌಂಡೇಷನ್ ಸಹಭಾಗಿತ್ವದಲ್ಲಿ ತಾಂತ್ರಿಕ ವರದಿ ಅಭಿವೃದ್ಧಿಪಡಿಸಲಾಗಿದೆ.

ಸಾರ್ವಜನಿಕರು ವಾಹನ ಕಳುವಾದರೆ ಠಾಣೆಗೆ ಭೇಟಿ ನೀಡುವ ಗೋಳು ತಪ್ಪಲಿದೆ. ರಾಜ್ಯ ಪೊಲೀಸ್ ಇಲಾಖೆ ಅಧಿಕೃತ ಜಾಲತಾಣದಲ್ಲಿರುವ ಸಿಟಿಜನ್ ಡೆಸ್ಕ್‌ಗೆ ಭೇಟಿ ಕೊಟ್ಟು ನಾಗರಿಕ ಕೇಂದ್ರಿತ ತಾಣದಲ್ಲಿ ನೋಂದಾಯಿಸಿಕೊಂಡು ಲಾಗಿನ್ ಆಗಿ ಮೋಟಾರ್ ವಾಹನ ಕಳವಿಗೆ ಸಂಬಂಧಪಟ್ಟಂತೆ ಆನ್‌ಲೈನ್‌ನಲ್ಲೇ ಇ–ಎಫ್‌ಐಆರ್‌ನಲ್ಲಿ ದೂರು ನೀಡಬಹುದುದ. ಡಿಜಿಟಲ್ ರೂಪದಲ್ಲಿ ದಾಖಲೆ ಸಲ್ಲಿಸಬೇಕಾಗುತ್ತದೆ. ಕಾಗದ ರಹಿತ ಪರಿಸರ ಸ್ನೇಹಿ ಸೇವೆಯಾಗಿರುವ ಈ ವ್ಯವಸ್ಥೆಯ ಶೀಘ್ರ ತನಿಖೆಗೂ ಸಹಕಾರಿಯಾಗಿದೆ.

**ವ್ಯವಸ್ಥೆಯಲ್ಲಿ ಪಾರದರ್ಶಕತೆ:** ಸಿಎಂ ಸಿದ್ದರಾಮಯ್ಯ ಚಾಲನೆ ನೀಡಿರುವ ಇ–ಚಲನ್ ವ್ಯವಸ್ಥೆಯ ಕುರಿತು ಹಿರಿಯ ಐಪಿಎಸ್ ಅಧಿಕಾರಿ ಅಲೋಕ್ ಕುಮಾರ್ ಟ್ವೀಟ್ ಮಾಡಿದ್ದಾರೆ. ಮುಖ್ಯಮಂತ್ರಿಗಳಿಂದ ಪ್ರಾರಂಭವಾಗಿರುವ ಇ–ಚಲನ್ ವ್ಯವಸ್ಥೆಯ ಪಾರದರ್ಶಕತೆಯನ್ನು ಹೊಸ ಮಟ್ಟಕ್ಕೆ ಕೊಂಡೊಯ್ಯಲಿದೆ. ನವೆಂಬರ್ 1 ರಿಂದ ಅಂದರೆ ಕನ್ನಡ ರಾಜ್ಯೋತ್ಸವ ದಿನದಂದು ಎಲ್ಲಾ ಪೊಲೀಸ್ ಠಾಣೆಗಳು ಇ–ಚಲನ್ ವ್ಯವಸ್ಥೆ ಅನ್ನು ಬಳಸಲಿವೆ. ಕಾರ್ಡ್ ಮತ್ತು ಯುಪಿಐ ಮೂಲಕ ದಂಡ ಪಾವತಿಸಬಹುದು ಎಂದು ಅಲೋಕ್ ಕುಮಾರ್ ಟ್ವೀಟ್ನಲ್ಲಿ ತಿಳಿಸಿದ್ದಾರೆ.

**ದೇಶದಲ್ಲೇ ಇ–ಚಲನ್ ಸಂಯೋಜಿಸಿದ ಮೊದಲ ರಾಜ್ಯ:** ಈಗಾಗಲೇ ಚಾಲ್ತಿಗೆ ಬಂದಿರುವ ಇ–ಚಲನ್ ವ್ಯವಸ್ಥೆಯು ಸಂಚಾರ ನಿಯಮ ಉಲ್ಲಂಘಿಸುವವರಿಗೆ ಡಿಜಿಟಲ್ ರೂಪದಲ್ಲಿ ದಂಡ ಪಾವತಿ ಸೌಲಭ್ಯ ಒದಗಿಸಲಿದೆ. ನವೆಂಬರ್‌ನಲ್ಲಿ ರಾಜ್ಯಾದ್ಯಂತ ಈ ವ್ಯವಸ್ಥೆ ಜಾರಿಗೆ ಬರಲಿದೆ. ಇ–ಚಲನ್ ವ್ಯವಸ್ಥೆಯನ್ನು ಸಂಯೋಜನೆಗೊಳಿಸಿರುವ ಮೊದಲ ರಾಜ್ಯ ಕರ್ನಾಟಕವಾಗಿದೆ. ಕಾನೂನು ಮತ್ತು ಸುವ್ಯವಸ್ಥೆ ಹಾಗೂ ಸಂಚಾರ ಠಾಣೆಗಳಲ್ಲಿ ಇ–ಚಲನ್ ವ್ಯವಸ್ಥೆ ಅನುಷ್ಠಾನಕ್ಕೆ ತರಲಾಗುತ್ತಿದೆ. ಎಸ್‌ಬಿಐ ಹಾಗೂ ರಾಜ್ಯ ಖಜಾನೆಯವರು ತಲಾ 2500 ಪಿಡಿಎ ಉಪಕರಣಗಳನ್ನು ಪ್ರಾಯೋಜಿಸಲು ಮುಂದಾಗಿದ್ದು, ಡೆಬಿಟ್ ಕಾರ್ಡ್, ಕ್ರೆಡಿಟ್ ಕಾರ್ಡ್, ಯುಪಿಐ ಬಳಸಿ ಸಂಗ್ರಹಿಸಿದ ದಂಡದ ಮೊತ್ತವನ್ನು ಎಸ್‌ಬಿಐ ಮೂಲಕ ವರ್ಗಾಹಿಸಲಾಗುತ್ತಿದೆ. ಈ ವ್ಯವಸ್ಥೆಗಾಗಿ ಬೆಂಗಳೂರು ನಗರ ಸಮಚಾರ

ವಿಭಾಗಕ್ಕೆ 700 ಪರ್ಸನಲ್ ಡಿಜಿಟಲ್ ಅಸಿಸ್ಟೆಂಟ್ (ಪಿಡಿಎ) ಉಪಕರಣಗಳನ್ನು ಹಾಗೂ ರಾಜ್ಯಾದ್ಯಂತ ಎಲ್ಲ ಠಾಣೆಗಳಿಗೆ ತಲಾ 2, ಸಂಚಾರಿ ಠಾಣೆಗಳಿಗೆ ತಲಾ 5 ಉಪಕರಣಗಳನ್ನು ನೀಡಲಾಗಿದೆ.

**ಆಧಾರ:** ಉದಯವಾಣಿ, ದಿನಾಂಕ: 16.09.2023.

## 10. ರಾಜ್ಯದ ಮೊದಲ ಹೆಲ್ತ್ ಎಟಿಎಂಗೆ ಚಾಲನೆ

ರಾಜ್ಯದಲ್ಲಿಯೇ ಮೊಟ್ಟಮೊದಲ ಬಾರಿಗೆ ಸ್ಥಾಪಿಸಲಾದ ಸ್ಮಾರ್ಟ್ ಹೆಲ್ತ್ ಕಿಯೋಸ್ಕ್ (ಹೆಲ್ತ್ ಎಟಿಎಂ) ಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ನೀಡಿದರು.

ನಗರದಲ್ಲಿ ದಿ.17.03.2023 ರಂದು ನಡೆದ 'ಕಲ್ಯಾಣ ಕರ್ನಾಟಕ ಉತ್ಸವ' ಕಾರ್ಯಕ್ರಮದಲ್ಲಿ ಅವರು ಕಲಬುರಗಿ ಜಿಲ್ಲಾಡಳಿತ ಮತ್ತು ಆರೋಗ್ಯ ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ಜಾರಿಗೊಳಿಸಲಾದ "ಈ ಆರೋಗ್ಯ ಮಿತ್ರ' ಯೋಜನೆಯನ್ನು ಲೋಕಾರ್ಪಣೆ ಮಾಡಿದರು.

**ಜನಸ್ನೇಹಿ ಎಟಿಎಂ:** ಸ್ಮಾರ್ಟ್ ಹೆಲ್ತ್ ಕಿಯೋಸ್ಕಗಳ ಮೂಲಕ ತಪಾಸಣೆ ಮಾಡಿ ಶೀಘ್ರ ರೋಗ ಪತ್ತೆ ಹಾಗೂ ನಿಯಂತ್ರಣಕ್ಕೆ ತರಲು ತಂತ್ರಜ್ಞಾನ ಬಳಸಿ ಈ ವಿಶಿಷ್ಟ ಹೆಲ್ತ್ ಎಟಿಎಂ ಸ್ಥಾಪಿಸಲಾಗುತ್ತಿದೆ. ಇದರಿಂದ ಜನರಿಗೆ ಬಹುಬೇಗನೆ ತಮಗೆ ಏನಾಗಿದೆ ಎನ್ನುವುದು ಗೊತ್ತಾಗುತ್ತದೆ. ಬಳಿಕ ಅದನ್ನು ಗುಣಪಡಿಸಲು ಯಾವ ವಿಧಾನದಲ್ಲಿ ಚಿಕಿತ್ಸೆ ಪಡೆಯಬೇಕು. ಎಲ್ಲಿ ಪಡೆಯಬೇಕು ಎನ್ನುವ ಎಲ್ಲ ಮಾಹಿತಿ ಲಭ್ಯವಾಗಲಿದೆ.

ಆರೋಗ್ಯ ಎಟಿಎಂ ಆರೋಗ್ಯ ಕ್ಷೇತ್ರದಲ್ಲಿ ಕ್ರಾಂತಿಕಾರಿ ತಂತ್ರಜ್ಞಾನವಾಗಿದ್ದು, ಪ್ರಾಥಮಿಕ ಮತ್ತು ತಡೆಗಟ್ಟಬಹುದಾದ ಆರೋಗ್ಯ ಸೇವೆಗಳನ್ನು ಸುಲಭವಾಗಿ ಹಾಗೂ ಕೈಗೆಟುಕುವ ದರದಲ್ಲಿ ಒದಗಿಸುತ್ತದೆ. ನಗರ ಪ್ರದೇಶಗಳಲ್ಲಿ ಜನರ ಜೀವನ ಶೈಲಿಗೆ ಅನುಗುಣವಾಗಿ, ಕಡಿಮೆ ಸಮಯದಲ್ಲಿ ಪರೀಕ್ಷೆಗಳನ್ನು ಮಾಡುವ ಮೂಲಕ ಸಮಯ ಮತ್ತು ಹಣ ಉಳಿಸಬಹುದು. ಗ್ರಾಮೀಣ ಪ್ರದೇಶಗಳಿಗೆ ಅಗತ್ಯವಿರುವ ಆರೋಗ್ಯ ಸಿಬ್ಬಂದಿ ಅಂತರವನ್ನು ಕಡಿಮೆ ಮಾಡಿ ದುರ್ಗಮ ಪ್ರದೇಶಗಳಿಗೂ ಆರೋಗ್ಯ ಸೇವೆಗಳನ್ನು ತಲುಪಿಸಬಹುದು. ರೋಗವನ್ನು ಆರಂಭಿಕ ಹಂತದಲ್ಲಿಯೇ ಪತ್ತೆ ಹಚ್ಚಿ ಸೂಕ್ತ ಸಮಯದಲ್ಲಿ ಚಿಕಿತ್ಸೆ ನೀಡುವ ಮೂಲಕ ಸಮಯದ ಹಿಂದುಳಿದ ವರ್ಗವನ್ನು ಸಬಲೀಕರಣಗೊಳಿಸುವುದು ಹೆಲ್ತ್ ಎಟಿಎಂ ಗುರಿಯಾಗಿದೆ.

**ಪ್ರಯೋಜನಗಳು:** ಜನಸಂದಣಿ ಪ್ರದೇಶಗಳಲ್ಲಿ ಲಭ್ಯವಿರುವ ಆರೋಗ್ಯ ಎಟಿಎಂಗಳ ಮೂಲಕ ಸರಳವಾದ ಆರೋಗ್ಯ ಸೇವೆಗಳ ಲಭ್ಯತೆ, ನಿಖರವಾದ ವೈದ್ಯಕೀಯ ಪರೀಕ್ಷೆ ಮತ್ತು ಹೆಚ್ಚಿನ ಆರೋಗ್ಯ ತಪಾಸಣೆಗಾಗಿ ಆರೋಗ್ಯ ಎಟಿಎಂಗಳನ್ನು ಬಳಸುವುದರಿಂದ ಸಮಯ ಮತ್ತು ಹಣ ಉಳಿತಾಯವಾಗಲಿದೆ. ಸಮಗ್ರ ಆರೋಗ್ಯ ಸೇವೆಗಳಿಂದ ತುರ್ತು ಸ್ಪಂದನೆ, ರೋಗಿಗಳಿಗೆ ಆತ್ಮಸ್ಥೈರ್ಯ ತುಂಬುವುದರ ಮೂಲಕ ಉತ್ತಮ ಆರೋಗ್ಯ ಮತ್ತು ಒಟ್ಟಾರೆ ಯೋಗಕ್ಷೇಮ ಲಭ್ಯವಾಗಲಿದೆ. ನಿರಂತರ ಆರೋಗ್ಯ ತಪಾಸಣೆ ಮತ್ತು ಮೇಲ್ವಿಚಾರಣೆ ಮೂಲಕ ರೋಗಗಳನ್ನು ಪತ್ತೆ ಹಚ್ಚಲು ಮತ್ತು ತಡೆಗಟ್ಟಲು ಸಹಕಾರಿಯಾಗಿದ್ದು, ರೋಗಿಯ ದಾಖಲೆಗಳನ್ನು ಸುರಕ್ಷಿತ ಮತ್ತು ಗೌಪ್ಯವಾಗಿ ಇಡಲಾಗುತ್ತದೆ. ಹತ್ತು ನಿಮಿಷಗಳಲ್ಲಿ 50ಕ್ಕೂ ಹೆಚ್ಚು ಪರೀಕ್ಷೆಗಳನ್ನು ನಡೆಸಬಹುದು. ತ್ವರಿತವಾಗಿ ಆರೋಗ್ಯದ ವರದಿ ನೀಡಲಾಗುತ್ತದೆ. ಆರೋಗ್ಯಕ್ಕೆ ಅಗತ್ಯವಿರುವ ಆಹಾರದ ಮಾಹಿತಿ ನೀಡಲಾಗುತ್ತದೆ.

ಕಲಬುರಗಿ ಜಿಲ್ಲೆಯಲ್ಲಿ ಎಚ್.ಪಿ.ಎಂಟರ್‌ಪ್ರೈಸಸ್ ವತಿಯಿಂದ 25 ಹೆಲ್ತ್ ಎಟಿಎಂಗಳನ್ನು ಸಿಎಸ್‌ಆರ್ ಅನುದಾನದಡಿ ಪಡೆದು ಅಳವಡಿಸಲಾಗುತ್ತಿದೆ. ಈ ವೇಳೆ ಸಚಿವ ಪ್ರಿಯಾಂಕ ಖರ್ಗೆ, ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಡಾ। ಅಜಯ್ ಸಿಂಗ್, ಶಾಸಕರಾದ

ಬಿ.ಆರ್.ಪಾಟೀಲ, ಎಂ.ವೈ.ಪಾಟೀಲ, ಅಲ್ಲಂ ಪ್ರಭು ಪಾಟೀಲ, ಕನೀಜ್ ಫಾತಿಮಾ, ತಿಪ್ಪಣ್ಣಪ್ಪ ಕಮಕನೂರು ಹಾಗೂ ಜಿಲ್ಲಾಧಿಕಾರಿ ಫೌಜಿಯಾ ತರನ್ನುಮ್ ಇನ್ನಿತರರಿದ್ದರು.

**ಆಧಾರ:** ಉದಯವಾಣಿ, ದಿನಾಂಕ: 18.09.2023.

## 11. ರಾಜ್ಯಾದ್ಯಂತ ಹುಕ್ಕಾ ಬಾರ್ ನಿಷೇಧ

ಯುವಜನಾಂಗ ಮತ್ತು ಮಕ್ಕಳ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವ ಹುಕ್ಕಾ ಬಾರ್‌ಗಳನ್ನು ರಾಜ್ಯಾದ್ಯಂತ ನಿಷೇಧಿಸಲು ರಾಜ್ಯ ಸರ್ಕಾರ ಮಹತ್ವದ ತೀರ್ಮಾನ ಕೈಗೊಂಡಿದೆ.

ವಿಕಾಸಸೌಧದಲ್ಲಿ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಮತ್ತು ಯುವಜನ ಸಬಲೀಕರಣ ಸಚಿವ ಬಿ.ನಾಗೇಂದ್ರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಹುಕ್ಕಾ ಬಾರ್ ನಿಷೇಧ ಮಾಡುವ ನಿರ್ಧಾರ ಕೈಗೊಳ್ಳಲಾಯಿತು. ಈ ನಿಟ್ಟಿನಲ್ಲಿ 'ಕೋಟ್ಪಾ ಕಾಯ್ದೆ' ಗೆ ತಿದ್ದುಪಡಿ ತರಲು ಸರ್ಕಾರ ಮುಂದಾಗಿದೆ.

ಸಭೆಯ ಬಳಿಕ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಹುಕ್ಕಾ ಬಾರ್ ಸೇರಿದಂತೆ ರಾಜ್ಯದಲ್ಲಿ ತಂಬಾಕು ಉತ್ಪನ್ನಗಳನ್ನು ನಿಷೇಧಿಸಲು ಕೋಟ್ಪಾ ಕಾಯ್ದೆಗೆ ತಿದ್ದುಪಡಿ ತರುವುದರ ಮೂಲಕ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು. ತಂಬಾಕು ಉತ್ಪನ್ನಗಳ ಮಾರಾಟ ಮತ್ತು ಸೇವನೆಯನ್ನು ಶಾಲೆಗಳ ಜೊತೆಗೆ ದೇವಾಲಯ, ಆಸ್ಪತ್ರೆಗಳ ಸುತ್ತಮುತ್ತಲೂ ನಿಷೇಧ ಮಾಡಲಾಗುವುದು ಎಂದು ಹೇಳಿದರು.

ತಂಬಾಕು ಖರೀದಿಗೆ 18 ವರ್ಷದ ಮೇಲ್ಪಟ್ಟವರಿಗೆ, ಕಾನೂನುನಲ್ಲಿ ಇದ್ದ ಅವಕಾಶವನ್ನು ಪರಿಷ್ಕರಿಸಲಾಗುವುದು. 18 ವರ್ಷದ ಬದಲು 21 ವರ್ಷದ ಮೇಲ್ಪಟ್ಟವರು ಎಂದು ಕೊಟ್ಪಾ ಕಾಯ್ದೆಗೆ ತಿದ್ದುಪಡಿ ತರಲಾಗುವುದು. ಸಾರ್ಜನಿಕ ಸ್ಥಳಗಳಲ್ಲಿ ಮಾದಕ ವಸ್ತುಗಳ ಮಾರಾಟವನ್ನು ಸಂಪೂರ್ಣವಾಗಿ ನಿಷೇಧಿಸಲಾಗುತ್ತಿದೆ ಎಂದರು.

ಸಚಿವ ನಾಗೇಂದ್ರ ಮಾತನಾಡಿ, ಆರೋಗ್ಯಕ್ಕೆ ಪ್ರಥಮ ಆದ್ಯತೆ ನೀಡುವ ನಿಟ್ಟಿನಲ್ಲಿ ಯುವ ಜನರ ಆರೋಗ್ಯದ ಮೇಲೆ ನೇರ ಪರಿಣಾಮ ಬೀರುವ ಹುಕ್ಕಾಬಾರ್‌ಗಳನ್ನು ರಾಜ್ಯದಲ್ಲಿ ಸಂಪೂರ್ಣ ನಿಷೇಧ ಮಾಡಿ ಮಾದಕ ವಸ್ತುಗಳ ಮುಕ್ತ ರಾಜ್ಯವನ್ನಾಗಿ ಮಾಡುವ ಸಂಕಲ್ಪ ಮಾಡಿದ್ದೇವೆ. ರಾಜ್ಯದ ಎಲ್ಲಾ ಜಿಲ್ಲಾ ಮತ್ತು ತಾಲ್ಲೂಕು ಗ್ರಾಮ ಪಂಚಾಯತ್ ಮಟ್ಟದಲ್ಲಿ ಜಾಗೃತಿ ಕಾರ್ಯಕ್ರಮಗಳನ್ನು ಮಾಡಲಾಗುವುದು. ಕ್ಯಾನ್ಸರ್ ತಜ್ಞ ಡಾ.ವಿಶಾಲ್‌ರಾವ್ ರವರ ತಂಡವು ರಾಜ್ಯದ ಪ್ರತಿ ಜಿಲ್ಲೆಯಲ್ಲಿ ಸಂಚಾರ ಮಾಡಿ ಮಾದಕ ವಸ್ತುಗಳ ಬಗ್ಗೆ ಸುದೀರ್ಘ ಅಧ್ಯಯನ ನಡೆಸಿ ಸರ್ಕಾರಕ್ಕೆ ಒಂದು ವರದಿಯನ್ನು ಕೂಡ ಸಲ್ಲಿಕೆ ಮಾಡಿದೆ. ವರದಿ ಆಧಾರದ ಮೇಲೆ ಅಗತ್ಯ ಕ್ರಮ ಕೈಗೊಳ್ಳುತ್ತೇವೆ ಎಂದರು.

**ಆಧಾರ:** ಕನ್ನಡಪ್ರಭ, ದಿನಾಂಕ: 20.09.2023.

## 12. ಮೇಕೆದಾಟು ಡ್ಯಾಂಗೆ ಕೇಂದ್ರದ ಅನುಮತಿ ಕೇಳಲು ನಿರ್ಧಾರ

ಮೇಕೆದಾಟು ಯೋಜನೆಗೆ ಸಂಬಂಧಿಸಿದಂತೆ ಅಗತ್ಯ ಅನುಮತಿ ಕೋರಿ ಕೇಂದ್ರಕ್ಕೆ ಅರ್ಜಿ ಸಲ್ಲಿಸಲು ನಿರ್ಧರಿಸಲಾಗಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ.

'ಸುಪ್ರೀಂಕೋರ್ಟ್ ಮೇಕೆದಾಟು ಯೋಜನೆ ಬಗ್ಗೆ ಕರ್ನಾಟಕದಲ್ಲಿ ಆಣೆಕಟ್ಟು ನಿರ್ಮಿಸಿದರೆ ತಮಿಳುನಾಡಿಗೆ ಏನು ತೊಂದರೆ ಎಂದು ಮೌಖಿಕವಾಗಿ ಯೋಜನೆ ಪರ ಅಭಿಪ್ರಾಯ ವ್ಯಕ್ತಪಡಿಸಿದೆ. ಇದರ ಆಧಾರದ ಮೇಲೆ ಯೋಜನೆಯ ಪೂರ್ಣ ವಿವರವನ್ನು ನ್ಯಾಯಾಲಯಕ್ಕೆ ಸಲ್ಲಿಸಿ ಕೇಂದ್ರಕ್ಕೆ ಅಗತ್ಯ ಅನುಮತಿಗಳಿಗೆ ಮನವಿ ಸಲ್ಲಿಸಲು ನಿರ್ಧರಿಸಲಾಗಿದೆ', ಎಂದು ಶಿವಕುಮಾರ್ ಹೇಳಿದರು.

ಮೇಕೆದಾಟು ಯೋಜನೆಯಿಂದ ಕಾವೇರಿ ನೀರು ಸಮಸ್ಯೆಗೆ ಪರಿಹಾರ ಸಿಗಲಿದೆ. ಇದನ್ನು ನ್ಯಾಯಾಲಯ ಪರಿಗಣಿಸಿದೆ. ಆದರೆ ನ್ಯಾಯಾಲಯದಲ್ಲಿ ತಮಿಳುನಾಡು ತನ್ನ ಆಕ್ಷೇಪಣೆಯನ್ನು ಮುಂದುವರೆಸಿದ್ದು, ನ್ಯಾಯಾಲಯವು ಯೋಜನೆ ಜಾರಿಯಾದರೂ ವಾರ್ಷಿಕವಾಗಿ ನಿಮಗೆ ಬಿಡುವ 174 ಟಿಎಂಸಿ ನೀರು ಬಿಡುತ್ತಾರೆ. ಹೀಗಿದ್ದಾಗ ನಿಮ್ಮ ತೊಂದರೆಯೇನು ಎಂದು ಪ್ರಶ್ನಿಸಿದೆ. ಇದು ರಾಜ್ಯಕ್ಕೆ ಪೂರಕ ವಾತಾವರಣ ಸೃಷ್ಟಿಸಿದೆ". ಎಂದು ಹೇಳಿದರು.

ಈಗಾಗಲೇ ಯೋಜನೆಗೆ 1 ಸಾವಿರ ಕೋಟಿ ರೂ. ಮೀಸಲಿಡಲಾಗಿದೆ. ಕೇಂದ್ರಕ್ಕೆ ಡಿಪಿಆರ್ ಹಾಗೂ ಪರಿಸರ ಅನುಮತಿಗಾಗಿ ಅರ್ಜಿ ಸಲ್ಲಿಸುತ್ತೇವೆ. ಜತೆಗೆ ಅನುಮೋದನೆ ನೀಡುವಂತೆ ಕೇಂದ್ರದ ಮೇಲೆ ಒತ್ತಡ ಹೇರುತ್ತೇವೆ ಎಂದು ಹೇಳಿದರು.

**ಆಧಾರ**: ಕನ್ನಡಪ್ರಭ ದಿನಾಂಕ: 23.09.2023

## 13.ಗೃಹಲಕ್ಷ್ಮಿ: ಆರ್ಥಿಕ ಭದ್ರತೆ

ಇಡೀ ದೇಶದಲ್ಲೇ ಅತಿ ದೊಡ್ಡ ಆರ್ಥಿಕ ಭದ್ರತಾ ಯೋಜನೆಯಾಗಿರುವ ಗೃಹಲಕ್ಷ್ಮಿ ಯೋಜನೆಯು ನಮ್ಮ ರಾಜ್ಯದ ಮಹಿಳೆಯರ ಬದುಕಿನ ನಿರ್ವಹಣೆಗೆ ಹೆಚ್ಚು ಅನುಕೂಲ ಮಾಡಿಕೊಡಲಿದೆ ಹಾಗೂ ಅವರಿಗೆ ಆರ್ಥಿಕ ಭದ್ರತೆ ಒದಗಿಸಲಿದೆ. ಅಂದಾಜು 1.28 ಕೋಟಿ ಕುಟುಂಬಗಳಿಗೆ ಈ ಯೋಜನೆಯು ತಲುಪಲಿದ್ದು, ಫಲಾನುಭವಿಗಳ ಖಾತೆ ಡಿಬಿಟಿ ಮೂಲಕ ನೇರವಾಗಿ ರೂ.2 ಸಾವಿರ ಜಮೆ ಆಗಲಿದೆ. ಸದ್ಯದಲ್ಲಿ ಹೊಸ ನೋಂದಣಿ ಪ್ರಕ್ರಿಯೆ ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ. ಎಲ್ಲ ಫಲಾನುಭವಿಗಳಿಗೂ ಹಣ ತಲುಪಿದ ಬಳಿಕ ಮತ್ತೆ ಪ್ರಕ್ರಿಯೆ ಆರಂಭಿಸಲಾಗುವುದು. ಸಹಾಯವಾಣಿ ಸಂಖ್ಯೆ 1902ಕ್ಕೆ ಕರೆ ಮಾಡಿ ಮಾಹಿತಿ ಪಡೆಯಬಹುದಾಗಿದೆ ಎಂದು ಲಕ್ಷ್ಮೀ ಹೆಬ್ಬಾಳ್ಕರ್ ರವರು ಹೇಳಿದ್ದಾರೆ.

ಆಧಾರ: ವಿಜಯವಾಣಿ, ದಿನಾಂಕ: 24.09.2023

## 14. ಪಠ್ಯಗಳ ಪುನರ್ ಪರಿಶೀಲನೆಗೆ 37 ತಜ್ಞರ ಸಮಿತಿ

ಬಿಜೆಪಿ ಸರ್ಕಾರದ ಅವಧಿಯಲ್ಲಿ ರೋಹಿತ್ ಚಕ್ರತೀರ್ಥ ಸಮಿತಿಯಿಂದ ಮಾಡಲಾಗಿದ್ದ ವಿವಿಧ ತರಗತಿ ಪಠ್ಯಪುಸ್ತಕಗಳ ಪರಿಷ್ಕರಣೆಯನ್ನು ಪ್ರಸಕ್ತ ಸಾಲಿನ ಮಟ್ಟಿಗೆ ಕೈಬಿಟ್ಟು ತಿದ್ದೋಲೆ ಹೊರಡಿಸಿದ್ದ ಕಾಂಗ್ರೆಸ್ ಸರ್ಕಾರ ಇದೀಗ ಆ ಎಲ್ಲಾ ಪಠ್ಯಪುಸ್ತಕಗಳನ್ನು ರಾಷ್ಟ್ರೀಯ ಪಠ್ಯ ಚೌಕಟ್ಟಿನಡಿ ಸಮಗ್ರವಾಗಿ ಪುನರ್ ಪರಿಷ್ಕರಿಸಲು 37 ವಿಷಯ ತಜ್ಞರನ್ನು ಒಳಗೊಂಡ ಸಮಿತಿ ರಚಿಸಿ ಆದೇಶಿಸಿದೆ.

ಬಿಜೆಪಿ ಸರ್ಕಾರದ ಅವಧಿಯಲ್ಲಿ 1 ರಿಂದ 10ನೇ ತರಗತಿವರೆಗಿನ ಕನ್ನಡ ಪ್ರಥಮ ಹಾಗೂ ದ್ವಿತೀಯ ಭಾಷೆ ಪಠ್ಯ ಪುಸ್ತಕಗಳು, 9 ಮತ್ತು 10ನೇ ತರಗತಿಯ ಕನ್ನಡ ತೃತೀಯ ಭಾಷಾ ಪಠ್ಯಪುಸ್ತಕಗಳು ಮತ್ತು 6 ರಿಂದ 10ನೇ ತರಗತಿಯ ಸಮಾಜ ವಿಜ್ಞಾನ ಪಠ್ಯಪುಸ್ತಕಗಳನ್ನು ಪರಿಷ್ಕರಿಸಲಾಗಿತ್ತು. ಈ ವೇಳೆ, ಕೆಲ ಪಠ್ಯಗಳಿಗೆ ಕೊಕ್ಕೆ ಹಾಕಿ, ಕೆಲ ಆರೆಸ್ಸೆಸ್ ನಾಯಕರು, ಬಲಪಂತೀಯರ ಬಹರಗಳನ್ನು ಪಠ್ಯದಲ್ಲಿ ಸೇರಿಸಿದ್ದು ತೀವ್ರ ವಿವಾದಕ್ಕೀಡಾಗಿತ್ತು. ಬಳಿಕ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರ ಈ ಎಲ್ಲ ಪಠ್ಯ ಪುಸ್ತಕಗಳ ಪರಿಷ್ಕರಣೆಯನ್ನು ಕೈಬಿಟ್ಟು ಈ ಪರಿಷ್ಕರಣೆಗೂ ಮುನ್ನ ಇದ್ದ ಪಠ್ಯಗಳನ್ನೇ 2023–24ನೇ ಸಾಲಿಗೆ ಮುಂದುವರೆಸಿ ಶಾಲೆಗಳಿಗೆ ತಿದ್ದೋಲೆ ನೀಡಿದೆ. ಅಲ್ಲದೆ, ಮುಂದಿನ ಶೈಕ್ಷಣಿಕ ಸಾಲಿನ ವೇಳೆಗೆ ಈ ಪಠ್ಯಪುಸ್ತಕಗಳನ್ನು ನಿಯಮಾನುಸಾರ ಸಮಿತಿ ರಚಿಸಿ ಪುನರ್ ಪರಿಷ್ಕರಿಸುವುದಾಗಿ ಸರ್ಕಾರ ತಿಳಿಸಿತ್ತು.

ಅದರಂತೆ ಇದೀಗ ಈ ಎಲ್ಲ ತರಗತಿ ಪಠ್ಯಪುಸ್ತಕಗಳನ್ನು ರಾಷ್ಟ್ರೀಯ ಪಠ್ಯ ಚೌಕಟ್ಟಿನ ಆಧಾರದಲ್ಲಿ ಪರಿಷ್ಕರಿಸಲು ಸಮಿತಿ ರಚಿಸಲಾಗಿದೆ.

ಪಠ್ಯ ಪರಿಷ್ಕರಣಾ ಸಮಿತಿಯ ಮುಖ್ಯ ಸಂಯೋಜಕರನ್ನಾಗಿ ಉತ್ತರ ಕನ್ನಡದ ಕುಮಟಾದ ನಿವೃತ್ತ ಪ್ರಾಧ್ಯಾಪಕ ಡಾ. ಮಂಜುನಾಥ್ ಜಿ.ಹೆಗಡೆ ಅವರನ್ನು ನೇಮಿಸಲಾಗಿದೆ. ಇವರ ನೇತೃತ್ವದಲ್ಲಿ ವಿವಿಧ ಪಠ್ಯ ಪುಸ್ತಕಗಳ ಪರಿಷ್ಕರಣೆಗೆ ಐವರು ಅಧ್ಯಕ್ಷರ ನೇತೃತ್ವದಲ್ಲಿ ಪ್ರತ್ಯೇಕ ಉಪ ಸಮಿತಿಗಳನ್ನು ರಚಿಸಿ 37 ವಿಷಯ ತಜ್ಞರನ್ನು ಸದಸ್ಯರನ್ನಾಗಿ ನೇಮಿಸಲಾಗಿದೆ. 2024–25ನೇ ಸಾಲಿಗೆ ಜಾರಿಗೊಳಿಸಲು ಅನುಕೂಲವಾಗುವಂತೆ ಎರಡರಿಂದ ಮೂರು ತಿಂಗಳೊಳಗೆ ಪಠ್ಯಪುಸ್ತಕಗಳ ಪರಿಷ್ಕರಣಾ ಕಾರ್ಯ ಪೂರ್ಣಗೊಳಿಸಿ ಕೊಡುವಂತೆ ಸರ್ಕಾರ ಸೂಚಿಸಿದೆ.

1 ರಿಂದ 10ನೇ ತರಗತಿ ಕನ್ನಡ ಪ್ರಥಮ ಭಾಷೆ ಪಠ್ಯ ಪುಸ್ತಕ ಪರಿಷ್ಕರಣಾ ಸಮಿತಿಗೆ ತೀರ್ಥಹಳ್ಳಿಯ ತುಂಗಾ ಮಹಾವಿದ್ಯಾನಿಲಯದ ಕನ್ನಡ ಪ್ರಾಧ್ಯಾಪಕ ಡಾ.ಅಂಜನಪ್ಪ ಅವರ ಅಧ್ಯಕ್ಷತೆಯಲ್ಲಿ 8 ಸದಸ್ಯರನ್ನೊಳಗೊಂಡ ಸಮಿತಿ ರಚಿಸಲಾಗಿದೆ. ಅದೇ ರೀತಿ ಕನ್ನಡ ದ್ವಿತೀಯ ಭಾಷೆ ಪಠ್ಯ ಪುಸ್ತಕ ಪರಿಷ್ಕರಣೆ ಸಮಿತಿಗೆ ಚಿಕ್ಕಮಗಳೂರಿನ ಬಸವನಹಳ್ಳಿಯ ಸರ್ಕಾರಿ ಬಾಲಿಕಾ ಪದವಿಪೂರ್ವ ಕಾಲೇಜಿನ ಕನ್ನಡ ಉಪನ್ಯಾಸಕ ಡಾ.ಎಚ್.ಎನ್.ಸತ್ಯನಾರಾಯಣ್ ಅವರ ಅಧ್ಯಕ್ಷತೆಯಲ್ಲಿ ಏಳು ಸದಸ್ಯರು, 9 ಮತ್ತ 10ನೇ ತರಗತಿ ಕನ್ನಡ ತೃತೀಯ ಭಾಷೆಪಠ್ಯ ಪುಸ್ತಕ ಪರಿಷ್ಕರಣೆ ಸಮಿತಿಗೆ ದಾವಣಗೆರೆಯ ಸರ್ಕಾರಿ ಮಹಿಳಾ ಪ್ರಥಮ ದರ್ಜೆಯ ಉಪನ್ಯಾಸಕ ಡಾ. ಮಂಜಣ್ಣ ಅವರ ಅಧ್ಯಕ್ಷತೆಯಲ್ಲಿ ಇಬ್ಬರು ಸದಸ್ಯರು, 6 ಮತ್ತು 7ನೇ ತರಗತಿಯ ಸಮಾಜ ವಿಜ್ಞಾನ ಪಠ್ಯ ಪುಸ್ತಕ ಪರಿಷ್ಕರಣೆಗೆ ಕಲಬುರಗಿಯ ಕೇಂದ್ರೀಯ ವಿದ್ಯಾನಿಲಯದ ಸಾರ್ವಜನಿಕ ಆಡಳಿತ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ.ಕಿರಣ ಎಂ ಅವರ ಅಧ್ಯಕ್ಷತೆಯಲ್ಲಿ ಐವರು ಸದಸ್ಯರು, 8 ಮತ್ತು 9ನೇ ತರಗತಿಯ ಸಮಾಜ ವಿಜ್ಞಾನ ಪಠ್ಯ ಪರಿಷ್ಕರಣೆ ಸಮಿತಿಯ ಸಮಿತಿಗೆ ಬೆಂಗಳೂರು ವಿಶ್ವವಿದ್ಯಾನಿಲಯದ ಇತಿಹಾಸ ವಿಭಾಗದ ಡಾ.ಅಶ್ವತ್ಥನಾರಾಯಣ್ ಅವರ ಅಧ್ಯಕ್ಷತೆಯಲ್ಲಿ ಇತರೆ ಎಂಟು ಸದಸ್ಯರ ಸಮಿತಿ ರಚಿಸಲಾಗಿದೆ. ಈ ಸಮಿತಿಗಳ ಸದಸ್ಯ ಕಾರ್ಯದರ್ಶಿಯಾಗಿ ಕರ್ನಾಟಕ ಪಠ್ಯಪುಸ್ತಕ ಸಂಘದ ನಿರ್ದೇಶಕರು ಕಾರ್ಯನಿರ್ವಹಿಸಲಿದ್ದಾರೆ.

**ಆಧಾರ:** ಕನ್ನಡ ಪ್ರಭ, ದಿನಾಂಕ: 27.09.2023

## 15. ರಾಜ್ಯವ್ಯಾಪಿ ಈ ವರ್ಷ 5 ಕೋಟಿ ಸಸಿ ನೆಡಲು ಸಂಕಲ್ಪ

ಹಸಿರಿದ್ದರೆ ಉಸಿರು. ಇಂದಿನ ಜಾಗತಿಕ ತಾಪಮಾನ ಏರಿಕೆ, ಹವಾಮಾನ ವೈಪರೀತ್ಯಕ್ಕೆ ಹಸರೀಕರಣವೊಂದೇ ಪರಿಹಾರ. ಈ ನಿಟ್ಟಿನಲ್ಲಿ ರಾಜ್ಯದಾದ್ಯಂತ ಈ ವರ್ಷ 5 ಕೋಟಿ ಸಸಿಗಳನ್ನು ನೆಟ್ಟು, ಜಿಯೋ ಟ್ಯಾಗ್ ಮಾಡುವ ಸಂಕಲ್ಪ ಮಾಡಲಾಗಿದೆ. 2023 ಜುಲೈ 1 ರಿಂದ ಆರಂಭವಾದ ವನಮಹೋತ್ಸವ ಕಾರ್ಯಕ್ರಮದಡಿಯಲ್ಲಿ ಈವರೆಗೆ ರಾಜ್ಯದಾದ್ಯಂತ ಅರಣ್ಯ, ಸಾಮಾಜಿಕ ಅರಣ್ಯ ಮತ್ತು ಸಾರ್ವಜನಿಕರಿಗೆ ವಿತರಿಸಿರುವುದೂ ಸೇರಿ ಸುಮಾರು 4 ಕೋಟಿ ಸಸಿಗಳನ್ನು ನೆಡಲಾಗಿದೆ. ಮುಂದಿನ 5 ವರ್ಷಗಳಲ್ಲಿ 25 ಕೋಟಿ ಸಸಿ ನೆಟ್ಟು ಪೋಷಿಸುವ ಸಂಕಲ್ಪ ಮಾಡಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಸಂಪುಟದಲ್ಲಿ ಅರಣ್ಯ ಸಚಿವರಾಗಿರುವ ಈಶ್ವರ ಖಂಡ್ರೆ ಅವರು ರಾಜ್ಯದಲ್ಲಿನ ಅರಣ್ಯ ಪ್ರದೇಶ ಸಂರಕ್ಷಣೆ ಹಾಗೂ ವಿಸ್ತರಣೆಗೆ ಪಣತೊಟ್ಟಿದ್ದು ಈ ನಿಟ್ಟಿನಲ್ಲಿ ಈಗಾಗಲೇ ಕಾರ್ಯೋನ್ಮುಖರಾಗಿದ್ದಾರೆ. ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆಯಲ್ಲಿ ಕಾರ್ಯ ಸಂಸ್ಕೃತಿಗೆ ಕಾಯಕಲ್ಪ ನೀಡಲಾಗಿದೆ. ಕಳೆದ 100 ದಿನಗಳ ಅವಧಿಯಲ್ಲಿ ರಾಜ್ಯದಲ್ಲಿ ಒತ್ತುವರಿ ಮಾಡಲಾಗಿದ್ದ ಸುಮಾರು 2 ಸಾವಿರ ಎಕರೆ ಅರಣ್ಯ ಭೂಮಿ ತೆರವು ಮಾಡಲಾಗಿದೆ.

ರಾಜ್ಯದ ಅರಣ್ಯ ಪ್ರದೇಶ ಹೆಚ್ಚಿಸಲು 3 ತಿಂಗಳುಗಳ ಅವಧಿಯಲ್ಲಿ ಸುಮಾರು 4 ಸಾವಿರ ಎಕರೆ ಭೂಮಿಯನ್ನು ಮೀಸಲು ಅರಣ್ಯ ಎಂದು ಘೋಷಿಸಲಾಗಿದೆ. ಕಾಡಿನಿಂದ ನಾಡಿಗೆ ಬಂದು ಆನೆಗಳು ಉಪಟಳ ನೀಡುತ್ತಿದ್ದು, ಇವುಗಳನ್ನು ತಕ್ಷಣ ಕಾಡಿಗೆ ಮರಳಿಸಲು, ಪ್ರಸ್ತುತ ಕಾರ್ಯಾಚರಣೆಯಲ್ಲಿರುವ 5 ಆನೆ ಕಾರ್ಯಪಡೆಗಳ ಜೊತೆಗೆ ಬನ್ನೇರುಘಟ್ಟ ಮತ್ತು ರಾಮನಗರ ಜಿಲ್ಲೆಯಲ್ಲಿ ತಲಾ ಒಂದು ಆನೆ ಕಾರ್ಯಪಡೆ ರಚಿಸಲಾಗಿದೆ. ಬೀದರ್ ಜಿಲ್ಲೆಯಲ್ಲಿ ಕೃಷ್ಣಮೃಗ ಸಂರಕ್ಷಿತ ಪ್ರದೇಶ ಮತ್ತು ಬೆಳಗಾವಿಯ ಸೊಗಲದಲ್ಲಿ ಪಕ್ಷಿಧಾಮ ನಿರ್ಮಾಣಕ್ಕೆ ಸ್ಥಳ ಪರಿಶೀಲನೆ ನಡೆಸಲಾಗುತ್ತಿದೆ.

ಬೆಳ್ಳಂದೂರ ಕೆರೆಗೆ ಸಂಸ್ಕರಿಸದ ಕೊಳಚೆ ಮತ್ತು ಕಲುಷಿತ ತಾಜ್ಯ ಸೇರ್ಪಡೆ ತಡೆಯಲು 2024ರ ಡಿಸೆಂಬರ್ ಅಂತ್ಯದೊಳಗೆ ಎಸ್.ಟಿ.ಪಿ.ಕಾಮಗಾರಿ ಪೂರ್ಣಗೊಳಿಸಲು ಗಡುವು ನೀಡಲಾಗಿದೆ. ಬೀದರ್ ಜಿಲ್ಲೆಯ ಹುಮನಾಬಾದ್ ಕೈಗಾರಿಕಾ ಪ್ರದೇಶದಲ್ಲಿ ಜಲ ಮೂಲಗಳಿಗೆ ಕಲುಷಿತ ಮತ್ತು ಅಪಾಯಕಾರಿ ರಾಸಾಯನಿಕ ತ್ಯಾಜ್ಯ ಹರಿಸುತ್ತಿದ್ದ 8 ಟೈರ್ ಪೈರೋಲಿಸಿಸ್ ಮತ್ತು 2 ಔಷಧ ತಯಾರಿಕಾ ಘಟಕಗಳನ್ನು ಶಾಶ್ವತವಾಗಿ ಮುಚ್ಚಲು ಆದೇಶ ನೀಡಲಾಗಿದೆ.

ಮಾರಕವಾಗಿದ್ದು, ನೀರಲ್ಲಿ ಕರಗದ, ಮಣ್ಣಲ್ಲಿ ಮಣ್ಣಾಗದ ಮತ್ತು ಸುಟ್ಟರೆ ವಿಷಕಾರಿ ಅಂಶವನ್ನು ವಾತಾವರಣಕ್ಕೆ ಸೇರಿಸುವ ಪ್ಲಾಸ್ಟಿಕ್ ಮುಕ್ತ ರಾಜ್ಯ ಮಾಡಲು ಸರ್ಕಾರ ನಿರ್ಧರಿಸಿದೆ. ಕರುನಾಡ ಕಿರೀಟ ಬೀದರ್, ಕೋಟೆಗಳ ನಾಡು ಕಲಬುರಗಿ, ಕಲ್ಪತರುವಿನ ನಾಡು ತುಮಕೂರು, ಸಾಂಸ್ಕೃತಿಕ ನಗರಿ ಮೈಸೂರು ಮತ್ತು ಶ್ರೀ ಕ್ಷೇತ್ರ ಧರ್ಮಸ್ಥಳವನ್ನು ಏಕಬಳಕೆ ಮುಕ್ತ ನಗರ–ಪಟ್ಟಣ ಮಾಡಲು ಕ್ರಮ ಕೈಗೊಳ್ಳಲಾಗಿದೆ.

ಲಕ್ಷಾಂತರ ಪ್ಲಾಸ್ಟರ್ ಆಫ್ ಪ್ಯಾರೀಸ್ ಗಣೇಶ ಮೂರ್ತಿಗಳನ್ನು ಮಾಡುತ್ತಿದ್ದ ಬೆಂಗಳೂರು, ಕೆಂಗೇರಿ ಹೋಬಳಿ ಮತ್ತು ಥಣಿಸಂದ್ರದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಪಿಓಪಿ ಗಣೇಶ ತಯಾರಿಕಾ ಘಟಕದ ಮೇಲೆ ದಾಳಿ ಮಾಡಿ ಬೀಗಮುದ್ರ ಹಾಕಲಾಗಿದೆ. ಈ ಘಟಕ ಮುಚ್ಚಿಸಲು ಜಿಲ್ಲಾಧಿಕಾರಿಗಳಿಗೆ ಶಿಫಾರಸ್ಸು ಮಾಡಲಾಗಿದೆ.

**ಆಧಾರ:** ಉದಯವಾಣಿ, ದಿನಾಂಕ: 29.09.2023

# ಭಾಗ – 6

# ನ್ಯಾಯಾಲಯ ಸುದ್ದಿಗಳು

# 1. Post-1957, President retains power to scrap Article 370: SC

The Supreme Court raised the question whether the President's power to declare inoperative Article 370 of the Constitution, which granted special status to Jammu and Kashmir, will not continue to hold the field after the dissolution of the erstwhile State's Constituent Assembly on January 26, 1957.

Clause (3) of Article 370 gave the President power to notify the Article "inoperative" or modify it. But a proviso had made it "necessary" that such a move would have to be recommended by the Jammu and Kashmir (J&K) Constituent Assembly.

"A Constituent Assembly is not a permanent body like the Parliament and the Supreme Court. No Constituent Assembly can have an indefinite life… The J&K Constituent Assembly was constituted for a specific purpose-to draft the Constitution of J&K. It became functus officio once the J&K constitution was framed… This proviso making the Constituent Assembly's 'recommendation' necessary before abrogation has no application. If the proviso ceased to operate, surely the substantive part of Clause 3 in Article 370 will remain," Chief Justice D.Y.Chandrachud, heading a Constitution Bench, observed orally on the first day of hearing.

**President retains power to scrap Article 370: SC**

The CJI was responding to an argument by senior advocate Kapil Sibal that following the dissolution of the J&K Constituent Assembly, Article 370 cannot be revoked, as its concurrence was necessary to do so. "Are you saying the President has blanket powers," asked Mr.Sibal, appearing for Mohammad Akbar Lone and the lead lawyer for the petitioners' side.

"Can the will of the people of J&K be caged or silenced in this fashion? There has been no representative democracy in J&K in the past five years… In the guise of restoring democracy, we have decimated democracy. The State of J&K historically represented a unique relationship unlike princely states which integrated into the Union. Can that unique relationship between two sovereigns be jettisoned like this," he asked the court.

Mr. Sibal asked how Parliament could have declared itself the legislature of J&K in place of the J&K Constituent Assembly in order to remove the special status granted under Article 370. "Parliament was a creature of the Constitution. It could not have acted outside the Constitution," he said.

Justice B.R.Gavai asked Mr.Sibal why Article 370 was mentioned in the Constitution only as a "temporary" provision. "So, you are saying that though Article 370 was created as a temporary provision, it became permanently engrafted into the Constitution after 1957 with the dissolution of the Constituent Assembly," Justice S.K.Kaul asked Mr.Sibal. "Article 370

was there when India became a Republic. The Article mentions a Constituent Assembly for J&K. However, the Constituent Assembly was not convened until December 1951. It was then left to the people of J&K, through their Constituent Assembly, to decide if Article 370 ought to be abrogated at all. Article 370 was called 'temporary' because the Constitution wanted the J&K people to decide their future… Article 370 could have been abrogated only by a vote of confidence in the Constituent Assembly," he responded.

**Courtesy:** The Hindu, Dated: 03.08.2023

## 2. In Sc, Uddhav camp says Speaker delaying disqualification process

The Uddhav Thackeray camp in the Supreme Court on Tuesday accused Maharashtra Assembly Speaker Rahul Narwekar of deliberately delaying disqualification proceedings against Chief Minister Eknath Shinde for defection.

The petition, filed in the top court amid a churn in Maharashtra politics following Ajit pawar's split from th ncp to join the Shinde Cabinet as Deputy Chief minister, said Speakers should "rise above their political affiliations" while performing the duties of the office. The theackeray faction said Mr. Narwekar's conduct had been in "brazen disregard" of his constitutional duties as a neutral arbiter under the Tenth Schedule( antidefection law) of the Constituion.

"It is imperative for this court to direct the Speaker to decide the disqualification petitions filed by the petitioner against delinquent members of Maharashtra Legislative Assembly expeditiously and within a time-bound manner, or, alternatively, to decide the disqualification pettions itself," a 406- page petion filed by Shiv Sena (UBT) leader Sunil Prabhu urged.

The Thackeray loyalists referred to the Court's own 2020 judgment in Keisham Meghachandra Singh v Manipur Legislative Assembly, which had laid down that disqualification petitions under the Tenth Schedule should normally be decided within a period of three months from the date of their filing.

The petition sadi Mr. Barwekar's inaction amounts to bias as it effectively permits Mr. Shinde's illegal continuance in office when disqualification proceedings for defection are handing over him. The Speaker's conduct should be "perceptibly impartial" while exercising the powers of constitutional adjudication under the Tenth Schedule.

Mr. Prabhu , represented by advocates Amit Anand Tiwari and Nishant patil, said the court , in its May 11 judgment on the Thackeray-Shinde battle for control over Shiv Sena, had placed its trust in Mr. Narwekar to impartially hear and dicide the antidefection proceedings against the Shinde camp.

"The Speaker is the appropriate authority to adjudicate petitions for disqualification under the Tenth Schedule (anti-defection law)… The Speaker embodies propriety and impartiality and that it was therefore inappropriate to express distrust in the office of the Speaker," it had observed.

However, Mr. Prabhu said three months have passed since the judgment and Mr. Narwekar has not called for even a single hearing despite repeated representations to do so.

"It is settled law that the Speaker, while performing its functions under the Tenth Schedule, acts as a judicial tribunal , and is required to act in a fair and unbiased manner. Any unreasonable delay on the part of the Speaker in deciding the petitions for disqualification contributes to and perpetuates the constitutional sin of defection committed by the delinquent members," the petion said.

"His inaction is allowing MLAs who are liable to be disqualified to continue in Assembly," it added.

**Courtesy:** The Hindu, Dated: 05.07.2023.

## 3. ಪ್ರಜ್ವಲ್ ರೇವಣ್ಣ ಅಸಿಂಧು ಆದೇಶಕ್ಕೆ ಸುಪ್ರೀಂ ತಡೆಯಾಜ್ಞೆ

ಚುನಾವಣಾ ಅರಕಮದ ಹಿನ್ನೆಲೆಯಲ್ಲಿ ಹಾಸನ ಲೋಕಸಭಾ ಕ್ಷೇತ್ರದ ಸಂಸದ ಸ್ಥಾನದಿಂದ ಅಸಿಂಧುಗೊಳಿಸಿದ್ದ ಕರ್ನಾಟಕ ಹೈಕೋರ್ಟ್ ಆದೇಶಕ್ಕೆ ಸುಪ್ರೀಂಕೋರ್ಟ್ ಮಧ್ಯಂತರ ತಡೆಯಾಜ್ಞೆ ನೀಡಿದೆ.

ಕಳೆದ ಲೋಕಸಭಾ ಚುನಾವಣೆ ವೇಳೆ ಆಸ್ತಿ ವಿವರ ಕುರಿತಾಗಿ ಚುನಾವಣಾ ಆಯೊಗಕ್ಕೆ ಅವರು ತಪ್ಪು ಮಾಹಿತಿ ನೀಡಿದ್ದಾರೆ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಸೆಪ್ಟಂಬರ್ 1 ರಂದು ಅರ್ಜಿಯ ವಿಚಾರಣೆ ನಡೆಸಿದ್ದ ಕರ್ನಾಟಕ ಹೈಕೋರ್ಟ್, ಅವರ ಆಯ್ಕೆಯನ್ನು ಅಸಿಂಧುಗೊಳಿಸಿತ್ತು. ಇದನ್ನು ಪ್ರಶ್ನಿಸಿ ಪ್ರಜ್ವಲ್ ಅವರು, ಸುಪ್ರೀಂಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದರು. ಮೇಲ್ಮನವಿ ಅರ್ಜಿಯ ವಿಚಾರಣೆ ನಡೆಸಿದ ಸುಪ್ರೀಂಕೋರ್ಟ್, ಹೈಕೋರ್ಟ್ ತೀರ್ಪಿಗೆ ಮಧ್ಯಂತರ ತಡೆಯಾಜ್ಞೆ ನೀಡಿದೆ.

ಈ ಬಗ್ಗೆ ಪ್ರತಿಕ್ರಿಯೆ ನೀಡಿದ ಪ್ರಜ್ವಲ್ ರೇವಣ್ಣ, ಹೈಕೋರ್ಟ್ ಆದೇಶಕ್ಕೆ ಸುಪ್ರೀಂಕೋರ್ಟ್ ಪ್ರಕರಣದ ವಿಚಾರಣೆ ನಡೆಸಲಿದೆ. ಈ ಅವಧಿಯಲ್ಲಿ ಸಂಸದರಿಗೆ ಸಂಬಂಧಸಿದ ಯಾವುದೇ ಭತ್ಯೆ ಪಡೆಯುವಂತಿಲ್ಲ ಎಂದು ಷರತ್ತು ವಿಧಿಸಿದೆ. ಇದನ್ನು ಬಿಟ್ಟು ಬೇರೆ ಯಾವ ಷರತ್ತನ್ನೂ ವಿಧಿಸಿಲ್ಲ ಎಂದರು.

**ಆಧಾರ:** ಕನ್ನಡಪ್ರಭ, ದಿನಾಂಕ: 20.09.2023.

## 4. ಆರೋಪಪಟ್ಟಿ ಕೋರ್ಟ್ ಭಾಷೆಯಲ್ಲಿ ಇರಬೇಕಿಲ್ಲ: 'ಸುಪ್ರೀಂ ಪ್ರತಿಪಾದನೆ'

ನ್ಯಾಯಾಲಯಗಳಲ್ಲಿ ಬಳಸುವ ಭಾಷೆಯಲ್ಲಿಯೇ ತನಿಖಾ ಸಂಸ್ಥೆಯು ಕೋರ್ಟ್‌ಗೆ ಆರೋಪ ಪಟ್ಟಿ ಸಲ್ಲಿಸಬಕು ಎಂಬ ಬಗ್ಗೆ ಅಪರಾಧ ಪ್ರಕ್ರಿಯಾ ಸಂಹಿತೆಯಲ್ಲಿ (ಸಿಆರ್‌ಪಿಸಿ) ಯಾವುದೇ ನಿಯಮ ಇಲ್ಲ ಎಂದು ಸುಪ್ರೀಂ ಕೋರ್ಟ್ ಪ್ರತಿಪಾದಿಸಿದೆ..

'ವ್ಯಾಪಂ' ಹಗರಣದ ಇಬ್ಬರು ಆರೋಪಿಗಳು ಸಿಬಿಐ ಸಲ್ಲಿಸಿರುವ ಆರೋಪ ಪಟ್ಟಿಯು ಇಂಗ್ಲಿಷ್‌ನಲ್ಲಿದೆ. ಇದು ನಮಗೆ ಅರ್ಥವಾಗುವುದಿಲ್ಲ. ಹಾಗಾಗಿ. ಹಿಂದಿ ಭಾಷೆಯಲ್ಲಿ ಒದಗಿಸಬೇಕು ಎಂದು ಮಧ್ಯಪ್ರದೇಶದ ಹೈಕೋರ್ಟ್‌ನ ಮೆಟ್ಟಿಲೇರಿದ್ದರು.

ಇದಕ್ಕೆ ಅನುಮತಿ ನೀಡಿದ್ದ ಹೈಕೋರ್ಟ್ ಆದೇಶವನ್ನು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳಾದ ಅಭಯ್ ಎಸ್. ಓಕ್ ಹಾಗೂ ರಾಜೇಶ್ ಬಿಂದಾಲ್ ಅವರಿದ್ದ ವಿಭಾಗೀಯ ನ್ಯಾಯಪೀಠವು ವಜಾಗೊಳಿಸಿದೆ. ಈ ಸಂಬಂಧ ವಿಚಾರಣಾ ನ್ಯಾಯಾಲಯದ ಆದೇಶವನ್ನು ಎತ್ತಿ ಹಿಡಿದಿರುವ ನ್ಯಾಯಪೀಠವು, ಕೋರ್ಟ್‌ನಲ್ಲಿ ಬಳಸುವ ಭಾಷೆ ಬಗ್ಗೆ ಸಿಆರ್‌ಪಿಸಿ ಸೆಕ್ಷನ್ 272ರಲ್ಲಿ ಹೇಳಲಾಗಿದೆ. ಇದರ ಅನ್ವಯ ರಾಜ್ಯದಲ್ಲಿರುವ ಕೋರ್ಟ್‌ಗಳಲ್ಲಿ ಯಾವ ಭಾಷೆ ಬಳಸಬೇಕು ಎಂಬುದನ್ನು ನಿರ್ಧರಿಸುವ ಹಕ್ಕು ರಾಜ್ಯ ಸರ್ಕಾರಕ್ಕಿದೆ. ಆದರೆ, ಇದು ಹೈಕೋರ್ಟ್‌ಗೆ ಅನ್ವಯಿಸುವುದಿಲ್ಲ. ಜೊತೆಗೆ, ತನಿಖಾ ಸಂಸ್ಥೆ ಅಥವಾ ತನಿಖಾಧಿಕಾರಿಯು ಅಂತಿಮ ವರದಿಯ್ನು ಇಂತದ್ದೇ ಭಾಷೆಯಲ್ಲಿ ನೀಡಬೇಕು ಎಂದು ಸೂಚಿಸುವ ಅಧಿಕಾರವೂ ಇಲ್ಲ ಎಂದು ಸ್ಪಷ್ಟಪಡಿಸಿತು.

'ಸೆಕ್ಷನ್ 173ರಲ್ಲಿ ತನಿಖಾಧಿಕಾರಿಯು ಅಂತಿಮ ವರದಿ/ಆರೋಪ ಪಟ್ಟಿ ಸಲ್ಲಿಸುವ ಬಗ್ಗೆ ವಿವರಿಸಲಾಗಿದೆ. ಆದರೆ, ತನಿಖಾ ಸಂಸ್ಥೆ/ತನಿಖಾಧಿಕಾರಿಯು ನ್ಯಾಯಾಲಯದಲ್ಲಿ ಬಳಸುವ ಭಾಷೆಯಲ್ಲಿಯೇ ಆರೋಪಪಟ್ಟಿ ಸಲ್ಲಿಸಬೇಕು ಎಂದು ಹೇಳುವುದಿಲ್ಲ. ಒಂದು ವೇಳೆ ವರದಿಯು ನ್ಯಾಯಾಲಯದಲ್ಲಿ ಬಳಸುವ ಭಾಷೆಯಲ್ಲಿ ಇಲ್ಲದಿದ್ದರೂ ಅದರಿಂದ ನ್ಯಾಯಿಕ ಪ್ರಕ್ರಿಯೆಗೆ ಯಾವುದೇ ತೊಂದರೆಯಾಗುವುದಿಲ್ಲ ಎಂದು ಹೇಳಿತು.

ತನ್ನ ವಿರುದ್ಧ ಸಲ್ಲಿಕೆಯಾಗಿರುವ ಆರೋಪ ಪಟ್ಟಿ ಬಗ್ಗೆ ತಿಳಿದುಕೊಳ್ಳುವುದು ಆರೋಪಿಯ ಹಕ್ಕಾಗಿದೆ ಸಂವಿಧಾನದ 21ನೇ ವಿಧಿಯ (ಜೀವನ ಮತ್ತು ವೈಯಕ್ತಿಕ ಸ್ವಾತಂತ್ರ್ಯದ ಹಕ್ಕು) ಸಾರವೂ ಇದೇ ಆಗಿದೆ. ಆದರೆ, ಆರೋಪ ಪಟ್ಟಿಯ ಭಾಷಾಂತರಕ್ಕೆ ಹಲವು ತಂತ್ರಾಂಶಗಳು ಮತ್ತು ಕೃತಕ ಬುದ್ಧಿಮತ್ತೆಯ ತಂತ್ರಜ್ಞಾನವನ್ನು ಬಳಸಬಹುದು ಎಂದು ಹೇಳಿತು.

ಎನ್‌ಐಎ ಹಾಗೂ ಸಿಬಿಐ ಗಂಭೀರ ಅಪರಾಧಗಳ ಬಗ್ಗೆ ತನಿಖೆ ನಡೆಸುತ್ತವೆ. ದೇಶದ ಹಲವೆಡೆ ಇವುಗಳ ಶಾಖೆಗಳಿವೆ. ಹಾಗಾಗಿ ಇಂತಹ ಸಂಸ್ಥೆಗಳು ಪ್ರಕರಣದ ಅಂತಿಮ ವರದಿಯನ್ನು ಸಂಬಂಧಪಟ್ಟ ಕೋರ್ಟ್‌ನಲ್ಲಿ ಬಳಸುವ ಭಾಷೆಯಲ್ಲಿಯೇ ನೀಡಲು ಸಾಧ್ಯವಾಗುವುದಿಲ್ಲ ಎಂದು ಹೇಳಿತು.

2013ರಲ್ಲಿ ಮಧ್ಯಪ್ರದೇಶದ ವೃತ್ತಿಪರ ಶಿಕ್ಷಣ ಕೋರ್ಸ್‌ಗಳ ಪ್ರವೇಶ ಮತ್ತು ನೇಮಕಾತಿ ಹಗರಣ ಬಯಲಿಗೆ ಬಂದಿತಿತು. 2015ರಲ್ಲಿ ಸುಪ್ರೀಂ ಕೋರ್ಟ್‌ನ ಆದೇಶದ ಅನ್ವಯ ಸಿಬಿಐ ತನಿಖೆ ಆರಂಭಿಸಿದೆ. ರಾಜಕಾರಣಿಗಳು ಹಿರಿಯ ಅಧಿಕಾರಿಗಳು ಸೇರಿದಂತೆ ಉದ್ಯಮಿಗಳು ಇದರಲ್ಲಿ ಭಾಗಿಯಾಗಿರುವ ಆರೋಪ ಇದೆ.

**ಆಧಾರ**: ವಿಜಯವಾಣಿ, ದಿನಾಂಕ: 27.08.2023

# 5. 2014 order removing immunity to officers is retrospective: SC

The Supreme Court on Monday declared that its previous 2014 judgment removing immunity from prosecution to central government officers in graft cases in the absence of sanction would be applied retrospectively.

The top court emphasized that once a law is declared unconstitutional or violative of fundamental rights, it would be treated as unenforceable and stillborn.

A five-judge Constitution bench led by Justice Sanjay Kishan Kaul ruled that its 2014 judgment, which held Section 6A of the Delhi Special Police Establishment Act as invalid and unconstitutional, would be applied retrospectively.

The judgment is significant as all the pending cases against central government officers under the Prevention of Corruption Act since September 11, 2003, when the provision was inserted, can be prosecuted without the sanction and no trial would be held as vitiated in the absence of prior approval.

The bench also held that Article 20(1) of the Constitution has no applicability either to the validity or invalidity of Section 6A of the Delhi Special police Establishment Act.

Section 6A(1) of the DSPE Act was held to be invalid and violative of Article 14 of the Constitution by a five-judge bench on May 6, 2014, in the case of Subramanian Swamy.

According to Section 6A of the DSPE Act, the approval of the central government is mandatory to conduct an inquiry or investigation for of fences under the prevention of Corruption Act, 1988, where such allegation relates to the employees of the central government of the level of Joint Secretary and above.

Such prior approval was also mandatory for such officers as are appointed by the central government in corporations established by or under any Central Act, government companies, societies and local authorities owned of controlled by the government.

A question on the applicability of the judgment arose as Article 20(1) of the Constitution stated no person shall be convicted of any offence except for violation of a law in force at the time of the commission of the act, nor be subjected to a penalty greater than that which might have been inflicted under the law in force at the time of the offence.

Dealing with the legal question of whether the 2014 judgment would be applied retrospectively, the bench said, Once a law is declared to be unconstitutional being violative of Part-III of the Constitution, then it would be held to be void ab initio, stillborn, unenforceable and non-est.

Citing Article 13(2) of the Constitution and its interpretation by authoritative pronouncements, the bench said the declaration made by the Constitution bench in the case of Subramanian Swamy will have retrospective operation.

The court dealt with the instant issue as the Constitution bench in Subramanian swamy's case did not decide whether the declaration of Section 6A(1) of the DSPE Act to be violative of Article 14 of the Constitution would have a retrospective effect or it would apply prospectively.

**Courtesy:** Deccan Herald, Dated: 12.09.2023

# ಭಾಗ–7

# ಹೊರ ರಾಜ್ಯಗಳ ಸುದ್ಧಿಗಳು

## 1. Telangana Assembly passes 4 Bills returned by Governor

The Telangana Assembly passed four Bills, which were returned by Governor Tamilisai Soundararajan with queries, doubts and seeking clarifications, again without making any changes. The Bills were sent to the Governor for her assent in September last year and February this year.

The Bills were introduced and passed by the Assembly with a voice vote after Speaker Pocharam Srinivas Reddy made an announcement around 10 p.m. stating that his office has received three messages sent by the Governor under Article 175 (2) of the Constitution on Government Bills along with the four Bills returned by the Governor. The House took up the Bills though Opposition Congress was reluctant on the grounds that it was late in the night.

IT Minister K.T.Rama Rao introduced the Telangana Municipal Laws Amendment Bill, 2022. The Bill aimed to increase the number of co-option members in municipal bodies from five to 15 and the objection it would only benefit minorities was not correct, he said.

Under the Telangana State Private Universities Establishment and Regulation Amendment Bill, 2022, the State government had sanctioned the establishment of 5 new private universities –NIC-MAR , MNR, Gurunanak , Srinidhi and Kaveri- for promoting higher education However, the Governor had raised doubts over land and building plans.

The other Bills were the Telangana Public Employment Regulation of Age of Superannuation Amendment Bill, 2022 and the Telangana Panchayat Raj Amendment Bill, 2023 for the division of Bhadrachalam, Sarapaka and Asifabad gram panchayats in Bhadradri-Kothagudem district.

**Courtesy:** The Hindu, date: 06.08.2023

## 2. ತ್ರಿಪುರಾ ವಿಧಾನಸಭೆ: ಕಲಾಪದಿಂದ ಐವರು ಶಾಸಕರ ಅಮಾತನತ್ತು

ತ್ರಿಪುರಾ ವಿಧಾನಸಭೆಯಲ್ಲಿ ಕಲಾಪಕ್ಕೆ ಅಡ್ಡಿಯುಂಟು ಮಾಡಿದ ಐವರು ಶಾಸಕರನ್ನು ಅಮಾನತ್ತು ಮಾಡಲಾಯಿತು. ಇದರ ಬೆನ್ನಲ್ಲೇ ವಿರೋಧ ಪಕ್ಷಗಳ ಸದಸ್ಯರು ಕಲಾಪವನ್ನು ಬಹಿಷ್ಕರಿಸಿ ಪತ್ರಿಭಟನೆ ನಡೆಸಿದ್ದರು.

ಸಿಪಿಎಂ ಶಾಸಕ ನಯನ್ ಸರ್ಕಾರ್, ಕಾಂಗ್ರೆಸ್‌ನ ಸುದೀಪ್ ರಾಯ್ ಬರ್ಮನ್, ಟಿಪ್ರ ಮೋಥಾ ಪಕ್ಷದ ಶಾಸಕರಾದ ಋಷಕೇತು ದೇವವರ್ಮಾ, ನಂದಿತಾ ರೆಯಾಂಗ್ ಮತ್ತು ರಂಜಿತ್ ದೇವವರ್ಮಾ ಅವರನ್ನು ವಿಧಾನಸಭೆಯ ಸ್ಪೀಕರ್ ವಿಶ್ವಬಂಧು ಸೇನ್ ಅವರು ಒಂದು ದಿನದ ಮಟ್ಟಿಗೆ ಕಲಾಪದಿಂದ ಅಮಾನತ್ತು ಮಾಡಿದರು.

ಕಳೆದ ಮಾರ್ಚ್‌ನಲ್ಲಿ ನಡೆದ ವಿಧಾನಸಭೆಯ ಅಧಿವೇಶನದ ಸಂದರ್ಭದಲ್ಲಿ ಅಶ್ಲೀಲ ವಿಡಿಯೋ ನೋಡಿದ ಆರೋಪ ಹೊತ್ತಿರುವ ಬಿಜೆಪಿ ಶಾಸಕ ಜಬಾಬ್ ಲಾಲ್ ನಾಥ್ ಅವರ ಅನುಚಿತ ವರ್ತನೆ ಕುರಿತು ಚರ್ಚಿಸುವಂತೆ ಟಿಪ್ರ ಮೊಥಾ ಶಾಸಕ ಅನಿಮೇಶ್ ದೇವವರ್ಮಾ ಅವರು ಪಟ್ಟು ಹಿಡಿದರು. ಈ ವಿಷಯವಾಗಿ ನಿಲುವಳಿ ಸೂಚನೆ ಮಂಡಿಸಲು ಅವಕಾಶ ನೀಡುವಂತೆ ಕೋರಿದರು.

ಆದರೆ ಸ್ಪೀಕರ್ ಇದಕ್ಕೆ ಅವಕಾಶ ನೀಡಲಿಲ್ಲ. ಇದರಿಂದ ಸಿಟ್ಟಾದ ಟಿಪ್ರ ಮೊಥಾ ಸದಸ್ಯರು ಪ್ರತಿಭಟನೆ ಆರಂಭಿಸಿದರು. ಸಿಪಿಎಂ ಮತ್ತು ಕಾಂಗ್ರೆಸ್ ಸದಸ್ಯರು ಇವರನ್ನು ಬೆಂಬಲಿಸಿ ಸಭಾಧ್ಯಕ್ಷರ ಪೀಠದ ಮುಂದೆ ಧರಣಿ ನಡೆಸಿದರು. ನಂತರ ಸ್ಪೀಕರ್ ಕಲಾಪಕ್ಕೆ ಅಡ್ಡಿ ಮಾಡಿದ ಐವರು ಶಾಸಕರನ್ನು ಅಮಾನತ್ತು ಮಾಡಿದರು. ಸ್ಪೀಕರ್ ನಿರ್ಧಾರ ಖಂಡಿಸಿ ಪ್ರತಿಪಕ್ಷಗಳ ಸದಸ್ಯರು ಕಲಾಪ ಬಹಿಷ್ಕರಿಸಿ ಹೊರಗೆ ಪ್ರತಿಭಟನೆ ನಡೆಸಿದರು.

**ಆಧಾರ**: ಪ್ರಜಾವಾಣಿ, ದಿನಾಂಕ: 08.07.2023.

## 3. Maharashtra Speaker issues notices to MLAs of two Shiv Sena factions

Maharastra Assembly Speaker Rahul Narwekar on issued notices to MLAs from both factions of the Shiv Sena, with each group seeking disqualification of the legislators in the other. Mr. Narwekar told The Hindu, “ Notices have been issued to 40 MLAs of the Chief Minister Eknath Shinde camp and 14 MLAs of the Uddhav Thackeray faction . They need to file their reply on disqualification petitions against them.”

Mr. Narwekar had received a copy of the Shiv Sena’s constitution from the Election Commission. Last year, the Uddhav Thackeray-led Maha Vikas Aghadi (MVA) government was toppled and replaced by a government led by a faction of the Shiv Sena , which claimed to be the “real” Sena, and including the BJP and several Independent MLAs.

The first petition was filed by Mr. Shinde last June after notices were issued by then Deputy Speaker Narhari Zirwal against 40 rebel MLAs under the Tenth Schedule of the Constitution which deals with disqualification on the grounds of defiction. Thereafter, petitions were filed by the Thackeray group challenging the then Governor’s decision to call for a trust vote and the swearing-in of Mr.Shinde as the Chief Minister.

On May 11, the Supreme Court on deciding petitions by Mr. Thackeray and, Mr.Shinde had said it cannot adjudicate petitions for disqualification by MLAs under the Tenth Schedule. The court had said the Speaker shall recognise the Whip and the leader who were duly authorized by the Shiv Sena.

The Speaker will have to decide independently and is not bound by the decision of the EC.

**Courtesy:** The Hindu, date: 09.07.2023.

## 4. ಉತ್ತರ ಪ್ರದೇಶ ಶಾಸಕರಿಗೆ 'ಮೂಗುದಾರ'

ಉತ್ತರ ಪ್ರದೇಶ ವಿಧಾನಸಭೆಯಲ್ಲಿ ಶೀಘ್ರ ಹೊಸ ಬಿಗಿ ನಿಯಮಗಳು ಜಾರಿಗೆ ಬರಲಿದ್ದು, ಆ ಪ್ರಕಾರ ಶಾಸಕರು ತಮ್ಮ ಮೊಬೈಲ್ ಫೋನ್‌ಗಳನ್ನು ಸದನದೊಳಗೆ ತೆಗೆದುಕೊಂಡು ಹೋಗುವುದರ ಮೇಲೆ ನಿಷೇಧ ಹೇರಲಾಗುತ್ತದೆ ಇದಲ್ಲದೆ, ದಾಖಲೆಗಳನ್ನು ಹರಿದು ಹಾಕುವಂತಿಲ್ಲ ಅಥವಾ ಸ್ಪೀಕರ್‌ಗೆ ಬೆನ್ನು ತೋರಿಸುವಂತಿಲ್ಲ ಎಂದು ಸೂಚಿಸಲಾಗಿದೆ.

ಇತ್ತೀಚೆಗೆ ಹೊಸ ನಿಯಮಗಳಿಗೆ ಸಂಬಂಧಿಸಿದ ಮಸೂದೆ ಮಂಡಿಸಲಾಗಿದ್ದು, ಹಳೆಯ 1958ರ ನಿಯಮಗಳು ಇದರ ಅಂಗೀಕಾರದ ನಂತರ ರದ್ದಾಗಲಿದೆ. ಕಳೆದ ಅಧಿವೇಶನದಲ್ಲಿ ಎಸ್ ಪಿ ಶಾಸಕರೊಬ್ಬರು ಸದನದ ಕಲಾಪಗಳನ್ನು ಫೇಸ್‌ಬುಕ್‌ನಲ್ಲಿ ಲೈವ್ ಸ್ಟ್ರೀಂ ಮಾಡಿದ್ದರು. ಈ ಹಿನ್ನಲೆಯಲ್ಲಿ ಮೊಬೈಲ್ ನಿರ್ಬಂಧಿಸಲಾಗಿದೆ.

ಹೊಸ ನಿಯಮಗಳ ಪ್ರಕಾರ, ಶಾಸಕರು ಸದನದಲ್ಲಿ ಯಾವುದೇ ದಾಖಲೆಗಳನ್ನು ಹರಿದು ಹಾಕುವಂತಿಲ್ಲ. ಅವರು ಭಾಷಣ ಮಾಡುವಾಗ ಗ್ಯಾಲರಿಯಲ್ಲಿ ಕೂತವರತ್ತ ಬೊಟ್ಟು ಮಾಡಿ ಯಾರನ್ನೂ ತೋರಿಸುವಂತಿಲ್ಲ ಅಥವಾ ಅವರನ್ನು ಹೊಗಳುವುದಿಲ್ಲ. ಶಾಸಕರು ಸ್ಪೀಕರ್‌ನ ಬೆನ್ನು ಮಾಡಿ ಕೂರುವುದಾಗಲಿ ನಿಲ್ಲುವುದಾಗಲಿ ಮಾಡುವಂತಿಲ್ಲ. ಅವರು ಸದನದದಲ್ಲಿ ಪ್ರದರ್ಶನಕ್ಕೆಂದು ಶಸ್ತ್ರಾಸ್ತ್ರಗಳನ್ನು ತರುವಂತಿಲ್ಲ .

ಅಲ್ಲದೆ, ಸದಸ್ಯರು ಲಾಭಿಯಲ್ಲಿ ಧೂಮಪಾನ ಮಾಡುವಂತಿಲ್ಲ. ಜೋರಾಗಿ ಮಾತನಾಡುವುದಾಗಲಿ ನಗುವುದಾಗಲಿ ಮಾಡುವಂತಿಲ್ಲ.

ಶಾಸನ ಸಭೆಯ ಸದಸ್ಯರು (ಶಾಸಕರು) ಸಭಾಧ್ಯಕ್ಷರ ಪೀಠಕ್ಕೆ ನಮ್ಮಸ್ಕರಿಸುವುದರ ಮೂಲಕ ಗೌರವವನ್ನು ತೋರಿಸಬೇಕು ಮತ್ತು ಸದನವನ್ನು ಪ್ರವೇಶಿಸುವಾಗ ಅಥವಾ ಹೊರಡುವಾಗ ಅಥವಾ ತಮ್ಮ ಆಸನಗಳಲ್ಲಿ ಕುಳಿತುಕೊಳ್ಳುವಾಗ ಅಥವಾ ಏಳುವಾಗು ಬೆನ್ನು ತೊರಿಸಬಾರದು ಎಂದು ನಿಯಮ ರೂಪಿಸಲಾಗಿದೆ. ಶಾಸಕರು ಯಾವುದೇ ಸಾಹಿತ್ಯ, ಪ್ರಶ್ನಾವಳಿ, ಪುಸ್ತಕ, ಪಕ್ಷದ ಧ್ವಜಗಳು, ಚಿಹ್ನೆಗಳು ಅಥವಾ ಕಲಾಪಕ್ಕೆ ಸಂಬಂಧಿಸಿದ ಸ್ಲಿಪ್‌ಗಳನ್ನು ವಿತರಿಸಲು ಅನುಮತಿ ಇಲ್ಲ.

ಅದೇ ವೇಳೆ, ರಾಜ್ಯ ವಿಧಾನಸಭೆಯ ಅಧಿವೇಶನವನ್ನು ಕರೆಯುವ ಅವಧಿಯನ್ನು ಪ್ರಸ್ತುತ 14 ದಿನಗಳಿಂದ ಏಳು ದಿನಕ್ಕೆ ಇಳಿಸಲಾಗಿದೆ.

**ಆಧಾರ**: ವಿಜಯವಾಣಿ, ದಿನಾಂಕ: 10.07.2023.

## 5. Congress brings in Bill promising minimum income in Rajathan

Congress-led Ashok Gehlot government introduced "The Rajasthan Minimum Guaranteed Income Bill, 2023' in the Assembly, what is widely expected to be the last session before the State goes to the polls in less than four months. The legislation, for the first time in the country, provides legislative backing for urban employment guarantee schemes and also makes pension a legal right with the provision of a 15% annual increment.

Rajasthan Chief Minister Ashok Gehlot shot off a letter to Prime Minister demanding that such a law should be brought for the entire country. The Rajsthan cabinet also passed a resolution to this effect.

Ahead of the 2019 Lok Sabha election, the Congress in its manifesto had promised Nyay- which offers 72,000 each annually as a minimum income to the 20% families in the poorest of the poor category. Since then, the party has rarely spoken about the scheme. This Bill comes the closest to the Congress's 2019 promise.

Every adult person residing in rural areas of the State shall have a right to get guaranteed employment for doing permissible work of atleast additional 25 days in a financial year on completion of maximum days of work as prescribed by the Union government's MGNREGA Scheme.

Every Person falling in the category of old age, specially abled, widow or single woman with eligibility shall be entitled to pension under this Act. And this pension will be increased at the rate of 15% a year.

Speaking to The Hindu, Mr.Gehlot said," It is the "right" of one and all to be able to lead their life with dignity."

Other States have in recent years introduced employment guarantee schemes for the urban areas but only via executive order.

**Courtesy:** The Hindu, date: 20.07.2023.

## 6. No Governor's assent; Manipur Assembly session a non-starter

The 60-member Manipur Assembly failed to hold a Special Session to discuss the ethnic violence in the State as the Raj Bhavan did not issue a notification to convene it despite a recommendation from the State Cabinet.

An official statement on August 4 said the Cabinet had recommended to Governor Anusuiya Uikey the summoning of the fourth session of the 12th Manipur Legislative Assembly on August 21. This followed a similar request from the government on July 27.

"The Special Session could not be held as we did not receive the requisite notification from the Governor," a senior official said, declining to be quoted. Such notification is required to be issued 15 days ahead of a session. The previous session of the Assembly was adjourned sine die in March, more than a month before the clashes started on May 3.

The next session has to be held before September 2. Article 174 of the Constitution says: "The House or Houses of the Legislature of the State shall be summoned to meet

twice at least in every year, and six months shall not intervene between their last sitting in one session and the date appointed for their first sitting in the next session."

Former Manipur Chief Minister and Congress leader Okram Ibobi Singh said the failure of the House to sit for the Monsoon Session pointed to a constitutional crisis.

Referring to the August 4 recommendation by the Manipur Cabinet, Congress leader Jairam Ramesh said the Governor not calling the Special Session of the Assembly " is further evidence that the constitutional machinery has simply broken down" in the State. Taking to X (formerly Twitter) , he said Prime Minister Narendra Modi was preoccupied with "refurbishing his self-styled Vishwaguru role" and the Home Minister (Amit Shah) was " busy electioneering" to let the "agony of the people of Manipur" continue "unabated".

The Coordinating Committee on Manipur intergirity (COCOMI), and apex body of the Meiteis, had in July demanded a Special Session of the Assembly and set August 5 as the deadline for it.

The organisation also submitted a memorandum at the Prime Minister's office on August 5 seeking a Special Session for adopting resolution in the House against compromising the State's territorial integrity. This followed the demand of several Kuki-Zomi organisations, specifically the Indigenous Tribal Leaders' Forum, for a separate administration for the tribal people. The demand included set-ups similar to an Assembly apart from the posting of officials of the rank of Chief Secretary and Director–General of Police.

All 10 Kuki MLAs, including seven of the BJP, refused to take part in the Special "COCOMI-dictated" Assembly Session citing security reasons.

**Courtesy**: The Hindu, dated: 22.08.2023.

## 7. 450ಕ್ಕೆ ಎಲ್‌ಪಿಜಿ, ಮಹಿಳೆಯರ ಮೀಸಲಾತಿ 30% ರಿಂದ 35ಕ್ಕೆ ಏರಿಕೆ

ವರ್ಷಾಂತ್ಯಕ್ಕೆ ನಡೆಯಲಿರುವ ವಿಧಾನಸಭೆ ಚುನಾವಣೆಗೆ ಮಧ್ಯಪ್ರದೇಶದಲ್ಲಿ ಆಡಳಿತಾ ರೂಢ ಬಿಜೆಪಿ ಹಾಗೂ ಪ್ರತಿಪಕ್ಷ ಕಾಂಗ್ರೆಸ್ ನಡುವೆ ಮತದಾರರಿಗೆ ಉಚಿತ ಕೊಡುಗೆಗಳನ್ನು ಘೋಷಿಸುವ ಪೈಪೋಟಿ ತೀವ್ರಗೊಂಡಿದ್ದು, ಮುಖ್ಯಮಂತ್ರಿ ಶಿವರಾಜ್‌ಸಿಂಗ್ ಚೌಹಾಣ್ ಮಹಿಳೆಯರಿಗೆ ಹಲವು ಕೊಡುಗೆಗಳನ್ನು ಪ್ರಕಟಿಸಿದ್ದಾರೆ.

ಈಗ ನಡೆಯುತ್ತಿರುವ ಶ್ರಾವಣ ಮಾಸದ ಪ್ರಯುಕ್ತ 'ಲಾಡ್ಲಿ ಬೆಹನಾ' ಯೋಜನೆಯಡಿ ಮಹಿಳೆಯರಿಗೆ ರೂ.1250 ನೀಡಲಾಗುವುದು(ಈ ಹಿಂದೆ ಮಾಸಿಕ 1000ರೂ. ಇತ್ತು). ಅಕ್ಟೋಬರ್ ತಿಂಗಳಿನಿಂದ ಇದನ್ನು ಶಾಶ್ವತವಾಗಿ ರೂ.1250 ಗೆ ಏರಿಸಲಾಗುವುದು.

ಶ್ರಾವಣ ಮಾಸದಲ್ಲಿ ರೂ.450 ಗೆ ಎಲ್‌ಪಿಜಿ ಸಿಲಿಂಡರ್ ನೀಡಲಾಗುವುದು. ಮುಂದೆ ಇದೇ ದರಕ್ಕೆ ಸಿಲಿಂಡರ್ ನೀಡಲು ಶಾಶ್ವತ ವ್ಯವಸ್ಥೆ ಮಾಡಲಾಗುವುದು. ಸರ್ಕಾರಿ ನೌಕರಿಯಲ್ಲಿ

ಮಹಿಳೆಯರಿಗಿರುವ ಈಗಿನ ಮೀಸಲಾತಿಯನ್ನು ಶೇ.30 ರಿಂದ 35ಕ್ಕೆ ಏರಿಸಲಾಗುವುದು ಎಂದು ಶಿವರಾಜ್ ಸಿಂಗ್ ಹೇಳಿದ್ದಾರೆ.

ಕರ್ನಾಟಕದಂತೆ ಕಾಂಗ್ರೆಸ್ ಮಧ್ಯಪ್ರದೇಶದಲ್ಲೂ ಉಚಿತ ಗ್ಯಾರಂಟಿ ನೀಡುವುದಾಗಿ ಘೋಷಿಸಿದೆ. ಅದಕ್ಕೆ ಪ್ರತಿಯಾಗಿ ಬಿಜೆಪಿ ಸರ್ಕಾರ ಈಗಿನಿಂದಲೂ ಹಲವು ಕೊಡುಗೆಗಳನ್ನು ಜಾರಿಗೊಳಿಸುತ್ತಿದೆ. ರಾಜ್ಯದ ವಿಧಾನಸಭೆ ಚುನಾವಣೆಗೆ 14 ಲಕ್ಷ ಹೊಸ ಮತದಾರರ ಪೈಕಿ 7.07 ಲಕ್ಷ ಮಹಿಳೆಯರಿದ್ದಾರೆ.

**ಆಧಾರ**: ಕನ್ನಡ ಪ್ರಭ, ದಿನಾಂಕ: 28.08.2023.

# ಭಾಗ–8

# ಶ್ರದ್ಧಾಂಜಲಿ

## 1. ಸಿ.ಎಂ.ನಿಂಬಣ್ಣನವರ್, ಮಾಜಿ ವಿಧಾನಸಭಾ ಸದಸ್ಯರು



ನಿಂಬಣ್ಣ, ಮಾಜಿ ಶಾಸಕರು (76) ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ದಿನಾಂಕ:09.07.2023 ರಂದು ನಿಧನರಾದರು. ಅವರು ನ್ಯಾಯವಾದಿ, ಕಲಘಟಿ ತಾಲ್ಲೂಕಿನ ಮಿಶ್ರಿಕೋಟಿ ಗ್ರಾಮದ ಸಹಕಾರ ಶಿಕ್ಷಣ ಸಂಸ್ಥೆಯಲ್ಲಿ ಶಿಕ್ಷಕರಾಗಿ, ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯರಾಗಿ ಸೇವೆ ಸಲ್ಲಿಸಿದ್ದರು.

1995ರಂದು ಅವರು ರಾಜಕೀಯದಲ್ಲಿದ್ದರು ಬಿಜೆಪಿ ವಿವಿಧ ಸ್ತರಗಳಲ್ಲಿ ಸೇವೆ ಸಲ್ಲಿಸಿ ಜನಾನುರಾಗಿಯಾಗಿದ್ದರು. ತಮ್ಮ ಶಾಸಕತ್ವದ ಐದು ವರ್ಷಗಳ ಅವಧಿಯಲ್ಲಿ ವಿಧಾನಸಭೆಯಲ್ಲಿ ಒಂದು ದಿನವೂ ಗೈರಾಗದೆ ದಾಖಲೆ ನಿರ್ಮಿಸಿದ್ದರು.

**ಆಧಾರ:** ಉದಯವಾಣಿ, ದಿನಾಂಕ: 10.07.2023

## 2. ಶ್ರೀರಂಗದೇವರಾಯಲು, ಮಾಜಿ ವಿಧಾನಸಭಾ ಸದಸ್ಯರು



ಶ್ರೀರಂಗದೇವರಾಯಲು, ಮಾಜಿ ಸಚಿವ (87) ಅವರು ದಿನಾಂಕ: 27.08.2023 ರಂದು ನಿಧನರಾದರು. ಹಾಗೂ ವಿಜಯನಗರ ಸಾಮ್ರಾಜ್ಯದ ರಾಜವಂಶಸ್ಥರು.

ಅವರು ಕನಕಗಿರಿ ಕ್ಷೇತ್ರದಿಂದ ಎರಡು ಬಾರಿ, ಗಂಗಾವತಿ ಕ್ಷೇತ್ರದಿಂದ ಮೂರು ಬಾರಿ ಶಾಸಕರಾಗಿದ್ದರು. ವೀರಪ್ಪ ಮೊಯ್ಲಿ ಸಚಿವ ಸಂಪುಟದಲ್ಲಿ ಕೂಡ ಸಚಿವರಾಗಿದ್ದರು. ನಂತರ, ಎಸ್.ಎಂ.ಕೃಷ್ಣ ಸರ್ಕಾರದ ಅವಧಿಯಲ್ಲಿ ಖಾದಿ ಗ್ರಾಮೋದ್ಯೋಗ ಮಂಡಳಿಯ ಅಧ್ಯಕ್ಷರಾಗಿದ್ದರು.

**ಆಧಾರ:** ಕನ್ನಡಪ್ರಭ, ದಿನಾಂಕ: 23.08.2023.

## 3. ವಿಲಾಸಬಾಬು ಆಲಮೇಲಕರ್, ಮಾಜಿ ವಿಧಾನಸಭಾ ಸದಸ್ಯರು



ವಿಲಾಸಬಾಬು ಆಲಮೇಕರ್ (64) ರವರು ದಿನಾಂಕ:03.09.2023 ರಂದು ನಿಧಾನರಾದರು.

ಅವರು ವಿಜಯಪುರ ಜಿಲ್ಲೆಯಲ್ಲಿ ಈ ಹಿಂದೆ ಅಸ್ತಿತ್ವದಲ್ಲಿದ್ದ ಬಳ್ಳೊಳ್ಳಿ ವಿಧಾನಸಭಾ ಕ್ಷೇತ್ರಕ್ಕೆ (ಈಗಿನ ನಾಗಠಾಣ ಮೀಸಲು ಕ್ಷೇತ್ರ) 1998ರಲ್ಲಿ ನಡೆದ ಉಪ ಚುನಾವಣೆಯಲ್ಲಿ ಸಂಯುಕ್ತ ಜನತಾ ದಳದಿಂದ ಶಾಸಕರಾಗಿ ಆಯ್ಕೆಯಾಗಿದ್ದರು.

**ಆಧಾರ:** ಪ್ರಜಾವಾಣಿ, ದಿನಾಂಕ: 04.09.2023.

## 4. ಬಿ.ಎಸ್.ವಿಶ್ವನಾಥ, ಮಾಜಿ ವಿಧಾನ ಪರಿಷತ್ತಿನ ಸದಸ್ಯರು



ಬಿ.ಎಸ್.ವಿಶ್ವನಾಥ, ಮಾಜಿ ಸದಸ್ಯ (90) ಅವರು ದಿನಾಂಕ: 24.09.2023 ರಂದು ಬೆಂಗಳೂರಿನ ನಿವಾಸದಲ್ಲಿ ನಿಧನರಾದರು. ಅವರು ಹಿರಿಯ ಸಹಕಾರಿ ಧುರೀಣ, ವಿಧಾನ ಪರಿಷತ್ ಮಾಜಿ ಸದಸ್ಯ, ರಾಜ್ಯ ಭೂ ಬ್ಯಾಂಕ್ ಮಾಜಿ ಅಧ್ಯಕ್ಷ, ರಾಷ್ಟ್ರೀಯ ಸಹಕಾರಿ ತರಬೇತಿ ಕೇಂದ್ರದ ಅಧ್ಯಕ್ಷ, ಇಫ್ಕೋ ಸಂಸ್ಥೆಯ ನಿರ್ದೇಶಕರಾಗಿದ್ದರು.

ಅವರು ಎರಡು ಬಾರಿ ವಿಧಾನ ಪರಿಷತ್ ಸದಸ್ಯರಾಗಿದ್ದರು. ತೀರ್ಥಹಳ್ಳಿಯ ಪುರಂದರ ವೇದಿಕೆ ಸ್ಥಾಪಿಸಿ ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸಂಘಟಿಸಿದ್ದರು.

**ಆಧಾರ:** ಪ್ರಜಾವಾಣಿ, ದಿನಾಂಕ: 25.09.2023.

# ಭಾಗ–9

# ಪ್ರಮುಖ ಲೇಖನಗಳು

# 1. ವ್ಯರ್ಥವಾಗದಿರಲಿ ಕ್ಷೇಮವನದ ಪಾಠ

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಂವಿಧಾನದ ಆಶಯಗಳಡಿ ವಿಧಾನ ಮಂಡಲ ರಾಜ್ಯದ ಅಭಿವೃದ್ಧಿ ಸಮಸ್ಯೆಗಳು, ಪರಿಹಾರಗಳ ಬಗ್ಗೆ ಚರ್ಚೆ ಆಗುವ ವೇದಿಕೆ. ಈ ವೇದಿಕೆಯಲ್ಲಿ ಪ್ರಮುಖವಾಗಿ ಚರ್ಚಿಸಬೇಕಿರುವುದು ಕಾನೂನುಗಳು, ನೀತಿ–ನಿಯಮಗಳು, ಜನರ ಜೀವನಮಟ್ಟ ಸುಧಾರಣೆಗೆ ಅಗತ್ಯವಿರುವ ಯೋಜನೆಗಳು. ವಿಶೇಷವಾಗಿ ಈಗಾಗಲೇ ಕಾಲಮಿತಿ ಮೀರಿದ ಕಾನೂನುಗಳನ್ನು ತೆಗೆದು ಹಾಕುವುದು, ಹೊಸದಾಗಿ ಅಗ್ಯವಿರುವುದನ್ನು ರೂಪಿಸುವುದು, ಸಂಪನ್ಮೂಲ ಕ್ರೂಢೀಕರಣದ ಬಗ್ಗೆ ಸಲಹೆ, ರಾಜ್ಯದ ಅಭಿವೃದ್ಧಿ ದೃಷ್ಟಿಯಿಂದ ಯಾವ ಯಾವ ಪ್ರದೇಶಗಳಿಗೆ ಹಾಗೂ ನೀರಾವರಿ, ಕೃಷಿ, ಆರೋಗ್ಯದಂತಹ ಪ್ರಮುಖ ಇಲಾಖೆಗಳಿಗೆ ಅಗತ್ಯಕ್ಕೆ ಅನುಗುಣವಾಗಿ ಸಂಪನ್ಮೂಲ ಹಂಚಿಕೆ ಬಗ್ಗೆ ಚರ್ಚಿಸಬೇಕಿದೆ. ಈ ವ್ಯವಸ್ಥೆಯಲ್ಲಿ ಭ್ರಷ್ಟಚಾರಕ್ಕೆ ಎಡೆಮಾಡಿಕೊಡದಂತೆ ಶಾಸಕರು 'ವಾಚ್ ಡಾಗ್' ರೀತಿ ಕಣ್ಣಿಡಬೇಕು. ಆದರೆ, ಇತ್ತೀಚಿನ ದಿನಗಳಲ್ಲಿ ಶಾಸಕರು ವರ್ಗಾವಣೆ ದಂಧೆಗಿಳಿದು ಶಿಫಾರಸ್ಸು ಪತ್ರಗಳೊಂದಿಗೆ ಸಚಿವರು, ಇಲಾಖೆಗಳ ಕಾರ್ಯದರ್ಶಿಗಳ ಕಚೇರಿ, ನಿವಾಸಗಳತ್ತ ಸುತ್ತುವುದೇ ಹೆಚ್ಚಾಗಿದೆ. ತಮ್ಮ ಕರ್ತವ್ಯಗಳು, ಹಕ್ಕುಗಳು, ಜವಾಬ್ದಾರಿಗಳೇನು ಎಂಬುದನ್ನು ಅರಿಯುವ ಗೋಜಿಗೆ ಹೋಗದೆ ಶಾಸಕರೆಂದರೆ ವರ್ಗಾವಣೆ ಮಾಡಿಸುವುದು, ಗುತ್ತಿಗೆ ಕೊಡಿಸುವುದು, ಕಮಿಷನ್ ಪಡೆಯುವುದು ಎಂಬುದಕ್ಕೆ ಸೀಮಿತವಾದಂತೆ ಕಾಣುತ್ತಿದೆ. ಜನಸಾಮಾನ್ಯರ ಅಭಿಪ್ರಾಯವೂ ಇದೇ ಆಗಿದೆ.

ಗ್ರಾಮ ಪಂಚಾಯಿತಿ, ತಾಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ, ಪಟ್ಟಣ ಪಂಚಾಯಿತಿ, ಪುರಸಭೆ, ನಗರಸಭೆ ಹೀಗೆ ಸ್ಥಳೀಯ ಸಂಸ್ಥೆಗಳಿಗೆ ಕೇಂದ್ರ & ರಾಜ್ಯ ಸರ್ಕಾರಗಳಿಂದ ಲಭ್ಯವಾಗುವ ಸಂಪನ್ಮೂಲ ತರುವುದು, ಸ್ಥಳೀಯ ಸರ್ಕಾರಗಳಿಂದಲೂ ಸಂಪನ್ಮೂಲ ಸಂಗ್ರಹಿಸಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕಾರ್ಯ ರೂಪಕ್ಕೆ ತರುವುದರ ಕಡೆ ಗಮನಹರಿಸಬೇಕಿದೆ. ಅಂದರೆ ರಾಜ್ಯದ ಅಭಿವೃದ್ಧಿ ಹಾಗೂ ಜನರ ಕಲ್ಯಾಣಕ್ಕಾಗಿ ಅಗತ್ಯವಿರುವ ಕಾನೂನುಗಳು, ನೀತಿಗಳನ್ನು ರೂಪಿಸುವುದು ಅವರ ಪ್ರಮುಖ ಜವಾಬ್ದಾರಿ. ಆದರೆ ಸರ್ವರೋಗಕ್ಕೂ ಸಾರಾಯಿ ಮದ್ದು ಎಂಬಂತೆ ಎಲ್ಲಾ ಸಮಸ್ಯೆಗಳಿಗೂ ಶಾಸಕರೇ ಪರಿಹಾರ ಎಂಬ ಚಿಂತೆನ ಹೋಗಬೇಕಿದೆ.

ಈ ನಿಟ್ಟಿನಲ್ಲಿ ಚಿಂತನೆ ಆಗಬೇಕಿರುವುದು ಸಂವಿಧಾನ, ಭಗವದ್ಗೀತೆ, ಬೈಬಲ್, ಕುರಾನ್ನಡಿ ಇರುವ ವಿವಿಧ ಕಾನೂನುಗಳು, ನಿಯಮಗಳನ್ನು ಮನನ ಮಾಡಿಕೊಂಡಾಗ ಮಾತ್ರ ಅನುಪಯುಕ್ತ ಅಥವಾ ಔಟ್ಡೇಟೆಡ್ ಕಾನೂನುಗಳನ್ನು ರಿಪೀಲ್ ಮಾಡಬಹುದು, ಜನಸಾಮಾನ್ಯರ ಬದುಕು ಅರ್ಥಮಾಡಿಕೊಂಡಾಗ ಹೊಸ ಕಾನೂನು ತರುವ ಬಗ್ಗೆ ಚಿಂತನೆ ಮಾಡಬಲ್ಲರು. ವಿಧಾನಸಭೆಗೆ ಹೊಸದಾಗಿ ಆಯ್ಕೆಯಾದವರಿಗೆ ಹಿರಿಯರು, ಅನುಭವಿಗಳು, ಸಂವಿಧಾನ ತಜ್ಞರು, ಸಂಸದೀಯ ಪಟುಗಳು ಪಾಠ ಹೇಳಿಕೊಡಬೇಕು. ಆಗ ಮಾತ್ರ ಭವಿಷ್ಯದ ಉತ್ತಮ ಜನಪ್ರತಿನಿಧಿಗಳನ್ನು ರೂಪಿಸಲು ಸಾಧ್ಯವಾಗುತ್ತದೆ.

**ಕ್ಷೇಮವನದಲ್ಲಿ ಪಾಠ**: ಈ ಸಲ ವಿಧಾನಸಭೆಗೆ ಹೊಸದಾಗಿ ಆಯ್ಕೆಯಾಗಿರುವ ಅಂದರೆ ಇದೇ ಮೊದಲ ಬಾರಿಗೆ ಸದನ ಪ್ರವೇಶಿಸಿರುವ 70ಕ್ಕೂ ಹೆಚ್ಚು ಶಾಸಕರಿಗೆ ತಮ್ಮ ಕರ್ತವ್ಯ, ಹಕ್ಕುಬಾಧ್ಯತೆಗಳು, ಜವಾಬ್ದಾರಿಗಳು, ಸದನದ ಕಾರ್ಯಕಲಾಪಗಳಲ್ಲಿ ನಡವಳಿಕೆ ಹೇಗಿರಬೇಕು ಎಂಬುದರ ಬಗ್ಗೆ ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ನೆಲಮಂಗಲ–ಕುಣಿಗಲ್ ರಸ್ತೆಯಲ್ಲಿರುವ ಧರ್ಮಸ್ಥಳದ 'ಕ್ಷೇಮವನದ'ದಲ್ಲಿ ಮೂರು ದಿನಗಳ ತರಬೇತಿ ಶಿಬಿರ ಏರ್ಪಡಿಸಿದ್ದು ನಿಜಕ್ಕೂ ಶ್ಲಾಘನೀಯ ಹಾಗೂ ಸ್ವಾಗತಾರ್ಹ. ಖಾದರ್ ಅವರೇನೊ ಸದುದ್ದೇಶದಿಂದ ಈ ಶಿಬಿರ ಏರ್ಪಡಿಸಿದ್ದರು, ಆದರೆ ಹಲವು ಶಾಸಕರು ಕೆಡಿಪಿ ಸಭೆ, ಕ್ಷೇತ್ರದಲ್ಲಿನ ಕಾರ್ಯಕ್ರಮಗಳಲ್ಲಿ ಭಾಗಿಯಾಗಿದ್ದೇವೆ ಎಂದು ಹೇಳಿ ತರಬೇತಿಯಿಂದ ದೂರ ಉಳಿದರೆ, ಮತ್ತೆ ಕೆಲವು ಶಾಸಕರ ವರ್ಗಾವಣೆ ಪತ್ರದೊಂದಿಗೆ ವಿಧಾನಸೌಧದ

ಮೂರನೇ ಮಹಡಿಯಲ್ಲಿ ಬ್ಯುಸಿಯಾಗಿದ್ದರು. ಶಾಸಕರು ಈ ನಡವಳಿಕೆ ತರಬೇತಿಗೆ ಬಾರದವರು ಸದನದ ಕಾರ್ಯಕಲಾಪದಲ್ಲಿ ಇಡೀ ದಿನ ಕುಳಿತುಕೊಳ್ಳುವರೇ ಎಂಬ ಅನುಮಾನ ಮೂಡಿದೆ.

ಇತ್ತೀಚಿನ ವರ್ಷಗಳಲ್ಲಿ ಶಾಸನಸಭೆಗೆ ಆಯ್ಕೆಯಾಗುತ್ತಿರುವ ಜನಪ್ರತಿನಿಧಿಗಳಲ್ಲಿ ಹೋರಾಟದಿಂದ ಬಂದವರು ಬಹಳ ವಿರಳ, ಹಲವು ವರ್ಷಗಳ ಹಿಂದೆ ಶಾಸಕರಾಗಬೇಕಿದ್ದರೆ, ಜನರ ಸಮಸ್ಯೆಗಳನ್ನು ಮುಂದಿಟ್ಟುಕೊಂಡು ಹೋರಾಟ ಮಾಡಿ ಪೊಲೀಸರಿಂದ ಲಾಟಿ ಏಟು ತಿಂದು ಪೊಲೀಸ್ ಠಾಣೆ ಮೆಟ್ಟಿಲೇರಿ ಜೈಲು ವಾಸ ಅನುಭವಿಸಿ ಪರಿಪಕ್ವರಾಗಿ ಜನಪರ ಹೋರಾಟಗಾರರಾಗುತ್ತಿದ್ದರು. ಈಗ ಇನ್‌ಸ್ಟೆಂಟ್ ಪೊಲಿಟಿಷಿಯನ್, ಕೈಯಲ್ಲಿ 25 ರಿಂದ 50 ಕೋಟಿ ಹಣವಿದ್ದರೆ, ತಿಂಗಳಲ್ಲಿ ಶಾಸಕರಾಗಬಹುದು ಎಂಬುದು ಈಗಿನ ರಾಜಕಾರಣದ ಲೆಕ್ಕಚಾರ. ರಿಯಲ್ ಎಸ್ಟೇಟ್, ಗಣಿ ಉದ್ಯಮ, ಕ್ಯಾಸಿನೋ, ಪಬ್, ಬಾರ್ ಆಂಡ್ ರೆಸ್ಟೋರೆಂಟ್, ಮೀಟರ್ ಬಡ್ಡಿ ವ್ಯವಹಾರಿಗಳು, ನೂರಾರು ಕೋಟಿ ರೂ.ಗಳ ಸರ್ಕಾರಿ ಕಾಮಗಾರಿ ನಡೆಸುವ ಸಿವಿಲ್ ಕಂಟ್ರಾಕ್ಟರ್‌ಗಳೇ ಸದನದ ಒಳಗಡೆ ಕುಳಿತಿದ್ದಾರೆ. ಹೀಗಾಗಿ ಇವರಿಗೆ ಜನಪರ ಕಾಳಜಿಯೂ ಇಲ್ಲ. ಸದನದ ಮಹತ್ವವೂ ಗೊತ್ತಿಲ್ಲ ಇನ್ನು ಸದನದ ಕಾರ್ಯಕಲಾಪಗಳ ನಿಯಮಗಳ ಗಂಧಗಾಳಿಯೂ ತಿಳಿದಿಲ್ಲ. ಇವೆಲ್ಲವನ್ನು ಅರಿತೇ ಸಭಾಧ್ಯಕ್ಷರು ಹೊಸಬರಿಗೆ ಪಾಠ ಹೇಳಿಕೊಟ್ಟಿದ್ದಾರೆ. ಆದರೆ ಆ ಪಾಠ ಸದನದಲ್ಲಿ ವ್ಯರ್ಥವಾಗದೆ ಸದ್ಬಳಕೆಯಾಗಬೇಕಿದೆ.

**ಮೊಗಸಾಲೆ ವೀರರೇ ಹೆಚ್ಚು:** ಕೋರಂ ಬೆಲ್ ಬಾರಿಸಿದರೂ ಕೋರಂ ಅಭಾವದಿಂದ ಸದನ ತಡವಾಗಿ ಆರಂಭ, ಕೋರಂ ಇಲ್ಲದೆ ಸದನ ಮುಂದೂಡಿಕೆ, ಗಮನ ಸೆಳೆಯುವ ಸೂಚನೆ, ಪ್ರಶ್ನೋತ್ತರ ಕಲಾಪದಲ್ಲಿ ಪ್ರಶ್ನೆ ಕೇಳಿದ ಸದಸ್ಯರೇ ಗೈರು, ಉತ್ತರಿಸಬೇಕಾದ ಸಚಿವರು ಗೈರು, ಕಾನೂನುಗಳ ತಿದ್ದುಪಡಿ ವಿಧೇಯಕದ ಚರ್ಚೆ ಹಾಗೂ ಅಂಗೀಕಾರದ ವೇಳೆಯಲ್ಲೂ ಸದಸ್ಯರ ಹಾಜರಾತಿ ಕಡಿಮೆ, ವಿಧೇಯಕ ಅಂಗೀಕಾರ ವೇಳೆ ಸದಸ್ಯರನ್ನು ಬಲವಂತವಾಗಿ ಒಳಗಡೆ ಕೂರಿಸುವುದು ಇಲ್ಲವೇ ಕರೆತರುವುದು ಇತ್ತೀಚಿನ ಕಲಾಪಗಳ ಸಂದರ್ಭದಲ್ಲಿ ಮಾಮೂಲಿಯಾಗಿದೆ.

ಒಳಗಡೆ ಕಲಾಪ ನಡೆಯುತ್ತಿದ್ದರೂ ಶಾಸಕರು–ಸಚಿವರು ಮೊಗಸಾಲೆಯಲ್ಲಿ ಪತ್ರಕರ್ತರು ಇಲ್ಲವೇ ಆಪ್ತ ಶಾಸಕರೊಂದಿಗೆ ಕಾಫಿ ಕುಡಿಯುತ್ತಾ ಹರಟುವುದು ಸಹ ಸಾಮಾನ್ಯವಾಗಿದೆ. ಸಚಿವರ ಗೈರುಹಾಜರಿಗೆ ಪ್ರತಿಪಕ್ಷಗಳು ಆಕ್ಷೇಪಿಸಿದಾಗ ಸಭಾಧ್ಯಕ್ಷರ ಸೂಚನೆ ಮೇರೆಗೆ ಆಡಳಿತ ಪಕ್ಷದ ಸರ್ಕಾರಿ ಮುಖ್ಯ ಸಚೇತಕರು, ಶಾಸಕರು ಹಾಗೂ ಸಚಿವರನ್ನು ಮೊಗಸಾಲೆಗೆ ಹುಡುಕಿಕೊಂಡು ಬಂದು ಒಳಗಡೆ ಕರೆದುಕೊಂಡು ಹೋಗುವುದು ಸರ್ವೇ ಸಾಮಾನ್ಯ. ಮೊಗಸಾಲೆಯಲ್ಲೇ ಮಾತಿನ ವೀರರಾಗಿ ಮಿಂಚಿ ಮರೆಯಾಗಿದ್ದು ಉಂಟು. ಇನ್ನು ಕೆಲವರು ಮೊಗಸಾಲೆಗೆ ಬಂದು ಹಾಜರಾತಿ ಪುಸ್ತಕಕ್ಕೆ ಸಹಿ ಹಾಕಿ ಅಲ್ಲೇ ಕಾಫಿ ಕುಡಿದು ಒಂದಷ್ಟು ಹರಟೆಯೊಂದಿಗೆ ಕಾಲ್ಕಿತ್ತದ್ದೂ ಇದೆ. ಹೀಗೆ ಸದನದ ಮಹತ್ವ ಅರಿಯದ ಜನಪ್ರಿನಿಧಿಗಳೇ ಹೆಚ್ಚಿರುವುದರಿಂದ ಸಭಾಧ್ಯಕ್ಷರ ಮೇಲೆ ಈಗ ಹೆಚ್ಚಿನ ಜವಾಬ್ದಾರಿ ಇದೆ.

ಸದಸ್ಯರು ಸದನದ ಒಳಗೆ ಹೆಚ್ಚು ಕಾಲ ಕುಳಿತುಕೊಳ್ಳುವುದು, ಕಲಾಪ ಯಾವ ರೀತಿ ನಡೆಯುತ್ತದೆ ಎಂಬುದನ್ನು ಕೇಳಿಸಿಕೊಳ್ಳುವುದು ನಂತರ ಮಾತನಾಡುವುದು ಈ ಮೂರು ಗುಣಗಳನ್ನು ಅಳವಡಿಸಿಕೊಂಡರೆ ಮಾತ್ರ ಅವರಿಗೆ ಶಾಸನ ಸಭೆಯ ನಿಯಮಾವಳಿಗಳು ಅರ್ಥವಾಗುತ್ತವೆ. ಸಂವಿಧಾನದ ವಿಧಿಗಳ ಜೊತೆಗೆ ಕಲಾಪದ ನಿಯಮಾವಳಿಗಳು, ಶೂನ್ಯವೇಳೆ ಅಂದರೇನು? ಪ್ರಶ್ನೋತ್ತರ ಕಲಾಪ, ಉಪ ಪ್ರಶ್ನೆಗಳು, ಪ್ರಶ್ನೆ ಯಾವ ರೀತಿ, ಯಾವ ಸಂದರ್ಭದಲ್ಲಿ ಕೇಳಬೇಕು? ಕಾನೂನು ರಚನೆಯಲ್ಲಿ ತಮ್ಮ ಪಾತ್ರವೇನು? ವಿವಿಧ ಸಮಿತಿಗಳ ಜವಾಬ್ದಾರಿಗಳೇನು? ರಾಜ್ಯದ ಹಣಕಾಸು ಸ್ಥಿತಿಗತಿ, ರಾಷ್ಟ್ರೀಯತೆ ಹೀಗೆ ಹತ್ತು ಹಲವು ವಿಚಾರಗಳ ಮಾಹಿತಿಗಳು ತಿಳಿಯುತ್ತವೆ. ಇಲ್ಲದಿದ್ದರೆ 'ಮಾತಿನ ಮನೆ'ಗೆ ಶಾಸಕರು ಹೋದ ಪುಟ್ಟ–ಬಂದ ಪುಟ್ಟ ಎಂಬಂತೆ ಆಗುತ್ತದೆ. ಉತ್ತಮ ವಾಗ್ಮಿಗಳು, ಸಂಸದೀಯ ಪಟುಗಳಾಗಬೇಕಾದರೆ ಶಾಸಕರ ಎರಡೂ ಕಿವಿಗಳು ಸದಾ ತೆರೆದಿರಬೇಕು.

ರಾಜ್ಯ ವಿಧಾನಸಭೆಗೆ ಧೀರ್ಘ ಇತಿಹಾಸವಿದ್ದು ತನ್ನದೇ ಪರಂಪರೆ, ಗೌರವವನ್ನು ಕಾಪಾಡಿಕೊಂಡಿದೆ. ರಾಜ್ಯ ಹಾಗೂ ದೇಶಕ್ಕೆ ಪ್ರತಭಾವಂತ, ಮೌಲ್ಯಾಧಾರಿತ ರಾಜಕಾರಣಿಗಳ ಕೊಡುಗೆ

ನೀಡಿದೆ. ಅದರಲ್ಲೂ ವಿಶೇಷವಾಗಿ ವಿಧಾನಸಭಾಧ್ಯಕ್ಷರಾಗಿ ವೈಕುಂಠ ಬಾಳಿಗಾ, ಕೆ.ಎಸ್, ನಾಗರತ್ನಮ್ಮ, ಕೆ.ಎಚ್.ರಂಗನಾಥ, ಡಿ.ಬಿ.ಚಂದ್ರೇಗೌಡ, ಎಸ್.ಎಂ.ಕೃಷ್ಣ, ಕಾಗೋಡು ತಿಮ್ಮಪ್ಪ ಅವರಂತಹವರು ತಮ್ಮದೇ ಹೆಜ್ಜೆ ಗುರುತುಗಳನ್ನು ಬಿಟ್ಟು ಹೋಗಿದ್ದಾರೆ. ಈಗಿನ ಸಭಾಧ್ಯಕ್ಷ ಖಾದರ್ ಹಿರಿಯರು ಅಲ್ಲ; ಕಿರಿಯರು ಅಲ್ಲ, ಮಧ್ಯ ವಯಸ್ಸಿನ ಅನುಭವಿಯಂತೂ ಹೌದು, ಯಾರು ಬೇಕಾದರೂ ಶಾಸಕರಾಗಬಹುದು ಸಚಿವರಾಗಬಹುದು, ಆದರೆ ಎಲ್ಲರೂ ಸಭಾಧ್ಯಕ್ಷರಾಗಲು ಸಾದ್ಯವಿಲ್ಲ. ಈ ಅವಕಾಶ ಖಾದರ್ಗೆ ದೊರೆತಿದೆ. ಅವರು ಸಹ ಹಿರಿಯರಿಂದ ಕಲಿತು ಕಿರಿಯರಿಗೆ ಮಾರ್ಗದರ್ಶಕರಾದರೆ ಮುಂದೊಂದು ದಿನ ಖಾದರ್ ಹೆಸರು ಸಹ ಸದನದಲ್ಲಿ ಪ್ರಸ್ತಾವಾಗಬಹುದು. ಇಲ್ಲದೇ ಹೋದರೆ ಕುರ್ಚಿ ಖಾಲಿ ಮಾಡಿದ ದಿನವೇ ಕಳೆದು ಹೋಗುತ್ತಾರೆ.

**60 ದಿನ ಕಲಾಪ:** ವರ್ಷಕ್ಕೆ 60 ದಿನ ಕಡ್ಡಾಯವಾಗಿ ಅಧಿವೇಶನ ನಡೆಯಬೇಕೆಂದು ಶಾಸಕರೇ ಕಾನೂನು ಮಾಡಿಕೊಂಡಿದ್ದರೂ ಇತ್ತೀಚಿನ ವರ್ಷಗಳಲ್ಲಿ 60 ದಿನ ಕಲಾಪ ನಡೆದ ಉದಾಹರಣೆ ಇಲ್ಲ. ಹೀಗಾಗಿ ಈ ಕಾನೂನು ಕೇವಲ ಪುಸ್ತಕ ರೂಪದಲ್ಲಿ ಇದೆಯೇ ಹೊರತು, ಕಾರ್ಯ ರೂಪಕ್ಕೆ ಬಂದಿಲ್ಲ ಕಲಾಪ ನಡೆಯುವುದರಿಂದ ಸರ್ಕಾರದ ವೈಫಲ್ಯಗಳನ್ನು ಬೊಟ್ಟುಮಾಡಿ ತೋರಿಸಿ ಆಡಳಿತ ಯಂತ್ರಕ್ಕೆ ಚುರುಕು ಮುಟ್ಟಿಸಲು ಪ್ರತಿಪಕ್ಷಗಳಿಗಿರುವ ಸುವರ್ಣ ಅವಕಾಶ. ಅದೇ ರೀತಿ ಆಡಳಿತದಲ್ಲಿನ ಲೋಪಗಳನ್ನು ಸರಿಪಡಿಸಿಕೊಳ್ಳಲು ಸರ್ಕಾರಕ್ಕೆ ಇದೊಂದು ಅವಕಾಶ. ಆದರೆ ಈ ವರ್ಷದಲ್ಲಿ ಆಡಳಿತ–ಪ್ರತಿಪಕ್ಷಗಳು ಒಂದೇ. ಯಾರಿಗೂ ಸದನ 60 ದಿನ ನಡೆಯುವುದು ಬೇಕಿಲ್ಲ. ಪ್ರತಿಪಕ್ಷದಲ್ಲಿ ಇದ್ದಾಗ ಅಧಿವೇಶನ ಕರೆಯಬೇಕೆಂದು ಬೊಬ್ಬೆ ಹಾಕಿದರೆ ಆಡಳಿತ ಪಕ್ಷಕ್ಕೆ ಬಂದ ಬಳಿಕ ಅಧಿವೇಶನ ಕರೆಯುವುದು, ಕಲಾಪ ಮೊಟಕುಗೊಳಿಸಿ ಹೋಗುವುದು ಸಾಮಾನ್ಯವಾಗಿದೆ. ಅಂದರೆ ದೀರ್ಘ ಕಾಲ ಸದನ ನಡೆಯುವುದು ಯಾರಿಗೂ ಬೇಡವಾಗಿದೆ. ನೀನು ಚಿವುಟು–ನಾನು ಅಳುತ್ತೇನೆ ಎಂಬುದು ಆಡಳಿತ–ಪ್ರತಿಪಕ್ಷಗಳ ಒಗ್ಗಟ್ಟಿನ ಒಂದೇ ತಂತ್ರಗಾರಿಕೆ ಹೀಗಾಗಿ ಸಭಾಧ್ಯಕ್ಷ ಖಾದರ್ ಸದನದ ಎರಡೂ ಕಡೆ (ಆಡಳಿತ–ಪ್ರತಿಪಕ್ಷ) ಇದ್ದ ಅನುಭವ ಇರುವುದರಿಂದ ವರ್ಷಕ್ಕೆ 60 ದಿನ ಕಲಾಪ ನಡೆಸುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನ ನಡೆಸಿ ಮೇಲ್ಪಂಕ್ತಿಯಾಗಲಿ.

ಆಧಾರ: ಉದಯವಾಣಿ, ದಿನಾಂಕ: 03.07.2023.

## 2. ಶಿಕ್ಷಕರು ಅರ್ಜಿ ಹಾಕಿ ಪ್ರಶಸ್ತಿ ಪಡೆಯಬೇಕೆ

ಶಿಕ್ಷಕರು ಅರ್ಜಿ ಹಾಕಿ ಉತ್ತಮ ಶಿಕ್ಷಕ ಪ್ರಶಸ್ತಿ ಪಡೆಯಬೇಕಾ ಎಂಬ ವಿಷಯ ನನ್ನನ್ನು ಹಲವು ದಶಕಗಳಿಂದ ಇದು ಸರಿನಾ ಎಂದು ಕಾಡುತ್ತಿದೆ. ಈ ಸಂಗತಿ ಕುರಿತು ನನ್ನ ಹಲವು ಮನದಾಳದ ಮಾತುಗಳನ್ನು ಹೇಳಬೇಕೆನಿಸುತ್ತಿದೆ. ನಾಲ್ಕು ದಶಕಗಳಿಂದ ಶಿಕ್ಷಣ ಕ್ಷೇತ್ರದಲ್ಲಿ ನಾನು ಇದ್ದರೂ ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಆಗಲಿಲ್ಲವೆಂಬ ಕೊರಗು ಸಹ ನನಗಿದೆ.

ಈ ವಿಷಯವಾಗಿ ನಾನು ಶಿಕ್ಷಣ ಸಚಿವನಾಗಿದ್ದಾಗ ಸಾಕಷ್ಟು ಪ್ರಾಮಾಣಿಕ ಪ್ರಯತ್ನ ಮಾಡಿದ್ದೆ ಅದು ಸಾಧ್ಯವಾಗಲಿಲ್ಲ. ಸಾಕಷ್ಟು ಮೆರಿಟ್ ಇರತಕ್ಕಂತಹ ಶಿಕ್ಷಕರನ್ನು ಆಯ್ಕೆ ಮಾಡಲು ವಿಶ್ವವಿದ್ಯಾಲಯದ ನಿವೃತ್ತ ಕುಲಪತಿಗಳ ನೇತೃತ್ವದಲ್ಲಿ ತಜ್ಞರ ಸಮಿತಿ ರಚಿಸಿ ಆಯ್ಕೆ ಕುರಿತು ಮಾನದಂಡಗಳನ್ನು ರಚಿಸಲು ಟಿಪ್ಪಣಿ ಸಹ ಹೊರಡಿಸಿದ್ದನ್ನು ಇಲ್ಲಿ ನೆನಪಿಸಿಕೊಳ್ಳುತ್ತೇನೆ. ಆ ಕೆಲಸ ಪೂರ್ಣಗೊಳ್ಳದೇ ಇರುವುದು ನನ್ನನ್ನು ಇನ್ನೂ ಕಾಡುತ್ತಿದೆ. ಈಗಂತೂ ಪ್ರಸ್ತುತ ಪದ್ಧತಿಯಿಂದ ಸಾಕಷ್ಟು ಅವಾಂತರಗಳು, ಟೀಕೆ ಟಿಪ್ಪಣಿಗಳು, ಪ್ರಶಸ್ತಿಯ ಮೌಲ್ಯ, ಮಹತ್ವ ಕುರಿತು ಸಾಕಷ್ಟು ಚರ್ಚೆಯಾಗುತ್ತಿರುವುದು ಸಹ ವಿಷಾದದ ಸಂಗತಿ.

ಶಿಕ್ಷಕನೆಂದರೆ ಶಿವಸ್ವರೂಪಿ, ಕ್ಷಮಾವಂತ ಜೊತೆಗೆ ಮಕ್ಕಳ ಮನದಲ್ಲಿ ಕಲಿಕೆಯನ್ನು ಬಿತ್ತಿ ಅವರ ಬಾಳಿನಲ್ಲಿ ಬೆಳಕು ಮೂಡಿಸುವವನು ಎಂದ ಅರ್ಥ. ಶಿಕ್ಷಕನಿಗೆ ಇನ್ನೊಂದು ಹೆಸರೂ ಇದೆ ಗುರು

ಎಂದು. ಗುರು ಎನ್ನುವ ಪದದಲ್ಲಿ ಗು–ಎಂದರೆ ಕತ್ತಲೆ, ಅಜ್ಞಾನ. ರು–ಎಂದರೆ ಕತ್ತಲೆ ಕಳೆದು ಅಜ್ಞಾನವನ್ನು ಹೊಡೆದೋಡಿಸಿ ವಿದ್ಯಾರ್ಥಿಯ ಬದುಕಿನಲ್ಲಿ ಬೆಳಕನ್ನು ಮೂಡಿಸುವವನೆ ಗುರು. ಅದಕ್ಕಾಗಿಯೆ ನಮ್ಮ ಹಿರಿಯರು "ಗುರು ಬ್ರಹ್ಮ, ಗುರು ವಿಷ್ಣು, ಗುರುದೇವೋ ಮಹೇಶ್ವರ, ಗುರು ಸಾಕ್ಷತ್ ಪರಬ್ರಹ್ಮ ತಸ್ಮೈಶ್ರೀ ಗುರುವೇ ನಮ:" ಎಂದು ಹೇಳಿರುವುದು. ಗುರುವಾದವನಿಗೆ ಯಾವಾಗಲೂ ತನ್ನ ಶಿಷ್ಯನ ಉದ್ಧಾರದ ಚಿಂತೆ ಇದ್ದೇ ಇರುತ್ತದೆ. ಶಿಷ್ಯ ತನ್ನನ್ನೂ ಮೀರಿ ಬೆಳೆದಾಗಲೆ ಗುರುವಿಗೆ ಸಮಾಧಾನ ಮತ್ತು ಸಂತೋಷವಾಗುತ್ತದೆ.

ಇಂತಹ ಗುರುವಿಗೆ ಪ್ರತಿ ವರ್ಷದ ಶಿಕ್ಷಕ ದಿನಾಚರಣೆಯ ಹಿನ್ನೆಲೆಯಲ್ಲಿ ಉತ್ತಮ ಶಿಕ್ಷಕ ಪ್ರಶಸ್ತಿಯನ್ನು ರಾಷ್ಟ್ರ ಮಟ್ಟದಿಂದ ಹಿಡಿದು, ತಾಲೂಕು ಮಟ್ಟದವರೆಗೂ ನೀಡಿ ಗೌರವಿಸಲಾಗುತ್ತಿದೆ. ಆದರೆ, ಪ್ರಶಸ್ತಿ ನೀಡುವ ಮಾನದಂಡಗಳ ಬಗ್ಗೆ ಯೋಚಿಸಬೇಕಿದೆ. ಏಕೆಂದರೆ ತಾನೊಬ್ಬ ಉತ್ತಮ ಶಿಕ್ಷಕನೆಂದು ತಾನೇ ಅರ್ಜಿ ಹಾಕಿ ಪ್ರಶಸ್ತಿ ಪಡೆಯಬೇಕಾದ ಅನಿವಾರ್ಯ ಪದ್ಧತಿ ಶಿಕ್ಷಣ ಕ್ಷೇತ್ರದಲ್ಲಿ ಹಲವು ದಿನಗಳಿಂದ ಇರುವುದು ಬಹಳಷ್ಟು ಬೇಸರದ ಸಂಗತಿಯಾಗಿದೆ. ಈ ಪದ್ಧತಿ ಇಂದು ಸಾಕಷ್ಟು ಚರ್ಚೆಗೆ ಕಾರಣವಾಗಿದೆ.

ಇಲ್ಲಿ ಒಂದು ಪ್ರಶ್ನೆ ಎದುರಾಗುತ್ತದೆ. ಉತ್ತಮ ಪ್ರಶಸ್ತಿ ಪಡೆದವರು ಮಾತ್ರ ಉತ್ತಮ ಶಿಕ್ಷಕರು ಉಳಿದವರಾರೂ ಉತ್ತಮ ಶಿಕ್ಷಕರಲ್ಲವೆ? ಅಂಥವರು ತಾವಾಯಿತು, ತಮ್ಮ ಕೆಲಸವಾಯಿತು ಎಂದು ಸುಮ್ಮನೆ ಇರುವ ಶಿಕ್ಷಕರೆ ಹೆಚ್ಚು. ಅವರು ಯಾವ ಅರ್ಜಿಯನ್ನೂ ಹಾಕುವ ಗೋಜಿಗೆ ಹೋಗುವುದಿಲ್ಲ. ಹಾಗೆಂದು ಅವರು ಉತ್ತಮರಲ್ಲವೆ ಎಂಬ ಪ್ರಶ್ನೆ ಸಹಜವಾಗಿ ಮೂಡುತ್ತದೆ.

ಪ್ರಶಸ್ತಿಗೆ ಅರ್ಜಿ ಹಾಕುವ ಮಾನದಂಡವನ್ನು ನಿರ್ಧರಿಸಿರುವ ಸರಕಾರ ಆದಷ್ಟು ಸಮಪರ್ಕವಾಗಿ ಅರ್ಜಿಗಳನ್ನು ವಿಲೇವಾರಿ ಮಾಡುತ್ತದೆ? ಅರ್ಜಿ ಹಾಕಿದ ಶಿಕ್ಷಕರ ಶಾಲೆಗೆ ಭೇಟಿ ನೀಡಿ ಅವರು ಅರ್ಹರೋ ಅಲ್ಲವೋ ಎಂಬುದನ್ನು ಗಮನಿಸಿದ್ದಾರೆಯೇ? ಅರ್ಜಿ ಬಂತು, ಮೇಲಿಂದ ದೂರವಾಣಿ ಕರೆ ಬಂತು ಎಂದು ಪ್ರಶಸ್ತಿ ನೀಡಿದ ಉದಾಹರಣೆಗಳನ್ನು ನಾವು ಸಾಕಷ್ಟು ಕಂಡಿದ್ದೇವೆ; ಕಾಣುತ್ತಿದ್ದೇವೆ. ಬಹಳಷ್ಟು ಸಾರಿ ಪ್ರಶಸ್ತಿಯ ಮಾನ ದಂಡವೇನು ಎಂದು ಯೋಚಿಸಿದರೆ ಮಾನವೇ ದಂಡ ಎನ್ನುವ ಉತ್ತರ ಸಿಗುತ್ತದೆ.

ಶಿಕ್ಷಕರೆಂದರೆ ಸ್ವಾಭಿಮಾನಿಗಳು, ತಮ್ಮ ಗೌರವಕ್ಕೆ ಚ್ಯುತಿ ಬರುತ್ತದೆ ಎಂದರೆ ಅವರು ಯಾರ ಮುಂದೂ ಪ್ರಶಸ್ತಿಗಾಗಿ ಕೈ ಚಾಚುವವರಲ್ಲ. ಮಕ್ಕಳಲ್ಲಿ ಸ್ವಾಭಿಮಾನ, ಕೆಚ್ಚು ಮತ್ತು ಪ್ರಾಮಾಣಿಕತೆಯ ಗುಣಗಳನ್ನು ಕಲಿಸುವವರೆ ಶಿಕ್ಷಕರು. ಹೀಗಾಗಿ ಸರಕಾರ ಅರ್ಜಿ ಕರೆದ ಮಾತ್ರಕ್ಕೆ ಎಲ್ಲ ಶಿಕ್ಷಕರೂ ಅರ್ಜಿ ಹಾಕುತ್ತಾರೆ ಎಂಬುದನ್ನು ನಿರೀಕ್ಷಿಸುವುದು ತಪ್ಪು.

**ಉತ್ತಮ ಶಿಕ್ಷಕರ ಆಯ್ಕೆ ಪ್ರಕ್ರಿಯೆ ಹೀಗಿರಲಿ:**

ಪ್ರಶಸ್ತಿಗಾಗಿ ಅರ್ಜಿ ಹಾಕುವವರ ಸಂಖ್ಯೆ ತೀರಾ ವಿರಳವಾಗಿದೆ. ಅರ್ಜಿಗಳು ನಿರೀಕ್ಷಿತ ಮಟ್ಟದಲ್ಲಿ ಬಾರದೆ ಇದ್ದಾಗ ಇದ್ದವರಲ್ಲಿಯೇ ಆಯ್ಕೆ ಮಾಡುತ್ತಾರೆ. ತಮಗೆ ಉತ್ತಮ ಎನಿಸುವ ವ್ಯಕ್ತಿಗೆ ಪ್ರಶಸ್ತಿ ಕೊಟ್ಟು ಕೈತೊಳೆದುಕೊಂಡು ಮತ್ತೆ ಮುಂದಿನ ವರ್ಷದ ಪ್ರಕ್ರಿಯೆಗಾಗಿ ಕಾಯುತ್ತಾರೆ. ಇದರಿಂದ ಉತ್ತಮ ಶಿಕ್ಷಕ ಪ್ರಶಸ್ತಿಯು ತನ್ನ ಗೌರವ, ಘನತೆಗಳನ್ನು ಕಳೆದುಕೊಳ್ಳುತ್ತಿದೆಯೇ ಎಂದು ಯೋಚಿಸಬೇಕಾಗಿದೆ.

ಈಗ ಯಾರಾದರೂ ನನಗೆ ಉತ್ತಮ ಶಿಕ್ಷಕ ಪ್ರಶಸ್ತಿ ಬಂದಿದೆ ಎಂದು ಹೇಳಿದರೆ ಅವರನ್ನು ಅನುಮಾನದಿಂದ ನೋಡುವಂತಾಗಿದೆ. ಇದಕ್ಕೆ ಅರ್ಹ ಶಿಕ್ಷಕರೂ ಹೊರತಾಗಿಲ್ಲ. ಇವರು ಉತ್ತಮ ಪ್ರಶಸ್ತಿ ಪುರಸ್ಕೃತರಾದರೆ ಸಾಕೆ? ಮಕ್ಕಳಿಂದ ಉತ್ತಮ ಶಿಕ್ಷಕ ಎನ್ನಿಸಿಕೊಳ್ಳುವುದು ಯಾವಾಗ ಎಂಬ ಪ್ರಶ್ನೆಯೂ ಮೂಡುತ್ತದೆ.

ದಂಪತಿಗಳಿಬ್ಬರೂ ಶಿಕ್ಷಕರಾಗಿದ್ದರೆ, ತನಗೂ ತನ್ನ ಹೆಂಡತಿಗೂ ಒಂದೊಂದು ಪ್ರಶಸ್ತಿ ನೀಡಿ ಎಂದು ಅಧಿಕಾರಿಗಳ, ರಾಜಕಾರಣಿಗಳ ದಂಬಾಲು ಬಿದ್ದವರಿಗೇನೂ ಕೊರತೆಯಿಲ್ಲ. ಅಂಥವರು ಅಧಿಕಾರಿಗಳ, ರಾಜಕಾರಣಿಗಳ ಮರ್ಜಿ ಪಡೆದುಕೊಂಡು ಪ್ರಶಸ್ತಿ ಪಡೆದ ಉದಾಹರಣೆಗಳು ಇತ್ತೀಚೆಗೆ ಹೆಚ್ಚಾಗುತ್ತಿದೆ ಎಂಬ ನೋವು ಸಹ ನನಗಿದೆ. ಈಗಲಾದರೂ ಶಿಕ್ಷಣ ಇಲಾಖೆ ಅರ್ಜಿ ಹಾಕಿಸಿಕೊಂಡು ಪ್ರಶಸ್ತಿ ನೀಡುವ ಕ್ರಮವನ್ನು ಕೈ ಬಿಡಬೇಕು ಎಂಬುದು ನನ್ನ ಒತ್ತಾಸೆಯಾಗಿದೆ.

ಶಿಕ್ಷಣ ಇಲಾಖೆ ಅರ್ಜಿಗಳನ್ನು ಅಹ್ವಾನಿಸಿ ಪ್ರಶಸ್ತಿ ನೀಡುವ ಕ್ರಮವನ್ನು ಕೈ ಬಿಡಬೇಕು. ಸೆಪ್ಟೆಂಬರ್ ತಿಂಗಳಿಗೆ ಎರಡು ಮೂರು ತಿಂಗಳ ಮುಂಚೆ ಶಾಲೆಗಳಿಗೆ ಭೇಟಿ ನೀಡಿ ಅಲ್ಲಿ ಯಾರು ಸಮರ್ಪಕ ಕಾರ್ಯ ನಿರ್ವಹಿಸುತ್ತಾರೆ, ಶಾಲಾ ಮಕ್ಕಳೊಂದಿಗೆ ಅವರು ಹೇಗೆ ನಡೆದುಕೊಳ್ಳುತ್ತಾರೆ, ಅವರ ಚರಿತ್ರೆ ಮತ್ತು ಚಾರಿತ್ರ್ಯ ಏನು? ಪಾಠದ ಜೊತೆಗೆ ಅವರು ಪಾಠೋಪಕರಣಗಳನ್ನು ಬಳಸಿ ಪಾಠ ಮಾಡುತ್ತಾರೆಯೋ, ಪ್ರಯೋಗಗಳನ್ನು ಮಾಡಿಸುವ ಮೂಲಕ ಭೋಧನೆ ಮಾಡುತ್ತಾರೆಯೋ ವಿದ್ಯಾರ್ಥಿಗಳ ಪಾಲಕರೊಂದಿಗೆ ಅವರ ಸಂಬಂಧ ಹೇಗಿದೆ, ಸಮಾಜದಲ್ಲಿನ ಸಮುದಾಯದೊಂದಿಗೆ ಅವರ ಒಡನಾಟ ಹೇಗಿದೆ, ಅವರ ವಿಷಯದಲ್ಲಿ ಐದು ವರ್ಷಗಳ ಹಿಂದಿನ ಫಲಿತಾಂಶದ ಸಾಧನೆ ಏನು ಎಂಬಿತ್ಯಾದಿ ವಿಷಯಗಳ ಪಟ್ಟಿ ಮಾಡಿಕೊಂಡು ಸಮೀಕ್ಷೆ ಮಾಡಿ ತಾವೇ ಸ್ವತ: ಗುರುತಿಸಿ ಪ್ರಶಸ್ತಿ ನೀಡಿದರೆ ಪ್ರಶಸ್ತಿಗೊಂದು ಗೌರವ ಸಿಗುತ್ತದೆ. ಘನತೆ ಬರುತ್ತದೆ. ಎಂಬ ಭಾವನೆ ನನ್ನದು.

ಶಿಕ್ಷಣ ಇಲಾಖೆಯಲ್ಲಿ ಇರುವ ಪ್ರಾಮಾಣಿಕ, ಪಾರದರ್ಶಕ ಅಧಿಕಾರಿಗಳನ್ನು ಇಲ್ಲವೇ ನಿವೃತ್ತರಾದ ಮುಖ್ಯೋಪಾಧ್ಯಾಯರುಗಳನ್ನು ಬಳಸಿಕೊಂಡು ಜಿಲ್ಲೆಯಲ್ಲಿನ, ತಾಲ್ಲೂಕದಲ್ಲಿರುವ ಶಾಲೆಗಳಿಗೆ ಕಳುಹಿಸಿ ಸಮೀಕ್ಷೆ ಮಾಡಿಕೊಂಡು ಬರಲು ತಿಳಿಸಬೇಕು. ಈ ಕಾರ್ಯ ಪ್ರತಿ ವರ್ಷದ ಜೂನ್ ತಿಂಗಳಿನಿಂದ ಪ್ರಾರಂಭವಾಗಿ ಆಗಸ್ಟ್ 15ರೊಳಗೆ ಮುಗಿಸಬೇಕು. ನಂತರ ತಾವು ತಂದ ಮಾಹಿತಿಗಳನ್ನು ಕಲೆ ಹಾಕಿ ಅದಕ್ಕೆಂದೇ ಇರುವ ಆಯ್ಕೆ ಸಮಿತಿ ಮುಂದೆ ಇರಿಸಿ ಸೂಕ್ತ ತೀರ್ಮಾನವನ್ನು ತೆಗೆದುಕೊಂಡು ಪ್ರಶಸ್ತಿ ನೀಡಿದರೆ ಅರ್ಹರಿಗೆ ಪ್ರಶಸ್ತಿ ದೊರೆತು ಆ ಪ್ರಶಸ್ತಿಗೊಂದು ಗೌರವ, ಘನತೆ ತಾನೇ ತಾನಾಗಿ ಬರುತ್ತದೆ. ಇಲ್ಲವಾದರೆ ಅಂತೂ ನೀನೂ ಪ್ರಶಸ್ತಿಯನ್ನು ಪಡೆದೆಯಾ ಎನ್ನುವ ಬದಲು ಹೊಡೆದುಕೊಂಡೆಯಾ? ಎಂಬ ಮಾತೆ ಎಲ್ಲೆಡೆ ಕೇಳಿಬರುತ್ತದೆ. ಎಷ್ಟೋ ಶಿಕ್ಷಕರು ಅರ್ಜಿ ಹಾಕದೇ ಪ್ರಶಸ್ತಿ ಪಡೆದುಕೊಂಡಿದ್ದು ಉಂಟು. ಇನ್ನಾದರೂ ಶಿಕ್ಷಣ ಇಲಾಖೆ ನನ್ನ ಕೆಲ ಚಿಂತನೆಗಳನ್ನು ವಿಚಾರಗಳನ್ನು ಆಲಿಸಿ ಅರ್ಹರಿಗೆ ಪ್ರಶಸ್ತಿ ನೀಡಲು ಮುಂದಾಗಬೇಕು ಇದರಿಂದಾಗಿ ಕನಿಷ್ಟ ಶೇ.70 ರಿಂದ 80 ರಷ್ಟಾದರೂ ಪಾರದರ್ಶಕ ಆಯ್ಕೆಯಿಂದ ಹೆಚ್ಚೆಚ್ಚು ಉತ್ತಮ ಶಿಕ್ಷಕರ ಆಯ್ಕೆ ಆಗಬಹುದು ಎಂಬ ಅನಿಸಿಕೆ ಸಹ ನನ್ನದು.

ಲೇಖಕರು: ಬಸವರಾಜ ಎಸ್ ಹೊರಟ್ಟಿ, ವಿಧಾನ ಪರಿಷತ್ ಸಭಾಪತಿಗಳು.

ಆಧಾರ: ಸಂಯುಕ್ತ ಕರ್ನಾಟಕ ದಿನಾಂಕ: 05.09.2023

## 3. Taking G20 To Last Mile, Leaving None Behind

Vasudhaiva Kutumbakam'-these two words capture a deep philosophy. It means ‘ the world is one family’. This is an all embracing outlook that encourages us to progress as one universal family, transcending borders, languages, and ideologies. During India’s G-20 Presidency, this has translated into a call for human centric progress. As One Earth, we are coming together to nurture our planet. As One Family, we support each other in the pursuit of growth. And we move together towards a shared future-One Future-which is an undeniable truth in these interconnected times.

The post-pandemic world order is very different from the world before it. There are three important changes, among others.

First, there is a growing realisation that a shift away from a GDP centric view of the world to a human centric view is needed.

Second, the world is recognizing the importance of resilience and reliability in global supply chains.

Third, there is a collective call for boosting multilateralism through the reform of global institutions. Our G-20 Presidency has played the role of a catalyst in these shifts.

In December 2022, when we took over the Presidency from Indonesia, I had written that a mindset shift must be catalysed by the G-20. This was especially needed in the context of mainstreaming the marginalized aspirations of developing countries, the Global South and Africa.

The Voice of Global South Summit, which witnessed participation from 125 countries, was one of the foremost initiatives under our presidency. It was an important exercise to gather inputs and ideas from the Global South. Further, our presidency has not only seen the largest-ever participation from African countries but has also pushed for the inclusion of the African Union as a permanent member of the G-20.

An interconnected world means our challenges across domains are interlinked. This is the midway year of the 2030 Agenda and many are nothing with great concern that the progress on SDGs is off-track. The G-20 2023 Action plan on Accelerating progress on SDGs will spearhead the future direction of the G-20 towards implementing SDGs.

In India, living in harmony with nature has been a norm since ancient times and we have been contributing our share towards climate action even in modern times.

Many countries of the Global South are at various stages of development and climate action must be a complementary pursuit. Ambitions for climate action must be matched with actions on climate finance and transfer of technology.

We believe there is a beed to move away from a purely restrictive attitude of what should not be done, to a more constructive attitude focusing on what can be done to fight climate change.

The Chennai HLPs for a sustainable and Reslient Blue Economy focus on keeping our oceans healthy.

A global ecosystem for clean and green hydrogen will emerge from our presidency, along with a Green Hydrogen Innovation Centre.

In 2015, we launched the International Solar Alliance. Now, through the Global Biofuels Alliance, we will support the world to enable energy transitions in tune with the benefits of a circular economy.

Democratising climate action is the best way to impart momentum to the movement. Just as individuals make daily decisions based on their long term health, they can make lifestyle decisions based on the impact on the planet's long term health. Just like Yoga became a global mass movement for wellness, we have also nudged the world with Life styles for Sustainable Environment(LIFE).

Due to the impact of climate change, ensuring food and nutritional security will be crucial. Millets, or Shree Anna can help with this while also boosting climate-smart agriculture. In the International Year of Millets, we have taken millets to global palates. The Deccan High Level principles on Food Security and Nutrition is also helpful in this direction.

Technology is tansformative but it also needs to be made inclusive. In the past, the benefits of technological advancements have not benefited all sections of society equally. India, over the last few years, has shown how technology can be leveraged to narrow inequalities, rather than widen them.

For instance the billions across the world that remain unbanked, or lack digital identities, can be financially included through digital public in frastructure (DPI). The solutions we have built using our DPI have now been recognised globally. Now, through the G-20, we will help developing countries adapt, build and scale DPI to unlock the power of inclusive growth.

That India is the fastest growing large economy is no accident. Our simple, scalable and sustainable solutions have empowered the vulnerable and the marginalised to lead our development story. From space to sports, economy to enterpreneurship, Indian women have taken the lead in various sectors. They have shifted the narrative from the development of women to women-led development. Our G-20 presidency is working on bridging the gender digital divide, reducing labour force participation gaps and enabling a larger role for women in leadership and decision making.

For India, the G-20 Presidency is not merely a high-level diplomatic endeavour. As the Mother of Democracy and a model of diversity, we opened the doors of this experience to the world.

Today, accomplishing things at scale is a quality that is associated with India. The G-20 Presidency is no Exception. It has become a people driven movement. Over 200 meetings will have been organised in 60 Indian cities across the length and breadth of our nation,

hosting nearly 100,000 delegates from 125 countries by the end of our term. No Presidency has ever encompassed such a vast and diverse geographical expanse.

It is one thing to hear about India's demography, democracy diversity and development from someone else. It is totaly different to experience them first-hand. I am sure our G-20 delegates would vouch for this.

Our G20 Presidency strives to bridge divides, dismantle barriers, and sow seeds of collaboration that nourish a world where unity prevails over discord, where shared destiny eclipses isolation. As the G-20 president, we had pledged to make the global table larger, ensuring that every voice is heard and every country contributes. I am positive that we have matched our pledge with actions and outcomes.

The author is Narendra modi Prime Minister of India

**Courtesy:** Time of India, dated: 07.09.2023

## 4. Jairam, Joshi lock horns over special Parliament sessions

A Day after Congress leader Sonia Gandhi wrote to PM Narendra Modi about the Opposition not being kept in loop on the upcoming special session of Parliament, a war of words broke out between Union minister Pralhad Joshi and Congress leader Jairam Ramesh over procedures related to Parliament sessions.

Responding to Ramesh's charges that the previous governments had informed the agenda for special sessions in advance, Joshi accused him of twisting facts about constitutional provisions.

Ramesh had claimed that the agenda of every special session in the past was well known in advance and alleged that it was only the Modi government that " distorts" parliamentary conventions. He also cited past occasions such as the convening of a joint special session at the Central Hall on GST implementation on the midnight of June 30, 2017.

"A special session of the Lok Sabha was called in July 2008 for a trust vote after the Left parties withdrew support to the UPA-1 government. A special session was also called from August 26 to September 1 in 1997 to commemorate the 50th anniversary of India's independence," he pointed out.

Responding to Ramesh's claims, Joshi wrote, "The summoning of Parliament is the greatest boon in a democracy. However, there is a lobby of compulsive contrarians who oppose the same. ' A compulsive contrarian may be a master of doubt, but they often miss the beauty of certainty founded in truth'," he said.

Setting the record straight, Joshi said that Ramesh has been falsely claiming that the historic function in Central Hall on 30 June , 2017, for the GST rollout, was a Parliament session. “That‘s just not true! It wasn’t a session under Article 85 of the Constitution. Here is fact check: A session of Parliament under Article 85 of the Constitution is precisely that, and the agenda will be shared in accordance with established parliamentary practices,” said Joshi.

**In diverse India, name change demands consensus:** An official invitation sent out by Rashtrapti Bhavan in connection with the G-20 summit in New Delhi under India’s presidency which carried the nomenclature of the President of India as ‘President of Bharat’ set off a controversy. The controversy is symptomatic of the present-day political atomosphere, characterised by an intense distrust of each other, extreme and inexplicable revengefulness and heightened revanchism on the part of the power wieleders, and widespread anxiety about the future of the country.

There has been no explanation from official spokesmen of the government for this sudden change. The abrupt change in a very formal official communication from the head of the state caught the nation unawares. Apologists of the powers that be came out with the propostion that the name of the country is interchangeable as Bharat (as is described in Article 1 of the Constitution); therefore , Bharat can be used. In this context, someone was heard saying that all that is required to change to Bharat is resoloution to that effect in Parliament. In fact, it was even suggested that the special session of Parliament next week would do just that. It is a bit surprising that some senior advocates of the Supreme Court of India too chimed in with their considered opinion-of course, in favour of the propostion highlighted above.

Before the whole issue of changing the name of the country and the manner in which it is being handled are considerd, it is necessary to make it clear that Parliament has the absolute power to change the name of the country at any time by amending the Constitution . Article 368 of the Constitution empowers Parliament to amend any provision of the Constitution which includes the name of the country, as mentioned in Article 1. But the public has been left aghast by the general cacophony which has left them none the wiser as far as the issue is concerned.

**From the constitutional point of view:** So, let us examine the whole issue of the change of name of the country from a purely constitutional point of view. First , the invite that went out from Rashtrapati Bhavan. This invite used the nomenclature, “President of Bharat”. In fact, at the moment, constitutionally speaking, there is no President of Bharat in the country. Article 52 says that there shall be a President of India. This is the official nomenclature of the head of the state which cannot be changed into anything else unless

Article 52 is amended suitably. Thus, it is quite obvious that the term 'President of Bharat' is not in conformity with Article 52 of the Constitution.

Article 1 says , "India, that is Bharat, shall be a Union of States". These words by no means signify that the words 'India' and 'Bharat' are interchangeable and that 'Bharat' can be used in place of 'India' as the official name of the country. As a matter of fact, the word 'Bharat' is not used in any of the articles of the Constitution except in the Hindi version, which was published under the authority of the President under Article 394A.

If the intention of the Constitution makers was to use the word 'Bharat' interchangeably, they would have used it in some parts of the Constitution which is the authentic Constitution of India officially so described under Article 393. In this context, let us try to understand the true import of the words " India, that is Bharat..." , used in Article 1. The words'that is' are clarificatory whose function is to explain or further clarify the preceding word 'India'. Thus , it is interpreted that Article 1 would mean India that is known as Bharat shall be a Union of States. Article 1 in the Hindi translation of the Constitution saya " Bharat means India" , which shows that Bharat is treated as the translation of India.

In other words the word 'Bharat' does not stand as an independent word in the original Constitution. It is to be used only in the Hindi translation of the Constitution. Further Article 394A(2) says" the translation of this Constitution...shall be construed to have the same meaning as the original there of," this clouse reinforces the point that the word Bharat is a translation of the word 'India', as used in the original Constitution, and India is the authentic name of the country until it is legally changed.

**Will show confusion:** The use of 'Bharat' interchangeably with 'India' in official communication can create a great deal of confusion. The official name of the country is the Republic of India. This is the name used in all official communication sent to foreign countries and international bodies. Agreements and treaties entered into with foreign countries are in the name of the Republic Of India and not republic of Bharat. If Bharat is used interchangeably, the foreign governments will be thrown into utter confusion. In some agreements with foreign governments or international bodies India will be shown as Republic of India and in some other, as republic of Bharat. A country can have only one official name. It can be either India or Bharat, not both.

A perusal of the debates of the Constituent Assembly shows that Article 1 in the draft Constitution was worded "India shall be a union of states". The word Bharat was added later during the debate because of strong pressure from many Members to use Bharat instead of India. Many formulations were suggested by members such as H.V.

Kamath, K.T.Shah, Seth Govind Das, and Shibban Lal Saxena . But B.R.Ambedkar added the words" that is Bharat" as a compromise. He never once said that 'Bharat' can be used interchangeably in the original Constitution.

**A Strange idea of a 'colonial distancing':**The change of name of a country cannot be and should not be done as the agenda of a political party. In a diverse country like India there needs to be consensus on this. People in every nook and corner of the country must be able to emotionally connect with the name. Otherwise it will create a sense of alienation among some section or the other. The weird idea of liberation from India's colonial past should lead us to demolish all symbols of colonialism such as Rashtrapati Bhavan, Parliament House, the Assembly building, and completely change the whole administrative structure that is prevalent as well as many other things. The entire railway system in India is also a symbol of the colonial past.

Does this newfound anti-colonial exyberance sit well with the idea of 'vasudhaiva Kutumbakam', that was the motto of the G-20 under India's presidency.

Author:-P.D.T.Achary, former secretary general, Lok Sabha.

**Courtesy:** The Hindu, date: 16.09.2023

## 5. ಶಾಸನಸಭೆಯ ಮಹತ್ವ ಮರೆಯಾಗುವ ಆತಂಕ

ಶಾಸನಸಭೆ ಎಂದರೆ ಮಾತಿನ ಮಂಟಪ. ಬಸವಣ್ಣನವರ ಅನೂಭವ ಮಂಟಪಕ್ಕೂ ಹೋಲಿಸುವುದಿದೆ. ಅದರಲ್ಲಿಯೂ ಮುಂಗಡಪತ್ರದ ಅಧಿವೇಶನಕ್ಕೆ ಎಲ್ಲಿಲ್ಲದ ಮಹತ್ವ. ಶಾಸನ ರೂಪಿಸುವ ಕೇಂದ್ರಸ್ಥಾನ. ಆದರೆ ಇತ್ತೀಚಿನ ವರ್ಷಗಳಲ್ಲಿ ಶಾಸನಸಭೆ ಮೂಲ ಉದ್ದೇಶವನ್ನೇ ಮೆರಯುತ್ತಿದೆಯೇ? ಎಂಬ ಸಹಜ ಸಂಶಯ ಬರುವ ರೀತಿಯಲ್ಲಿ ಕಲಾಪಗಳ ಕಾರ್ಯನಿರ್ವಹಣೆ , ಶಾಸನಸಭೆ ಸದಸ್ಯರ ನಡವಳಿಕೆ ಗೋಚರಿಸುತ್ತಿರುವುದು ಪ್ರಜಾಪ್ರಭುತ್ವ ವ್ಯವಸ್ಥೆಯ ಅಣಕವಲ್ಲದೇ ಮತ್ತೇನೂ ಅಲ್ಲ.

16ನೇ ವಿಧಾನಸಭೆಯ ಮೊದಲ ಅಧಿವೇಶನ 15 ದಿನಗಳ ಕಾಲ ನಡೆಯಿತು. ಜುಲೈ 3 ಕ್ಕೆ ಆರಂಭವಾಗಿದ್ದು ಜುಲೈ 21 ಮಕ್ಕೆ ಮುಕ್ತಾಯ ಕಂಡಿದೆ ಇಷ್ಟೂ ದಿವಸಗಳಲ್ಲಿ ವಿಧಾನಸಭೆಯಲ್ಲಿ ಒಟ್ಟಾರೆ ಚರ್ಚೆ ನಡೆದಿದ್ದ 78 ಗಂಟೆ 25 ನಿಮಿಷಗಳ ಕಾಲ ಮಾತ್ರ ಗವರ್ನರ್ ಜಂಟಿ ಸದನದಲ್ಲಿ ತಮ್ಮ ಸರ್ಕಾರ ಐದು ವರ್ಷಗಳ ಕಾಲ ಏನು ಮಾಡಲಿದೆ. ಹೀಗೆ ನಡೆಯಲ್ಲಿದೆ ಎನ್ನುವುದರ ದಿಕ್ಸೂಚಿ ಭಾಷಣವನ್ನು ಮುಂದಿಟ್ಟರು. ಇದರಲ್ಲಿ ಮುನ್ನೋಟಕ್ಕಿಂತ ಹಿಂದಿನ ಸರ್ಕಾರದ ಹಿನ್ನೋಟದ ತೆಗಳಿಕೆಯೇ ತುಂಬಿತ್ತು. ಬಳಿಕ ಅದರ ಮೇಲೆ ಶಾಸನಸಭೆಯಲ್ಲಿ 34 ಸದಸ್ಯರು 12 ಗಂಟೆ 39 ನಿಮಿಷಗಳ ಕಾಲ ನಡೆಸಿದ ಚರ್ಚೆಯೂ ಅಷ್ಟಕ್ಕಷ್ಟೆ ಇದರಲ್ಲಿ ಆರೋಪ–ಪ್ರತ್ಯಾರೋಪಗಳೇ ಹೆಚ್ಚು ಆಡಳಿತಪಕ್ಷ ಕಾಂಗ್ರೆಸ್ ಅದ್ಭುತ ಎಂದರೆ ವಿಪಕ್ಷಗಳು ದಿಕ್ಕೇ ತೋರದ ದಿಕ್ಸೂಚಿ ಎಂದು ಲೇವಡಿ ಮಾಡಿದ್ದು ಸದನದ ಕಡತದಲ್ಲಿ ದಾಖಲಾಗಿದೆ.

ಇನ್ನು ಸರ್ಕಾರದ ಬಜೆಟ್ ಮೇಲೆ ನಡೆದ ಚರ್ಚೆಯೂ ಹೊಗಳಿಕೆ–ತೆಗಳಿಕೆ ಬಿಟ್ಟರೆ ವಾಸ್ತವಾಂಶವನ್ನು ಯಾರೊಬ್ಬರೂ ಬಿಚ್ಚಿಡುವ ಪ್ರಯತ್ನ ನಡೆಸಲೇ ಇಲ್ಲ. ಹಾಲಿ ಸಿಎಂ, ಮಾಜಿ ಸಿಎಂಗಳು,

ಡಿಸಿಎಂಗಳ ಸಹಿತ ಆಡಳಿತ–ವಿಪಕ್ಷಗಳಿಂದ ಒಟ್ಟು 62 ಶಾಸಕರು 12 ಗಂಟೆ 52 ನಿಮಿಷಗಳ ಕಾಲ ಚರ್ಚೆ ನಡೆಸಿದರು. ಹಲವರು ಅಂಕಿ ಸಂಖ್ಯೆಗಳನ್ನು ಉಲ್ಲೇಖಿಸಿಯೇ ಹಿಂದಿನ ಸರ್ಕಾರಗಳ ಸಾಧನೆ, ವೈಫಲ್ಯಗಳನ್ನು ಪ್ರಸ್ತಾಪಿಸಿದರು. ರಾಜ್ಯದ ಖಜಾನೆಯನ್ನು ಖಾಲಿ ಮಾಡಿದ್ದು ಸಾಲದಲ್ಲಿ ಮುಳುಗಿಸಿದ್ದು ನೀವು ಎನ್ನುವ ಆರೋಪ ಸದಸ್ಯರ ಮಧ್ಯೆ ಪರಸ್ಪರ ವಾಕ್ಸಮರಕ್ಕೂ ಸಾಕ್ಷಿಯಾಯಿತು.

2013–18 ಅವಧಿಯ ಕಾಂಗ್ರೆಸ್ ಸರ್ಕಾರ, ಬಳಿಕ ಬಂದ ಜೆಡಿಎಸ್–ಕಾಂಗ್ರೆಸ್ ಮೈತ್ರಿ ಸರ್ಕಾರ, ಅನಂತರದಲ್ಲಿ ಅಧಿಕಾರಕ್ಕೇರಿದ ಬಿಜೆಪಿ ಸರ್ಕಾರ ಹೀಗೆ ಎಲ್ಲರ ಅವಧಿಯಲ್ಲಿ ನಡೆದ ಅಕ್ರಮಗಳು ದೊಡ್ಡ ಮಟ್ಟದಲ್ಲಿ ಸದ್ದು ಮಾಡಿದವು. ಅಡ್ಜೆಸ್ಟಮೆಂಟ್ ಪೊಲಿಟಿಕ್ಸ್ ಕೂಡಾ ಪ್ರತಿಧ್ವನಿಸಿತು. ವಿಷಯದ ಆಳಕ್ಕೆ ಯಾರೊಬ್ಬ ಸದಸ್ಯರೂ ಹೋಗುವ ಪ್ರಯತ್ನ ಮಾಡಲಿಲ್ಲ. ಒಂದು ಹಂತದಲ್ಲಿಯೇ ವಿಷಯ ಪ್ರಸ್ತಾಪ ಗದ್ದಲಕ್ಕೆ ತಿರುಗಿ ಪ್ರತಿಭಟನೆ, ಸಭಾಧ್ಯಕ್ಷರ ಮುಂಭಾಗದ ಬಾವಿಗಿಳಿದು ಧರಣಿ ನಡೆಸುವುದು ಮತ್ತು ವಿಚಾರದಲ್ಲಿ ನಮಗೆಷ್ಟು ರಾಜಕೀಯ ಮೈಲೇಜ್ ಸಿಗುತ್ತವೆಂಬ ಲೆಕ್ಕಾಚಾರ ನಡೆದಿದ್ದೇ ಹೆಚ್ಚು ಹಾಗಾಗಿ ಶಾಸನಸಭೆ ಚರ್ಚೆ ಗಂಭೀರತೆಯನ್ನು ಉಳಿಸಿಕೊಳ್ಳುವಲ್ಲಿ ವಿಫಲವಾಯಿತು.

ರಾಜಕೀಯವಾಗಿ ಪೂರ್ವಯೋಜನೆಯಂತೆ ಬಿಜೆಪಿ ಸರ್ಕಾರ ಅಂಗೀಕರಿಸಿದ್ದ ಐದಾರು ಪ್ರಮುಖ ವಿಧೇಯಕಗಳು ತಿದ್ದುಪಡಿ ಮೂಲಕ ಮೊನಚು ಕಳೆದುಕೊಂಡವು. ಆ ಸರ್ಕಾರದ ಅಕ್ರಮಗಳ ಆರೋಪ ತನಿಖೆಯೂ ಘೋಷಿಸಲ್ಪಟ್ಟವು. ಇದಕ್ಕೆ ಪ್ರತಿಪಕ್ಷ ದ್ವೇಷದ ರಾಜಕಾರಣ ಎಂಬ ಹಣೆಪಟ್ಟಿ ಹೆಚ್ಚಿತೇ ವಿನಾಹ ದೊಡ್ಡದನಿಯಲ್ಲಿ ಪ್ರತಿರೋಧ ವ್ಯಕ್ತಪಡಿಸುವ ಗೋಜಿಗೆ ಹೋಗಲಿಲ್ಲ. ಎರಡೂ ಕಡೆ ಆಸನಗಳಲ್ಲಿ ಮಾಧುಸ್ವಾಮಿ, ರಮೇಶ್ ಕುಮಾರ್, ಈಶ್ವರಪ್ಪ, ಜಗದೀಶ್ ಶೆಟ್ಟರ್, ಯಡಿಯೂರಪ್ಪ ಅವರಂತಹ ಅನುಭವಿ ಸಂಸದೀಯ ಪಟುಗಳ ಅನುಪಸ್ಥಿತಿಯೂ ಕಾರಣ ಎಂದರೆ ಅಚ್ಚರಿಪಡಬೇಕಿಲ್ಲ.

ಒಟ್ಟಾರೆ ಗದ್ದಲ, ಕೋಲಾಹಲದ ನಡುವೆಯೇ ಆಡಳಿತಪಕ್ಷ ತಾನೇನು ಅಂದುಕೊಂಡಿತ್ತೋ ಅದನ್ನು ಒಂದು ಹಂತಕ್ಕೆ ಸಾಧಿಸುವಲ್ಲಿ ಸಕ್ಸೆಸ್ ಕಂಡಿತು. ದುರಂತವೆಂದರೆ ಕರ್ನಾಟಕದ ವಿಧಾನಸಭೆ ಇತಿಹಾಸದಲ್ಲಿಯೇ ವಿಪಕ್ಷ ನಾಯಕನಿಲ್ಲದೇ ಜಂಟಿ ಅಧಿವೇಶನ ನಡೆದಿದ್ದಕ್ಕೂ ದಾಖಲೆ ಸೃಷ್ಟಿಯಾಯಿತು. ಮೊದಲ ದಿನದಿಂದಲೇ ವಿಪಕ್ಷ ನಾಯಕನ ಆಯ್ಕೆ ವಿಷಯ ನಿತ್ಯವೂ ಆಡಳಿತ ಪಕ್ಷವಾದ ಕಾಂಗ್ರೆಸ್ ಸದಸ್ಯರ ಗೇಲಿಗೆ ಆಹಾರವಾಗಿದ್ದು ಸುಳ್ಳಲ್ಲ. ಅದನ್ನು ಸಮರ್ಥವಾಗಿ ಡಿಫೆಂಡ್ ಮಾಡಿಕೊಳ್ಳುವಲ್ಲಿ ಬಿಜೆಪಿ ಸೋತಿತೆಂಬೂದು ಸತ್ಯ. ನಮ್ಮ ಎಲ್ಲ 66 ಶಾಸಕರೂ ವಿಪಕ್ಷ ನಾಯಕರೇ ಎನ್ನುವ ಸಮರ್ಥನೆ ಕೂಡಾ ಹಾಸ್ಯಸ್ಪದ ಎನಿಸಿತು.

ಮೊದಲ ಅಧಿವೇಶನದಲ್ಲಿಯೇ ಅನಿರೀಕ್ಷಿತವಾಗಿ ಶಾಸನಸಭೆ ಸ್ಪೀಕರ್ ಹುದ್ದೆಗೇರಿದ ಸಂದರ್ಭ ಪಕ್ಷಾತೀತವಾಗಿ ಹೊಗಳಿಸಿಕೊಂಡಿದ್ದ ಸಭಾಧ್ಯಕ್ಷ ಯು.ಟಿ. ಖಾದರ್ ಅವರು ಅಧಿವೇಶನ ಅಂತ್ಯವಾಗುವಷ್ಟರಲ್ಲಿ ವ್ಯಾಪಕ ಟೀಕೆಗೆ ಗುರಿಯಾಗಿದ್ದು ವಿಪರ್ಯಾಸ. ಅವರ ಕಾರ್ಯನಿರ್ವಹಣೆಯಲ್ಲಿ ಧನಾತ್ಮಕ ಮತ್ತು ಋಣಾತ್ಮಕ ಅಂಶಗಳನ್ನು ಹಲವರು ವಿಧಾನಸಭೆಯ ಒಳಗೆ ಮತ್ತು ಹೊರಗೆ ವಿಶ್ಲೇಷಿಸಿದ್ದರಲ್ಲಿ ಅಲ್ಪ ಸಂತ್ಯಾಂಶವೂ ಇಲ್ಲದಿಲ್ಲ ಅನಿಸುತ್ತದೆ. ವಿಪಕ್ಷದ 10 ಶಾಸಕರನ್ನು ಅಶಿಸ್ತಿನ ಆರೋಪದಲ್ಲಿ ಅಮಾನತು ಮಾಡಿದ ಕ್ರಮ ಆಳುವ ಪಕ್ಷಕ್ಕೆ ಖುಷಿಕೊಟ್ಟರೆ, ಕೇಳುವ ಪಕ್ಷಕ್ಕೆ ಟೀಕೆಯ ವಿಷಯವಾಯಿತು. ಇನ್ನು ಉಪಾಧ್ಯಕ್ಷ ಸ್ಥಾನಕ್ಕೂ ಸಚಿವ ಸ್ಥಾನದ ಆಕಾಂಕ್ಷಿ ರುದ್ರಪ್ಪ ಲಮಾಣಿ ಆಯ್ಕೆಯಾಗಿದ್ದು ಅಚ್ಚರಿಯ ಸಂಗತಿ. ಕಡಿಮೆ ಮಾತಿನ ಇವರು ಮೊದಲ ಅಧಿವೇಶನದಲ್ಲಿಯೇ ಮುಜುಗರ ಅನುಭವಿಸಬೇಕಾಗಿ ಬಂದಿತು. ಸದನದಲ್ಲಿ ಕಾಗದ ಪ್ರತಿ ಹರಿದು ಎಸೆಯುವುದು ಪ್ರತಿಭಟನೆಯ ಒಂದು ಭಾಗವೇ ಹೊರತು ಹೊಸತೇನಲ್ಲ. ಆದರೆ ಲಮಾಣಿ ಅವರ ಮುಖದ ಮೇಲೆ ಪ್ರತಿ ಹರಿದು ಎಸೆದರು ಎಂಬ ಆರೋಪ ಅಮಾನತಿಗೆ ದಾರಿಯಾಯಿತು. ಇದೇ ಶಾಸನ ಸಭೆಯಲ್ಲಿ ಇದಕ್ಕಿಂತಲೂ ವಿಭಿನ್ನ ಮತ್ತು ತುಸು ಹೆಚ್ಚು ಎನ್ನುವಂತಹ ಘಟನೆಗಳು ನಡೆದಿರುವುದಕ್ಕೂ ದಾಖಲೆಯಿದೆ ಎನ್ನುವುದಷ್ಟೇ

ಉಲ್ಲೇಖಾರ್ಹ. ಘಟನೆಗೆ ಕಾಂಗ್ರೆಸ್ ಉಪಾಧ್ಯಕ್ಷರು ದಲಿತ ಸಮುದಾಯದವರು ಎಂಬುದನ್ನು ಸಹಿಸಿಕೊಳ್ಳಲಿಲ್ಲ ಎನ್ನುವ ರಾಜಕೀಯ ಆರೋಪ ಶಾಸನಸಭೆಗೆ ಗೌರವ ತರುವಂತದ್ದಲ್ಲ ಎನ್ನುವುದನ್ನು ಆಳುವ ಪಕ್ಷ ಅರಿತರೆ ಒಳಿತು. ಆಗಬೇಕಾಗಿದ್ದು ಇದು, ಆದ್ರೆ ಆಗಿದ್ದೇ ಬೇರೆ: ರಾಜ್ಯದ 12ಕ್ಕೂ ಹೆಚ್ಚು ಜಿಲ್ಲೆಗಳಲ್ಲಿ ಮಳೆ ಕೊರತೆ ಇದ್ದು ಬರದ ಛಾಯೆ ಆವರಿಸದೆ, ಕುಡಿಯುವ ನೀರು, ಜಾನುವಾರಿನ ಮೇವು ಸಮಸ್ಯೆ ಉಲ್ಬಣವಾಗಿದೆ. ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಕುಡಿಯುವ ನೀರಿನ ಹಾಹಾಕಾರ ಇದ್ದರೂ ಸದನದಲ್ಲಿ ಯಾರೊಬ್ಬರೂ ಗಟ್ಟಿಧ್ವನಿಯಲ್ಲಿ ಸರ್ಕಾರವನ್ನು ಕೇಳಲಿಲ್ಲ. ವಿಪಕ್ಷಗಳು ಅಧಿವೇಶನದ ಕೊನೆಯ ದಿನ ಪ್ರಸ್ತಾಪಿಸಿದರೂ, ಕಾಂಗ್ರೆಸ್ ನೇತೃತ್ವದಲ್ಲಿ ನಡೆದ 26 ವಿಪಕ್ಷಗಳ ಸಭೆಗೆ ಐಎಎಸ್ ಅಧಿಕಾರಿಗಳನ್ನು ದುರ್ಬಳಕೆ ಮಾಡಿಕೊಳ್ಳಲಾಗಿದೆ ಎಂಬ ಆರೋಪದ ಮುಂದೆ ಬರದ ಮಾತು ಮರೆಯಾಯಿತು. ಕಾಡಾನೆ ಸೇರಿದಂತೆ ವನ್ಯಜೀವಿಗಳ ಹಾವಳಿ ಬಗ್ಗೆ ಪ್ರಸ್ತಾಪವಾದರೂ ಗಂಭೀರತೆ ಎರಡೂ ಕಡೆಯಿಂದ ವ್ಯಕ್ತವಾಗಲಿಲ್ಲ.

ಮಹದಾಯಿ, ಮೇಕೆದಾಟು, ಭದ್ರಾ, ಕೃಷ್ಣಾ ಯೋಜನೆಗಳ ಬಗೆಗಿನ ಚರ್ಚೆ ಸ್ಯಾಂಪಲ್ ಎಂಬ ಬಂದು ಹೋಯಿತಷ್ಟೆ. ಶಂಕಿತ ಉಗ್ರ ಬಗ್ಗೆ ಸರ್ಕಾರದ ಹೇಳಿಕೆಗೆ ಸೀಮಿತವಾಯಿತು. ಹಾಗಾಗಿಯೇ ಆಗಬೇಕಾದ್ದು ಆಗಲಿಲ್ಲ. ಕೇಳಬೇಕಾದ್ದನ್ನು ಕೇಳಲಿಲ್ಲ.

ಲೇಖಕರು: ಕೆ.ಎ.ಪರಮೇಶ್.

**ಆಧಾರ:** ಸಂಯುಕ್ತ ಕರ್ನಾಟಕ, ದಿನಾಂಕ: 23.07.2023.

## 6. ನಿರ್ದೇಶಕ ತತ್ವಗಳಲ್ಲಿ ಉಳಿದ ಯುಸಿಸಿ

## (ಏಕರೂಪ ನಾಗರಿಕ ಸಂಹಿತೆ ಚರ್ಚೆ)

ಏಕರೂಪ ನಾಗರಿಕ ಸಂಹಿತೆಯನ್ನು ಜಾರಿಗೆ ತರಲು ಸರ್ಕಾರ ಪ್ರಯತ್ನಿಸಬೇಕು ಎಂದು ಹೇಳಿರುವ 35ನೇ ವಿಧಿಗೆ ಸಂವಿಧಾನ ರಚನಾ ಸಭೆಯಲ್ಲಿ ಯುನೈಟೆಡ್ ಪ್ರಾವಿನ್ಸ್‌ನ ಪ್ರತಿನಿಧಿ ಮೊಹಮ್ಮದ್ ಇಸ್ಮಾಯಿಲ್ ಖಾನ್ ತಿದ್ದುಪಡಿಯನ್ನು ಸೂಚಿಸಿದ್ದರು. 'ಯಾವುದೋ ಒಂದು ಕಾನೂನಿಗಾಗಿ ಈಗಾಗಲೇ ಇರುವ ತಮ್ಮ ವೈಯಕ್ತಿಕ ಕಾನೂನನ್ನು ಬಿಟ್ಟುಕೊಡುವಂತೆ ಯಾವುದೇ ಗುಂಪು, ವರ್ಗ ಅಥವಾ ಸಮುದಾಯದ ಜನರ ಮೇಲೆ ಹೇರಿಕೆ ಮಾಡಬಾರದು' ಎಂಬುದು ಆ ತಿದ್ದುಪಡಿಯಾಗಿತ್ತು. ಈ ಪ್ರಸ್ತಾವದ ಮೇಲೆ ಸುದೀರ್ಘ ಚರ್ಚೆ ನಡೆದಿತ್ತು. ಎಲ್ಲಾ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ಮುಂದಿಟ್ಟ ನಂತರ ಬಿ.ಆರ್.ಅಂಬೇಡ್ಕರ್ ಅವರು ಚರ್ಚೆಯನ್ನು ಕೊನೆಗೊಳಿಸಿದ್ದರು. 'ಏಕರೂಪ ನಾಗರಿಕ ಸಂಹಿತೆಯನ್ನು ತರಲು ಸರ್ಕಾರ ಪ್ರಯತ್ನಿಸಬೇಕು ಎಂದಷ್ಟೇ ಹೇಳಲಾಗಿದೆ. ಇಂಥದೊಂದು ಕಾನೂನು ಇದೆ ಎಂದ ಮಾತ್ರಕ್ಕೆ ಸರ್ಕಾರವು ಅದನ್ನು ಜಾರಿಗೊಳಿಸಲೇಬೇಕು ಎಂದೇನಿಲ್ಲ' ಎಂದು ಅವರು ಹೇಳಿದ್ದರು. ಆ ಮೂಲಕ 35ನೇ ವಿಧಿಯನ್ನು (ಈಗ 44ನೇ ವಿಧಿ) ಸಂವಿಧಾನದ ನಾಲ್ಕನೇ ಭಾಗದಲ್ಲಿ ಉಳಿಸಿಕೊಳ್ಳಲಾಯಿತು

**ಬುಡಕಟ್ಟುಗಳು ಏನಾಗಬೇಕು:** ನಮ್ಮ ಹಿಂದುಳಿದ ವರ್ಗಗಳಿಗೆ ನಾವು ಯಾವ ರೀತಿಯಲ್ಲಿ ರಕ್ಷಣೆ ನೀಡಿದ್ದೇವೆ. ನೋಡಿ, ಆಸ್ತಿ ವಿಷಯದಲ್ಲಿ ಬೇರೆ ಯಾವ ಸಮುದಾಯಕ್ಕೂ ನೀಡದಂಥ ರಕ್ಷಣೆಯನ್ನು ನಾವು ಹಿಂದುಳಿದ ವರ್ಗಗಳಿಗೆ ನೀಡಿದ್ದೇವೆ. ಜಾರ್ಖಂಡ್ ಮತ್ತು ಸಂತಾಲ್ ಪರಗಣಾಗಳಲ್ಲಿ ನಾವು ಆದಿವಾಸಿಗಳಿಗೆ ವಿಶೇಷ ರಕ್ಷಣೆ ನೀಡಿದ್ದೇವೆ.

ಅಸ್ಸಾಂ ಬುಡಕಟ್ಟು ಸಮುದಾಯವನ್ನೇ ನೋಡಿ, ಅವರ ಸ್ಥಿತಿ ಹೇಗಿದೆ? ಆಧುನಿಕತೆಗೆ ತೆರೆದುಕೊಂಡ ಬಾಂಬೆ ಜನರಿಗೆ ಅನ್ವಯಿಸುವ ಕಾನೂನನ್ನೇ ಈ ಬುಡಕಟ್ಟು ಜನರಿಗೆ ಅನ್ವಯಿಸಲು ಸಾಧ್ಯವಿದೆಯೇ? ಏಕರೂಪ ನಾಗರಿಕ ಸಂಹಿತೆ ಬರಬೇಕು ಎನ್ನುವುದು ಅಪೇಕ್ಷಣೀಯವೇ ಆಗಿದೆ. ಆದರೆ, ಅದಕ್ಕೆ ಈಗಿನದ್ದು ಸೂಕ್ತ ಕಾಲವಲ್ಲ. ಭಾರತವು ಸಂಪೂರ್ಣವಾಗಿ ಸಾಕ್ಷರತೆ ಹೊಂದಬೇಕು, ಜನರು ಆಧುನಿಕಗೊಳ್ಳಬೇಕು, ಅವರ ಆರ್ಥಿಕ ಸ್ಥಿತಿಗಳು ಸುಧಾರಿಸಬೇಕು., ದೇಶವು ಇಂಥ ಸ್ಥಿತಿಗೆ ತಲುಪಿದಾಗ ಏಕರೂಪ ನಾಗರಿಕ ಸಂಹಿತೆಯನ್ನು ಜಾರಿಗೊಳಿಸಿ.

ಅಲ್ಪಸಂಖ್ಯಾತರ ಆತಂಕ ಸರಿಯಾದುದುದೇ ಆಗಿದೆ. ಜಾತ್ಯತೀತ ದೇಶವೆಂದರೆ, ಅದು ಧರ್ಮ ವಿರೋಧಿ ಅಲ್ಲ; ಬದಲಿಗೆ ಧರ್ಮ ನಿರಪೇಕ್ಷವಾದದು. ಈ ಕಾನೂನಿನ ಕುರಿತು ಸದಸ್ಯರು, ಜನರು ಎತ್ತಿರುವ ಪ್ರಶ್ನೆಗಳ ಬಗ್ಗೆ ಸಂವಿಧಾನ ಕರಡು ರಚನಾ ಸಮಿತಿಯು ಗಮನಹರಿಸಬೇಕು. ಜೊತೆಗೆ, ಈ ಸಮಸ್ಯೆಗೆ ಅಂಬೇಡ್ಕರ್ ಅವರಂಥ ಮೇಧಾವಿಯು ಪರಿಹಾರ ಕಂಡುಹಿಡಿಯುತ್ತಾರೆ ಎಂಬ ನಂಬಿಕೆ ಇದೆ.

**ಷರಿಯಾ ಕಾನೂನನ್ನೇ ಬದಲಾಯಿಸಿದ್ದ ಖಿಲ್ಜಿ:** ವೈಯಕ್ತಿಕ ಕಾನೂನುಗಳು ಧರ್ಮದ ಭಾಗ ಎನ್ನುವುದನ್ನು ಬ್ರಿಟಿಷ್ ಆಳ್ವಿಕೆ ಹಾಗೂ ಬ್ರಿಟಿಷ್ ನ್ಯಾಯಾಲಯಗಳು ಜನರ ಮನಸ್ಸಿನಲ್ಲಿ ಆಳವಾಗಿ ಬೇರೂರಿಸಿವೆ. ಇದರಿಂದ ನಾವು ಹೊರ ಬರಬೇಕಿದೆ.

ಷರಿಯಾ ಕಾನೂನಿನಲ್ಲಿ ಅಲ್ಲಾವುದ್ದೀನ್ ಖಿಲ್ಜಿಯು ಹಲವು ಬದಲಾವಣೆಗಳನ್ನು ಮಾಡಿದ, ದೆಹಲಿಯ ಖಾಜಿಗಳು ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದರು. 'ನಾನೊಬ್ಬ ಅಜ್ಞಾನಿ ಮನುಷ್ಯ. ನಾನು ದೇಶವನ್ನು ಎಷ್ಟು ಸಾಧ್ಯವೋ ಅಷ್ಟು ಮುತುವರ್ಜಿಯಿಂದ ಆಳುತ್ತಿದ್ದೇನೆ. ನನ್ನ ಅಜ್ಞಾನ ಮತ್ತು ನನ್ನ ಆಡಳಿತಕ್ಕೆ ಇರುವ ಒಳ್ಳೆಯ ಉದ್ದೇಶವನ್ನು ಗಮನಿಸಿ ದೇವರು ನನ್ನನ್ನು ಕ್ಷಮಿಸುತ್ತಾನೆ' ಎಂದು ಖಿಲ್ಜಿಯು ದೆಹಲಿಯ ಖಾಜಿಗಳಿಗೆ ಉತ್ತರಿಸಿದ್ದನು. ವೈಯಕ್ತಿಕ ಕಾನೂನು ಸೇರಿದಂತೆ ಇತರೆ ಕಾನೂನುಗಳು ಧರ್ಮದ ಭಾಗ ಎಂಬುದನ್ನು ಖಿಲ್ಜಿಯೇ ನಿರಾಕರಿಸಿರುವಾಗ, ಆಧುನಿಕ ಸರ್ಕಾರವಾದ ನಾವು ಯಾಕಾಗಿ ವೈಯಕ್ತಿಕ ಕಾನೂನುಗಳು ಧರ್ಮದ ಭಾಗ ಎಂದು ಪರಿಗಣಿಸಬೇಕು?

**ಮುಸ್ಲಿಮರಿಗೇಕೆ ನಂಬಿಕೆ ಇಲ್ಲ:** ವಿವಾಹ, ಉತ್ತರಾಧಿಕಾರ ಸೇರಿದಂತೆ ಕೆಲವು ಕಾನೂನುಗಳ ಕುರಿತು ದೇಶದ ಹಲವು ಜನರಲ್ಲಿ ಭಿನ್ನಾಭಿಪ್ರಾಯಗಳಿವೆ. ಈ ಎಲ್ಲವನ್ನು ಏಕರೂಪ ಮಾಡಲು ಈ ಕಾನೂನನ್ನು ರೂಪಿಸಲಾಗಿದೆ.

ಈಗ ಹಿಂದೂ ಕಾನೂನನ್ನೇ ನೋಡಿ. ಇದನ್ನು ರೂಪಿಸಿದವರು, ಬೇರೆ ಧರ್ಮದ ಕಾನೂನನ್ನು ಇಲ್ಲಿ ಸೇರಿಸಿಕೊಂಡಿದ್ದಾರೆ. ಇದೇ ರೀತಿ ಉತ್ತರಾಧಿಕಾರದ ಕಾನೂನನ್ನು ರೋಮನ್ ಹಾಗೂ ಇಂಗ್ಲಿಷ್ ದೇಶಗಳಿಂದ ಪಡೆದುಕೊಳ್ಳಲಾಗಿದೆ. ಅಭಿವೃದ್ಧಿ ಹೊಂದಬೇಕು ಎಂದಾದರೆ ಎಲ್ಲರಿಂದಲೂ ಪಡೆದುಕೊಳ್ಳಬೇಕಾಗುತ್ತದೆ.

ಈ ದೇಶದ ಬಹುಸಂಖ್ಯಾತರು ಮಾತ್ರವೇ ಬೇರೆ ಧರ್ಮದ ವಿಷಯಗಳನ್ನು ತಮ್ಮೊಳಗೆ ಸ್ವೀಕರಿಸುವ ಗುಣವನ್ನು ಹೊಂದಿದ್ದಾರೆ. ಅವರು ಅಲ್ಪಸಂಖ್ಯಾತರಿಂದಲೂ ಪಾಠ ಕಲಿಯುತ್ತಾರೆ.

ಏಕರೂಪವಾಗಿಸುವ ಬಗ್ಗೆ ಬ್ರಿಟಿಷರ ನ್ಯಾಯಶಾಸ್ತ್ರ ಬುನಾದಿ ಹಾಕಿಕೊಟ್ಟಿದೆ. ನಾವು ಈ ದಿಸೆಯಲ್ಲಿ ಮುಂದಡಿ ಇಡುತ್ತಿದ್ದೇವೆಯಷ್ಟೇ. ವಿದೇಶಿ ಸರ್ಕಾರಕ್ಕಿಂತ ದೇಶೀಯವಾದ ಸರ್ಕಾರದ ಕುರಿತು ನಿಮಗೆ ಯಾಕಿಷ್ಟು ಅವಿಶ್ವಾಸ? ಎಲ್ಲಾ ಜನರ ನಂಬಿಕೆಯನ್ನು ಒಟ್ಟಿಗೆ ತೆಗೆದುಕೊಂಡು ಹೋಗುತ್ತಿರುವ ಪ್ರಜಾಪ್ರಭುತ್ವವಾದಿ ಸರ್ಕಾರದ ಕುರಿತು ಮುಸ್ಲಿಮರಿಗೆ ಯಾಕೆ ನಂಬಿಕೆ ಇಲ್ಲ.

**ಸಂಹಿತೆಗೆ ಒಪ್ಪಿಗೆ ಸ್ವಯಂಪ್ರೇರಿತ ಆಗಿರಬೇಕು** :ಏಕರೂಪ ನಾಗರಿಕ ಸಂಹಿತೆಯ ಕುರಿತು ಹೇಳಲಾಗಿರುವ ತಿದ್ದುಪಡಿಗಳನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಈ ದೇಶಕ್ಕೆ ಏಕರೂಪ ನಾಗರಿಕ ಸಂಹಿತೆ

ಬೇಕೆ ಬೇಡವೇ ಎನ್ನುವ ಪ್ರಶ್ನೆಯು ಯೋಗ್ಯವೇ? ಇಲ್ಲವೇ? ಎನ್ನುವುದರ ಕುರಿತು ನಾನು ಈ ವೇಳೆ ಮಾತನಾಡುತ್ತಿಲ್ಲ. ಈ ಬಗ್ಗೆ ಕೆ.ಎಂ.ಮುನ್ಷಿ ಹಾಗೂ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್ ಮಾತನಾಡಿದ್ದಾರೆ. ಕೆಲವು ಮೂಲಭೂತ ಹಕ್ಕುಗಳಿಗೆ ತಿದ್ದುಪಡಿಗಳು ಮಂಡನೆಯಾದಾಗ ಈ ವಿಷಯದಲ್ಲಿ ಪೂರ್ಣ ಹೇಳಿಕೆ ನೀಡುವುದು ನನಗೆ ಸಾಧ್ಯವಾಗಬಹುದು. ಹಾಗಾಗಿ, ಈಗ ಈ ಕುರಿತು ಏನನ್ನೂ ಹೇಳುವುದಿಲ್ಲ.

ಭಾರತದಂಥ ದೊಡ್ಡ ದೇಶದಲ್ಲಿ ಏಕರೂಪ ನಾಗರಿಕ ಸಂಹಿತೆ ಜಾರಿ ಮಾಡಲು ಸಾಧ್ಯವಿದೆಯೇ ಎಂದು ಹುಸೇನ್ ಅವರು ಪ್ರಶ್ನಿಸಿದ್ದಾರೆ. ಈ ಪ್ರಶ್ನೆ ನನಗೆ ಆಶ್ಚರ್ಯ ತಂದಿದೆ. ಅಪರಾಧ ಕಾನೂನುಗಳಿವೆ. ಆಸ್ತಿ ವರ್ಗಾವಣೆ ಕಾನೂನಿದೆ, ನೆಗೋಶಿಯಬಲ್ ಇನ್ಸ್ಟ್ರುಮೆಂಟ್ಸ್ ಕಾಯ್ದೆ ಇದೆ. ಹೀಗೆ ಹೇಳುತ್ತಾ ಹೋದರೆ ಇನ್ನೂ ಹಲವು ಕಾಯ್ದೆಗಳನ್ನು ಉಲ್ಲೇಖಿಸಬಹುದು. ಈ ಎಲ್ಲಾ ಕಾಯ್ದೆಗಳು ದೇಶದಾದ್ಯಂತ ಎಲ್ಲರಿಗೂ ಏಕರೂಪವಾಗಿವೆ. ಮದುವೆ ಮತ್ತು ಉತ್ತರಾಧಿಕಾರದ ಕಾನೂನುಗಳಿಗೆ ಮಾತ್ರ ನಮಗೆ ಏಕರೂಪ ಕಾನೂನು ತರಲು ಸಾಧ್ಯವಾಗಿಲ್ಲ. ಇದೇ ಕಾರಣಕ್ಕಾಗಿ ಈಗ 35ನೇ ವಿಧಿಯ ಮೂಲಕ ಮದುವೆ ಹಾಗೂ ಉತ್ತರಾಧಿಕಾರದ ಕಾನೂನನ್ನು ಏಕರೂಪಗೊಳಿಸಲು ಹೊರಟಿರುವುದು; ಬದಲಾವಣೆ ತರಲು ಇಚ್ಛಿಸಿರುವುದು. ಆದ್ದರಿಂದ, ದೇಶದಾದ್ಯಂತ ಏಕರೂಪ ನಾಗರಿಕ ಸಂಹಿತೆ ತರಲು ಸಾಧ್ಯವೇ ಅನ್ನು ಪ್ರಶ್ನೆಗೆ ನನ್ನ ಉತ್ತರ, ನಾವು ಈಗಾಗಲೇ ಏಕರೂಪ ಕಾನೂನನ್ನು ಜಾರಿಗೊಳಿಸಿದ್ದೇವೆ.

ದೇಶದಾದ್ಯಂತ ಮುಸ್ಲಿಂ ವೈಯಕ್ತಿಕ ಕಾನೂನು ಏಕರೂಪವಾಗಿದೆ. ಇದನ್ನು ಬದಲಾಯಿಸಲು ಸಾಧ್ಯವಿಲ್ಲ ಎಂದು ಕೆಲವು ಸದಸ್ಯರು ಹೇಳುತ್ತಿದ್ದಾರೆ. ಈ ಹೇಳಿಕೆಯನ್ನು ನಾನು ಒಪ್ಪುವುದಿಲ್ಲ. 1935ರವರೆಗೆ ವಾಯುವ್ಯ ಪ್ರಾಂತ್ಯದ ಜನರು ಷರಿಯಾ ಕಾನೂನನ್ನು ಅನುಸರಿಸುತ್ತಿರಲಿಲ್ಲ. ಉತ್ತರಾಧಿಕಾರ ಹಾಗೂ ಇತರೆ ವಿಷಯಗಳಲ್ಲಿ ಅವರು ಹಿಂದೂ ಕಾನೂನುಗಳನ್ನೇ ರದ್ದುಗೊಳಿಸಿ, ಷರಿಯಾ ಕಾನೂನನ್ನು ಇಲ್ಲಿ ಜಾರಿಗೆ ತರಲಾಯಿತು.

ದೇಶದಾದ್ಯಂತ ಇರುವ ಮುಸ್ಲಿಮರನ್ನು ಷರಿಯಾ ಕಾನೂನಿನ ಅಡಿಯಲ್ಲಿ ತರಲು ಆಡಳಿತವು 1937ರಲ್ಲಿ ಆದೇಶ ನೀಡಿತು. ಅಲ್ಲಿಯವರೆಗೆ ಭಾರತದ ಹಲವು ಪ್ರದೇಶಗಳಲ್ಲಿ ಅಂದರೆ, ಮಧ್ಯ ಪ್ರಾಂತ್ಯ, ಬಾಂಬೆ ಪ್ರಾಂತ್ಯ ಹಾಗೂ ಯುನೈಟೆಡ್ ಪ್ರಾಂತ್ಯದಲ್ಲಿ ಮುಸ್ಲಿಮರು ಉತ್ತರಾಧಿಕಾರದ ವಿಷಯದಲ್ಲಿ ಹಿಂದೂ ಕಾನೂನುಗಳನ್ನೇ ಅನುಸರಿಸುತ್ತಿದ್ದರು.

ಉತ್ತರ ಮಲಬಾರ್‌ನಲ್ಲಿ ಮರುಮಗತ್ತಾಯಂ ಕಾನೂನು ಜಾರಿಯಲ್ಲಿದೆ. ಈ ಕಾನೂನನ್ನು ಅಲ್ಲಿನ ಮುಸ್ಲಿಮರೂ ಸೇರಿ ಎಲ್ಲ ಧರ್ಮದವರೂ ಅನುಸರಿಸುತ್ತಿದ್ದಾರೆ ಎಂದು ಕರುಣಾಕರ ಮೆನನ್ ಅವರು ನನ್ನ ಬಳಿ ಹೇಳಿದ್ದರು. ಮರುಮಗತ್ತಾಯಂ ಕಾನೂನು ಮಾತೃಪ್ರಧಾನ ಕಾನೂನಾಗಿದೆ. ಹೀಗಿರುವಾಗ ಮುಸ್ಲಿಮರ ಕಾನೂನುಗಳನ್ನು ಬದಲಾಯಿಸಲು ಸಾಧ್ಯವಿಲ್ಲ ಎಂಬ ಹೇಳಿಕೆಯ ಉಪಯೋಗಕ್ಕೆ ಬಾರದು.

ಏಕರೂಪ ನಾಗರಿಕ ಸಂಹಿತೆ ತರುವ ಉದ್ದೇಶದಿಂದ ಹಿಂದೂ ಕಾನೂನುಗಳಿಂದ ಹಲವು ಅಂಶಗಳನ್ನು ಇಲ್ಲಿ ಪಡೆದುಕೊಳ್ಳಲಾಗಿದೆ. ಹಿಂದೂಗಳ ಕಾನೂನು ಎನ್ನುವ ಕಾರಣಕ್ಕಾಗಿ ಅವುಗಳನ್ನು ಪಡೆದುಕೊಂಡಿಲ್ಲ. ಬದಲಿಗೆ ಅವು ಎಲ್ಲ ಕಡೆಯೂ ಸೂಕ್ತವಾಗುತ್ತವೆ ಎನ್ನುವ ದೃಷ್ಟಿಯಿಂದ ಪಡೆದುಕೊಳ್ಳಲಾಗಿದೆ. ಆದ್ದರಿಂದ ಮುಸ್ಲಿಂ ಸಮುದಾಯದ ಭಾವನೆಗಳಿಗೆ ಸಂವಿಧಾನ ರಚನಾ ಸಮಿತಿಯವರು ಧಕ್ಕೆ ತಂದಿದ್ದಾರೆ ಎಂದುಕೊಳ್ಳಬೇಕಾಗಿಲ್ಲ.

ನಾನು ಮುಸ್ಲಿಂ ಸಮುದಾಯದವರಿಗೆ ಭರವಸೆಯನ್ನು ನೀಡಲು ಬಯಸುತ್ತೇನೆ. ಅವರ ಭಾವನೆಗಳನ್ನು ಅರ್ಥಮಾಡಿಕೊಳ್ಳಬಲ್ಲೆ. ಅವರು 35ನೇ ವಿಧಿಯನ್ನು ಅತಿಯಾಗಿ ಓದಿಕೊಂಡಿದ್ದಾರೆ. ಏಕರೂಪ ನಾಗರಿಕ ಸಂಹಿತೆಯನ್ನು ತರಲು ಸರ್ಕಾರ ಪ್ರಯತ್ನಿಸಬೇಕು ಎಂದಷ್ಟೇ ಹೇಳಲಾಗಿದೆ. ಇಂಥದೊಂದು ಕಾನೂನು ಇದೆ ಎಂದ ಮಾತ್ರಕ್ಕೆ ಸರ್ಕಾರವು ಅದನ್ನು ಜಾರಿಗೊಳಿಸಬೇಕು ಎಂದೇನಿಲ್ಲ.

ತಾನು ಈ ಏಕರೂಪ ನಾಗರಿಕ ಸಂಹಿತೆಗೆ ಒಳಪಡುತ್ತೇನೆ ಎಂದು ವ್ಯಕ್ತಿಯು ಘೋಷಿಸಿಕೊಂಡರೆ ಅಂಥವರನ್ನು ಈ ಕಾನೂನಿಗೆ ಒಳಪಡಿಸುವ ಕಾರ್ಯವನ್ನು ಭವಿಷ್ಯದ ಸರ್ಕಾರಗಳು ನಡೆಸಬಹುದು. ಇದು ಏಕರೂಪ ನಾಗರಿಕ ಸಂಹಿತೆಯ ಜಾರಿಯ ಮೊದಲ ಹೆಜ್ಜೆಯಾಗಲಿದೆ. ಜೊತೆಗೆ ಅದು ಸಂಪೂರ್ಣ ಸ್ವಯಂಪ್ರೇರಿತ ಆಗಿರಬೇಕು. ಇದನ್ನು ಮಾದರಿ ನಡೆ ಎನ್ನಲಾಗದು, ಆದರೆ ಸಂಸತ್ತು ಈ ವ್ಯವಸ್ಥೆಯನ್ನು ಅನುಸರಿಸಬಹುದು.

ವಾಯವ್ಯ ಪ್ರಾಂತ್ಯದಿಂದ ಆಚೆಗೆ ಬೇರೆ ಪ್ರಾಂತ್ಯಗಳಲ್ಲಿ ಷರಿಯಾ ಕಾನೂನನ್ನು ಜಾರಿ ಮಾಡಲು ಹೊರಟಾಗ ಇದೇ ರೀತಿಯ ವ್ಯವಸ್ಥೆಗೆ ಅನುಕೂಲ ಮಾಡಿಕೊಡಲಾಗಿತ್ತು. ಯಾರೆಲ್ಲಾ ಷರಿಯಾ ಕಾನೂನನ್ನು ಒಪ್ಪಲು ಬಯಸುತ್ತಾರೊ ಅವರೆಲ್ಲರೂ ಅಧಿಕಾರಿಗಳ ಬಳಿ ಹೋಗಿ ತಾವು ಈ ಕಾನೂನನ್ನು ಪಾಲಿಸುವುದಾಗಿ ಘೋಷಿಸಿಕೊಳ್ಳಬೇಕಿತ್ತು. ಹೀಗೆ ಘೋಷಿಸಿಕೊಂಡ ಬಳಿಕ ಆತ ಹಾಗೂ ಆತನ ಉತ್ತರಾಧಿಕಾರಿಯು ಇದನ್ನೇ ಪಾಲಿಸಬೇಕಿತ್ತು.

ಇದೇ ರೀತಿಯ ವ್ಯವಸ್ಥೆಯನ್ನು ರೂಪಿಸಲಿಕ್ಕೆ ಸರ್ಕಾರಕ್ಕೆ ಸಾಧ್ಯವಿದೆ. ಆದ್ದರಿಂದ ಈ ವಿಧಿಯ ಕುರಿತು ನನ್ನ ಸ್ನೇಹಿತರು ವ್ಯಕ್ತಪಡಿಸಿದ ಆತಂಕವು ಅರ್ಥಹೀನವಾದದು. ಹಾಗಾಗಿ, ಈ ತಿದ್ದುಪಡಿಗಳಲ್ಲಿ ಯಾವುದೇ ವಾದವಿಲ್ಲ. ಆದ್ದರಿಂದ ನಾನು ಇದನ್ನು ವಿರೋಧಿಸುತ್ತೇನೆ– ಬಿ.ಆರ್.ಅಂಬೇಡ್ಕರ್, ಸಂವಿಧಾನ ಕರಡು ರಚನಾ ಸಮಿತಿಯ ಅಧ್ಯಕ್ಷ

ಏಕರೂಪ ನಾಗರಿಕ ಸಂಹಿತೆ ಪಡೆದುಕೊಳ್ಳಲಾಗಿದೆ.

ಲೋಕಸಭೆಯ ಡಿಜಿಟಲ್ ಗ್ರಂಥಾಲಯದ ಸಂವಿಧಾನ ರಚನಾ ಸಭೆಯ ಸಂಸದೀಯ ಚರ್ಚೆಗಳು.

**ಆಧಾರ:** ಪ್ರಜಾವಾಣಿ, ದಿನಾಂಕ: 26.07.2023

## 7. ಸಣ್ಣವರ ಸಾಮ್ರಾಜ್ಯ

1. ಲೋಕಸಭಾ ಚುನಾವಣೆ ಎಂದಾಗ ಅದು ಕೇವಲ ಕಾಂಗ್ರೆಸ್–ಬಿಜೆಪಿಯ ಕಾಳಗವಲ್ಲ. ಇದುವರೆಗೂ ಸಂಸದ ಖಾತೆ ತೆರೆಯದ ಸಣ್ಣಪುಟ್ಟ ಪಕ್ಷಗಳೂ ಗೇಮ್ ಚೇಂಜರ್ ಪಾತ್ರ ನಿರ್ಹಿಸುತ್ತವೆ. ರಾಷ್ಟ್ರೀಯ ಪಕ್ಷದಿಂದ ತೀವ್ರ ಹೊಡೆತ ತಿಂದ ಸಣ್ಣ ಪಕ್ಷವೂ ಈ ಹೊತ್ತಿನಲ್ಲಿ ಅದರ ಮಿತ್ರನಂತೆ ಪಕ್ಕದಲ್ಲಿ ನಿಂತಿದೆ! 2024ರ ಲೋಕ ಮತ ಸಮರಕ್ಕೆ ಸಜ್ಜಾದ ಎನ್‌ಡಿಎ ಹಾಗೂ ಐಎನ್‌ಡಿಎ ಕೂಟಗಳಲ್ಲೀಗ ಪ್ರಾದೇಶಿಕ, ಸಣ್ಣಪುಟ್ಟ ಪಕ್ಷಗಳದ್ದೇ ಪಾರಮ್ಯ.
2. ಭಾರತದ ರಾಜಕಾರಣವೆಂದರೆ, ಅದು ಕೇವಲ ಕಾಂಗ್ರೆಸ್–ಬಿಜೆಪಿಯ ಅಖಾಡವಲ್ಲ, ಸಣ್ಣಪುಟ್ಟ ಪಕ್ಷಗಳ ದೊಡ್ಡ ಸಾಮ್ರಾಜ್ಯವೇ ಇಲ್ಲಿದೆ. ದೇಶದ 5 ರಾಜ್ಯಗಳಲ್ಲಿ ಸಣ್ಣ ಪಕ್ಷಗಳದ್ದೇ ಸರಕಾರವಿದೆ. 4 ರಾಜ್ಯಗಳಲ್ಲಿ ಸಣ್ಣಪಕ್ಷಗಳು ಮೈತ್ರಿ ಕಟ್ಟಿಕೊಂಡು ಕಿಂಗ್ ಅಥವಾ ಕಿಂಗ್ ಮೇಕರ್ ಪಾತ್ರದಲ್ಲಿವೆ. ಮಹಾರಾಷ್ಟ್ರ, ಬಿಹಾರ ಮತ್ತು ಜಾರ್ಖಂಡ್‌ನಲ್ಲಿ ಸರಕಾರದ ಡ್ರೈವಿಂಗ್ ಸೀಟ್‌ನಲ್ಲಿ ಕುಳಿತಿವೆ. ಹರಿಯಾಣದಲ್ಲಿ ಜನನಾಯಕ್ ಜನತಾ ಪಾರ್ಟಿ (ಬಿಜೆಪಿ), ಬಿಜೆಪಿಯೊಂದಿಗೆ ಸಮ್ಮಿಶ್ರ ಸರಕಾರ ರಚಿಸಿದೆ.
3. 2019ರ ಸಂಸತ್ ಚುನಾವಣೆಯಲ್ಲೂ ಸಣ್ಣ ಪಕ್ಷಗಳು ಶೇ.37.36 ಮತಗಳನ್ನು ಸಂಪಾದಿಸಿದ್ದವು. ಇದು ಬಿಜೆಪಿಯ ಶೇ.37.36 ಮತಗಳಿಗಿಂತ ಹೆಚ್ಚು. ಚುನಾವಣಾ ಆಯೋಗದ ಪ್ರಕಾರ, ಭಾರತದಲ್ಲಿ ಪ್ರಸ್ತುತ 6 ರಾಷ್ಟ್ರೀಯ ಮತ್ತು 55 ರಾಜ್ಯ ಮಟ್ಟದ ಪಕ್ಷಗಳು ಸಕ್ರಿಯವಾಗಿವೆ.

2024ರ ಲೋಕಸಭೆ ಚುನಾವಣೆ ದೊಡ್ಡ ಪಕ್ಷಗಳಿಗೆ ಮಹತ್ವದ್ದಾಗಿದ್ದರೂ, ಹಲವು ಸಣ್ಣ ಪಕ್ಷಗಳಿಗೆ ಅಸ್ತಿತ್ವಕ್ಕಾಗಿ ಹೋರಾಟವೂ ಹೌದು. ಏಕೆಂದರೆ, ಕಾಂಗ್ರೆಸ್ ಅಥವಾ ಬಿಜೆಪಿ ಪ್ರಬಲವಿರುವ ಅಸ್ಸಾಂ, ಕರ್ನಾಟಕ, ಉತ್ತರ ಪ್ರದೇಶ ಮತ್ತು ಮಹಾರಾಷ್ಟ್ರಗಳಲ್ಲಿ ಸಣ್ಣ ಪಕ್ಷಗಳು ಭಾರೀ ಹೊಡೆತ ತಿಂದಿವೆ.

ಆದಾಗ್ಯೂ, ಕೆಲವೆಡೆ ಸಣ್ಣ ಪಕ್ಷಗಳ ಕಾರ್ಯಕ್ಷಮತೆ ತಮಗಿಂತ ಉತ್ತಮವಾಗಿರುವ ಕಾರಣಕ್ಕೇ ಈಗ ಎನ್‌ಡಿಎ ಹಾಗೂ ಐಎನ್‌ಡಿಎ ಮೈತ್ರಿಕೂಟಗಳು ಈ ಪಾರ್ಟಿಗಳ ಮೇಲೆ ಹೆಚ್ಚು ಒಲವು ವ್ಯಕ್ತಪಡಿಸುತ್ತಿವೆ. ಮತ್ತೆ ಕೆಲವೆಡೆ ಎದುರಾಳಿ ಕೂಟಕ್ಕೆ ಸೋಲುಣಿಸಲೂ ಈ ಪಕ್ಷಗಳ ಗೆಳೆತನ ಅನಿವಾರ್ಯ ಎನ್ನುವಂತಾಗಿದೆ. ಈ ಎರಡೂ ಮೈತ್ರಿಗಳಲ್ಲಿ ಶೇ.50ಕ್ಕೂ ಹೆಚ್ಚಿನ ಪಕ್ಷಗಳು ಯಾವ ಸಂಸದ ಸ್ಥಾನ ಹೊಂದಿಲ್ಲದೇ ಇದ್ದರೂ, ಇವುಗಳಿಗೆ ರತ್ನಗಂಬಳಿ ಹಾಸುತ್ತಿರುವುದೇಕೆ ಎನ್ನುವುದು ಕುತೂಹಲದ ಸಂಗತಿ.

5. **ಭಾರತದಲ್ಲಿ ಸಣ್ಣ ಪಕ್ಷಗಳ ಪಯಣ:** ಸ್ವಾತಂತ್ರ್ಯಕ್ಕೂ ಮುಂಚೆಯೇ ಅನೇಕ ಸಣ್ಣ ಪಕ್ಷಗಳು ಅಸ್ತಿತ್ವದಲ್ಲಿದ್ದವು. 70ರ ದಶಕದಲ್ಲಿ ಇವುಗಳ ಸಂಖ್ಯೆ ಏರಿಕೆ ಕಂಡಿತು. ತಮಿಳುನಾಡಿನ ದ್ರಾವಿಡ ಹೋರಾಟದಲ್ಲಿ ಮೊದಲು ಡಿಎಂಕೆ ಮತ್ತು ನಂತರ ಎಐಎಡಿಎಂಕೆ ರಚನೆಯಾದವು. ಹಾಗೆಯೇ ಆಂಧ್ರಪ್ರದೇಶದಲ್ಲಿ ತೆಲುಗು ದೇಶಂ ಪಕ್ಷವನ್ನು ಎನ್.ಟಿ.ರಾಮರಾವ್ ಕಟ್ಟಿದರು. 1977ರಲ್ಲಿ ಇಂದಿರಾ ತುರ್ತು ಪರಿಸ್ಥಿತಿ ವಿರುದ್ಧದ ಮೈತ್ರಿ ಸಮಯದಲ್ಲಿ ಸಣ್ಣ ಪಕ್ಷಗಳಿಗೇ ಹೆಚ್ಚು ಬೇಡಿಕೆ ಹುಟ್ಟಿತ್ತು. 90ರ ದಶಕದ ಉತ್ತರಾರ್ಧದಲ್ಲಿ ಕಾಂಗ್ರೆಸ್‌ನಿಂದ ಬೇರ್ಪಟ್ಟು ಉತ್ಕಲ್ ಕಾಂಗ್ರೆಸ್, ತೃಣಮೂಲ ಕಾಂಗ್ರೆಸ್, ಎಐಎನ್‌ಆರ್ ಕಾಂಗ್ರೆಸ್ ಮತ್ತು ವೈಎಸ್‌ಆರ್ ಕಾಂಗ್ರೆಸ್ ಉದಯಿಸಿದ್ದವು. ಪ್ರತ್ಯೇಕ ರಾಜ್ಯಗಳ ಬೇಡಿಕೆಗಾಗಿ ತೆಲಂಗಾಣ ರಾಷ್ಟ್ರ ಸಮಿತಿ (ಈಗ ಭಾರತ್ ರಾಷ್ಟ್ರ ಸಮಿತಿ) ಮತ್ತು ಜಾರ್ಖಂಡ್ ಮುಕ್ತಿ ಮೋರ್ಚಾದಂಥ ಪಕ್ಷಗಳೂ ಅಸ್ತಿತ್ವ ಕಂಡಿವೆ. ಉತ್ತರ ಪ್ರದೇಶ, ಮಹಾರಾಷ್ಟ್ರ, ಬಿಹಾರ, ಆಂಧ್ರಪ್ರದೇಶ ಮತ್ತು ಕರ್ನಾಟಕದಂಥ ದೊಡ್ಡ ರಾಜ್ಯಗಳಲ್ಲಂತೂ ಈ ಪುಟ್ಟ ಪಕ್ಷಗಳೇ ಗೇಮ್ ಚೇಂಜರ್.

6. ಮೈತ್ರಿಗಳ 38 ಪಕ್ಷಗಳಲ್ಲಿ ಒಬ್ಬರೂ ಸಂಸದರಿಲ್ಲ: ಅಚ್ಚರಿಯೆಂದರೆ, ಪ್ರಸ್ತುತ ಎರಡೂ ಮೈತ್ರಿಕೂಟಗಳಲ್ಲಿ ಶೂನ್ಯ ಸಂಸದರನ್ನು ಹೊಂದಿರುವ ಪಕ್ಷಗಳ ಸಂಖ್ಯೆ ಶೇ.50 ಅದರಲ್ಲೂ ಎನ್‌ಡಿಎ ಕೂಟದ ಶೇ.65 ಮಿತ್ರಪಕ್ಷಗಳು ಒಬ್ಬರೂ ಸಂಸದರನ್ನು ಹೊಂದಿಲ್ಲ.

7. ಎನ್‌ಡಿಎ ಶೂನ್ಯ ಸಂಸದ ಪಕ್ಷಗಳು (25): ಆರ್‌ಪಿಐ, ಜೆಜೆಪಿ, ಟಿಎಂಸಿ, ಐಪಿಎಫ್ಟಿ, ಬಿಪಿಪಿ, ಪಿಎಂಕೆ, ಜನಸೇನಾ, ಎನ್‌ಸಿಪಿ (ಅಜಿತ್ ಪವಾರ್ ಬಣ), ಎಚ್‌ಎಎಂ, ಆರ್‌ಎಲ್‌ಎಸ್ಪಿ, ಬಿಡಿಜೆಎಸ್, ಕೇರಳ ಕಾಮರಾಜ್ ಕಾಂಗ್ರೆಸ್, ಎಂಜಿಪಿ, ಎಜಿಪಿ, ನಿಷಾದ್ ಪಾರ್ಟಿ, ಯುಪಿಪಿಎಲ್, ಐಆರ್‌ಎಸ್ಸ್, ಶಿರೋಮಣಿ ಅಕಾಲಿ ದಳ ಯುನೈಟೆಡ್, ಗೂರ್ಖಾ ನ್ಯಾಷನಲ್ ಲಿಬರೇಶನ್ ಫ್ರಂಟ್, ಜೆಆರ್‌ಎಸ್, ಯುಡಿಪಿ, ಸುಭಾಸಪಾ, ಎಚ್‌ಡಿಎಸ್‌ಟಿ, ಜನ್ ಸೂರಜ್ ಪಾರ್ಟಿ, ಪ್ರಹಾರ್ ಜನಶಕ್ತಿ.

8. ಐಎನ್‌ಡಿಎ ಶೂನ್ಯ ಸಂಸದ ಪಕ್ಷಗಳು (13): ಆರ್ಜೆಡಿ, ವಿಸಿಕೆ, ಆರ್‌ಎಸ್‌ಟಿ, ರಾಷ್ಟ್ರೀಯ ಸಮ್ಮೇಳನ, ಪಿಡಿಪಿ, ಸಿಪಿಐ(ಎಂಎಲ್), ಕೇರಳ ಕಾಂಗ್ರೆಸ್, ಕೆಎಂಡಿಕೆ, ಆರ್‌ಎಲ್‌ಡಿ, ಅಪ್ನಾದಳ್ ಕಮೆರಾವಾದಿ, ಎಂಡಿಎಂಕೆ, ಎಐಎಫ್ಬಿ, ಎಂಎಂಕೆ.

**ಉತ್ತರ ಪ್ರದೇಶ–ಬಿಎಸ್ಪಿ:** ಬಿಜೆಪಿ ಪ್ರಾಬಲ್ಯದಿಂದ 'ಆನೆ' ಅಳಿವಿನಂಚಿಗೆ: 2007ರ ಉತ್ತರ ಪ್ರದೇಶ ವಿಧಾನಸಭೆ ಚುನಾವಣೆಯಲ್ಲಿ ಬಿಎಸ್ಪಿ 206 ಸೀಟು ಪಡೆದು, ಏಕಾಂಗಿಯಾಗಿ ಸರಕಾರ

ರಚಿಸಿತ್ತು. ಆ ಹೊತ್ತಿಗೆ ಬಿಜೆಪಿ ಕೇವಲ 51 ಸ್ಥಾನಗಳನ್ನು ಗೆದ್ದಿತ್ತು. ಆದರೆ, 2022ರ ಚುನಾವಣೆಯಲ್ಲಿ ಬಿಜೆಪಿ 255 ಸೀಟುಗಳನ್ನು ಗೆದ್ದಿದ್ದರೆ, ಕೇವಲ 1 ಸ್ಥಾನಕ್ಕೆ ಬಿಎಸ್‌ಪಿ ಇಳಿದಿದೆ. ಬಿಎಸ್‌ಪಿಯ ಬಹುಪಾಲು ಮತಗಳು ಬಿಜೆಪಿಯ ಜೋಳಿಗೆಯಲ್ಲಿವೆ.

1. **ಅಸ್ಸಾಂ–ಎಜಿಪಿ:ಬಲಾಢ್ಯ ಪಕ್ಷವೀಗ ಬಿಜೆಪಿಗೆ ಜೂನಿಯರ್:** ಅಸ್ಸಾಂನಲ್ಲಿ ಒಂದು ಕಾಲದಲ್ಲಿ ಬಲದಿಂದ ಅಧಿಕಾರಕ್ಕೆ ಬಂದಿದ್ದ ಅಸ್ಸಾಂ ಗಣ ಪರಿಷತ್ ಪಕ್ಷ (ಎಜಿಪಿ) ಈಗ ಬಿಜೆಪಿಯೊಂದಿಗೆ ಮೈತ್ರಿ ಮಾಡಿಕೊಂಡು ಕಿರಿಯ ಸಹೋದರನಂತೆ ತೋರುತ್ತಿದೆ. ಎಜಿಪಿಯ ನಾಯಕರಲ್ಲಿ ಬಹುತೇಕರು ಬಿಜೆಪಿಗೆ, ಕೆಲವರು ಕಾಂಗ್ರೆಸ್ಗೆ ವಲಸೆ ಹೋಗಿದ್ದಾರೆ.

2. ಕರ್ನಾಟಕ–ಜೆಡಿಎಸ್:ಕಿಂಗ್‌ಮೇಕರ್ ಕನಸನ್ನೇ ಛಿದ್ರಗೊಳಿಸಿದ ಕಾಂಗ್ರೆಸ್ 2004 ಮತ್ತು 2018ರ ಚುನಾವಣೆಯ ನಂತರ ಕರ್ನಾಟಕದಲ್ಲಿ ಸರಕಾರ ರಚನೆಯಲ್ಲಿ ಜೆಡಿಎಸ್ ಪ್ರಮುಖ ಪಾತ್ರ ವಹಿಸಿದೆ. ಆದರೆ, ಇತ್ತೀಚೆಗೆ ಮುಗಿದ 2023ರ ಚುನಾವಣೆಯಲ್ಲಿ ಕಿಂಗ್‌ಮೇಕರ್ ಆಗುವ ಕನಸನ್ನು ಕಾಂಗ್ರೆಸ್ ಜಯಭೇರಿ ಛಿದ್ರಗೊಳಿಸಿತು. ಜೆಡಿಎಸ್ ಭದ್ರಕೋಟೆಗಳೇ ಕಾಂಗ್ರೆಸ್ ವಶವಾದವು.

3. **ಮಹಾರಾಷ್ಟ್ರ–ಶಿವಸೇನೆ, ಎನ್‌ಸಿಪಿ:** ಪ್ರಾದೇಶಿಕ ಪಕ್ಷಗಳನ್ನು ಇಬ್ಬಾಗಿಸಿದ ಬಿಜೆಪಿ: ಒಂದು ಕಾಲದಲ್ಲಿ ಮರಾಠಾ ರಾಜಕೀಯದಲ್ಲಿ ನೆಲೆ ಕಂಡುಕೊಳ್ಳಲು ಬಿಜೆಪಿಗೆ ಹೆಗಲು ಕೊಟ್ಟಿದ್ದ ಶಿವಸೇನೆ ಈಗ ಸಂಕಷ್ಟದಲ್ಲಿದೆ. 2014ರ ನಂತರ ಮಹಾರಾಷ್ಟ್ರದಲ್ಲಿ ಬಿಜೆಪಿ ವ್ಯಾಪಕವಾಗಿ ಬೆಳೆಯುತ್ತಲೇ ಇದೆ. ಪ್ರಸ್ತುತ, ಶಿವಸೇನೆಯ ಒಂದು ಬಣ ಬಿಜೆಪಿ ಜೊತೆಗೆ ಸೇರಿ ಸರಕಾರ ರಚಿಸಿದೆ. ಇದೇ ಹೊತ್ತಿನಲ್ಲಿ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ (ಎನ್‌ಸಿಪಿ) ಒಂದು ಬಣವೂ ಸರಕಾರದ ಜೊತೆ ಸೇರಿದೆ. ಇವೆರಡೂ ಪಕ್ಷಗಳ ಇಬ್ಬಾಗದ ಪ್ರಕರಣಗಳು ಕೋರ್ಟ್ ಮೆಟ್ಟಿಲೇರಿದೆ.

| **ಲೋಕಸಭೆಯಲ್ಲಿ ಸಣ್ಣ ಪಾರ್ಟಿಗಳ ಪ್ರಾಬಲ್ಯ** | | |
|---|---|---|
| **ಪಕ್ಷ** | **ರಾಜ್ಯ** | **2019ರಲ್ಲಿ ಗೆದ್ದಿದ್ದು** |
| ಡಿಎಂಕೆ | ತಮಿಳುನಾಡು | 24 |
| ಟಿಎಂಸಿ | ಪ.ಬಂಗಾಳ | 22 |
| ವೈಎಸ್‌ಆರ್ ಕಾಂಗ್ರೆಸ್ | ಆಂಧ್ರಪ್ರದೇಶ | 22 |
| ಶಿವಸೇನಾ | ಮಹಾರಾಷ್ಟ್ರ | 18 |
| ಜೆಡಿಯು | ಬಿಹಾರ | 16 |
| ಬಿಜೆಪಿ | ಒಡಿಶಾ | 12 |
| ಬಿಎಸ್ಪಿ | ಉತ್ತರಪ್ರದೇಶ | 10 |

| ಯೂಟರ್ನ್‌ನಲ್ಲೂ ಕ್ಸ್‌ಪರ್ಟ್ | | |
|---|---|---|
| **ಪಕ್ಷ** | **ಕಾಂಗ್ರೆಸ್ ಜತೆ** | **ಬಿಜೆಪಿ ಜತೆ** |
| ಜೆಡಿಯು | 02 | 03 |
| ಟಿಎಂಸಿ | 01 | 01 |
| ಜೆಡಿಎಸ್ | 02 | 01 |
| ಟಿಡಿಪಿ | 01 | 02 |
| ಡಿಎಂಕೆ | 03 | 02 |

| 5 ದೊಡ್ಡ ರಾಜ್ಯಗಳಲ್ಲಿ ಚಿಕ್ಕವರದ್ದೇ ಸರಕಾರ | | | |
|---|---|---|---|
| **ರಾಜ್ಯ** | **ಪಕ್ಷ** | **ವಿಧಾನಸಭೆ ಸ್ಥಾನ** | **ಲೋಕಸಭೆ ಸ್ಥಾನ** |
| ಪ.ಬಂಗಾಳ | ಟಿಎಂಸಿ | 294 | 42 |
| ತಮಿಳುನಾಡು | ಡಿಎಂಕೆ | 234 | 39 |
| ಆಂಧ್ರಪ್ರದೇಶ | ವೈಎಸ್ಸಾರ್(ಸಿ) | 175 | 25 |
| ಒಡಿಶಾ | ಬಿಜೆಡಿ | 147 | 21 |
| ತೆಲಂಗಾಣ | ಬಿಆರ್‌ಎಸ್ | 119 | 17 |

- ಒಡಿಶಾದ ಬಿಜು ಜನತಾದಳ, ಆಂಧ್ರದ ವೈಎಸ್‌ಆರ್ ಕಾಂಗ್ರೆಸ್, ಕರ್ನಾಟಕದಲ್ಲಿ ಜನತಾದಳ (ಜಾತ್ಯತೀತ), ಯುಪಿಯ ಬಿಎಸ್‌ಪಿ, ಪಂಜಾಬ್‌ನ ಅಕಾಲಿದಳ, ತೆಲಂಗಾಣದ ತೆಲುಗು ದೇಶಂ ಪಕ್ಷ ಮತ್ತು ಬಿಆರ್‌ಎಸ್‌ನಂಥ ಪಕ್ಷಗಳು ತಮ್ಮ ದಾಳಗಳನ್ನು ಇನ್ನೂ ಉರುಳಿಸಿಲ್ಲ.
- ಲೋಕಸಭೆಯಲ್ಲಿ ಈ ಪಕ್ಷಗಳ ಸಂಸದ ಬಲ ಸುಮಾರು 50. ಬಿಜೆಪಿ ನೇತೃತ್ವದ ಎನ್‌ಡಿಎ ಅಥವಾ ಪ್ರತಿಪಕ್ಷಗಳ ಐಎನ್‌ಡಿಐಎ ಮಹಾಮೈತ್ರಿಯ ಜೊತೆಗೆ ಇವು ಗುರುತಿಸಿಕೊಳ್ಳದೆ, ಕಾದು ನೋಡುವ ತಂತ್ರ ಅನುಸರಿಸುತ್ತಿವೆ. ಚುನಾವಣೆ ಫಲಿತಾಂಶದ ನಂತರ ಕಿಂಗ್‌ಮೇಕರ್ ಆಗುವ ಕನಸನ್ನೂ ಕಾಣುತ್ತಿವೆ.
- ಹೊಸ ಸಂಸತ್ ಭವನದ ಉದ್ಘಾಟನೆ ವಿಚಾರದಲ್ಲಿ ಬಿಆರ್‌ಎಸ್ ಹೊರತುಪಡಿಸಿ ಉಳಿದೆಲ್ಲ ಪಕ್ಷಗಳು ಬಿಜೆಪಿಗೆ ಬೆಂಬಲ ಸೂಚಿಸಿವೆ.

ಆಧಾರ: ವಿಜಯ ಕರ್ನಾಟಕ, ದಿನಾಂಕ: 29.07.2023.

* * * * *